(ಈ ಹಂತದಲ್ಲಿ ಆಡಳಿತ ಪಕ್ಷದ ಕೆಲವು ಸದಸ್ಯರು ತಾವು ಕುಳಿತ ಸ್ಥಾನಗಳಿಂದ ಮಾತನಾಡುತ್ತಿದ್ದರು)

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರು ನನಗೆ ಅಡ್ಡಿಪಡಿಸುತ್ತಿದ್ದಾರೆ. I am not going to tolerate this kind of..

ಅಧ್ಯಕ್ಷರು : ತಾವು ಪ್ರಾರಂಭ ಮಾಡಿ. ಅವರ ಮಾತು ಪೂರ ಮುಗಿಯುವವರೆಗೆ ನೀವು ಯಾರೂ ಮಾತನಾಡಬೇಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾತನಾಡುತ್ತೇವೆ ಎಂದು ಹೇಳಿದರೆ ನೀವು ಏನು ಹೇಳುತ್ತೀರಿ? ನಾಗಪ್ಪನವರ ಕೊಲೆ ಹೇಗಾಯಿತು ಎಂದು ಹಡಗಲಿ ಕ್ಷೇತ್ರಕ್ಕೆ ಬಂದು ಹೇಳಬೇಕೇ?

ಅಧ್ಯಕ್ಷರು : ಮಧ್ಯದಲ್ಲಿ ಏಕೆ ಮಾತನಾಡುತ್ತೀರಿ. ತಮಗೂ ಅವಕಾಶ ಕೊಡುತ್ತೇನೆ. ಮಧ್ಯದಲ್ಲಿ ಮಾತನಾಡಿದರೆ ಪ್ರಯೋಜನವಾಗುವುದಿಲ್ಲ. ತಮ್ಮ ಕಡೆಯಲ್ಲೂ ಸಹಾ ಯಾರ್ಯಾರು ಮಾತನಾಡುತ್ತೀರೋ, ಅವರೆಲ್ಲರಿಗೂ ಅವಕಾಶ ಕೊಡುತ್ತೇನೆ, ಆಗ ಮಾತನಾಡಿ.

2. ನಿಯಮ 69ರ ಮೇರೆಗೆ ಚರ್ಚೆ

ವಿಷಯ : ಮಾಜಿ ಸಚಿವರಾದ ದಿವಂಗತ ಹೆಚ್. ನಾಗಪ್ಪನವರ ಅಪಹರಣ ಮತ್ತು ಅವರ ದುರಂತ ಸಾವಿನ ಬಗ್ಗೆ.

†ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೇ, ನಮ್ಮ ಪಕ್ಷದವರೆಲ್ಲರೂ ಒಂದು ನಿಲುವಳಿ ಸೂಚನೆಯನ್ನು ಗಮನಕ್ಕೆ ಸಭೆ ಪ್ರಾರಂಭವಾದ ದಿನವೇ ಕಳುಹಿಸಿದ್ದೇವೆ. 23ನೇ ತಾರೀಖು ಅಧಿವೇಶನ ಪ್ರಾರಂಭವಾದಾಗ ನಾವು ಸಂತಾಪ ಸೂಚನೆಯನ್ನು ಮಾಡಿ ಅಂದೇ, ಈ ಚರ್ಚೆಯಾಗಬೇಕು ಎಂದು ರಾಜ್ಯದ ಜನತೆ ಸಹ ಬಯಸಿದ್ದರು. ಆದರೆ ಅವತ್ತು ನೀವು ಒಂದು ಹೊಸಾ ಪ್ರಿಸಿಡೆಂಟನ್ನು ಪ್ರಾರಂಭ ಮಾಡಿದ್ದೀರಿ. ಬಹಳ ದೊಡ್ಡ ಗೌರವವನ್ನು ನಾಗಪ್ಪನವರಿಗೆ ಕೊಡುವ ಹಾಗೆ, ನಾಗಪ್ಪನವರನ್ನು ಕೊಂದ ಮೇಲೆ, ಅವರ ಆತ್ಮಕ್ಕೆ ಶಾಂತಿಯನ್ನು ಕೊರತಕ್ಕಂಥ ನೆಪದಲ್ಲಿ ಈ ಸದನವನ್ನು ಒಂದು ದಿನ ಮುಂದಕ್ಕೆ ಹಾಕಿದ್ದೇವೆ ಎನ್ನುವ ಬಡಾಯಿಯನ್ನು ಸಹ ತಾವು ಹೊಡೆದಿರಿ, ಆಯಿತು. ಅದು ಆದನಂತರ ಎರಡನೇ ದಿನವೂ ಸಭೆ ನಡೆಯಲಿಲ್ಲ. ಮಾನ್ಯ ಅಧ್ಯಕ್ಷರೆ, ಇವತ್ತು ನಾವು ನಿಲುವಳಿ ಸೂಚನೆ ರೂಪದಲ್ಲಿ ಏಕೆ ಕಳುಹಿಸಿದ್ದೇವೆ ಎಂದರೆ ಇಲ್ಲಿ ಬಹಳ ಜನ ಅತಿರಥ ಮಹಾರಥರುಗಳು, ಮುಂದಿನ ಸಾಲಿನಲ್ಲಿ ಕುಳಿತಿರತಕ್ಕಂಥವರು ಸಂಸದೀಯ ವ್ಯವಸ್ಥೆಯಲ್ಲಿ 30-40 ವರ್ಷದ ಅನುಭವ ಪಡೆದಿರತಕ್ಕಂಥವರು ಇದ್ದಾರೆ. ಆದರೆ ಇವರಿಗೇ ಈ ಗತಿ ಆದಾಗ ಮುಂದೆ ಏನಾಗಬಹುದು ಏನೋ ಎನ್ನುವುದನ್ನು ಒಂದು ಕ್ಷಣ ಅಧಿಕಾರದಲ್ಲಿರತಕ್ಕಂಥ ಜನ ಯೋಚನೆ ಮಾಡಬೇಕು. ನಿಮಗೇನಾದರೂ ನಾಗಪ್ಪನವರಿಗೆ ಬಂದಂಥ ದುರ್ಮರಣ, ಆ ಗತಿ ಬಂದರೆ ಏನು ಮಾಡುತ್ತೀರಿ? ನಿಮ್ಮ ಹೆಂಡತಿ ಮಕ್ಕಳು ಏನು ಮಾಡುತ್ತಾರೆ ಎನ್ನುವುದನ್ನು ನೀವು ಸ್ವಲ್ಪ ಯೋಚನೆ ಮಾಡಿಕೊಂಡು ಮಾತನಾಡಬೇಕು, ಸ್ಪಂದಿಸಬೇಕು ಎನ್ನತಕ್ಕಂಥದ್ದು ನನ್ನ ಕಳಕಳಿಯ ಮನವಿ. ಇಷ್ಟೆಲ್ಲಾ ಆದಮೇಲೆ ಇವತ್ತು ಇಡೀ ರಾಜ್ಯ ಗೊಂದಲದಲ್ಲಿ ಇದೆ, ಇಡೀ ರಾಷ್ಟ್ರ ಗೊಂದಲದಲ್ಲಿ ಇದೆ. ಇವತ್ತು ಅನೇಕ ಅನುಮಾನಗಳು ಇವೆ, ಶಂಕೆಗಳು ಇವೆ. ಈ ಅಧಿವೇಶನ ಕರೆದಾಗಲೂ ಸಹಿತ ನಾಗಪ್ಪನವರ ಅಪಹರಣದ ಸಂದರ್ಭದಲ್ಲಿ ನಡೆದಂಥ ನಡವಳಿಕೆಗಳು, ಅವರ ಬಿಡುಗಡೆ ಆಗುವುದಕ್ಕೆ ಆದಂಥ ಗೊಂದಲಗಳು, ಆ ನಂತರ

ಗೊಂದಲಗಳು, ಈ ಮೂರು ಗೊಂದಲಗಳ ಬಗ್ಗೆ ಈ ಸರ್ಕಾರಕ್ಕೆ, ತಮಗೆ ಸ್ಪಷ್ಟತೆ ಇಲ್ಲ. ವಿಧಾನಸಭೆ ಅಧಿವೇಶನವನ್ನು ನೀವು ಕರೆದಿರಿ. ಯಾವ ಫೋರಂನಲ್ಲಿ ಡಿಸ್‌ಕಶನ್‌ಗೆ ತೆಗೆದುಕೊಳ್ಳಬೇಕು? ಸರ್ಕಾರದಿಂದ ಏನಾದರೂ ಒಂದು ಸ್ಟೇಟ್‌ಮೆಂಟ್ ಮಾಡಿದ್ದಾರೆಯೇ? ಮೇಲ್ಮನೆಯಲ್ಲಿ ನಮ್ಮ ಸದಸ್ಯರುಗಳು ಅತ್ಯೂತ್ತರೆದು ಕೇಳಿದ ಮೇಲೆ ಸರ್ಕಾರದಿಂದ ಒಂದು ಸ್ಟೇಟ್‌ಮೆಂಟ್‌ನ್ನು ಮಾನ್ಯ ಗೃಹ ಸಚಿವರು ಮಾಡಿದ್ದಾರೆ. ನಮ್ಮ ದುರಾದೃಷ್ಟಕ್ಕೆ ಮಾನ್ಯ ಗೃಹ ಸಚಿವರು ಇವತ್ತು ಈ ಸದನಕ್ಕೆ ಬಂದಿಲ್ಲ. ಇರಲಿ, ಅದರ ಬಗ್ಗೆ ನನಗೇನೂ ಸಂತಾಪ ಇಲ್ಲ ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇದ್ದಾರೆ. ಗೃಹ ಸಚಿವರು ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಅದೇನೆಂದರೆ ಸರ್ಕಾರದ ಕಡೆಯಿಂದ ನಾವು ಎಲ್ಲದಕ್ಕೂ ಉತ್ತರವನ್ನು ವಿಧಾನಸಭೆಯಲ್ಲಿ ಕೊಡುತ್ತೇವೆ, ನಾಗಪ್ಪನವರ ಅಪಹರಣ ಏಕೆ ಆಯಿತು, ನಾಗಪ್ಪನವರ ಅಪಹರಣದ ಸಂದರ್ಭದಲ್ಲಿ ನಾವು ಯಾವ ರೀತಿ ನಡೆದುಕೊಂಡೆವು, ನೀವು ಯಾವ ರೀತಿ ನಡೆದುಕೊಂಡಿದ್ದೀರಿ ಮತ್ತು ಈಗ ಏನು ಮಾಡಬೇಕು ಎನ್ನುವುದರ ಬಗ್ಗೆ ಒಂದು ವೈಟ್ ಪೇಪರ್‌ನ್ನು ಪಬ್ಲಿಕ್ ಮಾಡುತ್ತೇವೆಂದು ಹೇಳಿದ್ದರು. ನಿಮಗೇನಾದರೂ ಅಂದರೆ ಸರ್ಕಾರಕ್ಕೆ ಸ್ಪಂದಿಸಬೇಕು ಎನ್ನತಕ್ಕಂಥ ಭಾವನೆ ಇದ್ದಿದ್ದರೆ it is not a white paper. It is a black paper. It is the blackest in Karnataka' history. ಮಾನ್ಯ ಅಧ್ಯಕ್ಷರೆ, ಈ ಸರ್ಕಾರಕ್ಕೆ ಹೃದಯ ಇಲ್ಲ. ಇವತ್ತಿಗೂ ಸಹಿತ ನಿಮ್ಮ ಮಂತ್ರಿಮಂಡಲದ ಸದಸ್ಯರುಗಳಾಗಲೀ ಮುಖ್ಯಮಂತ್ರಿಗಳಾಗಲೀ ಶ್ರೀಮತಿ ಪರಿಮಳ ನಾಗಪ್ಪನವರನ್ನು ನೋಡತಕ್ಕಂಥ, ದೂರವಾಣಿ ಮೂಲಕ ಮಾತನಾಡತಕ್ಕಂಥ ಸೌಜನ್ಯವನ್ನು ತೋರಿಸದೇ ಇರತಕ್ಕಂಥ ಕಠಿಣ ಹೃದಯದವರಾಗಿರತಕ್ಕಂಥ ಸರ್ಕಾರ ನಿಮ್ಮದು. ನಾಗಪ್ಪನವರನ್ನು ಅಪಹರಣ ಮಾಡಿದಂಥ ಸಂದರ್ಭದಲ್ಲಿ ಶ್ರೀಮತಿ ಪರಿಮಳ ನಾಗಪ್ಪನವರು ವೀರಪ್ಪನ್‌ನ ಕಾಲಿಗೆ ಬಿದ್ದು ನನ್ನ ಗಂಡನನ್ನು ಬಿಡಿ, ನನ್ನ ಮಾಂಗಲ್ಯವನ್ನು ಉಳಿಸಿ ಎಂದು ಕೇಳಿಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ಅಲ್ಲಿ ಪೊಲೀಸರು ಇರುವುದಿಲ್ಲ. ಆಗ ವೀರಪ್ಪನ್ ಅವರನ್ನು ಪಕ್ಕಕ್ಕೆ ತಳ್ಳಿ ನಾಗಪ್ಪನವರನ್ನು ಎತ್ತಿಕೊಂಡು ಹೋಗುತ್ತಾನೆ. ಆ ಹೃದಯಕ್ಕೂ ನಿಮ್ಮ ಹೃದಯಕ್ಕೂ ಇರತಕ್ಕಂಥ ವ್ಯತ್ಯಾಸ ಏನು? ದಯವಿಟ್ಟು ಸರ್ಕಾರದ ಕಡೆಯಿಂದ ನೀವು ಹೇಳಬೇಕು. ಮಾನ್ಯ ಅಧ್ಯಕ್ಷರೆ, ಆಗಸ್ಟ್ 25ನೇ ತಾರೀಖು ಸುಮಾರು 10 ಗಂಟೆ 10 ನಿಮಿಷ ಇರಬಹುದು, ನಾನು ಮತ್ತು ಮೇಲ್ಮನೆ ಸದಸ್ಯರಾಗಿರತಕ್ಕಂಥ ಶ್ರೀ ಕೆ.ಹೆಚ್. ಶ್ರೀನಿವಾಸ್ ಅವರು ತರಿಕೆರೆಯಿಂದ ಶಿವಮೊಗ್ಗಕ್ಕೆ ಹೋಗುತ್ತಿದ್ದೆವು. ಆಗ ನಮ್ಮ ಪಕ್ಷದ ಸದಸ್ಯರಾಗಿರತಕ್ಕಂಥ ಶ್ರೀ ಎ.ಆರ್. ಕೃಷ್ಣಮೂರ್ತಿಯವರು ನಾಗಪ್ಪನವರನ್ನು ವೀರಪ್ಪನ್ ಅಪಹರಣ ಮಾಡಿದ್ದಾನೆಂದು ಕಾಮಗೆರೆಯಿಂದ ಮೈಸೂರಿಗೆ ದೂರವಾಣಿ ಮೂಲಕ ನನಗೆ ಮಾಹಿತಿ ಬಂದಿದೆ, ತಾವು ದಯವಿಟ್ಟು ಇಲ್ಲಿಗೆ ಬರಬೇಕೆಂದು ದೂರವಾಣಿ ಮೂಲಕ ಈ ವಿಚಾರವನ್ನು ನನಗೆ ತಿಳಿಸಿದರು. ನಾವು ಹೋದೆವು. ನಾನು, ನಮ್ಮ ಪಕ್ಷದ ಮಾನ್ಯ ಬೈರೇಗೌಡರು, ಸೋಮಶೇಖರ್‌ರವರು, ಎಂ.ಪಿ. ಪ್ರಕಾಶ್, ಮಹದೇವ ಪ್ರಸಾದ್, ಕೃಷ್ಣಮೂರ್ತಿ ಹೀಗೆ ನಾವೆಲ್ಲಾ ಯಾವ ರೀತಿಯಾಗಿ ನಡೆದುಕೊಂಡಿದ್ದೇವೆ ಎನ್ನುವುದು ತಮಗೆ ಗೊತ್ತಿದೆ ಮಾನ್ಯ ಮುಖ್ಯಮಂತ್ರಿಗಳೇ ನಾಗಪ್ಪನವರು ವೀರಶೈವರು, ಲಿಂಗಾಯಿತರು ಎನ್ನುವ ಆ ರೀತಿಯಲ್ಲಿ ನಾವು ನಡೆದುಕೊಂಡಿಲ್ಲ. ಡಾ॥ ರಾಜಕುಮಾರ್ ಅವರು ಅಪಹರಣ

ಆದಂಥ ಸಂದರ್ಭದಲ್ಲಿ ಸಹಿತ ನಾವು ನಿಮಗೆ ಸಹಕಾರ ಕೊಟ್ಟಿದ್ದೆವು. ಅನೇಕ ಸಂದರ್ಭದಲ್ಲಿ ನೀವು ಅಪಹಾಸ್ಯ ಮಾಡಿದ್ದೀರಿ, ನನಗೆ ಗೊತ್ತಿದೆ. "ಏನೋ ಅವರು ಹೇಳಿಕೆ ಕೊಟ್ಟಿಬಿಟ್ಟದ್ದರು ಒಳಗಡೆ ಬಂದು" ಎಂದು ನಮ್ಮನ್ನು ಕುರಿತು ಅಪಹಾಸ್ಯ ಮಾಡಿದ್ದೀರಿ. ನಮಗೆ ಅದರ ಬಗ್ಗೆ ಚಿಂತೆ ಇಲ್ಲ, ಅಪಹಾಸ್ಯ ಮಾಡಿ. ನೀವು ಅಪಹಾಸ್ಯ ಮಾಡಬೇಕಾದದ್ದೇ. ಮುಖ್ಯಮಂತ್ರಿಗಳ ಸ್ಥಾನದಲ್ಲಿ ಕುಳಿತಿದ್ದೀರಿ, ನಿಮಗೆ ಪ್ರಚಾರ ಸಿಗುತ್ತದೆ, ಮಾಧ್ಯಮಗಳವರು ನಿಮ್ಮ ಹೇಳಿಕೆಗಳನ್ನೆಲ್ಲಾ ಬಿಂಬಿಸುತ್ತಾರೆ. ಆದ್ದರಿಂದ ನೀವು ನಮಗೆ ಅಪಹಾಸ್ಯ ಮಾಡಿ. ನಾವು ಏನು ಹೇಳಿಕೆಗಳನ್ನು ಕೊಟ್ಟುಬಿಟ್ಟಿದ್ದೆವು, ಏನು ಸಲಹೆಗಳನ್ನು ಕೊಟ್ಟುಬಿಟ್ಟಿದ್ದೆವು? ನಾವು ಕೊಟ್ಟಂಥ ಸಲಹೆಗಳನ್ನೆಲ್ಲಾ ನೀವು ತಿರಸ್ಕಾರ ಮಾಡಿದಿರಿ. ಈಗಲಾದರೂ ವೀರಪ್ಪನ್ ನಾಗಪ್ಪನವರನ್ನು ಏಕೆ ಬಂಧನ ಮಾಡಿದ? ಆ ಸತ್ಯದ ಅನ್ವೇಷಣೆ ಆಗಲೇ ಬೇಕು. ಆ ಕುಟುಂಬದವರಿಗೆ ಸಾಂತ್ವನ ಹೇಳತಕ್ಕಂಥದ್ದಕ್ಕೆ ಶ್ರೀ ಸೋಮಶೇಖರ್ ನಾವು ಎಲ್ಲಾ ಹೋದೆವು. ಸರ್ಕಾರಿ ಗೌರವವನ್ನು ಕೊಡುವುದಕ್ಕೆ ಹೋದಾಗ ಆ ಹೆಣ್ಣುಮಗಳು ಧೈರ್ಯದಿಂದ ನನ್ನ ಗಂಡನ ಶವಕ್ಕೆ ನೀವು ಯಾವ ರೀತಿಯ ಸರ್ಕಾರಿ ಗೌರವಗಳನ್ನು ಕೊಡಬೇಡಿ. ನನ್ನ ಹತ್ತಿರ ಅಳಲಿಕ್ಕೆ ನನ್ನ ಕಣ್ಣಿನಲ್ಲಿ ನೀರು ಇಲ್ಲ. ರಕ್ತ ಹರಿಯತಕ್ಕಂಥದ್ದೇ ನನ್ನ ಹತ್ತಿರ ಇರತಕ್ಕಂಥದ್ದು. ಸೇಡಿಗೆ ಸೇಡು, ಸೇಡು, ಸೇಡು ಮಾತ್ರ ಆ ಸೇಡನ್ನು ನಾನು ತೀರಿಸಿಕೊಳ್ಳಬೇಕೆಂದು ಕನ್ನಡದ ಕುವರಿ ಒಬ್ಬಳು ಹೇಳುತ್ತಾರೆ. ಅವಳಿಗೆ ಯಾವ ರೀತಿ ನೀವು ಸಾಂತ್ವನವನ್ನು ಮಾಡುತ್ತೀರಾ? ವೀರಪ್ಪನ ಸಂಪರ್ಕವಿಟ್ಟಿರತಕ್ಕ ಜನಗಳ ಮೇಲೆ ಅದು ಯಾರೇ ಆಗಿರಲಿ, ಈ ವಿಧಾನಸಭೆಯಲ್ಲಿ ಕುಳಿತಿರತಕ್ಕಂಥ ಸದಸ್ಯರಿಂದ ಹಿಡಿದು, ಮಂತ್ರಿಗಳಿಂದ ಹಿಡಿದು ಡೆಲ್ಲಿಯಲ್ಲಿರತಕ್ಕಂಥ ಜನಗಳವರೆಗೆ ಆ ಜನಗಳ ಮೇಲೆ ನೀವು ಯಾವ ಕ್ರಮ ತೆಗೆದುಕೊಂಡಿದ್ದೀರಾ? ಮುಖ್ಯವಾಗಿ ಈ ಪಾಪಕ್ಕೆ ಪ್ರಾಯಶ್ಚಿತ್ತ ಏನು? ಇದರ ಬಗ್ಗೆ ಇವತ್ತು ಚಿಂತನೆಯನ್ನು ಮಾಡಬೇಕಾಗುತ್ತದೆ. ನೀವು ಆ ವೈಟ್ ಪೇಪರ್ ಅಲ್ಲ, black paper according to me. Why you have not still published? ಏನೇನು ಮಾಡಿದಿರಿ ಎನ್ನುವುದನ್ನು ನೀವು ಏಕೆ ಇನ್ನೂ ಪಬ್ಲಿಕ್ ಮಾಡಿಲ್ಲ? ನಾಗಪ್ಪನವರು ಡಿಸೆಂಬರ್ 6ನೇ ತಾರೀಖು ಸತ್ತರು. ಅವರ ಶವಸಂಸ್ಕಾರ ಆಗಿದ್ದು 10ನೇ ತಾರೀಖು. ಇವತ್ತು 26ನೇ ತಾರೀಖಿನಲ್ಲಿ ನಾವು ಇದ್ದೇವೆ. ಈಗಾಗಲೇ 15 ದಿನಗಳು ಕಳೆದರೂ ಕೂಡ ಈ ಫ್ಯಾಕ್ಟ್ಸ್‌ನ ಬಗ್ಗೆ ಬಿಳಿ ಪತ್ರವನ್ನು ನಾನು ಮಾಡುತ್ತೇನೆಂದು ಏನು ಹೇಳಿದ್ದೀರಲ್ಲಾ, ಇನ್ನೂ ಏಕೆ ಅದನ್ನು ಮಾಡಲಿಲ್ಲ? ಮಾನ್ಯ ಮುಖ್ಯಮಯತ್ರಿಗಳ ಗಮನಕ್ಕೆ ಇದು ಬಂದಿರಲೂ ಸಾಕು. ತಾವು ಸಚಿವಸಂಪುಟದಲ್ಲಿ ಮಾರನೇ ದಿನ ಏನು ಶೋಕ ಸಂತಾಪವನ್ನು ವ್ಯಕ್ತಮಾಡಿದ್ದೀರಿ ಅದನ್ನು ಒಬ್ಬ ನಾಲ್ಕನೇ ದರ್ಜೆಯ ನೌಕರ ಶ್ರೀಮತಿ ಪರಿಮಳ ನಾಗಪ್ಪನವರಿಗೆ ತೆಗೆದುಕೊಂಡು ಹೋಗಿ ಕೊಡುತ್ತಾನೆ. ಏನು ತಹಶೀಲ್ದಾರ್ ಸತ್ತುಹೋಗಿದ್ದಾರಾ? ನಿಮ್ಮ ಡೆಪ್ಯೂಟಿ ಕಮಿಷನರ್ ಸತ್ತುಹೋಗಿದ್ದಾರಾ? ನಿಮ್ಮ ಎಸ್.ಪಿ. ಸತ್ತುಹೋಗಿದ್ದಾರಾ? ನಿಮ್ಮ ಸರ್ಕಾರದ ಆಡಳಿತ ಯಂತ್ರಕ್ಕೆ ಏನಾಗಿದೆ ಅಥವಾ ನಿಮ್ಮ ಜಿಲ್ಲಾ ಮಂತ್ರಿಗಳು ನಾಪತ್ತೆ ಆಗಿದ್ದಾರೆಯೇ? ಕೊಳ್ಳೆಗಾಲ ತಾಲ್ಲೂಕು, ಚಾಮರಾಜನಗರ ತಾಲ್ಲೂಕಿನಿಂದ ಯಾರೂ ಶ್ರೀಮತಿ ಪರಿಮಳ ನಾಗಪ್ಪನವರಿಗೆ ಹೋಗಿ ಹೇಳತಕ್ಕಂಥವರು ಇಲ್ಲವೇ? ನಿಮ್ಮ ಸಚಿವ ಸಂಪುಟದ ಸದಸ್ಯರುಗಳ ನಾಗಪ್ಪನವರ ಬಿಡುಗಡೆ ಸಂದರ್ಭದಲ್ಲಿ ಓಡಾಡಿದರಲ್ಲಾ

ಅವರೆಲ್ಲಾ ಎಲ್ಲಿ ನಾಪತ್ತೆಯಾಗಿದ್ದಾರೆ? ಹೇಳಿಕೆಗಳನ್ನು ಕೊಟ್ಟಂಥ ಮಹಾಶಯರುಗಳು ಎಲ್ಲಾ ಎಲ್ಲಿ ಹೋಗಿದ್ದರು? ನಿಮ್ಮ ಸಚಿವ ಸಂಪುಟ ಅಷ್ಟೇ ಅಲ್ಲ, ಆ ಸಚಿವ ಸಂಪುಟದ ತೀರ್ಮಾನ ಕರ್ನಾಟಕದ ಐದೂವರೆ ಕೋಟಿ ಜನಗಳ ಸ್ವತ್ತು ಅದು. ಅದರ ಒಂದು ತೀರ್ಮಾನವನ್ನು ತಿಳಿಸಲಿಕ್ಕೆ ಒಂದು ವಾರದ ನಂತರ ಒಬ್ಬ ನಾಲ್ಕನೇ ದರ್ಜೆಯ ನೌಕರರನ್ನು ನೀವು ಕಳುಹಿಸುತ್ತೀರಿ. ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ಶ್ರೀಮತಿ ಸೋನಿಯಾಗಾಂಧಿ ಅವರು ಒಂದು ಪತ್ರವನ್ನು ಬರೆಯುತ್ತಾರೆ. ಅದನ್ನು ತೆಗೆದುಕೊಂಡು ಹೋಗಿ ಕೊಡುವುದಕ್ಕೆ ನಿಮ್ಮ ಕಾಂಗ್ರೆಸ್ ಅಧ್ಯಕ್ಷರಿಗೆ ಆಗುವುದಿಲ್ಲ. ಈ ರಾಷ್ಟ್ರದ ಲೋಕಸಭೆಯ ವಿರೋಧ ಪಕ್ಷದ ನಾಯಕಿಯ ಪತ್ರವನ್ನು ನಿಮ್ಮ ಕಾಂಗ್ರೆಸ್ ಪಾರ್ಟಿಯ ಅಧ್ಯಕ್ಷರು ನಾಲ್ಕನೇ ದರ್ಜೆಯ ನೌಕರನ ಮೂಲಕ ಕಳುಹಿಸುತ್ತಾರೆ. ತೆಗೆದುಕೊಂಡು ಹೋಗಿ ಕೊಡತಕ್ಕಂಥ ಧೈರ್ಯ ನಿಮ್ಮಲ್ಲಿ ಇಲ್ಲ. ಇವತ್ತಿನವರೆಗೂ ಸಹಿತ ಆ ಕುಟುಂಬವರ್ಗದವರಿಗೆ ದೂರವಾಣಿ ಮೂಲಕವಾಗಲೀ ಮಾತನಾಡತಕ್ಕಂಥ ಸೌಜನ್ಯತೆಯನ್ನು ಮಾನ್ಯ ಮುಖ್ಯಮಂತ್ರಿಗಳು ತೋರಿಸಿಲ್ಲ. ಏಕೆ, ನಿಮಗೆ ಭಯವೇ? ನಿಮಗೆ ಅಳುಕು ಇದೆಯೇ? ಇದುವರೆಗೆ ಸಹಿತ ನೀವು ಸಾಂತ್ವನ ಹೇಳತಕ್ಕಂಥ ಕೆಲಸ ಏಕೆ ಮಾಡಿಲ್ಲ? ಎಲ್ಲೋ ಒಂದು ಕಡೆ ನಾವು ತಪ್ಪು ಮಾಡಿದ್ದೇವೆ, ನಾವು ತಪ್ಪಿತಸ್ಥರ ಸ್ಥಾನದಲ್ಲಿದ್ದೇವೆ, ಎನ್ನತಕ್ಕಂಥ ಭಾವನೆ ನಿಮ್ಮನ್ನು ಕಾಡುತ್ತಾ ಇದೆ. ಆ ಭೂತ ನಿಮ್ಮನ್ನು ಹಿಡಿದುಕೊಂಡಿದೆ. ಆ ತಪ್ಪನ್ನು ನೀವು ಮಾಡದೇ ಹೋಗಿದ್ದಿದ್ದರೆ, ನಿಮ್ಮ ಸರ್ಕಾರ ಮಾಡದೇ ಹೋಗಿದ್ದಿದ್ದರೆ. ನೀವು ಹೋಗಿ ನಾವು ಅಪರಾಧ ಮಾಡಿದ್ದೇವೆ, ತಪ್ಪು ಮಾಡಿದ್ದೇವೆ, ನಮ್ಮನ್ನು ಕ್ಷಮಿಸಿ, ನಿಮ್ಮ ಗಂಡನನ್ನು ಉಳಿಸಲಿಕ್ಕೆ ಆಗಲಿಲ್ಲವೆಂದು ನೀವು ಹೇಳಬಹುದಾಗಿತ್ತು. ಇನ್ನು ನಾಗಪ್ಪನವರ ಅಪಹರಣ ಏಕೆ ಆಯಿತು? ಇದರ ಹಿಂದೆ ಇರತಕ್ಕಂಥ ವಿಚಾರ ಏನು? ಇದನ್ನು ನಾವು ಮೊದಲನೆಯದಾಗಿ ಪ್ರಸ್ತಾಪ ಮಾಡೋಣ.

ಡಾ|| ರಾಜ್‌ಕುಮಾರ್ ಅವರ ಅಪಹರಣ ಆದಾಗಿನಿಂದ, ಡಾ|| ರಾಜ್‌ಕುಮಾರ್ ಅಪಹರಣದಿಂದ ಈ ಸರ್ಕಾರ, ಮುಖ್ಯವಾಗಿ ಈ ಸರ್ಕಾರದ ಪೊಲೀಸ್ ವ್ಯವಸ್ಥೆ ಕಲಿತಿರತಕ್ಕಂಥ ಪಾಠಗಳು ಏನು? ಇದರ ಬಗ್ಗೆ ತಾವು ಇವತ್ತು ನಿರ್ವಿಕಾರವಾಗಿ ಯೋಚನೆ ಮಾಡಬೇಕು. ನಾನು ಹೇಳುತ್ತಾ ಇದ್ದೇನೆಂದು ತಾವು ವಿಚಾರ ಮಾಡುವುದಕ್ಕೆ ಹೋಗಬೇಡಿ. ನಿರ್ವಿಕಾರವಾಗಿ ತಾವು ಯೋಚನೆ ಮಾಡಿ. 1990-91 ರಿಂದ ಯಾವ ಯಾವ ಪೊಲೀಸ್ ಅಧಿಕಾರಿಗಳು ಎಸ್.ಟಿ.ಎಫ್.ನಲ್ಲಿ ಎಸ್‌ಟಿಎಫ್ ಮುಖ್ಯಸ್ಥರಾಗಿ ಕೆಲಸ ಮಾಡಿದ್ದಾರೆ? ಅದು ತಮಿಳುನಾಡು ಎಸ್‌ಟಿಎಫ್ ಪೊಲೀಸ್ ಅಧಿಕಾರಿಗಳು ಇರಬಹುದು, ನಮ್ಮ ಪೊಲೀಸ್ ಅಧಿಕಾರಿಗಳು ಇರಬಹುದು, ಇವರು ಇಬ್ಬರೂ ಸೇರಿ ಕೊಟ್ಟಿರತಕ್ಕಂಥ ವರದಿಗಳಲ್ಲಿ ಡಾ|| ರಾಜ್‌ಕುಮಾರ್ ಅಪಹರಣ ಆಗತಕ್ಕಂಥದ್ದು ನಿಮಗೆ ಗೊತ್ತಿತ್ತು. ಶ್ರೀ ವಾಟಾಳ್ ನಾಗರಾಜ್ ಅವರ ಅಪಹರಣ ಆಗುತ್ತದೆ ಎನ್ನತಕ್ಕಂಥದ್ದು ಇತ್ತು. ಆ ವರದಿಯಲ್ಲಿ ಎರಡನೇ ಹೆಸರು ನಾಗಪ್ಪನವರದ್ದು ಇತ್ತು ಈ ಸದನದ ಸದಸ್ಯರಾಗಿರತಕ್ಕಂಥ ಶ್ರೀ ಮಹದೇವ ಪ್ರಸಾದ್, ಶ್ರೀ ಕೃಷ್ಣಮೂರ್ತಿ ಮಾನ್ಯ ರಾಜೂಗೌಡರು, ಇತರ ಎಲ್ಲರನ್ನೂ ಸಹಿತ ಅಪಹರಣ ಮಾಡುತ್ತಾನೆ ಎನ್ನತಕ್ಕಂಥ ಮಾಹಿತಿ ವರದಿಗಳಿಂದ ಇತ್ತು. ಆದರೆ ನೀವು ಡಾ|| ರಾಜ್‌ಕುಮಾರ್‌ರವರ ಅಪಹರಣದಿಂದ ಕಲಿತಿರತಕ್ಕಂಥ ಪಾಠ ಏನು ಎನ್ನುವುದನ್ನು ಜನತೆಗೆ ಇವತ್ತು ತಿಳಿಸಬೇಕಾಗಿದೆ. ಶ್ರೀ ಅರಕೇಶ್ ಅವರು ಒಬ್ಬ

ಸಾಮಾನ್ಯ ಅಧಿಕಾರಿ ಇರಬಹುದು. ಡಾ|| ರಾಜ್‌ಕುಮಾರ್ ಅವರ ಬಿಡುಗಡೆ ಆದನಂತರ ಶ್ರೀ ಅರಕೇಶ್ ಅವರು ಹೇಳಿರತಕ್ಕಂಥ ಆ ವರದಿ ಬಗ್ಗೆ ಈ ಸದನದಲ್ಲಿ ಪ್ರಸ್ತಾಪವಾಯಿತು. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? 7 ವರ್ಷದಿಂದ ನನಗೆ ತಿಳುವಳಿಕೆ ಇರುವ ಹಾಗೆ ಗೃಹಖಾತೆಯ ಮಂತ್ರಿಯಾಗಿ ಕೆಲಸ ಮಾಡಿ ಕಡತಗಳನ್ನು ನಾನು ನೋಡಿರತಕ್ಕಂಥವನು. ಅವತ್ತಿನ ಆ ಗೃಹಕಾರ್ಯದರ್ಶಿಯವರು ಈಗ ದಿವಂಗತರಾಗಿದ್ದಾರೆ. ಕರ್ನಾಟಕದ ಒಬ್ಬ ಅತ್ಯಂತ ದಕ್ಷ ಅಧಿಕಾರಿ ಮಾನ್ಯ ಮುತ್ತಣ್ಣ ಅವರು. ಅವರು ನಮಗೆ ಪದೇ ಪದೇ ಎಚ್ಚರಿಸುತ್ತಿದ್ದರು. ಏನು ಎಚ್ಚರಿಸುತ್ತಿದ್ದರು ಎಂದರೆ ನಾಗಪ್ಪನವರ ಪ್ರಾಣಕ್ಕೆ ಅಪಾಯ ಇದೆ ಎನ್ನತಕ್ಕಂಥ ಮಾತನ್ನು ಅವರು ಹೇಳುತ್ತಿದ್ದರು. ನಾಗಪ್ಪನವರಿಗೆ ನೀವು ಕೊಟ್ಟಂತಹ ರಕ್ಷಣೆ ಏನು? ನೀವು ಕೊಟ್ಟಿರುವ ರಕ್ಷಣೆ ಏನೆಂದರೆ ಇಬ್ಬರು ಪೊಲೀಸ್ ಪೇದೆಗಳು. ಇಬ್ಬರೇ ಇಬ್ಬರು ಪೊಲೀಸ್ ಪೇದೆಗಳು. ನಾನು ಒಂದು ಪತ್ರವನ್ನು ರೆಫರ್ ಮಾಡುತ್ತಿದ್ದೇನೆ, ಆ ಪತ್ರ ಏನೆಂದರೆ, Security to improtant dignitories and VIPs in your jurisdiction. ಇದನ್ನು ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ (ಡಿಐಜಿ), ಟಾಸ್ಕ್‌ಫೋರ್ಸ್ ಕಾಮಾಂಡೆಂಟ್ ಜುಲೈ 2002ರಲ್ಲಿ ಮೈಸೂರು ಇಂಟೆಲಿಜೆನ್ಸ್ ಚೀಫ್‌ಗೆ, ಮೈಸೂರಿನ ಎಸ್.ಪಿ.ಗೆ ಒಂದು ಪತ್ರವನ್ನು ಬರೆಯುತ್ತಾರೆ, ಆ ಪತ್ರದ ಕಾಪಿಯನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಅದರಲ್ಲಿ ಏನು ಹೇಳುತ್ತಾರೆಂದರೆ,

> "The Various inputs indicate the activities of Veerappan in last few months. However, the past experience always make it essential to be vigilant specially with regard to VIPs. The input received by the STF indicates that the following persons used to be given adequate security while they were touring your district or stationed in your district: Padmabhushan Rajkumar, Padmashri Dr. Sudarshan, H. Nagappa, Vatal Nagaraj, persons of similar visiting MLAs." ಅವರು ಫರ್ದರ್ ಬರೆಯುತ್ತಾರೆ,
>
> "It will not be sufficient to restrict the security cover to these people and as such you are directed to make a security assessment. Please take adequate action and intimate the same at the earliest."

ಎನ್ನುವ ಪತ್ರವನ್ನು ಜುಲೈ ತಿಂಗಳಲ್ಲಿ ಬರೆಯುತ್ತಾರೆ. ಆದಾದನಂತರ, ಬೆಂಗಳೂರಿನಿಂದ ಮಾನ್ಯ ಮುಖ್ಯಮಂತ್ರಿಗಳ ನೇರವಾಗಿ ಇವರ ಆಡಳಿತ ಕೈಕೆಳಗಿರುವ ಇಂಟೆಲಿಜೆನ್ಸ್, ಅದಕ್ಕೂ ಹೋಂ ಮಿನಿಸ್ಟರ್‌ಗೂ ಏನೂ ಸಂಬಂಧವಿಲ್ಲ. ಅವರು ಒಂದು ಕಾಗದ ಬರೆಯುತ್ತಾರೆ.

> "Adequate precaution should be taken on all these following persons.

ಎನ್ನುವ ಮಾತನ್ನು ಮೈಸೂರು ಮತ್ತು ಚಾಮರಾಜನಗರ ಎಸ್.ಪಿ.ಗೆ ಪತ್ರವನ್ನು ಬರೆಯುತ್ತಾರೆ. ಅದಾದನಂತರ, ಇವರೇನು ಬರೆಯುತ್ತಾರೆಂದರೆ, this is a very, very important letter,

because this is the total bluff where the security has failed. ಎನ್ನುವುದಕ್ಕೆ Office of Superintendent of Police Chamarajanagar, ಅವರು ಬರೆಯುತ್ತಾರೆ, ವೈ ಸ್ಕೇಲ್ ಸೆಕ್ಯುರಿಟಿ ಬಗ್ಗೆ ಟೈಂ ವೇಸ್ಟ್ ಆಗುತ್ತದೆಂದು ಹೇಳಿ ಡೀಟೇಲ್ಸ್ ಓದುವುದಕ್ಕೆ ನಾನು ಹೋಗುತ್ತಿಲ್ಲ.

> "The leaders of the various tribals in general, come under Y Category : G. Raju Gowda, Vatal Nagaraj, H. Nagappa and Dr. Sudarshan. They have been provided with adequate security as per the Y Scale." ಮಾನ್ಯ ಅಧ್ಯಕ್ಷರೆ, What is Y Scale? This is another very important aspect.

ವೈ ಸ್ಕೇಲ್ ಅಂದರೇನು? ನನಗೆ ಗೊತ್ತಿರುವ ಹಾಗೆ, ವೈ ಸ್ಕೇಲ್ ಇಂಟೆಲಿಜೆನ್ಸ್ ಎಂದು ಹೇಳಿದಾಗ, ಇವರೇನು ಅವರಿಗೆ ಕೊಡಬೇಕೆಂದರೆ, 7 ಜನ ಆರ್ಮ್ಡ್ ಗಾರ್ಡ್ಸ್ ಅನ್ನು ಅವರ ಮನೆಗೆ ಕೊಡಬೇಕು. That is defined in the Police Manual. 7 ಜನ ಪಿ.ಸಿ.ಗಳನ್ನು ಅವರ ಮನೆ ಹತ್ತಿರ ಕೊಡಬೇಕು. ಇಬ್ಬರು ಪಿಎಸ್‌ಐಗಳನ್ನು automatic fire-armed guns ಅನ್ನು ಕೊಟ್ಟು, 24 ಗಂಟೆ ಇರಬೇಕು. This is Y Scale security. ಮಾನ್ಯ ಅಧ್ಯಕ್ಷರೆ, ಆಗಸ್ಟ್ 25ರ ರಾತ್ರಿ ಆ ಕರಾಳ ದಿವಸದಿಂದ ಎಷ್ಟು ಜನ ಕಾನ್‌ಸ್ಟೇಬಲ್ ಇದ್ದರೆಂದರೆ ಒಬ್ಬನೇ ಒಬ್ಬ ಕಾನ್‌ಸ್ಟೇಬಲ್ ಇದ್ದ. ಒಬ್ಬ ಕಾನ್‌ಸ್ಟೇಬಲ್ ರಜೆ ಇದ್ದ. ಇನ್ನೊಬ್ಬ ಕಾನ್‌ಸ್ಟೇಬಲ್ ಇದ್ದ ಯಾವುದೋ ಓಲ್ಡ್ ರೈಫಲ್ ಇಟ್ಟುಕೊಂಡು. ಫೈರ್ ಆರ್ಮ್ಡ್, ಎ.ಕೆ.-47 ಅನ್ನು ನೀವು ಯಾರ ರಕ್ಷಣೆಗೋಸ್ಕರ ಇಟ್ಟುಕೊಂಡಿದ್ದೀರಿ? ಹೋಂ ಮಿನಿಸ್ಟರ್, ಚೀಫ್ ಮಿನಿಸ್ಟರ್, ನಿಮ್ಮ ಸುತ್ತಮುತ್ತ ಎ.ಕೆ. -47 ಅನ್ನು ನೀವು ಇಟ್ಟುಕೊಂಡು, ನೀವು ಯಾರ ರಕ್ಷಣೆ ಪಡೆಯಲಿಕ್ಕೆ ಇಟ್ಟುಕೊಂಡಿದ್ದೀರಾ ಅಥವಾ ವೀರಪ್ಪನ್ ಯಾರನ್ನು ಎತ್ತಿಕೊಂಡು ಹೋಗುತ್ತೇನೆಂದು ಹೇಳುತ್ತಿದ್ದಾನೆ ಅವರ ರಕ್ಷಣೆಗೋಸ್ಕರ ಇಟ್ಟು ಕೊಂಡಿದ್ದೀರಾ? ಈ ದಿವಸ ಇದನ್ನು ನಾನು ಹೇಳುಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ಈ ಪತ್ರಗಳನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಅದಾದನಂತರ, ನೀವು ಎಸ್.ಟಿ.ಎಫ್. ಕಾರ್ಯಾಚರಣೆಗಳೇನಿವೆ, ಇವುಗಳನ್ನು ರಾಜ್‌ಕುಮಾರ್ ಅಪಹರಣವಾದ ನಂತರ ಕಳೆದ 2 ವರ್ಷಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಎಂ.ಎಂ. ಹಿಲ್ಸ್‌ಗೆ ಆಗಾಗ್ಗೆ ಹೋಗುತ್ತಿರುತ್ತಾರೆ. ಅವರಿಗೆ ನಂಬಿಕೆ ಇದೆ. ನನಗೂ ಅದರಲ್ಲಿ ಬಹಳ ನಂಬಿಕೆ ಇದೆ. ನಾನೂ ಮಹದೇಶ್ವರ ಸ್ವಾಮಿ ದೇವಸ್ಥಾನಕ್ಕೆ ಹೋಗುತ್ತಿದ್ದೇನೆ. ಇತ್ತೀಚೆಗೆ ಹೋಗುವುದನ್ನು ಕಡಿಮೆ ಮಾಡಿದ್ದೇನೆ. ತಾವು ರಾಜ್‌ಕುಮಾರ್ ಅಪಹರಣ ಆದಾಗ ಬಹಳಷ್ಟು ಸಾರಿ ಅಲ್ಲಿಗೆ ಹೋಗಿದ್ದಿರಿ. ಪ್ರಸಾದವನ್ನು ತೆಗೆದುಕೊಂಡು ಬಂದು ಶ್ರೀಮತಿ ರಾಜ್‌ಕುಮಾರ್‌ರವರಿಗೆ ಕೊಟ್ಟಿದ್ದಿರಿ, ಸಂತೋಷ ನಾವೂ ನಿಮ್ಮ ಜೊತೆಯಲ್ಲಿ ಸೇರಿಕೊಂಡಿದ್ದೆವು. ನಾವೂ ನಿಮ್ಮ ಜೊತೆಯಲ್ಲಿ ಸೇರಿಕೊಂಡು ರಾಜ್‌ಕುಮಾರ್ ಮನೆ ದೇವರು ಮುತ್ತತ್ತಿ ಹಲಗೂರು ಹತ್ತಿರ, ಸಂಗಮದಲ್ಲಿದೆ, ತಮಗೂ ಗೊತ್ತಿದೆ, ಅಲ್ಲಿಗೆ ಹೋಗಿ ಪೂಜೆ ಮಾಡಿ, ಲೇಟ್ ಟೈಗರ್ ಪ್ರಭಾಕರ್ ಸೇರಿ, ಪಾರ್ವತಮ್ಮನವರಿಗೆ ಪ್ರಸಾದವನ್ನು ತೆಗೆದುಕೊಂಡು ಹೋಗಿ ಕೊಟ್ಟಿದ್ದೆವು. ಆದರೆ, ಆ ಕೆಲಸವನ್ನು ನೀವು ಈ ಸಾರಿ ಮಾಡುವುದಕ್ಕೆ ಹೋಗಲಿಲ್ಲ. ಏಕೆಂದು ನನಗೆ ಗೊತ್ತಿಲ್ಲ. ಅದೇನೇ ಇರಲಿ. ಎಂ.ಎಂ. ಹಿಲ್ಸ್‌ಗೆ

ಡಾ॥ ರಾಜ್‌ಕುಮಾರ್ ಅಪಹರಣವಾದ ನಂತರ 2 ಸಾರಿ ಹೋಗಿ ಬಂದಿದ್ದೀರಿ. 2 ಸಾರಿ ಸಹ ನಿಮ್ಮ ಪ್ರೋಗ್ರಾಂನಲ್ಲಿ ಬರೆದಿದ್ದೀರಿ, ಏನೆಂದರೆ, ಎಸ್.ಟಿ.ಎಫ್. ಆಕ್ಟಿವಿಟಿಗಳನ್ನು ನಾನು ರಿವ್ಯೂ ಮಾಡಿದ್ದೇನೆಂದು ದಯವಿಟ್ಟು ನನಗೆ ಹೇಳಿ, ರಿವ್ಯೂ ಮಾಡಿದ ಮೇಲೆ ನೀವು ತೆಗೆದುಕೊಂಡಿರುವ ಆಕ್ಷನ್ ಏನು? ಏನು ಆಕ್ಷನ್‌ಗಳನ್ನು ತೆಗೆದುಕೊಂಡಿದ್ದೀರಿ? ಇಬ್ಬರು ಡಿ.ಜಿ.ಗಳನ್ನು ಅಪಾಯಿಂಟ್ ಮಾಡಿಕೊಂಡಿದ್ದೀರಿ. ಒಬ್ಬರು ದಿನಕರ್, ಇನ್ನೊಬ್ಬರು ಅವರು ಆದಮೇಲೆ ಭಾಸ್ಕರ್. ಮಾನ್ಯ ಅಧ್ಯಕ್ಷರೆ, ಪೊಲೀಸ್ ವ್ಯವಸ್ಥೆ ಬಗ್ಗೆ ನಾವು ತಲೆ ತಗ್ಗಿಸಬೇಕಾಗುತ್ತದೆ. ಇವರಿಬ್ಬರು ಡಿ.ಜಿ. ಸಹ ಒಂದು ದಿನವೂ ಎಸ್.ಟಿ.ಎಫ್ ಕಾರ್ಯಾಚರಣೆಯನ್ನು ಪರಿಶೀಲನೆ ಮಾಡಲಿಲ್ಲ. ಏಕೆ ನಾಗಪ್ಪನವರು ಇವತ್ತು ಸತ್ತಿದ್ದಾರೆ ಎನ್ನುವುದಕ್ಕೆ ಕಾರಣವಿದೆ. ಎಸ್.ಟಿ.ಎಫ್ ಕಾರ್ಯಾಚರಣೆ ಚೀಫ್, it is not alone the DIG who takes care of that. It is the Tamil Nadu Police. ಅವರ ಜೊತೆಯಲ್ಲಿ ಕಾರ್ಯಾಚರಣೆ ಮಾಡಬೇಕು, ನೀವು ಅಟ್‌ಲೀಸ್ಟ್, ರಾಜ್‌ಕುಮಾರ್ ಅಪಹರಣವಾಗಿ, ಬಿಡುಗಡೆಯಾದ ನಂತರ, ರಾಜ್ಯ ಏನೆಲ್ಲಾ ಸಂಕಷ್ಟ ಅನುಭವಿಸಿತು, ಸರ್ಕಾರದ ಖಜಾನೆಗೆ ಎಷ್ಟೊಂದು ನಷ್ಟವಾಯಿತು. ಈ ಅಪಹರಣವಾದ ಸಂದರ್ಭದಲ್ಲಿ ರಾಜ್‌ಕುಮಾರ್ ಅಪಹರಣವಿರಬಹುದು, ನಾಗಪ್ಪನವರ ಅಪಹರಣವಿರಬಹುದು, the law and order machinery, of the government came to a grinding halt. What a colossal waste. ಅದರಿಂದ ನೀವು ಪಾಠ ಕಲಿಯಲಿಲ್ಲ. ನಿಮ್ಮ ಡಿ.ಜಿ. ಹೋಗಿ ಎಷ್ಟು ಸಾರಿ ತಮಿಳುನಾಡಿನ ಎಸ್.ಟಿ.ಎಫ್ ಚೀಫ್ ಜೊತೆ ಕುಳಿತು ಚರ್ಚೆ ಮಾಡಿದ್ದೀರಿ? ಹೋಗಲಿ, ಡಾ॥ ಜಯಲಲಿತಾ ರವರು ಮುಖ್ಯಮಂತ್ರಿಗಳಾದ ಮೇಲೆ ಎಷ್ಟು ಸಾರಿ ನೀವು ಹೋಗಿ, ನಿಮ್ಮ ಡಿ.ಜಿ. ಯವರು ಹೋಗಿ ಅವರ ಜೊತೆಯಲ್ಲಿ ಚರ್ಚೆ ಮಾಡಿದ್ದೀರಿ? ಒಂದು ಸಾರಿಯೂ ಮಾಡಲಿಲ್ಲ. ಒಂದು ಸಾರಿ ಮಾತ್ರ ಡಾ॥ ಶ್ರೀನಿವಾಸನ್ ಕೊಳ್ಳೇಗಾಲದವರೆಗೆ ವಿಸಿಟ್ ಮಾಡಿದ್ದರು. ಎಂ.ಎಂ. ಹಿಲ್ಸ್‌ಗೆ ಹೋಗುವ ಧೈರ್ಯವನ್ನು ಡಿ.ಜಿ.ಯವರು ಆ ಸಂದರ್ಭದಲ್ಲಿ ತೋರಿಸಲಿಲ್ಲ. ಮಾನ್ಯ ಅಧ್ಯಕ್ಷರೆ, ನಮ್ಮ ಹಿಂದಿನ ಸರ್ಕಾರದಲ್ಲಿ ದಿನಾಂಕ 10.12.2000 ಮತ್ತು 13.1.2001ರಂದು ನಿಮ್ಮ ಡಿ.ಜಿ. ಆಫೀಸ್‌ನಿಂದ ಅಲ್ಲಿ ಜ್ಯೂರಿಸ್‌ಡಿಕ್ಷನ್ ಬಗ್ಗೆ ಕಮಾಂಡೆಂಟ್ ಚೀಫ್ ಯಾರು? ರೆಗ್ಯುಲರ್ ಐ.ಜಿ. ಯಾರು? ಐ.ಜಿ. ಡಿ.ಐ.ಜಿ. ಜ್ಯೂರಿಸ್‌ಡಿಷನ್ ಏನು? ಇದರ ಬಗ್ಗೆ conflicting government orders. ಗಳನ್ನು ಕಳುಹಿಸಿದ್ದೀರಿ. ಅಂದರೆ, there was absolutely no co-ordination in STF. ನನಗೆ ಗೊತ್ತಿದೆ, ಇವತ್ತಿಗೂ ನೀವು ರಿವ್ಯೂ ಮಾಡಿ, The sanctioned strength of STF is 900, whereas hardly it was 400. ಕೇವಲ 400 ಜನ ಮಾತ್ರ ರಾಜ್‌ಕುಮಾರ್ ಅಪಹರಣವಾದ ನಂತರವೂ ಸಹಿತ, the STF operation comes directly under the Hon'ble Chief Minister. ಇದು ನಿಮ್ಮ ಕೈಕೆಳಗೆ ಬರುತ್ತದೆ. ನಿಮ್ಮ ದಕ್ಷ, ಪಾರದರ್ಶಕ ಆಡಳಿತ, ಏಕೆ ನೀವು ರಿವ್ಯೂ ಮಾಡಲಿಲ್ಲ? ನೀವು 2 ಸಾರಿ ಹೋಗಿ ಬಂದಿದ್ದೀರಿ, 400 ಜನ ಇದ್ದಾರೆ, 900 ಜನರನ್ನು ಏಕೆ ಕೊಡಲಿಲ್ಲ? ಅಷ್ಟೇ ಅಲ್ಲ, ಎಸ್.ಟಿ.ಎಫ್. ನವರು ಪೆಟ್ರೋಲ್, ಡೀಸೆಲ್ ಡ್ರಾ ಮಾಡಲು ಅವರ ಕೈಯಲ್ಲಿ ಆಗುತ್ತಿರಲಿಲ್ಲ. ಧರ್ಮಸಿಂಗ್‌ರವರೆ, ತಾವು ಗೃಹ ಇಲಾಖಾ ಮಂತ್ರಿಗಳಾಗಿದ್ದರಿ, ಏಪ್ರಿಲ್ 2002ರಿಂದ 8 ತಿಂಗಳ ಕಾಲ there was no

government order for the STF. ಎಸ್.ಟಿ.ಎಫ್. ಇದೆ ಎನ್ನುವುದಕ್ಕೆ ನಿಮ್ಮ ಹತ್ತಿರ ಸರ್ಕಾರಿ ಆಜ್ಞೆ ಮಾಡಿರಲಿಲ್ಲ. ಇದಕ್ಕೆ ನಿಮಗೆ ಪುರಾವೆ ಕೊಡುತ್ತಿದ್ದೇನೆ. ಎಸ್.ಟಿ.ಎಫ್. ಚೀಫ್ ನಿಮಗೆ ಅನೇಕ ಪತ್ರಗಳನ್ನು ಬರೆದಿದ್ದಾರೆ. ಇಲ್ಲ, ಒಂದು ಗೌರ್ನಮೆಂಟ್ ಆರ್ಡರ್ ಆಗಬೇಕು, ಪೆಟ್ರೋಲ್ ಡೀಸೆಲ್‌ಗೆ ಹಣ ಬೇಕು, ಅಲ್ಲಿಯ ಅಧಿಕಾರಿಗಳು ಸಂಬಳ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ನಾನು ಪುರಾತನ ಕಾಲದ್ದು ಹೇಳುತ್ತಿಲ್ಲ. 10,5,3 ವರ್ಷದ್ದು ಹೇಳುತ್ತಿದ್ದೇನೆ. What was your DG doing? What was your Intelligence Chief doing? What was your Home Secretary doing? who is responsible for this? ನಾನು ರೆಸ್ಪಾನ್ಸ್‌ಬಲ್ಲಾ? ತಾವು ರೆಸ್ಪಾನ್ಸಿಬಲ್ಲಾ? ದಯವಿಟ್ಟು ಯೋಚನೆ ಮಾಡಿ.

12.00 ಪಿಎಂ

ಈ 6 ತಿಂಗಳುಗಳ ಕಾಲ ಎಸ್‌ಟಿಎಫ್ ಸರ್ಕಾರಿ ಆಜ್ಞೆ ಇಲ್ಲದೆ ಕೆಲಸ ಮಾಡಿದೆ. ಏಕೆ ಎಸ್‌ಟಿಎಫ್ ಫೇಲ್ ಆಯಿತು? ಎಸ್‌ಟಿಎಫ್‌ನಲ್ಲಿ ಜನ ಇಲ್ಲ, ಎಸ್‌ಟಿಎಫ್ ಜ್ಯೂರಿಸ್‌ಡಿಕ್ಷನ್ ಬಗ್ಗೆ ಕನ್‌ಫ್ಯೂಶನ್, ಎಸ್‌ಟಿಎಫ್‌ಗೆ ಹಣ ಇಲ್ಲ ಸಂಬಳ ಇಲ್ಲ, ಎಸ್‌ಟಿಎಫ್ ಚೀಫ್ ರವರು ನಿಮಗೆ ನೂರಾರು ಪತ್ರಗಳನ್ನು ಬರೆದಿದ್ದಾರೆ, ನಾನು ಏಕೆ ಈ ದಾಖಲೆಗಳನ್ನು ಸದನಕ್ಕೆ ಇಡಬೇಕೆಂದು ಕೇಳುತ್ತಿದ್ದೇನೆಂದರೆ, why the system has failed; how the Chief Minister has failed and how the Home Minister has failed ಎಂಬುದನ್ನು ತಿಳಿಸುವ ಉದ್ದೇಶಕ್ಕಾಗಿ ನಾನು ಯಾರೋ ವಿಶ್ವನಾಥ್ ಸ್ಟೇಟ್‌ಮೆಂಟ್ ಕೊಟ್ಟರು ಡಿ.ಕೆ. ಶಿವಕುಮಾರ್ ಸ್ಟೇಟ್‌ಮೆಂಟ್ ಕೊಟ್ಟರು ಮಹಾದೇವ್ ಸ್ಟೇಟ್‌ಮೆಂಟ್ ಕೊಟ್ಟರು ಎಂದು ಅದರ ಬಗ್ಗೆ ನಾನು ಪ್ರಸ್ತಾಪಿಸುವುದಕ್ಕೆ ಹೋಗುವುದಿಲ್ಲ. ಆದರೆ ನಾನು ಇವತ್ತು ನಿಮ್ಮ ಗಮನಕ್ಕೆ ತರುತ್ತಿರುವುದು, ಏಳು ವರ್ಷಗಳ ಕಾಲ ನಾಗಪ್ಪನವರ ಜೀವನಕ್ಕೆ ಭಯ ಇತ್ತಲ್ಲಾ ಆ ಸಂದರ್ಭದಲ್ಲಿ ನಿಮ್ಮ ಎಸ್‌ಟಿಎಫ್ ಯಾವ ರೀತಿ ನಡೆದು ಕೊಂಡಿತು ಎಂಬುದರ ಬಗ್ಗೆ ನೀವು ಯೋಚನೆ ಮಾಡಿ. How did it fails? Why did it fail? ಅದಾದನಂತರ ನಮ್ಮ ಎಸ್‌ಟಿಎಫ್ ಚೀಫ್ ಬಗ್ಗೆ ತಮಿಳುನಾಡಿನ ಮುಖ್ಯಮಂತ್ರಿಗಳು ಸರ್ಟಿಫಿಕೇಟ್ ಕೊಡಬೇಕಾ? Who is she to give that certificate? Why did she give that? ಮಾನ್ಯ ಮುಖ್ಯಮಂತ್ರಿಗಳೇ, this is a very very important aspect. ಏಕೆ ನೀವು ಎಸ್‌ಟಿಎಫ್ ಚೀಫ್ ರವರನ್ನು 6 ತಿಂಗಳಿಗೆ 3 ತಿಂಗಳಿಗೆ ಬದಲಾವಣೆ ಮಾಡುತ್ತಿದ್ದೀರಿ? ಯಾರ ಒತ್ತಡಕೋಸ್ಕರ ನೀವು ಬದಲಾವಣೆ ಮಾಡಿದಿರಿ? Yes, I understand it is your pleasure. ಚೀಫ್ ಮಿನಿಸ್ಟರ್ ಆಗಿರುವವರು ಯಾವ ಐಎಎಸ್ ಅಂಡ್ ಐಪಿಎಸ್ ಅಧಿಕಾರಿಗಳನ್ನು ಎಲ್ಲಿಗೆ ಬೇಕಾದರೂ ಹಾಕಬಹುದು, ಏಕೆ ಬದಲಾವಣೆ ಮಾಡಿದಿರಿ? ಯಾವ ಸರ್ಕಮ್‌ಸ್ಟೆನ್ಸ್‌ನಲ್ಲಿ ಬದಲಾವಣೆ ಮಾಡಿದಿರಿ? ಇದನ್ನು ಕೇಳುವ ಹಕ್ಕು ಈ ಸದನದ ಎಲ್ಲಾ ಸದಸ್ಯರಿಗೆ ಇದೆ, ರಾಜ್ಯದ ಜನತೆಗೆ ಇದೆ ಆದುದರಿಂದ ನೀವು ಏಕೆ ಬದಲಾವಣೆ ಮಾಡಿದಿರಿ ಎಂಬುದನ್ನು ತಿಳಿಸಬೇಕು. ತಮಿಳುನಾಡಿನ ಮುಖ್ಯಮಂತ್ರಿಗಳು ನಿಮ್ಮನ್ನು ಕೇಳುವಂಥ ಪ್ರಶ್ನೆ ಬಂತು. ನಿಮ್ಮನಷ್ಟೇ ಅಲ್ಲ ಪಕ್ಕದ ರಾಜ್ಯದ ಮುಖ್ಯಮಂತ್ರಿಗಳು, ನಮ್ಮ ರಾಷ್ಟ್ರದ ವಿರೋಧ ಪಕ್ಷದ ನಾಯಕರನ್ನು ಪ್ರಶ್ನೆ ಮಾಡುತ್ತಾರೆ. ಎಸ್‌ಟಿಎಫ್ ಚೀಫ್ ಯಾರು? ಏಕೆ ಬದಲಾವಣೆ

ಮಾಡಿದಿರಿ ಎಂದು ಕೇಳುತ್ತಾರೆ. ಎಸ್‌ಟಿಎಫ್ ಚೀಫ್ ಇರಲಿಲ್ಲ. ಈ ಎಸ್‌ಟಿಎಫ್‌ಗೆ ಇಲ್ಲ, ನಂತರದಲ್ಲಿ ತಾವು ಪತ್ರಿಕೆಗಳಲ್ಲಿ ಅನೇಕ ಬಹಿರಂಗವಾಗಿ ಹೇಳಿಕೆಗಳನ್ನು ಕೊಟ್ಟಿದ್ದೀರಿ. ತಾವು ವಿಧಾನ ಪರಿಷತ್ತಿನಲ್ಲಿ ಮಾತನಾಡತಕ್ಕಂಥ ಸನ್ನಿವೇಶದಲ್ಲಿ ಪತ್ರಿಕೆಗಳಲ್ಲಿ ಬರುವ ಆಧಾರದ ಮೇಲೆ ಮಾತನಾಡಬಾರದು ಎಂದು ತಾವು ಹೇಳಿದ್ದೀರಿ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಚರ್ಚೆ ಸಮಯದಲ್ಲಿ ಮಧ್ಯಪ್ರವೇಶಿಸಬೇಕೆನ್ನುವ ಇಂಗಿತ ನನ್ನದಲ್ಲ. ಆದರೆ ಆ ಸದನದಲ್ಲಿ ನಾನು ಏನು ಹೇಳಿದೆ ಎನ್ನುವುದನ್ನು ಮಾನ್ಯ ಸಿಂಧ್ಯಾರವರು ಪ್ರಶ್ನೆ ಮಾಡಿದ್ದಾರೆ, ನಾನು ಅಲ್ಲಿ ಹೇಳಿದ್ದು, ಅಲ್ಲಿ ಮಾನ್ಯ ಸದಸ್ಯರೊಬ್ಬರು ಯಾವುದೋ ಒಂದು ಪರ್ಟಿಕ್ಯೂಲರ್ ವಿಚಾರದಲ್ಲಿ ರೆಫರೆನ್ಸ್‌ಗೆ ಬಂದಾಗ ನಾನು ಅವರಲ್ಲಿ ಮಾಡಿದ ವಿನಂತಿ ಏನೆಂದರೆ, ಪತ್ರಿಕಾ ಮಾಧ್ಯಮದಲ್ಲಿ ಅಥವಾ ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಬಂದಿದ್ದನ್ನೇ ಆಧಾರ ಮಾಡಿಕೊಳ್ಳಬೇಡಿ ಅದಕ್ಕೆ corroborative circumstances, corroborative evidences ಇದ್ದರೆ ಅದನ್ನು ತಾವು ಪರಿಶೀಲಿಸಬೇಕು ಎಂದು ಅಷ್ಟೇ, ನಾನು ಪತ್ರಿಕಾ ಮಾಧ್ಯಮದಲ್ಲಿ ಬರತಕ್ಕಂಥದ್ದನ್ನು ಆಧಾರ ಮಾಡಿಕೊಳ್ಳಬಾರದು ಎಂದು ನಾನು ಎಲ್ಲೂ ಹೇಳಿಲ್ಲ, ಹೇಳಲಿಕ್ಕೂ ಸಾಧ್ಯವಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಮುಖ್ಯಮಂತ್ರಿಗಳ ವಿಚಾರದಲ್ಲಿ ನಾನು ನಿರಾಕರಣೆ ಮಾಡುವುದಕ್ಕೆ ಹೋಗುವುದಿಲ್ಲ, ಆದರೆ ನಾನು ಇದುವರೆವಿಗೂ ಮಾತನಾಡಿರುವಾಗ, ಪತ್ರಿಕಾ ಹೇಳಿಕೆಗಳ ಆಧಾರದ ಮೇಲೆ ನಾನು ಮಾತನಾಡಿಲ್ಲ, ನಾನು ಕರ್ನಾಟಕ ರಾಜ್ಯ ಸರ್ಕಾರದ ಆಜ್ಞೆ, ಆಕಸ್ಮಿಕವಾಗಿ ಬೈ ಮಿಸ್ಟೇಕ್ ನಮ್ಮ ಕನ್ನಡ ಸಂಸ್ಕೃತಿ ಇಲಾಖೆಯ ಮಂತ್ರಿಗಳು ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿರುವುದರಿಂದ ಎಲ್ಲಾ ಸರ್ಕಾರಿ ಆಜ್ಞೆಗಳು ಇಂಗ್ಲೀಷ್‌ನಲ್ಲಿಯೇ ಹೊರಡಿಸಿದ್ದಾರೆ. ಆ ಇಂಗ್ಲೀಷ್‌ನಲ್ಲಿ ಹೊರಡಿಸಿರುವ ಸರ್ಕಾರಿ ಆಜ್ಞೆಗಳ ಆಧಾರದ ಮೇಲೆ ನಾನು ಮಾತನಾಡಿದ್ದೇನೆ. ಇದನ್ನು ಇಲ್ಲವೆಂದು ನೀವು ಹೇಳಿಬಿಡಿ, adequate security was given. ಅಂತ ಹೇಳಿ ಮಾನ್ಯ ಅಧ್ಯಕ್ಷರೆ, ಅಪಹಾಸ್ಯದ ಮಾತು ಎಂದು ಹೇಳಿದರೆ, ಆ ಕಾಡುಗಳ್ಳ ವೀರಪ್ಪನ್ ನಾಗಪ್ಪನವರಂಥ ಒಬ್ಬ ಸಜ್ಜನ ವ್ಯಕ್ತಿಯ ಕತ್ತಿನ ಪಟ್ಟಿ ಹಿಡಿದು ಎಳೆದುಕೊಂಡು ಹೋಗುವಂಥ ಸಂದರ್ಭದಲ್ಲಿ, ನಾಗಪ್ಪನವರು ನೀರಾ ಮಾರಾಟ ಮಾಡಿ ಜೀವನ ಮಾಡುತ್ತಿದ್ದರು, ಅದು ಅವರ ಆರ್ಥಿಕ ಪರಿಸ್ಥಿತಿ ಅವರ ಮನೆಯಲ್ಲಿ ತೆಂಗಿನ ಕಾಯಿ ಕತ್ತರಿಸುವ ಒಂದು ಮಚ್ಚು ಇತ್ತು, ಅದನ್ನು ಎತ್ತಿಕೊಂಡು ಅವರನ್ನು ಕರೆದು ಕೊಂಡು ಒಂದು ಬಸ್ಸಿನಲ್ಲಿ ಹೋಗುತ್ತಾನೆ, ಆ ಬಸ್ಸಿನಲ್ಲಿರುವ ಎಲ್ಲಾ ಪ್ರಯಾಣಿಕರನ್ನು ಇಳಿಸುತ್ತಾನೆ, ಮುಂದುಗಡೆ ಅಷ್ಟು ದೂರದಲ್ಲಿ ಒಂದು ಪೊಲೀಸ್ ಜೀಪ್ ನಿಂತಿದೆ, ಅದರಲ್ಲಿ ತಮ್ಮ ಬುಜದ ಮೇಲೆ ತಮಗೆ ಬಂದಿರುವ ಎಲ್ಲಾ ಬಿರುದುಗಳನ್ನು ಹಾಕಿಕೊಂಡು ಪೊಲೀಸ್‌ನವರು ನಿಂತಿದ್ದಾರೆ, 6 ಜನ ಸರ್ಕಲ್ ಇನ್ಸ್‌ಪೆಕ್ಟರ್ಸ್, ಸಬ್ ಇನ್ಸ್‌ಪೆಕ್ಟರ್ಸ್ ಎಲ್ಲಾ ನಿಂತಿದ್ದಾರೆ ಲೈಟ್ ಆಫ್ ಮಾಡುತ್ತಾರೆ, ವೀರಪ್ಪನ್ "ನಾನು ವೀರಪ್ಪನ್" ಎಂದು ಹೇಳುತ್ತಾನೆ, ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವಂತೆ 105 ದಿನಗಳ ಕಾಲ ನಾಗಪ್ಪನವರ ಕುಟುಂಬದ ಜೊತೆಯಲ್ಲಿಯೇ ನಾವು ಎಲ್ಲಾ ಕೆಲಸ ಮಾಡಿರತಕ್ಕಂಥವರು. ಅವರು ಹೇಳಿರುವ ಸಾಕ್ಷಿಗಳ ಆಧಾರದ ಮೇಲೆ ನಾನು ತಮಗೆ ಹೇಳುತ್ತಿದ್ದೇನೆ, ಆ ಸರ್ಕಲ್ ಇನ್ಸ್‌ಪೆಕ್ಟರ್ ಯಾರು? ಅವನಿಗೂ ವೀರಪ್ಪನಿಗೂ ಇದ್ದಂಥ ಸಂಬಂಧ ಏನು? ಇದರ ಬಗ್ಗೆ ನೀವು

ಏನಾದರೂ ಎನ್‌ಕ್ವೊಯರಿ ಮಾಡಿದ್ದೀರಾ? ವೀರಪ್ಪನ್‌ನ್ನು ನೋಡಿ ಹೆದರಿಕೊಂಡು ನಾಗಪ್ಪನನ್ನು ಹಾಗೆಯೇ ಕರೆದುಕೊಂಡು ಹೋಗಲಿ ಎಂದು ದಾರಿ ಬಿಟ್ಟನೋ, ಅಥವಾ ವೀರಪ್ಪನ್ ಜೊತೆಯಲ್ಲಿ ಸಂಪರ್ಕ ಇಟ್ಟುಕೊಂಡಿದ್ದನೋ ಅಥವಾ ಯಾರ ರಾಜಕೀಯ ಆಶ್ರಯದ ಆಧಾರದ ಮೇಲೆ ಆ ಸರ್ಕಲ್ ಇನ್ಸ್‌ಪೆಕ್ಟರ್ ವೀರಪ್ಪನ್ ಜೊತೆಯಲ್ಲಿ ಸೇರಿಕೊಂಡಿದ್ದ? ಇವರ ಮೇಲೆ ನೀವು ಇದುವರೆವಿಗೂ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ? ಇದುವರೆವಿಗೂ ನೀವು ಏನೂ ಕ್ರಮ ತೆಗೆದುಕೊಂಡಿಲ್ಲ, ಬಹುಶಃ ವಿಧಾನ ಸಭೆಯಲ್ಲಿ ಚರ್ಚೆ ಆಗುವುದನ್ನು ನೀವು ಕಾಯುತ್ತಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ. ಇದೆಲ್ಲಾ ಹೊರಗಡೆ ಬರಲಿ ನಂತರ ನಾನು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ತಾವು ಹೇಳಬಹುದು. ಇದಾದ ಮೇಲೆ ತಮಗೆ ಇನ್ನೊಂದು ರಾಜಕೀಯ ಒತ್ತಡ ಬರುತ್ತದೆ. ರಾತ್ರಿ 12-30 ಗಂಟೆ 28ನೇ ತಾರೀಖು ಎಸ್‌ಟಿಎಫ್ ಚೀಫ್‌ಗೆ ಒಂದು ಮೆಸೇಜ್ ಹೋಗುತ್ತದೆ ಏನೆಂದರೆ, ಇದೂ ಕೂಡ ಸರ್ಕಾರಿ ಅಜ್ಞೆಗಳಲ್ಲಿ ಬರೆದಿದ್ದಾರೆ ಇದು ನಿಮ್ಮ ಗೃಹ ಇಲಾಖೆಯ ಕಡತಗಳಲ್ಲಿ ಇದೆ, ಆ ಎಸ್‌ಟಿಎಫ್ ಚೀಫ್‌ಗೆ ನಿಮ್ಮ ಗೃಹಮಂತ್ರಿಗಳು ಒಂದು ವೈರಲೆಸ್ ಮೇಸೇಜ್ ಕಳುಹಿಸುತ್ತಾರೆ ಏನೆಂದರೆ, ನೀನು ತಕ್ಷಣ ಬಂದು ಬಿಡು ರಾತ್ರಿ 12-30 ಗಂಟೆಗೆ ನನಗೆ ನೀವು ಬ್ರೀಫಿಂಗ್ ಮಾಡಬೇಕು, ಎಂದು ನಮ್ಮ ಗೃಹ ಮಂತ್ರಿಗಳು ಅಷ್ಟೊಂದು ದಕ್ಷತೆಯಿಂದ ಕೆಲಸ ಮಾಡಿದರು. ಮಾನ್ಯ ಕಾಗೋಡು ತಿಮ್ಮಪ್ಪನವರು ಆ ದಿನ ಶಿವಮೊಗ್ಗದಲ್ಲಿ ಇರಲಿಲ್ಲ, ಆ ದಿನ ನಾನು ಶಿವಮೊಗ್ಗ ಐ.ಬಿ.ಗೆ ಸುಮಾರು 10-40ಕ್ಕೆ ತಲುಪಿದೆ, ತಲುಪಿದಾಕ್ಷಣವೇ ನಾನು ಡೆಸ್ಪರೇಟಾಗಿ ಚೀಫ್ ಮಿನಿಸ್ಟರ್ ಅಂಡ್ ಹೋಂ ಮಿನಿಸ್ಟರ್ ಅವರನ್ನು ಕಾಂಟೆಕ್ಟ್ ಮಾಡುವುದಕ್ಕೆ ಪ್ರಯತ್ನಿಸಿದೆ. ಸೋನಿಯಾಗಾಂಧೀಜಿಯವರು ಬೆಳಗಾಂಗೆ ಬಂದಿದ್ದಾರೆ ಅಲ್ಲಿ ಗೃಹ ಮಂತ್ರಿಗಳು ಇದ್ದಾರೆಂದು ಹೇಳಿದರು. ಆಯಿತು ನಾನೊಬ್ಬ ಎಂಎಲ್‌ಎ ಇದ್ದೇನೆ ನಾನೂ ಕೂಡ ಹೋಂ ಮಿನಿಸ್ಟರ್ ಆಗಿದ್ದವನು ಇಂಪಾರ್ಟ್‌ಂಟೆ ಮೇಸೇಜ್ ಕೊಡಬೇಕು ಎಂದು ಹೇಳಿದರೂ ನನಗೆ ಗೃಹ ಮಂತ್ರಿಗಳು 12-30 ಗಂಟೆಯವರೆವಿಗೂ ಸಿಗಲೇ ಇಲ್ಲ. ಅವಯ್ಡ್ ಮಾಡಿದ್ದಾರೆಂದು ನಾನು ತಿಳಿದುಕೊಳ್ಳಲಿಲ್ಲ, ನನಗೆ ತಾವು ಸಿಕ್ಕಲೇ ಇಲ್ಲ, ಹೀಗಿರುವಾಗ ನಿಮ್ಮ ರೆಕಾರ್ಡ್ಸ್ ಪ್ರಕಾರ ರಾತ್ರಿ 12-30ಕ್ಕೆ ಬ್ರಿಫೀಂಗ್‌ಗೆ ನೀವು ಅವರನ್ನು ವಾಪಸ್ ಕರೆಸಿಕೊಂಡಿದ್ದೀರಿ. ಯಾವ ಉದ್ದೇಶದಿಂದ ನೀವು ಅವರನ್ನು ಕರೆಸಿಕೊಂಡಿದ್ದೀರಿ? ಇದು ಒಂದು ಶಂಕೆ ನಮ್ಮ ಮುಂದೆ ಬರುತ್ತದೆ. ಇದು ಅವರ ಅಪಹರಣದ ವಿಚಾರವಾಯಿತು, ಇನ್ನು ಅಪಹರಣ ಆಗಬೇಕಾದರೆ ಅಪಹರಣಕ್ಕೆ ಕಾರಣ ಏನು? What was the procation to Veerappan to abduct Nagappa? ಇದು ಬಹಳ ಮುಖ್ಯವಾಗಿರುವ ವಿಚಾರ. ಇಲ್ಲಿಯೇ ನೀವು ಎಡಿವಿರುವುದು, ಇದಕ್ಕಾಗಿಯೇ ನಾನು ಹೇಳಿದ್ದು, ನೀವು ಮತ್ತು ನಿಮ್ಮ ಸರ್ಕಾರ ವಿಶ್ವಾಸಕ್ಕೆ ಅರ್ಹವಾಗಿರತಕ್ಕಂಥ ಸರ್ಕಾರ ಅಲ್ಲ, ನಂಬಿಕೆಗೆ ಅರ್ಹವಾಗಿರತಕ್ಕಂಥ ಸರ್ಕಾರ ಅಲ್ಲ, ಇದು ಮೋಸದ ಸರ್ಕಾರ, ನೀವು ಮಾಡಿರುವುದು ಮೋಸ. ರಾಜ್‌ಕುಮಾರ್‌ರವರ ಬಿಡುಗಡೆಯಾಯಿತು who were the emissaries? ನಕ್ಕಿರನ್ ಗೋಪಾಲ್? ಸುಕುಮಾರನ್? ಪ್ರೊ: ಕಲ್ಯಾಣಿ? ಶ್ರೀನಿವಾಸಲು? ನೆಡುಮಾರನ್? ಕೊಳತ್ತೂರು ಮಣಿ? These are all the people who helped the release of Rajkumar. ರಾಜ್‌ಕುಮಾರ್‌ರವರು ಬಿಡುಗಡೆಯಾದ ನಂತರ

ಕೊಳತ್ತೂರು ಮಣಿ ಸಂಬಂಧಿಕರ ಮನೆಯಲ್ಲಿ ಒಂದು ದಿವಸ ಇದ್ದರು ಎಂದು ನಾನು ಕೇಳಿದ್ದೇವೆ. ನಾನು ಊಹಾಪೋಹದ ಆಧಾರದ ಮೇಲೆ ನಾನು ಮಾತನಾಡುತ್ತಿಲ್ಲ, 25ನೇ ಆಗಸ್ಟ್ ನಾಗಪ್ಪನವರ ಅಪಹರಣ ಆದ ದಿನ, ಯಾವುದೋ ಒಂದು ಸಿನಿಮಾ ಚಾಮರಾಜನಗರದಲ್ಲಿ ನೂರು ದಿವಸ ನಡೆಯುತ್ತಿದೆ ಎಂದು ಹೇಳಿ ಎಂಟೈರ್ ಪೊಲೀಸ್ ಫೋರ್ಸ್‌ನ್ನು ಅಲ್ಲಿಗೆ ನೀವು ಡೈವರ್ಟ್ ಮಾಡುತ್ತೀರಿ, ಪಾಪ ನಾಗಪ್ಪನವರು ಅವರ ಮೊಮ್ಮಗಳ ಹುಟ್ಟಿದ ಹಬ್ಬ ಎಂದು ಸುಮಾರು ನೂರೈವತ್ತು ಜನಕ್ಕೆ ಊಟಕ್ಕೆ ಕರೆದು, ಅವತ್ತೇ ಅವರು ಅದು ಯಾವುದೋ ಒಂದು ಸಾರ್ವಜನಿಕ ಕೆಲಸಕ್ಕಾಗಿ, ಅವರ ಕಾರ್ಯಕರ್ತರಿಗೆ ಪೊಲೀಸ್‌ರಿಂದ ಹಿಂಸೆಯಾಗುತ್ತದೆ ಎಂದು ಹೇಳಿ ಕೊಳ್ಳೇಗಾಲಕ್ಕೆ ಹೋಗಿ ಬರುತ್ತಾರೆ, ಆ ದಿನ ಇಡೀ ಪೊಲೀಸ್ ಫೋರ್ಸನ್ನು ನೀವು ಡೈವರ್ಟ್ ಮಾಡಿದ್ದೀರಿ. That is another reason. ನಾಗಪ್ಪನವರಿಗೆ ನೀವು ಸೆಕ್ಯೂರಿಟಿ ಕೊಡುವುದರಲ್ಲಿ ಫೇಲ್ ಆಗಿದ್ದೀರಿ ಎಂದು ಹೇಳುವುದಕ್ಕೆ the way in which this government has conducted itself with the emissaries. ಯಾರು ರಾಜ್‌ಕುಮಾರ್‌ರವರನ್ನು ಬಿಡುಗಡೆ ಮಾಡಿ ನಿಮ್ಮನ್ನು ಬಚಾವ್ ಮಾಡಿದರು, ನಿಮ್ಮ ಸ್ಥಾನವನ್ನು ಬಚಾವ್ ಮಾಡಿದರು, ನಿಮ್ಮ ಸರ್ಕಾರವನ್ನು ಬಚಾವ್ ಮಾಡಿದರು, ಅವರಿಗೆ ನೀವು ಕೊಟ್ಟಂಥ ಬಳುವಳಿ ಏನೆಂದರೆ ಈ ಕೊಳತ್ತೂರು ಮಣಿಯ ಮೇಲೆ 5 ಕೇಸ್‌ಗಳನ್ನು ಹಾಕಿದ್ದಾರೆ. 1991 ರಲ್ಲಿ ಒಂದು ಟಾಡಾ ಕೇಸ್, ಟಾಡಾ ಕೇಸ್ ಮೇಲೆ ನೀವು ಕೊಳತ್ತೂರು ಮಣಿಯನ್ನು ಯಾವಾಗ ಅರೆಸ್ಟ್ ಮಾಡಿದ್ದು, ಕೊಳತ್ತೂರು ಮಣಿಯನ್ನು ಅರೆಸ್ಟ್ ಮಾಡಿರುವುದು 2002ರಲ್ಲಿ. ಕ್ರೈಮ್ ನಡೆದಿರುವುದು ಯಾವಾಗ? 1993ರಲ್ಲಿ ಹಾಗಾದರೆ ರಾಜಕುಮಾರ್ ಅಪಹರಣ ಆದಾಗ ಈ ಟಾಡಾ ಬಂಧಿ ಕೊಳತ್ತೂರು ಮಣಿಯನ್ನು ಏಕೆ ಉಪಯೋಗಿಸಿಕೊಂಡಿರಿ why did you use Kolathur Mani? ಏಕೆ ಉಪಯೋಗಿಸಿ ಕೊಂಡಿದ್ದೀರಿ ಎನ್ನುವುದನ್ನು ನೀವು ಜನಗಳಿಗೆ ಹೇಳಿ. If he is a anti-national, if he is a criminal, if he is a terrorist, if he is an LTTE man, why did you use him? ಏಕೆ ಅವನನ್ನು ಉಪಯೋಗಿಸಿಕೊಂಡಿರಿ, ಮಾನ್ಯ ಅಧ್ಯಕ್ಷರೆ, he was acquitted in a TADA case of 1993, which case the trial has come to an end and the judgement pronounced. ಜಡ್ಜ್‌ಮೆಂಟ್ ಪ್ರೊನೊನ್ಸ್ ಆಗಿದೆ. ಅದು ಆದಮೇಲೆ the State Government have not even preferred an appeal against the judgement. ಇದನ್ನು ಕಾನೂನು ಸಚಿವರು ಕಿವಿಕೊಟ್ಟು ಕೇಳುತ್ತಿದ್ದಾರೆ. ಎಲ್ಲಿ ಕೇಸ್ ಆಕ್ವಿಟ್ ಆಗುತ್ತದೆ. ಆಕ್ವಿಟ್ ಆದ ನಂತರ, ಸ್ಟೇಟ್ ಗೌರ್ನಮೆಂಟ್ ಮುಂದೆ ಅವನಿಗೆ ಶಿಕ್ಷೆಯಾಗಬೇಕೆಂದು ಅಪೀಲು ಹೋಗುವುದಿಲ್ಲ. ಟಾಡಾ ಕಾಯಿದೆ 2002ರಲ್ಲಿ ಇರಲಿಲ್ಲ ತಮಗೆ ಗೊತ್ತಿದೆ. ಪೋಟಾ ಕಾಯಿದೆಯನ್ನು ನಿಮ್ಮ ಸರ್ಕಾರ ರಾಜಕೀಯಕ್ಕಾಗಿ ವಿರೋಧ ಮಾಡಿದರು ... It is okay, I am not questioning that. I am not deviating from that. But why did you arrest Kolathur Mani under TADA which was not existing? ಇದು ಒಂದು ಆಯಿತು. ಇದಾದ ಮೇಲೆ ನೀವು ಅವನ ಮೇಲೆ ನಾಲ್ಕು ಕೇಸ್‌ಗಳನ್ನು ಹಾಕಿದ್ದೀರಿ. ಏನೆಂದರೆ, Explosives Act, Arms Act. ಕರ್ನಾಟಕ ರಾಜ್ಯದ ಅರಣ್ಯ

ಕಾಯಿದೆ, As if ಕೊಳತ್ತೂರು ಮಣಿ, ವೀರಪ್ಪನ್‌ಗೆ 2002ನೇ ಇಸ್ವಿಯಲ್ಲಿಯೇ ಎಕ್ಸ್‌ಪ್ಲೋಜಿವ್‌ಗೆ ತೆಗೆದುಕೊಂಡು ಹೋಗಿ ಕೊಟ್ಟನಾ? 2002ನೇ ಇಸ್ವಿಯಲ್ಲಿಯೇ ಅರಣ್ಯದಲ್ಲಿರತಕ್ಕಂಥ ಎಲ್ಲಾ ಸಾಮಾನುಗಳನ್ನು ಕೊಳತ್ತೂರು ಮಣಿ ಸಾಗಿಸುತ್ತಿದ್ದನೆ? ಆದಾದ ಮೇಲೆ ಎಕ್ಸ್‌ಪ್ಲೋಜಿವ್ ಆಕ್ಟ್ ಅರ್ಮ್ಸ್ ಆಕ್ಟ್ ಫಾರೆಸ್ಟ್ ಆಕ್ಟ್, ನೀವು ಯಾವ ಕೊಳತ್ತೂರು ಮಣಿಯನ್ನು ರಾಜಕುಮಾರ್ ಬಿಡುಗಡೆಗೆ ಉಪಯೋಗಿಸಿಕೊಂಡಿರಿ ರಾಜ್‌ಕುಮಾರ್ ಯಾವ ನಕ್ಕೀರನ್ ಗೋಪಾಲನ್ ಉಪಯೋಗಿಸಿಕೊಂಡಿರಿ, ಅವರ ಬಗ್ಗೆ ನೀವು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕಾಗಿತ್ತು ಕೇಂದ್ರ ಸರ್ಕಾರಕ್ಕೆ ಹೇಳಬಹುದಾಗಿತ್ತು. ತಮಿಳುನಾಡು ಸರ್ಕಾರದವರು ಅರೆಸ್ಟ್ ಮಾಡಿಬಿಟ್ಟರು. ಹೇಳಬೇಕಾಗಿತ್ತು ಕೇಂದ್ರ ಸರ್ಕಾರಕ್ಕೆ ಈ ಕೇಂದ್ರ ಸರ್ಕಾರದ ಪರವಾಗಿ ಇರುವಂಥ ಜನ ಅವರನ್ನು ಡಿಫೆಂಡ್ ಮಾಡಿಕೊಳ್ಳುತ್ತಿದ್ದರು ಅಟ್‌ಲೀಸ್ಟ್. ಅದು ಆಗಲಿಲ್ಲ, ಇದಾದ ಮೇಲೆ ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾಗಿ ಇರತಕ್ಕಂಥ ಮತ್ತೊಂದು ವಿಚಾರ. ತಾವು ಯಾರನ್ನೋ ನಂಬಿ ಮೋಸ ಹೋಗಿದ್ದೀರಿ ನೀವು ವಂಚನೆ ಮಾಡಿಸಿ ಕೊಂಡಿದ್ದೀರಿ, ಅದಕ್ಕೆ ವಂಚನೆ ಈಗ ನಮಗೆ ಆಗಿದೆ. ಕೊಳತ್ತೂರು ಮಣಿಗೆ ಗುಂಡೆ ಫಾರೆಸ್ಟ್ ಗೆಸ್ಟ್‌ಹೌಸ್‌ನಲ್ಲಿ ಪೊಲೀಸ್‌ನವರು ಟಾರ್ಚರ್ ಮಾಡಿದ್ದಾರೆ. ಕೊಳತ್ತೂರು ಮಣಿ ಸ್ಲಿಪ್‌ಗಳನ್ನು ಕಳುಹಿಸುತ್ತಾರೆ. ಅವನ ಹೆಂಡತಿಗೆ, 20,30, 40 ಲಕ್ಷ ಎಂದು ಕಳುಹಿಸುತ್ತಾನೆ. ಕೊಳತ್ತೂರು ಮಣಿಗೆ ಏರೋಪ್ಲೇನ್ ಹತ್ತಿಸುತ್ತಾರೆ ಪೊಲೀಸ್‌ನವರು, ಗುಂಡೆ ಫಾರೆಸ್ಟ್ ಗೆಸ್ಟ್‌ಹೌಸ್‌ನಲ್ಲಿ, ಇದು ರೆಕಾರ್ಡ್ಸ್‌ನಲ್ಲಿ ಇದೆ ರಾಮಯ್ಯನವರೇ ನಾವು ಹೇಳತಕ್ಕಂಥ ವಿಚಾರ ಅಲ್ಲ. This is on the records. ತಾವು ವಕೀಲರು. I am not defending Kolathur Mani at all. ನಮಗೂ ಅರೆಸ್ಟ್ ಮಾಡಬಹುದು. ನಾಳೆ ನೀವು ಕೊಳತ್ತೂರು ಮಣಿಯ ಪರವಾಗಿ ಮಾತನಾಡುತ್ತಿದ್ದೀರಿ, ರಾಷ್ಟ್ರದ್ರೋಹಿ ಕೆಲಸದಲ್ಲಿ ತೊಡಗಿದ್ದೀರಿ, ನಾಗಪ್ಪನವರ ಬಿಡುಗಡೆಗೆ ಪ್ರಯತ್ನವನ್ನು ಮಾಡಿದಿರಿ ಅಂತ ಹೇಳಿ, I am prepared to face it. Mr. Mahadev Prasad is prepared to face it and Mr. Krishnamurthy is prepared to face it. ನಮ್ಮ ಅಧ್ಯಕ್ಷರು, ನಾವು ಎಲ್ಲಾ ತಯಾರಾಗಿದ್ದೇವೆ. ಕರೆದುಕೊಂಡು ಹೋಗಿ ಏರೋಪ್ಲೇನ್‌ಗೆ ಹಾಕಿ, ಅವನಿಂದ ಎರಡೂವರೆ ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದೀರಿ Rs. $2^1/_2$ crores of money has been recovered from Kolathur Mani. ನಾನೇನೂ ಮೆಜಿಸ್ಟಿಕ್‌ನಲ್ಲಿ ಭಾಷಣವನ್ನು ಮಾಡುವುದಕ್ಕೆ ಹೋಗಿಲ್ಲ. ಈ ನಾಗಪ್ಪನವರ ಸತ್ತ ಹೆಣದ ಮೇಲೆ ರಾಜಕೀಯ ಮಾಡುವುದಕ್ಕೆ ಹೋಗುತ್ತಿಲ್ಲ ಮಾನ್ಯ ಅಧ್ಯಕ್ಷರೆ, ನಾವು ಜನತಾದಳದವರೂ ಸಹಿತ ಬಹಿರಂಗ ಸಭೆಯನ್ನು ಕರೆಯಬಹುದಾಗಿತ್ತು, ಜನರನ್ನು ಸೇರಿಸಬಹುದಾಗಿತ್ತು. ಕಣ್ಣೀರಿನ ಕೋಡಿಯನ್ನು ಹರಿಸಿ ನಾವು ಓಟನ್ನು ಗಳಿಸಬಹುದಾಗಿತ್ತು. ಆ ರಕ್ತಪಿಪಾಸೆ ಕೆಲಸವನ್ನು ಇವತ್ತು ನಾವು ಮಾಡುವುದಕ್ಕೆ ಹೋಗಿಲ್ಲ. ಏಕೆಂದರೆ, ನಮಗೆ ನಂಬಿಕೆ ಇಲ್ಲ. ಆದರೆ ಎರಡೂವರೆ ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿರುವುದರಲ್ಲಿ 8 ಲಕ್ಷ ರೂಪಾಯಿಗಳು ಕರ್ನಾಟಕದ ಪೊಲೀಸ್‌ನವರು ಕೊಯಮತ್ತೂರಿನ ಕೋರ್ಟಿನಲ್ಲಿ ಡೆಪಾಸಿಟ್ ಮಾಡಿರುವುದಕ್ಕೆ ಸಾಕ್ಷಿ ಪುರಾವೆಗಳು ಇವೆ. ಹಾಗಾದರೆ ಇನ್ನುಳಿದ ಎರಡು ಕೋಟಿ 50 ಲಕ್ಷ ರೂಪಾಯಿಗಳು ಎಲ್ಲಿಗೆ ಹೋಯಿತು. ಈ ದುಡ್ಡು ವೀರಪ್ಪನ್ ಕೈಯಲ್ಲಿ ಹೇಗೆ ಸಿಕ್ಕಿತು, ಕೊಳತ್ತೂರು

ಮಣಿಗೆ ಹೇಗೆ ಸಿಕ್ಕಿತು. ಇದರ ಬಗ್ಗೆ ಯಾರು ಇದನ್ನು ಇನ್‌ವೆಸ್ಟಿಗೇಟ್ ಮಾಡಬೇಕು ನಮ್ಮ ಸಿಓಡಿ ಕೈಯಿಂದ ಮಾಡಿಸೋಣವೆ ಅಥವಾ ಚಾಮರಾಜನಗರದ ಎಸ್‌ಪಿ ಕೈಯಿಂದ ಮಾಡಿಸೋಣವೆ? ಯಾರ ಕೈಯಿಂದ ಇನ್‌ವೆಸ್ಟಿಗೇಶನ್ ಮಾಡಿಸಬೇಕು ಎಂಬುದನ್ನು ಹೇಳಿ. ಈ ರಿಕವರಿಯನ್ನು ನೀವು ಮಾಡಿದಿರಾ? ಮಾನ್ಯ ಅಧ್ಯಕ್ಷರೆ, ಕೊಳತ್ತೂರು ಮಣಿಯ ಮೇಲೆ ಕೇಸ್‌ಗಳನ್ನು ಹಾಕಿ, ಅವನನ್ನು ಹಿಂಸೆಗೆ ಒಳಪಡಿಸಿ, ಅವನಿಂದ ಎರಡೂವರೆ ಕೋಟಿ ರೂಪಾಯಿಗಳನ್ನು ರಿಕವರ್ ಮಾಡಿ, ಅದನ್ನು ನೀವು ಬೇಕು ಬೇಕಾದವರಿಗೆ ಎರಡೂವರೆ ಕೋಟಿ ರೂಪಾಯಿಗಳನ್ನು ಸಾಗಿಸಿಕೊಂಡು 8 ಲಕ್ಷ ರೂಪಾಯಿ ಗಳನ್ನು ಮಾತ್ರ ಕೊಯಮತ್ತೂರು ಕೋರ್ಟಿನಲ್ಲಿಟ್ಟು, ಉಳಿದ ಆ ದುಡ್ಡು ಎಲ್ಲಿಗೆ ಹೋಗಿದೆ. ಇದು ನಾವು ಕೇಳುತ್ತಿರುವ ಪ್ರಶ್ನೆ, ತಮಗೆ ಹಾಗೂ ಸರ್ಕಾರಕ್ಕೆ ತಮ್ಮಿಂದ ಇದಕ್ಕೆ ಉತ್ತರವನ್ನು ಕೊಡುವುದಕ್ಕೆ ಆಗದೆ ಹೋದರೆ, ನಾವೇನು ಮಾಡಬೇಕು. ನೀವು ಹೇಳಬಹುದು, ಅದಕ್ಕೂ ನಮ್ಮ ಪೊಲೀಸ್‌ನವರಿಗೆ ಸಂಬಂಧವಿಲ್ಲ, ಅದು ಕೊಯಿಮತ್ತೂರು ಕೋರ್ಟಿನಲ್ಲಿರುವ ವಿಚಾರವೆಂದು. ಕೊಯಿಮತ್ತೂರು ಕೋರ್ಟಿನಲ್ಲಿ ಕರ್ನಾಟಕದ ಪೊಲೀಸ್‌ನವರೇ ಡಿಪಾಸಿಟ್ ಮಾಡಿರುವುದು. How did that money come? ನಾನು ದಿನಕರ್ ಪುಸ್ತಕಕ್ಕೆ ಹೋಗುವುದಿಲ್ಲ. I am not referring to the book written by Dinakar. ಅದನ್ನು ಹೇಳಿದರೆ ಅವರಿಗೆ ಏನೋ ವೈಭವೀಕರಣ ಮಾಡಿದಂತಾಗುತ್ತದೆ. ನಿಮಗೆ ಅಷ್ಟು ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಬೇಕು ಎಂದು ಇದ್ದರೆ, ಮಾನ್ಯ ಅಧ್ಯಕ್ಷರೆ, ಈ ಸದನ ನಡೆಯಬೇಕು ಎನ್ನುವ ಪುಸ್ತಕದ ಕಾನೂನನ್ನು ತಿದ್ದುಪಡಿ ಮಾಡಿ, ಆ ದಿನಕರ್‌ನ್ನು ಈ ಸಭೆಗೆ ಕರೆಸಿ. Call Dinakar. He is not an ordinary police constable. He has eaten the Salt of Karnataka Government and Kannadiags. ಕರ್ನಾಟಕ ರಾಜ್ಯದ ಜನತೆಯ ಉಪ್ಪನ್ನು ತಿಂದಿರತಕ್ಕಂಥ ದಿನಕರ್, ಒಬ್ಬ ಡಿಜಿಪಿ ಆಗಿ ಆಗಿರುವಂಥ ವ್ಯವಹಾರದ ಬಗ್ಗೆ ಏನು ಬರೆದಿದ್ದಾರೆ, ಅದರೆ ಸುಳ್ಳು, ಸತ್ಯಾಸತ್ಯತೆಯನ್ನು ಪರೀಕ್ಷೆ ಮಾಡುವುದಕ್ಕೆ ಅವರನ್ನು ಇದೇ 31ನೇ ತಾರೀಖಿನೊಳಗಾಗಿ ಈ ಸದನಕ್ಕೆ ಕರೆಸಿ ಅವರು ಹೇಳಿದ್ದಾರೆ 40 ಕೋಟಿ ರೂಪಾಯಿಗಳು ಸಿ.ಎಂ. ಕಛೇರಿಯಿಂದ ಹೋಗಿದೆ ವೀರಪ್ಪನ್‌ಗೆ ಎನ್ನುವುದನ್ನು ಇದಕ್ಕೆ ಸಾಕ್ಷಿ, ಆಧಾರ ಬೇಕಾ? ಸ್ವಾಮಿ ನಾಗಪ್ಪನವರ ದಿನಚರಿಯನ್ನು ನೋಡಿದಾಗ ಮಾತನಾಡುವುದಕ್ಕೆ ಶಬ್ದಗಳು ಬರುವುದಿಲ್ಲ ದಯವಿಟ್ಟು ಭಾವನಾತ್ಮಕವಾಗಿ ಮಾತನಾಡುತ್ತಿದ್ದೇನೆಂದು ತಿಳಿದುಕೊಳ್ಳಬೇಡಿ, ಯಾರನ್ನೋ ಓಲೈಸಬೇಕು, ಯಾರನ್ನೋ ತೃಪ್ತಿ ಪಡಿಸಬೇಕು ಎಂದು ಖಂಡಿತವಾಗಿ ನನಗಿಲ್ಲ. 25ನೇ ತಾರೀಖು ನಾಗಪ್ಪನವರ ಅಪಹರಣವಾಗುತ್ತದೆ. 26ನೇ ತಾರೀಖು ಕಾಡಿನಲ್ಲಿ ಆ ಡಯಾಬಿಟಿಕ್ ಪೇಶೆಂಟ್ ನಡೆಯುವುದಕ್ಕೆ ಆಗುವುದಿಲ್ಲ, 30-40 ಕಿಲೋ ಮೀಟರ್ ನಡೆಸಿಕೊಂಡು ಹೋಗುತ್ತಾನೆ. 27ನೇ ತಾರೀಖಿನಿಂದ ಓಂಕಾರವನ್ನು ಬರೆಯುತ್ತಾರೆ. ಓಂ ನಮಃ ಶಿವಾಯ ಓಂ ನಮಃ ಶಿವಾಯ ಎಂದು ಹೇಳಿ, ಡಿಸೆಂಬರ್ 4ನೇ ತಾರೀಖಿನವರೆಗೂ ಬರೆಯುತ್ತಾರೆ. ದಿನಚರಿಯನ್ನು ತಾವು ಪೊಲೀಸ್‌ರ ಮೂಲಕವಾಗಿ ತರಿಸಿಕೊಳ್ಳಿ, ಕುಟುಂಬದವರ ಕಡೆ ಇದೆಯಂತೆ. ತಾವು ದಯವಿಟ್ಟು ಅದನ್ನು ತರಿಸಿಕೊಂಡು ಓದಿ, ನಾನು ಅದನ್ನು ಪ್ರೊಡ್ಯೂಸ್ ಮಾಡಿ ಪಬ್ಲಿಸಿಟಿ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ತಾವು ತರಿಸಿಕೊಂಡು ಓದಿ. ಓಂ ನಮಃ ಶಿವಾಯ ಎನ್ನುವುದನ್ನು ನಾಗಪ್ಪನವರು ಪ್ರತಿದಿವಸ ಬರೆಯುತ್ತಾರೆ. ಅವರು ಮೊದಲನೆಯ ದಿವಸ ಏಕೆ ಬರೆಯುವುದಕ್ಕಾಗಿಲ್ಲವೆಂದರೆ

ನಡೆದುಕೊಂಡು ಹೋಗಿದ್ದರೆಂದು ಹೇಳಿ, ಅವತ್ತು ಶಿವನಲ್ಲಿ ಎಷ್ಟು ನಂಬಿಕೆ ಇತ್ತು ಎಂದು ಹೇಳಿದರೆ, ಮಧ್ಯೆದಲ್ಲಿ ಒಂದು ದಿನ ಆ 26ನೇ ತಾರೀಖಿನದ್ದು ಬಾಕಿ ಎಂದು ಬರೆಯುತ್ತಾರೆ. ಡಿಸೆಂಬರ್ 5ನೇ ತಾರೀಖು ಬರೆಯಬೇಕೆಂದು ಚುಕ್ಕೆಗಳನ್ನು ಹಾಕಿಕೊಂಡು ಪುಸ್ತಕವನ್ನು ಡಿವೈಡ್ ಮಾಡಿಕೊಳ್ಳುತ್ತಾರೆ, ಆದರೆ ಆವತ್ತು ಬರೆಯುವುದಕ್ಕಾಗುವುದಿಲ್ಲ. ಆದರೆ 5ನೇ ತಾರೀಖು ಬೆಳಿಗ್ಗೆ 9 ರಿಂದ 10 ಗಂಟೆಗೆ ಚಂಗಡಿಯಲ್ಲಿ ಕರ್ನಾಟಕ ಸರ್ಕಾರದ ಎರಡು ಬೋರ್‌ವೆಲ್‌ಗಳು ಅಂದರೆ ರಿಗ್‌ಗಳು ಗೋರ್ ಎಂದು ಶಬ್ದಮಾಡುತ್ತಿತ್ತು. ಚಂಗಡಿಗೆ ಕುಡಿಯುವುದಕ್ಕೆ ನೀರಿನ ತೊಂದರೆ ಬಹಳವಿತ್ತು, ಬಹುಶಃ ಗ್ರಾಮೀಣಾಭಿವೃದ್ಧಿ ಸಚಿವರು ಆವತ್ತೇ ಹಾಕಬೇಕೆಂದು ಆರ್ಡರ್ ಮಾಡಿದ್ದರೋ ಏನೋ ನನಗೆ ಗೊತ್ತಿಲ್ಲ. ಅವತ್ತು ಗುಂಡಿನ ಕಾಳಗದ ಚಕಮಕಿ ಆಗುತ್ತದೆ. 4ನೇ ತಾರೀಖು ಐ.ಬಿ.ಯಲ್ಲಿ ಒಂದು ಸಭೆಯಾಗುತ್ತದೆ, ಯಾರ್‍ಯಾರು ಐ.ಬಿ.ನಲ್ಲಿ ಭಾಗವಹಿಸಿದ್ದರು, ಇದರ ಬಗ್ಗೆ ತಾವು ಪತ್ತೆಯನ್ನು ಮಾಡಿಸಿ, ಆ ಡೈರಿಯನ್ನು ತರಿಸಿಕೊಂಡು ಓದಿ, ಆ ಡೈರಿಯಲ್ಲಿ ಮಾನ್ಯ ಅಧ್ಯಕ್ಷರೆ, ಬಸವರಾಜು ಎನ್ನತಕ್ಕಂಥವರ ಹೆಸರನ್ನು ಬರೆಯುತ್ತಾರೆ. ಪೊನ್ನಾಚಿ ಮಹದೇವಸ್ವಾಮಿಯವರು ಬಂದು ನನ್ನನ್ನು ಭೇಟಿ ಮಾಡಿದರು ಎಂದು ಬರೆಯುತ್ತಾರೆ. ಬಸವರಾಜುರವರು ಬಂದು ಭೇಟಿ ಮಾಡಿದರು ಎಂದು ಬರೆಯುತ್ತಾರೆ. ಪೊನ್ನಾಚಿ ಮಹದೇವಸ್ವಾಮಿಯವರು ಅವರನ್ನು ಬಂದು ಭೇಟಿ ಮಾಡಿರುವುದು ನಿಜ. ನಮ್ಮ ಪಕ್ಷದ ಹಿರಿಯ ನಾಯಕರಾದ ಶ್ರೀ ಎಂ.ಪಿ. ಪ್ರಕಾಶ್‌ರವರು ತಮ್ಮೊಟ್ಟಿಗೆ ಅವರನ್ನು ಕರೆದುಕೊಂಡು ಒಂದು ಪರಿಚಯ ಮಾಡಿಕೊಟ್ಟರು. ತಾವು ಧೈರ್ಯ ತೆಗೆದುಕೊಂಡು ನೀವು ಹೋಗಿಬನ್ನಿ ಎಂದು ಹೇಳಿದ್ದೀರಿ. ನಾನು ಇಲ್ಲವೆಂದು ಹೇಳುತ್ತಿಲ್ಲ. ನನಗೆ ಎರಡು ನಾಲಿಗೆ ಇಲ್ಲ, ಜನತಾದಳದವರಾದ ನಾವುಗಳು ಎಸ್‌ಟಿಎಫ್ ಕಾರ್ಯಾಚರಣೆಯನ್ನು ನಿಲ್ಲಿಸಿ ಎಂದು ಹೇಳಿದ್ದೇವೆ. ಎಸ್‌ಟಿಎಫ್ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ನಿಲ್ಲಿಸಿದ್ದರಿಂದಲೇ ಅವರು 105 ದಿನಗಳ ಕಾಲ ಬದುಕಿದ್ದರು. ಅದಾದನಂತರ ಕೊಳತ್ತೂರು ಮಣಿಯ ಮೇಲೆ ಇರತಕ್ಕಂಹ ಎಲ್ಲಾ ಕೇಸ್‌ಗಳು ಫಾಲ್ಸ್‌ಕೇಸ್‌ಗಳು ನಾವುಗಳು ವಿತ್‌ಡ್ರಾ ಮಾಡಿ ಎಂದು ಹೇಳಿದ್ದೇವೆ. ಈ ಬಗ್ಗೆ ನಾವು ತಮ್ಮನ್ನು ಪರಿಪರಿಯಾಗಿ ಬೇಡಿಕೊಂಡಿದ್ದೇವೆ. ಈ ಬಗ್ಗೆ ಶ್ರೀಮತಿ ಪರಿಮಳ ನಾಗಪ್ಪನವರು ಮಾನ್ಯ ಮುಖ್ಯಮಂತ್ರಿಗಳೇ ನಿಮಗೆ ಬಂದು ಹೇಳಿದ್ದಾರೆ. ತಾವು ಬಿರುಸಾಗಿ ಮಾತನಾಡಿದಾಗ ನನ್ನ ಸ್ಥಾನದಲ್ಲಿ ತಾವು ಒಂದು ನಿಮಿಷ ಕುಳಿತುಕೊಂಡು ಯೋಚನೆ ಮಾಡಿ, ಏನಾಗಬಹುದು ಎಂದು ಕೇಳಿದ್ದಾರೆ. ಎಸ್.ಎಂ. ಕೃಷ್ಣ, ಚೀಫ್ ಮಿನಿಸ್ಟರ್ ವೈರಲಿಸ್ ಕಳುಹಿಸಿದರು ಎಂದು ಅದರಲ್ಲಿ ಅವರು ಬರೆಯುತ್ತಾರೆ. ಡಾ|| ಭಾನು, 5 ಕೋಟಿ ರೂಪಾಯಿಗಳು, ಎಂದು ಬರೆಯುತ್ತಾರೆ, ಆದಾದನಂತರ ಇನ್ನೂ ಬೇಕಾದಷ್ಟು ಜನ 150 ಲಾರಿಗಳು ಗಂಧ, ಕೊಯಮತ್ತೂರು ಹಾಗೂ ಬೆಂಗಳೂರುನವರದ್ದು ಎಂದು ಅನೇಕ ಹೆಸರುಗಳು ಬಂದಿದೆ. ಅದರಲ್ಲಿ ಕೊಯಮತ್ತೂರುನವರದ್ದೂ ಸಹ ಹೆಸರುಗಳು ಬಂದಿದೆ. ಆ ದಿನಕರ್‌ರವರು ಹೇಳಿರುವ ಹಣಕ್ಕೂ, ನಾಗಪ್ಪನವರು ಆ ನರಹಂತಕ ವೀರಪ್ಪನ್ ಎ.ಕೆ. 47 ಇಟ್ಟುಕೊಂಡು ಏನಾದರೂ ಹೇಳಿ ಬರೆಸಿಬಿಟ್ಟಿದ್ದಾನೋ, ಎಂಬ ಬಗ್ಗೆಯೂ ಸಹ ಯೋಚನೆ ಮಾಡಬೇಕಾಗುತ್ತದೆ. ಆ ಡೈರಿಯಲ್ಲಿರತಕ್ಕಂತಹ ಒಂದೇ ಒಂದು ವಿಚಾರದ ಬಗ್ಗೆ, ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ನೋಡಿರುತ್ತಾರೆ. ಅದರೂ ಸಹಿತ ನಾನು ಅದನ್ನು ತೋರಿಸುವುದಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ನೋಡಿ, ಇದರಲ್ಲಿ

ಎಲ್ಲವೂ ಇದೆ, ಇಲ್ಲಿ ಮೊದಲನೆಯ ಹೆಸರು ಸೇತುಕುಳಿ ಗೋವಿಂದನ್, ತಮಿಳುನಾಡು ಲಿಬರೇಷನ್ ಫ್ರಂಟ್ ವೀರಪ್ಪನ್ ಎಂದು ತಮಿಳುನಲ್ಲಿಯೇ ಬರೆದಿದ್ದಾನೆ. ವೀರಪ್ಪನ್ ಕನ್ನಡ ಕಲಿಯಲಿಕ್ಕೆ ಪ್ರಯತ್ನ ಮಾಡಿರುವ ಬಗ್ಗೆ ನಾಗಪ್ಪನವರು ಅವನಿಗೆ ಕನ್ನಡ ಕಲಿಸುವ ಬಗ್ಗೆ ಬಹಳ ಪ್ರಯತ್ನ ಮಾಡಿಸಿದ್ದಾರೆ. ನಾಗಪ್ಪನವರು ಇಲ್ಲಿ ಅ ನಿಂದ ಇ ವರೆಗೆ ಅಕ್ಷರಮಾಲೆಯನ್ನು ಬರೆದಿದ್ದಾರೆ, ಅವತ್ತೇ ಜಮ್ಮು ಮತ್ತು ಕಾಶ್ಮೀರದ ಚುನಾವಣೆಯ ಫಲಿತಾಂಶ ಬಂದಿದೆ, ಅದನ್ನೂ ಸಹಿತ ಅವರು ನೋಟ್ ಮಾಡಿದ್ದಾರೆ ನಾಗಪ್ಪನವಪರು ಬದುಕಿದ್ದಾಗ ಏನೆಲ್ಲಾ ಅವಮಾನಗಳನ್ನು ನಾಗಪ್ಪನವರಿಗೆ ಮಾಡಿದ್ದೀರಿ ಅದನ್ನು ನಾನು ಹೇಳುವುದಕ್ಕೆ ಬಯಸುವುದಿಲ್ಲ. ಆರ್ಮುಗಸ್ವಾಮಿ, ಕೊಯಮತ್ತೂರು 150 ಲಾರಿ, ಇದಾದನಂತರ ದಿನಾಂಕ 5-10-2002ರಂದು ಶನಿವಾರದ ದಿವಸ ಮಹದೇವಸ್ವಾಮಿಯವರು ಬಂದಿದ್ದರು ದಿನಾಂಕ 6-11-2002ರಂದು ತಮಿಳುನಾಡಿನ ಮುಖ್ಯಮಂತ್ರಿಗಳನ್ನು ನನ್ನ ಪತ್ನಿ ಭೇಟಿ ಮಾಡಿದ್ದು, 2-11-2002ರಂದು ಪ್ರಧಾನಮಂತ್ರಿಗಳನ್ನು ನಮ್ಮ ಮನೆಯವರು ಭೇಟಿ ಮಾಡಿರುವುದು 13-11-2002 ರಂದು ಉಪ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿರುವುದು, ಇದಾದನಂತರ 19-11-2002, ಬಸವರಾಜು ಚೆಂಗಡಿಗೆ ಬಂದದ್ದು ಮತ್ತು ನನ್ನ ಜೊತೆ ಮಾತನಾಡಿರುವುದು 20-11-2002ರಂದು ಕರ್ನಾಟಕದ ಮಠಾಧಿಪತಿಗಳು ಸಭೆಯನ್ನು ಸೇರಿ ಮಣಿಯನ್ನು ಸಂಧಾನಕಾರನಾಗಿ ಕಳುಹಿಸುವ ಬಗ್ಗೆ ಸರ್ಕಾರವನ್ನು ಒತ್ತಾಯಿಸಿರುವ ಬಗ್ಗೆ. 23-11-2002ರಂದು ಮಣಿಯನ್ನು ಸಂಧಾನಕ್ಕೆ ಕಳುಹಿಸುವ ಬಗ್ಗೆ ಸರ್ವಪಕ್ಷಗಳ ಸಭೆ, ಮಂತ್ರಿಗಳ ಪರಿಷತ್ತು ಇವುಗಳೆಲ್ಲವನ್ನೂ ಬರೆದಿದ್ದಾರೆ. ಮಾನ್ಯ ಅಧ್ಯಕ್ಷರೆ, ಈ ಕ್ಯಾಸೆಟ್‌ಗಳ ವಿಚಾರವಿದೆಯಲ್ಲಾ, ಈ ಕ್ಯಾಸೆಟ್‌ಗಳನ್ನು ಕಳುಹಿಸುವಾಗ ಅವರನ್ನು ಹಾಗೆ ಕಳುಹಿಸುವುದಕ್ಕೆ ವೀರಪ್ಪನ್ ಬಿಟ್ಟಿಲ್ಲಾ, ಈ ಬಗ್ಗೆಯೂ ಸಹ ಅವರು ಬರೆದುಕೊಂಡಿದ್ದಾರೆ. ಇದರ ಮೇಲೆಯೂ ಸಹ ಅವರು ಬರೆದಿದ್ದಾರೆ ಅದಾದನಂತರ ಅದನ್ನು ಅವರು ಹೊಡೆದುಹಾಕಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರಿಗೆ, ಬೈರೇಗೌಡರಿಗೆ, ಸುತ್ತೂರು ಜಗದ್ಗುರುಗಳಿಗೆ, ಕೆಲವರೆಲ್ಲಾ ಹೇಳುತ್ತಾರಲ್ಲಾ ಜಗದ್ಗುರುಗಳೆಲ್ಲಾ ಏಕೆ ಸೇರಿಕೊಂಡರು ಎಂದು ಹೇಳಿ. ಅವರು ಜಗದ್ಗುರುಗಳಿಗೆ ಬರೆದಿದ್ದಾರೆ. ಅವರು ನಮ್ಮ ಪ್ರಾಣ ರಕ್ಷಣೆ ಮಾಡುತ್ತಾರೆಂದು ಬರೆದಿದ್ದಾರೆ. ಅದಕ್ಕೋಸ್ಕರವಾಗಿಯೇ ಹೇಳಿದ್ದಾರೆಯೇ ಹೊರತು ಜಗದ್ಗುರುಗಳನ್ನು ಟೀಕೆ ಮಾಡುವಂತಹ ದಷ್ಟ್ಯವನ್ನು ತಾವು ಮಾಡುವುದಕ್ಕೆ ಹೋಗಬೇಡಿ. ನಮಗೆ ಬದುಕುವುದಕ್ಕೆ ಇಲ್ಲಿ ಬಹಳ ಕಷ್ಟವಾಗುತ್ತಿದೆ, ನಾನು ಬಹಳ ದಿನಗಳ ಕಾಲ ಬದುಕುವುದಕ್ಕೆ ಆಗುವುದಿಲ್ಲ, ದಯವಿಟ್ಟು ಕೊಳತ್ತೂರು ಮಣಿಯನ್ನು ಕಳುಹಿಸಿ ಎಂದು ಪರಿಪರಿಯಾಗಿ ನಿಮ್ಮನ್ನು ನಾಗಪ್ಪನವರು ಬೇಡಿಕೊಳ್ಳುತ್ತಾರೆ. ಇದೆಲ್ಲವನ್ನೂ ಓಂ ನಮಃ ಶಿವಾಯ ಎಂದು ಬರೆದಿದ್ದಾರಲ್ಲಾ ಅದರ ಮಧ್ಯದಲ್ಲಿಯೇ ಇವುಗಳನ್ನು ಬರೆದಿದ್ದಾರೆ. ಅವರಿಗೆ ಭಯವಿರುವ ಕಾರಣದಿಂದಾಗಿಯೇ ಬರೆದಿದ್ದಾರೆ. ಇನ್ನೆನಾದರೂ ಚೀಟಿ ವ್ಯವಹಾರ ಮಾಡಿಕೊಂಡು ಇಲ್ಲಿಂದ ಏನಾದರೂ ಮೇಸೇಜ್ ಕಳುಹಿಸುತ್ತಿದ್ದೇನೆ ಎಂದು ವೀರಪ್ಪನ್ ಅವತ್ತೇ ಕೊಂದುಬಿಡುತ್ತಾನೋ ಏನೋ ಎನ್ನುವ ಭಯದಿಂದಾಗಿಯೇ ಅವರು ಬರೆದಿರಬಹುದು. ಇದಾದನಂತರ ಈ ಕೊಳತ್ತೂರು ಮಣಿಯಿಂದ ಬಂದಿರುವಂತಹ ಎರಡೂವರೆ ಕೋಟಿ ರೂಪಾಯಿಗಳು ಕೊಯಮತ್ತೂರು ಕೋರ್ಟಿನಲ್ಲಿರತಕ್ಕಂತಹ ಎಂಟು ಲಕ್ಷ ರೂಪಯಿಗಳು ಆದರ ಬಗ್ಗೆ ತಾವು ದಯವಿಟ್ಟು ಉತ್ತರವನ್ನು ಕೊಡಬೇಕೆಂದು ಹೇಳುತ್ತೇನೆ. ಇದಾದನಂತರ ತಾವು ಎಸ್‌ಟಿಎಫ್ ಕಾರ್ಯಾಚರಣೆಯನ್ನು

ತತಕ್ಷಣ ನಿಲ್ಲಿಸಲಿಲ್ಲ, ಆ ಕಾರ್ಯಾಚರಣೆಯನ್ನು ತಾವು 15 ದಿನಗಳ ಕಾಲ ನಡೆಸಿದ್ದೀರಿ, ನಿಮ್ಮ ಆವತ್ತಿನ ಡಿಜಿಪಿಯವರು ಬೆಂಗಳೂರಿನಿಂದ ಎಲ್ಲಾ ಕ್ಯಾಮರಾಮನ್‌ಗಳನ್ನು ಕರೆಸಿಕೊಳ್ಳುತ್ತಾರೆ. ನಾಗಪ್ಪನವರು ಸಾಯಂಕಾಲ ಆಚೆಗೆ ಬರುತ್ತಾರೆ ನೀವು ಅವ್ ಫೋಟೋವನ್ನು ತೆಗೆದುಕೊಂಡು ಹೋಗಿ ಎಂದು ಅವರ ಕುಟುಂಬದವರು ಬಹಳ ಕಷ್ಟದಲ್ಲಿದ್ದಾರೆ, ಅವರು ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ನೀವು ಆ ಗಾಯದ ಮೇಲೆ ಉಪ್ಪನ್ನು ಹಾಕುತ್ತಿದ್ದೀರಲ್ಲಾ, ಅವರ ಕುಟುಂಬದವರು ಕೇಳಿದ್ದರಿಂದ ನಾವು ಎಸ್‌ಟಿಎಫ್ ಕಾರ್ಯಾಚರಣೆಯನ್ನು ನಿಲ್ಲಿಸಿದ್ದೇವೆ ಎಂದು ನಿಮ್ಮ ಮಂತ್ರಿಗಳು ಹೇಳಿಕೆಯನ್ನು ಕೊಡುತ್ತಾರೆ. ಎಸ್‌ಟಿಎಫ್ ಕಾರ್ಯಾಚರಣೆಯನ್ನು ಎಲ್ಲಿ ನಿಲ್ಲಿಸಿದ್ದೀರಿ? ಶ್ರೀ ನಾಗಪ್ಪನವರ ಮೃತದೇಹವನ್ನು ಮಣ್ಣಿಗೆ ಹಾಕಿ ಇವತ್ತಿಗೆ 15 ದಿವಸಗಳಾಯಿತು. ಈ 15 ದಿವಸಗಳಲ್ಲಿ ಎಸ್‌ಟಿಎಫ್‌ನವರು ಏನು ಕಡಿದುಕಟ್ಟೆ ಹಾಕಿರುವುದು? ನಾನು ಹೋಂ ಮಿನಿಷ್ಟರ್ ಆಗಿದ್ದಾಗ ಕಡಿದುಕಟ್ಟೆಹಾಕಿರುವುದು ಅಷ್ಟೇ ಈಗ ಕಡಿದುಕಟ್ಟೆಹಾಕಿರುವುದು ಅಷ್ಟೇ ಎಸ್‌ಟಿಎಫ್ ಕಾರ್ಯಾಚರಣೆಯ ಬಗ್ಗೆ ವಿರೋಧಪಕ್ಷದವರು ಹೇಳಿದ್ದಾರೆ ನಾವು ಒಪ್ಪೋಣ. ಅವರ ಕುಟುಂಬದವರು ಹೇಳಿದರು ಆದಕ್ಕೆ ನಿಲ್ಲಿಸಿದ್ದೇವೆಂದು ಹೇಳಿದ್ದೀರಿ ಅದನ್ನು ಒಪ್ಪೋಣ. ಆದರೆ ಅದು ಈಗ ನೀವು ಹೇಳುವ ಮಾತೇ ಎಂಬ ಬಗ್ಗೆ ತಾವು ಯೋಚನೆ ಮಾಡಿ. ನಾಗಪ್ಪನವರ ಅಪಹರಣವಾಯಿತು, ಅವರಿಗೆ ಸಂಪೂರ್ಣವಾಗಿ ರಕ್ಷಣೆಯನ್ನು ಕೊಡುವುದರಲ್ಲಿ ವಿಫಲರಾಗಿದ್ದೀರಿ. Absolutely there was no security to Nagappa. Atleast today, atleast today, I beg of you ಮಾನ್ಯ ಮುಖ್ಯಮಂತ್ರಿಗಳೆ, ಅವರ ಹೆಂಡತಿಯನ್ನು ಕಾಪಾಡಬೇಕು, ಅವರಿಗೆ ರಕ್ಷಣೆಯನ್ನು ಕೊಡಿ. ನಾಳೆಯ ದಿವಸ ರಾಷ್ಟ್ರಾಧ್ಯಕ್ಷರು ಸುತ್ತೂರು ಮಠಕ್ಕೆ ಬರುತ್ತಿದ್ದಾರೆ, ಅವರಿಗೆ ಶ್ರೀಮತಿ ಪರಿಮಳ ನಾಗಪ್ಪನವರು ಮನವಿಯನ್ನು ಕೊಡುವವರಿದ್ದಾರೆ. ಈ ಬಗ್ಗೆ ಪತ್ರಿಕೆಗಳಲ್ಲಿಯೂ ಸಹ ಪ್ರಕಟವಾಗಿದೆ. ಇದನ್ನು ನಾನು ಪೂರಕವಾಗಿ ಉಪಯೋಗಿಸಿ ಕೊಳ್ಳುತ್ತಿದ್ದೇನೆ, ತಾವು ಈಗಾಗಲೇ ಹನೂರಿನ ಬಗ್ಗೆ ರಾಜಕೀಯ ವರದಿಯನ್ನು ಇಂಟಲ್‌ಜೆನ್ಸಿಯಿಂದ ತರಿಸಿಕೊಂಡಿರುತ್ತೀರಿ. ಏಕೆಂದರೆ ತಮಗೆ ಹನೂರು ಬಹಳ ಪರಿಚಯುವಿರುವಂತಹ ಕ್ಷೇತ್ರವಾಗಿದೆ. ಏಕೆಂದರೆ, ತಾವು ಮುಖ್ಯಮಂತ್ರಿಗಳಾಗುವುದಕ್ಕೆ ಮುಂಚೆಯೇ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು ರಾಮನಗರದಿಂದ ಪಾಂಚಜನ್ಯ ಊದಿರರಲ್ಲಾ, ಅದು ರಾಮನಗರದಿಂದ ಪ್ರಾರಂಭವಾಗಿ ಹನೂರುರವರೆಗೂ ಹೋಗಿ ಬಂದಿತ್ತು. ಹನೂರಿನಲ್ಲಿ ಗ್ರಾನೈಟ್ ಮಾಡತಕ್ಕಂತಹ ಅಸೋಸಿಯೇಷನ್‌ನವರೆಲ್ಲರೂ ಅವತ್ತು ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಅಥವಾ ನಾಯಕರ ನಾಯಕತ್ವದಲ್ಲಿ ನಿಮಗೆ ಒಂದು ಮನವಿಯನ್ನು ಕೊಟ್ಟರು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಗ್ರಾನೈಟ್‌ನ್ನು ತೆಗೆಯಲಿಕ್ಕೆ ಅನುವು ಮಾಡಿಕೊಡುತ್ತೇನೆ ಎಂಬ ಭರವಸೆಯನ್ನು ಕೊಟ್ಟಿದ್ದೀರಿ ತಾವು ಕರ್ನಾಟಕದ ಜನತೆಯ ಆಶೀರ್ವಾದದಿಂದ ಮುಖ್ಯಮಂತ್ರಿಗಳಾಗಿದ್ದೀರಿ. ಅದನ್ನು ಸಡಿಲ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಿರಿ ಆದರೆ ವಿರೋಧಪಕ್ಷದವರು ಮತ್ತು ನಾವುಗಳೆಲ್ಲರೂ ಪತ್ರವನ್ನು ಬರೆದು ನಿಮ್ಮ ಮೇಲೆ ಒತ್ತಡವನ್ನು ತಂದು ಇದನ್ನು ತಾವು ದಯವಿಟ್ಟು ಮಾಡುವುದಕ್ಕೆ ಹೋಗಬೇಡಿ ಎಂದು ಹೇಳಿದೆವು. ಹೀಗಾಗಿ ನಿಮಗೆ ಹನೂರು ಪರಿಚಯವಾಗಿದೆ. ಅಲ್ಲಿ ಯಾವ ರೀತಿಯಾಗಿ 35 ವರ್ಷಗಳಿಂದ ರಾಜಕೀಯ ಬೆಳೆದಿದೆ ಎಂಬುದರ ಬಗ್ಗೆ ತಾವು ಯೋಚನೆಯನ್ನು

ಮಾಡಬೇಕು. ಅಲ್ಲಿ ದ್ವೇಷದ ರಾಜಕೀಯ ನಡೆಯುತ್ತಿದೆ, ಆ ದ್ವೇಷದ ರಾಜಕೀಯದ ಜ್ವಾಲೆಯಲ್ಲಿ ಶ್ರೀ ನಾಗಪ್ಪನವರು ಸತ್ತಿದ್ದಾರೆ. ಆ ದ್ವೇಶದ ರಾಜಕೀಯದ ಬೆಂಕಿಯಲ್ಲಿ ಶ್ರೀಮತಿ ಪರಿಮಳ ನಾಗಪ್ಪನವರು ಸಾಯುವುದು ಬೇಡ, ಅವರ ಮಗ ಶ್ರೀ ಪ್ರೀತಂ ಸಾಯುವುದು ಬೇಡ. ಅವರ ಮಕ್ಕಳು ಸಾಯುವುದು ಬೇಡ, ಈಗಲಾದರೂ ಸಹ ನಾನು ಈ ಸದನದ ಮೂಲಕ ಮನವಿಯನ್ನು ಮಾಡಿಕೊಳ್ಳುತ್ತೇನೆ. ಅವರಿಗೆ ಮೊದಲು ರಕ್ಷಣೆ ಕೊಡಿ, ಈ ಘಳಿಗೆಯಲ್ಲಾದರೂ ಸಹಿತ ರಕ್ಷಣೆಯನ್ನು ಕೊಡಿ. ತಾವು ರಾಷ್ಟ್ರಾಧ್ಯಕ್ಷರಿಂದ ಮನವಿಯನ್ನು ತರಿಸಿಕೊಳ್ಳುವುದಕ್ಕೆ ಹೋಗಬೇಡಿ. ಶ್ರೀ ನಾಗಪ್ಪನವರ ಅಪಹರಣ, ಅದಕ್ಕೆ ಕಾರಣ, ಅದು ಸರ್ಕಾರ ವೈಫಲ್ಯ. ಇದಾದನಂತರ ಡಾ।। ರಾಜಕುಮಾರ್‌ರವರ ಬಿಡುಗಡೆಗೆ ಉಪಯೋಗಿಸಿಕೊಂಡಂತಹ ಜನಗಳಿಗೆ ನೀವು ಮೋಸ ಮತ್ತು ವಂಚನೆಮಾಡಿದ್ದೀರಿ. ಅದಕ್ಕೋಸ್ಕರವಾಗಿಯೇ ಶ್ರೀ ನಾಗಪ್ಪನವರ ಅಪಹರಣವಾಗಿದೆ. ಕಾರಣ ಮತ್ತು ಸಂದರ್ಭ ಎರಡನ್ನೂ ನಾನು ವಿವರಿಸಿದ್ದೇನೆ. ತಾವು ನಾಗಪ್ಪನವರ ಅಪಹರಣದ ನಂತರ ತಮಿಳುನಾಡಿನ ಮುಖ್ಯಮಂತ್ರಿಗಳನ್ನು ದೆಹಲಿಗೆ ಹೋಗಿದಂತಹ ಸಂದರ್ಭದಲ್ಲಿ ಭೇಟಿ ಮಾಡಿದಿರಿ ಪ್ರಸ್ತಾಪ ಮಾಡಿದಿರಿ?

12.30 ಪಿಎಂ.

ಅದಾದನಂತರ ತಮಿಳುನಾಡು ಮುಖ್ಯಮಂತ್ರಿಗಳು ನಿಮಗೂ ಕಾಂಗ್ರೆಸ್ ಅಧ್ಯಕ್ಷರಿಗೂ ಟೀಕೆ ಮಾಡಿದರು. Sri Allam Veerabhadrappa is a very competent man. ಅವರ ಜಾತಕ ಪ್ರಕಾರ ಅವರು ಒಂದು ದಿವಸ ಮುಖ್ಯಮಂತ್ರಿಯಾಗುತ್ತಾರೆ. He is a very competent man, congress President. ನಾನು ಅವರು ನಂಬಿರುವ ಜಾತಕ ಪ್ರಕಾರ ಎಂದು ಹೇಳಿದೆ. ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಅವರ ಬಾಯಿಗೆ ಏನು ಬೀಗ ಹಾಕಿತ್ತಾ? ಅವರು ಜಯಲಲಿತ ಅವರನ್ನು ಟೀಕೆ ಮಾಡಬಹುದಾಗಿತ್ತು. ಕಾವೇರಿ ಜಲವಿವಾದ ಬರುತ್ತಿದೆ ಎಂದು ಹೇಳಿ ನಿಮಗೆ ಗೊತ್ತಿದೆ. ಬರಗಾಲ ಇದೆ, ಕನ್ನಂಬಾಡಿ ಕಟ್ಟೆಯಲ್ಲಿ, ಹಾರಂಗಿನಲ್ಲಿ ನೀರು ಇಲ್ಲವೆಂದು ತಮಗೆ ಗೊತ್ತಿದೆ. ಹಾಗೆ ಗೊತ್ತಿದ್ದರೂ ಸಹ ಮಾನ್ಯ ಗೌರವಾನ್ವಿತ ವಿರೋಧ ಪಕ್ಷದ ನಾಯಕರಾದ ಶ್ರೀಮತಿ ಸೋನಿಯಾ ಗಾಂಧಿಯವರನ್ನು ಜಯಲಲಿತ ಅವರು ಟೀಕೆ ಮಾಡಿದರು ಎನ್ನುವ ಕಾರಣಕ್ಕೋಸ್ಕರ ಕರ್ನಾಟಕದವರಾದ ಜಯಲಲಿತ ಅವರು ತಮಿಳುನಾಡಿಗೆ ಹೋಗಿ ಮುಖ್ಯಮಂತ್ರಿಯಾಗಿ ಬಿಟ್ಟಿದ್ದಾರೆ. ಅದಕ್ಕೇ ಅವರಿಗೆ ಅಭದ್ರತೆ ಎನ್ನುವ ಹೇಳಿಕೆಯನ್ನು ಕೊಟ್ಟಮೇಲೆ ನೀವು ಯಾವ ರೀತಿ ಜಯಲಲಿತ ಅವರನ್ನು ಭೇಟಿ ಮಾಡಿ ನಿಮಗೆ ಮಾತನಾಡುವುದಕ್ಕೆ ಆಗುತ್ತದೆ? ನಿಮಗೆ ಅವರು ಮುಖ ಕೊಡುವುದಿಲ್ಲ, ನಿಮ್ಮ ಮುಖವನ್ನು ನೀವು ಅವರಿಗೆ ಕೊಡುವುದಿಲ್ಲ. ಅದಕ್ಕೋಸ್ಕರ ಮೊನ್ನೆ ಎನ್.ಡಿ.ಎ. ಸಭೆಯಲ್ಲಿ ನೀವಿಬ್ಬರೂ ಮಾತನಾಡುವುದಕ್ಕೆ ಆಗಲಿಲ್ಲ. ಅದಾದಮೇಲೆ ಪರಿಪರಿಯಾಗಿ ಶ್ರೀಮತಿ ಪರಿಮಳಾ ನಾಗಪ್ಪನವರು ರಾಷ್ಟ್ರಾಧ್ಯಕ್ಷರನ್ನು ಪ್ರಧಾನಮಂತ್ರಿಗಳನ್ನು, ಉಪಪ್ರಧಾನಿಗಳನ್ನು ಹೋಗಿ ಸೆರಗೊಡ್ಡಿ ನನ್ನ ಗಂಡನ ಪ್ರಾಣವನ್ನು ಉಳಿಸಿ ಎಂದು ಬೇಡಿಕೊಳ್ಳುತ್ತಾರೆ. ಆದರೂ ಸಹಿತ ದೆಲ್ಲಿಯಲ್ಲಿ ಕುಳಿತುಕೊಂಡಿರತಕ್ಕಂಥ ದೊರೆಗಳು, ಕಂದಹಾರದಲ್ಲಿ ಆದಂಥ ಘಟನೆ ಸಂದರ್ಭದಲ್ಲಿ ಎಲ್ಲಾ ಕೇಂದ್ರದ ಮಂತ್ರಿಗಳು ಹೋಗಿ

ಭಯೋತ್ಪಾದಕರನ್ನು ಬಿಡುಗಡೆ ಮಾಡುತ್ತಾರೆ. ಆದರೆ ನಾಗಪ್ಪನವರ ಬಿಡುಗಡೆ ವಿಚಾರದಲ್ಲಿ ಕನಿಷ್ಟ ಪಕ್ಷ ಕೇರಳ, ಕರ್ನಾಟಕ, ತಮಿಳುನಾಡು ಮುಖ್ಯಮಂತ್ರಿಗಳನ್ನು ಕರೆಸತಕ್ಕಂಥ ಸೌಜನ್ಯತೆಯನ್ನು ತೋರಿಸದೇ ಇರತಕ್ಕಂಥ ಜನ ಅವರು. ನನ್ನ ಅಭಿಪ್ರಾಯದಲ್ಲಿ ಅವರೂ ಕಟುಕರೇ. ಹಾಗೆ ಕರೆಸಬಹುದಾಗಿತ್ತು. ಆದರೆ ಅದನ್ನೂ ಸಹಿತ ಅವರು ಮಾಡಲಿಲ್ಲ. ಹಾಗಾದರೆ ಐವತ್ತು ವರ್ಷದಲ್ಲಿ, ಸ್ವಾತಂತ್ರ ಭಾರತದಲ್ಲಿ ಯಾವ ಅಪಹರಣದಲ್ಲೂ, ಕಿಡ್‌ನ್ಯಾಪ್ ಪ್ರಕರಣದಲ್ಲೂ ಎಲ್ಲಿಯೂ ಎಮಿಸರಿ ಇಲ್ಲದೆ ಸಕ್ಸಸ್ ಆಗಿದೆ ಎನ್ನುವುದನ್ನು ನನಗೆ ವಿವರಿಸಿ ಹೇಳಿ. ಎಮಿಸರಿ ಇಲ್ಲದೆ ಎಲ್ಲಿ ಸಕ್ಸಸ್ ಆಗಿದೆ? ಸಂಧಾನಕಾರರನ್ನು ನೀವು ಕಳುಹಿಸಲೇ ಬೇಕಿತ್ತು. ಆದರೆ ಇದು ಮೂರು ರಾಜ್ಯಗಳಿಗೆ ಸಂಬಂಧಿಸಿದ್ದರಿಂದ ಕೇಂದ್ರದ ಗೃಹಮಂತ್ರಿಗಳು ಅದನ್ನು ಮಾಡಲಿಲ್ಲ. ನಮ್ಮ ಕರ್ನಾಟಕದ 28ಜನ ಲೋಕಸಭಾ ಸದಸ್ಯರು, 12 ಜನ ರಾಜ್ಯಸಭಾ ಸದಸ್ಯರು ಏನಿದ್ದಾರೆ ಇವರುಗಳು ನಾಗಪ್ಪನವರನ್ನು ಉಳಿಸಿಕೊಳ್ಳುವುದಕ್ಕೆ ಏನು ಕೆಲಸ ಮಾಡಿದ್ದಾರೆ ಎನ್ನುವುದು ನನಗಂತೂ ಗೊತ್ತಿಲ್ಲ. ಯಾರೋ ಪಾಪ, ಶ್ರೀನಿವಾಸ ಪ್ರಸಾದ್, ಜಾರ್ಜ್ ಫರ್ನಾಂಡೀಸ್‌ರಂಥ ಪುಣ್ಯಾತ್ಮರು ನಿಮಗೆ ಸ್ವಲ್ಪ ಸಹಾಯ ಮಾಡಿದರು. ಆ ವಿಚಾರ ನನಗೆ ಗೊತ್ತಿದೆ. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ರೆಸ್ಕ್ಯೂ ಆಪರೇಷನ್ ಆಗುವಾಗ ಕರ್ನಾಟಕದ ದುರಾದೃಷ್ಟಕ್ಕೆ ಕಾವೇರಿ ಜಲವಿವಾದ ಪ್ರಾರಂಭವಾಯಿತು. ನೀವೇನು ರಾಜಕುಮಾರ್ ಅವರ ಬಿಡುಗಡೆ ಸಂದರ್ಭದಲ್ಲಿ that sense of hurry you had shown, that sense of hurry you could not show here. ಇಲ್ಲಿ ಇನ್ನೊಬ್ಬ ನಕ್ಕೀರನ್ ಗೋಪಾಲನ್ ಸಿಗಲಿಲ್ಲ. ಅಸೆನ್ಸ್ ಆಫ್ ಹರಿಯನ್ನು ನೀವು ತೋರಿಸಿದ್ದಿದ್ದರೆ ನೀವು ಏನು ಮಾಡಬಹುದಾಗಿತ್ತು? ಸಿಂಧ್ಯರವರೇ, ನೀವು ಏನು ಮಾಡುತ್ತಿದ್ದಿರಿ ಎಂದು ಕೇಳಬಹುದು. ನಾನು ಅವತ್ತೇನೇ ಕ್ಯಾಬಿನೆಟ್ ಸಬ್‌ಕಮಿಟಿಯನ್ನು ಮಾಡುತ್ತಿದ್ದೆ. ಆದರೆ ತಾವು ಕ್ಯಾಬಿನೆಟ್ ಸಬ್‌ಕಮಿಟಿಯನ್ನು ಮಾಡುವುದಕ್ಕೆ ಎರಡು ತಿಂಗಳು ತೆಗೆದುಕೊಂಡಿರಿ. ನಿಮಗೆ ನಾವೆಲ್ಲರೂ ಸಹಕಾರ ಕೊಟ್ಟಿದ್ದೆವು. ನೀವು ಮಾತಿಗೆ ತಪ್ಪಿ ಪಾದಯಾತ್ರೆಗೆ ಹೋಗುವವರೆಗೆ ಸಹಿತ ನಾವು ನಿಮ್ಮ ಜೊತೆಯಲ್ಲಿದ್ದೆವು. ಬಿ.ಜೆ.ಪಿ ಯವರೂ ಕೂಡ ನಿಮ್ಮ ಜತೆಯಲ್ಲಿ ಇದ್ದರು. ಏಕೆಂದರೆ ಅವರು ಕೇಂದ್ರ ಸರ್ಕಾರದ ರಕ್ಷಣೆ ಮಾಡಬೇಕಾಗಿತ್ತು. ಅಲ್ಲಿಯವರೆಗೂ ಸಹಿತ ನೀವು ಮಂಡ್ಯದ ಐತಿಹಾಸಿಕ ಪಾದಯಾತ್ರೆಗೆ ಹೋಗುವವರೆಗೂ ಸಹಿತ, ನಾವು ನಿಮ್ಮ ಜೊತೆಯಲ್ಲೇ ಇದ್ದೆವಲ್ಲಾ? ನಿಮಗೆ ಅಲ್ಲಿಯವರೆಗೂ ಏನೂ ತೊಂದರೆಯಾಗಲಿಲ್ಲ. ನಾವು ಹಿಂದೆ ಸರಿದಿದ್ದು ಯಾವಾಗ? ನೀವು ಆಕಸ್ಮಿಕವಾಗಿ, ನಿಮಗೆ ಜ್ಞಾನೋದಯ ಪಾದಯಾತ್ರೆ ಹೊರಟಮೇಲೆ ನಾವು ನಿಮ್ಮಿಂದ ಹಿಂದೆ ಸರಿದೆವು. ನಾವು ನಿಮ್ಮ ಜೊತೆಯಲ್ಲಿ ಪಾದಯಾತ್ರೆಗೆ ಬರುವುದಿಲ್ಲ, ನಿಮಗೆ ನಮಸ್ಕಾರ ಎಂದು ಹೇಳಿದೆವು. ಅವತ್ತೇ ನೀವು ಕ್ಯಾಬಿನೆಟ್ ಸಬ್‌ಕಮಿಟಿಯನ್ನು ಮಾಡಬಹುದಾಗಿತ್ತು. ಏಕೆ ಮಾಡಲಿಲ್ಲ? ಮಾಡಬಹುದಾಗಿದ್ದರೂ ಕೂಡ ಅದನ್ನು ನೀವು ಮಾಡಲಿಲ್ಲ. ಮಾನ್ಯ ಅಧ್ಯಕ್ಷರೇ, ಆ ಕುಟುಂಬದವರು ಇನ್ನು ಯಾರನ್ನು ನೋಡಬೇಕು? ಯಾವ ದೇವರನ್ನು ಅವರು ಪೂಜೆ ಮಾಡದೇ ಬಿಟ್ಟಿದ್ದರು? ಜಯಲಲಿತ ಅವರನ್ನು ಭೇಟಿ ಮಾಡಿದ್ದರು. ಅವರು ನಿಮ್ಮ ಸರ್ಕಾರದವರು ನಮ್ಮನ್ನು ಏನೂ ಕೇಳಿಲ್ಲ. ಎಂದು ಹೇಳಿದರು. ನಿಮ್ಮ ಸರ್ಕಾರದವರು ನಮ್ಮನ್ನು ಕೇಳಲೇ ಇಲ್ಲ, ನಾವು ಏನು ಮಾಡುವುದು? ಅವರು ಕೇಳಿದ್ದನ್ನು ನಾವು ಮಾಡುತ್ತೇವೆ ಎಂದು

ಅವರು ಹೇಳಿದರು. ಅದಾದಮೇಲೆ ರಾಷ್ಟ್ರಾಧ್ಯಕ್ಷರನ್ನು ಅವರು ನೋಡಿದರು, ಪ್ರಧಾನಮಂತ್ರಿಗಳನ್ನು, ಉಪಪ್ರಧಾನಿಯವರನ್ನೂ ಕೂಡ ನೋಡಿದರು. ಎಲ್ಲರನ್ನೂ ನೋಡಿದರೂ ಕೂಡ ಏನೂ ಉಪಯೋಗವಾಗಲಿಲ್ಲ. ಸೋನಿಯಾ ಗಾಂಧಿಯವರನ್ನೂ ಅವರು ನೋಡಿದರು. ಇನ್ನು ಏನು ಅವರು ಮಾಡಬಹುದಾಗಿತ್ತು? ಅವರಿಗೆ ಉಳಿದಿದ್ದಂಥ ಮಾರ್ಗವಾದರೂ ಏನು? ಹೌದು, ಮಠಾಧೀಶರುಗಳು ಸಾತ್ವಿಕ ಒತ್ತಾಯವನ್ನು ತಮ್ಮ ಮೇಲೆ ತಂದರು. ಡಾ।। ರಾಜಕುಮಾರ್ ಅಪಹರಣದ ಸಂದರ್ಭದಲ್ಲಿ ಏಕೆ ಮಠಾಧೀಶರು ಸೇರಲಿಲ್ಲ ಎನ್ನುವ ಪ್ರಶ್ನೆ ಬರುತ್ತದೆ. ಏಕೆ ಸೇರಲಿಲ್ಲ ಎಂದರೆ ಆ ಸಂದರ್ಭದಲ್ಲಿ ಮೊದಲನೇ ದಿವಸದಿಂದ ಹಿಡಿದು ಕೊನೆಯ ದಿವಸದವರೆಗೂ ನಾಗಪ್ಪನವರು ಹೇಳಿರತಕ್ಕಂಥ ಡೈರಿ ಪ್ರಕಾರವಾಗಿ ತಾವು ನಡೆದುಕೊಂಡಿದ್ದೀರಿ ವೈರ್‌ಲೆಸ್ ಕಳುಹಿಸಿದ್ದೀರಿ ಮತ್ತೊಂದು ಮಾಡಿದ್ದೀರಿ? ಅದಕ್ಕೋಸ್ಕರ ಮಠಾಧಿಪತಿಗಳು ಸೇರಲಿಲ್ಲ. ಮಠಾಧಿಪತಿಗಳ ಮೇಲೆ ನಿಮಗೆ ಏಕೆ ಸಿಟ್ಟು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಅವರ ಮೇಲೆ ಏಕೆ ನಿಮಗೆ ಸಿಟ್ಟು ಎಂಬುದು ಅರ್ಥವಾಗುತ್ತಿಲ್ಲ.

ಡಾ।। ವೈ. ನಾಗಪ್ಪ : ಇದು ರಾಜಕೀಯ. ನಾವು ರಾಜಕೀಯ ಮಾಡುವುದಿಲ್ಲವೆಂದು ಅವರು ಹೇಳುತ್ತಿದ್ದಾರೆ. ಆದರೆ ಇದೇ ರಾಜಕೀಯವನ್ನು ಅವರು ಆವಾಗಿನಿಂದ ಮಾತನಾಡುತ್ತಿರುವುದು.

ಅಧ್ಯಕ್ಷರು : ನೀವು ಕುಳಿತುಕೊಳ್ಳಿ.

(ಗೊಂದಲ)

ಡಾ।। ವೈ. ನಾಗಪ್ಪ : ಸದನದಲ್ಲಿ ಮಾತನಾಡಲಿಕ್ಕೆ ನನಗೆ ಹಕ್ಕಿದೆ, ನಾನು ಮಾತನಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸ್ವಾಮಿ, ಆ ನಾಗಪ್ಪನವರು ಕೊಲೆಯಾದರು. ಈ ನಾಗಪ್ಪನವರು ನಮಗೆ ಈಗ ಬಿಡುತ್ತಿಲ್ಲ. ಹಾಗಾದರೆ ಕಬಿನಿಯಲ್ಲಿ ಗುರುಸ್ವಾಮಿಯವರು ಆತ್ಮಹತ್ಯೆ ಮಾಡಿಕೊಂಡರಲ್ಲಾ, ಆವತ್ತು ಏಕೆ ನೀವು ಮಠಾಧೀಶರ ನೆರಳಿನಲ್ಲಿ ಕಬಿನಿಗೆ ಹೋಗಿದ್ದಿರಿ? ಇದು ರಾಜಕೀಯ ಅಲ್ಲವೆ? ಇದು ರಾಜಕೀಯ ಅಲ್ವಾ? ಮಂಡ್ಯದ ಮಠಾಧೀಶರು ಬಂದಿದ್ದರು. ನಾನು ಅವರ ಬಗ್ಗೆ ಪೂಜ್ಯ, ಅಭಿಮಾನವನ್ನು ಇಟ್ಟುಕೊಂಡಿರತಕ್ಕಂಥ ಭಕ್ತ. ಅವರು ನನಗೆ ಆಶೀರ್ವಾದ ಮಾಡಿದ್ದಾರೆ, ಮುಂದೆಯೂ ಮಾಡುತ್ತಾರೆ. ತಿಮ್ಮಪ್ಪನವರೇ, ಇದರಲ್ಲಿ ಏನು ಸಂಶಯ ಇಲ್ಲ. ನಾನು ರಾಜಕೀಯ ಮಾಡುತ್ತಿಲ್ಲ. ನಾನು ವಸ್ತುಸ್ಥಿತಿಯನ್ನು ಹೇಳುತ್ತಿದ್ದೇನೆ. ಅವರು ಬಂದರು ಮತ್ತು ಕಾವೇರಿ ವಿಚಾರದಲ್ಲಿ ನಿಮಗೆ ಆಶೀರ್ವಾದ ಮಾಡಿದರು. ನಾನು ಏನು ಹೇಳಿದೆ ಕೇಳಿ ಸ್ವಾಮೀಜಿಯವರನ್ನು ನೀವು ಮಾಡಿದ್ದು ತಪ್ಪು ಎಂದು ನಾನು ಹೇಳುವುದಕ್ಕೆ ಹೋಗಲಿಲ್ಲ. ನೀವು ಮಾಡಿದ್ದು ಸರಿಯೆಂದು ಹೇಳಿದ್ದೇನೆ. ಇದರಲ್ಲಿ ಏನು ತಪ್ಪಿದೆ? ಅವರಿಗೆ ಸ್ವಾತಂತ್ರ್ಯ ಇದೆ, ಹೋಗಿ ಹೇಳಿದ್ದಾರೆ. ಏನು ಸುತ್ತೂರು ಬುದ್ಧಿಯವರು, ಪರಮಪೂಜ್ಯ ಶಿವಕುಮಾರ ಸ್ವಾಮಿಯವರು, ಮುರುಗರಾಜೇಂದ್ರ ಸ್ವಾಮಿ ಬರೇಗಳು ವೀರಶೈವರಿಗೆ ಮಾತ್ರ ಸ್ವಾಮಿಗಳಾ? ನಾವೆಲ್ಲಾ ಭಕ್ತಾದಿಗಳಾಗಿ ನಡೆದುಕೊಳ್ಳುವುದಿಲ್ಲವೇ? ಅವರ ಸಭೆಗೆ ಹೋಗುವುದಿಲ್ಲವೇನು? ನಿಮ್ಮ ಕಾರ್ಯಕ್ರಮಗಳಿಗೆ ಅವರನ್ನು ಕರೆಸುವುದಿಲ್ಲವಾ? ಹಾಗಾದರೆ ಪೇಜಾವರ ಸ್ವಾಮಿಗಳು ಎಲ್ಲಿಯೂ ಬರುವುದಿಲ್ಲಾ? ವಾಲ್ಮೀಕಿ ಮಹಾಸ್ವಾಮಿಗಳು ಎಲ್ಲೂ ಬರುವುದಿಲ್ಲಾ? ಒಂದು ಕಡೆ

ಕಾವೇರಿ ಹತ್ತಿಕೊಂಡು ಉರಿಯುತ್ತಿದೆ, ಇನ್ನೊಂದು ಕಡೆ ಕಾನೂನು ವ್ಯವಸ್ಥೆ ಚೆನ್ನಾಗಿ ಇಲ್ಲ. ಅದು ಸಂಪೂರ್ಣವಾಗಿ ಕುಸಿದಿದೆ. 2002 ಕರ್ನಾಟಕ ರಾಜ್ಯಕ್ಕೆ ಒಂದು ದುರ್ದೈವದ ವರ್ಷ ಅಂತಹ ಸಂದರ್ಭದಲ್ಲಿ ವೀರಶೈವ ಮಠಾಧೀಶರು ಸಾತ್ವಿಕವಾಗಿ ನಿಮಗೆ ಒತ್ತಾಯ ಮಾಡಿದರು. ನಿಮ್ಮ ಸಚಿವ ಸಂಪುಟದ ಅನೇಕ ಸದಸ್ಯರೂ ಸಹಿತ ಬಂದಿದ್ದರು. ನಿಮಗೇನೂ ಅವಹೇಳನ ಆಗುವ ರೀತಿಯಲ್ಲಿ ಅವರು ನಡೆದುಕೊಂಡಿಲ್ಲ. ಅದಕ್ಕೆ ಜಾತಿ ಬಣ್ಣ ಕೊಡುವುದಕ್ಕೆ ಇವತ್ತು ಪ್ರಯತ್ನ ನಡೆಯುತ್ತಿದೆ. ಅನೇಕ ಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದೀರಿ. ನಾಗಪ್ಪನವರು ಬಂಧನದಲ್ಲಿದ್ದಾಗ ನೀವು ಕೊಟ್ಟಿರತಕ್ಕಂಥ ಹೇಳಿಕೆಗಳು ಅದು ಬಹಳ ಬಾಲೀಶವಾದಂಥ ಹೇಳಿಕೆಗಳು ಮುಖ್ಯಮಂತ್ರಿಗಳೇ, ತಾವು ದಯವಿಟ್ಟು ಬೇಜಾರು ಮಾಡಿಕೊಳ್ಳಬೇಡಿ. ಒಬ್ಬ ಮಂತ್ರಿಗಳನ್ನು ಹೇಳಿ ಹೇಳಿ ಎಂದು ಮೂರು ಸಾರಿ ಹೇಳಿಸುತ್ತೀರಿ. ಆ ಮಂತ್ರಿಗಳು ನೋ, ನೋ, ನೋ ಅಂತ ಹೇಳುತ್ತಾರೆ. ನೀವು ಏಕೆ ಸಾಕ್ ಡಿಫೆಂಡ್ ಮಾಡುತ್ತೀರಿ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಸ್ವಲ್ಪ ಕುಳಿತುಕೊಳ್ಳಿ. ಈ ವಿಚಾರವನ್ನು ಅಲ್ಲಿ ಪ್ರಸ್ತಾಪ ಮಾಡಿದ್ದೇನೆ. ಪುನಃ ಇಲ್ಲಿ ಪ್ರಸ್ತಾಪ ಮಾಡತಕ್ಕಂಥ ಅವಕಾಶವನ್ನು ನೀವು ನನಗೆ ಒದಗಿಸಿಕೊಡುತ್ತಿದ್ದೀರಿ. ನಾನು ವಿಧಾನಸೌಧದ ಕಾರಿಡಾರ್‌ನಲ್ಲಿ ಬರುತ್ತಿದ್ದೆ. ನನ್ನನ್ನು ಈ ಪತ್ರಿಕೆಯವರು ಮತ್ತು ಟಿ.ವಿ. ಮಾಧ್ಯಮದವರು 7ನೇ ಕ್ಯಾಸೆಟ್ ಬಗ್ಗೆ ಹೇಳಿ ಎಂದು ಮೈಕನ್ನು ಮುಂದೆ ಹಿಡಿದರು. ಇಲ್ಲವೆಂದು ಯಾರ ಭಯ? ಮಹದೇವ್ ಅವರಿಗೆ ಬಯ ಎಂದರು. ಮಹದೇವ್ ಅವರು ಅದೃಷ್ಟವಶಾತ್ ನನ್ನ ಪಕ್ಕದಲ್ಲೇ ಇದ್ದರು. ಬಂತೇನ್ರಿ ನಿಮಗೆ? ಎಂದು ಕೇಳಿದೆ. ಇಲ್ಲ ಎಂದರು. ಹೇಳಿ ಇಲ್ಲ, ಇಲ್ಲ, ಇಲ್ಲ ಎಂದು ಹೇಳಿದೆ. ಇದೆಲ್ಲಾ ಬಂದಿದೆ. ಎಲ್ಲಿಯಾದರೂ ಒಂದು ಅಂತಿಮವಾಗಿ ನಾನು ಈ ಸದನದಲ್ಲಿ ಹೇಳಿದ್ದೇನೆ, ಆ ಸದನದಲ್ಲೂ ಹೇಳಿದ್ದೇನೆ. ಇದು ಒಂದು ಪುಕಾರು ಮತ್ತು ಗುಮಾನಿ ... ಊಹೆ ಮಾತ್ರ ಅನುಮಾನಸ್ಪದವಾಗಿ ಇನ್ನೊಬ್ಬರ ವರ್ತನೆಯನ್ನು ನೋಡತಕ್ಕಂಥಾದ್ದು. ಇದನ್ನು ಬಿಟ್ಟು ನಾನು ಇವತ್ತು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಏಳನೇ ಕ್ಯಾಸೆಟ್ ಸರ್ಕಾರಕ್ಕೆ ಬಂದಿಲ್ಲ. ಅದು ಏನಾದರೂ ಇದ್ದರೆ, ನಿಮ್ಮಲ್ಲಿ ಇದ್ದರೆ, ಅದನ್ನು ತಲುಪಿಸಿದರೆ ನಾನು ಅದನ್ನು ನೋಡುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಹದೇವ್‌ರವರು ಮುಖ್ಯಮಂತ್ರಿಗಳ ಜೊತೆಗೆ ಬರುವುದಕ್ಕೂ ಮೊದಲೇ ಟಿ.ವಿ. ಸಂದರ್ಶನದಲ್ಲಿ ಹೇಳಿದ್ದರು, ಈ ರೀತಿ ಒಂದು ವರದಿ ನನಗೆ ಬಂದಿದೆ, ಇದು ಉಹಾಮೋಹವಲ್ಲ, ಇದು ನಿಜವೂ ಇರಬಹುದು, ನಾನು ನೋಡುತ್ತೇನೆ ಎಂದು ಅವರು ಹೇಳಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಅದನ್ನು ಇಲ್ಲ ಎಂದು ಅವರ ಬಾಯಿಯಿಂದ ಹೇಳಿಸಿದ್ದು ಅದಕ್ಕೆ ಮೊದಲೇ ಅವರು ಈ ಟಿ.ವಿ.ಯ ಸಂದರ್ಶನದಲ್ಲಿ ಹೇಳಿದ್ದರು. ಇದು ಬಂದಿದೆಯೆಂದು ಸುದ್ದಿ ಇದೆ ನನಗೆ, ನನಗೆ ಅದು ನಿಜ ಎಂದು ಅವರು ಹೇಳಿದ ಮೇಲೆ ಅದು ಪ್ರಕ್ರಿಯೆಯಾಗಿದ್ದು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಅದನ್ನು ಅವರನ್ನೇ ಕೇಳಿಬಿಡೋಣ. ಏಕೆಂದರೆ ಸದನದಲ್ಲಿ ನಾವ್ಯಾರೂ ಸುಳ್ಳನ್ನು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಅವರನ್ನೇ ಕೇಳಿಬಿಡಿ. ನೀವು ಹೇಳುವುದಾಗಲೀ ನಾನು ಹೇಳುವುದಾಗಲೀ ಪತ್ರಿಕೆಯಲ್ಲಿ ಬಂದಿದ್ದದ್ದಾಗಲೀ ಇವೆಲ್ಲಾ ಹಿಯರ್ ಸೇ, ಅವರು ಕ್ಲಾರಿಫಿಕೇಷನ್ ಕೊಡಲಿ.

ಶ್ರೀ ಎಂ. ಮಹದೇವ್ (ಪಶುಸಂಗೋಪನೆ, ಸಕ್ಕರೆ ಸಚಿವರು) : ಮಾನ್ಯ ಅಧ್ಯಕ್ಷರೆ, ಗಂಭೀರವಾದ ಚರ್ಚೆ ನಡೆಯತಕ್ಕ ಸಂದರ್ಭದಲ್ಲಿ ನಾನು ಮಧ್ಯ ಪ್ರವೇಶ ಮಾಡತಕ್ಕ ಪರಿಸ್ಥಿತಿ ಉದ್ಭವವಾಯಿತು. ಆದರೆ ಹೆಚ್ಚಿಗೆ ಸಮಯವನ್ನು ಬಳಸಿಕೊಳ್ಳಲು ನಾನು ಇಚ್ಛಿ ಪಡುವುದಿಲ್ಲ. ನಾನು ಅನಿಮಲ್ ಅಸ್‌ಬೆಂಡರಿ ಕಾನ್‌ಫರೆನ್ಸ್‌ನಲ್ಲಿದ್ದೆ. ಯಾರೋ ಒಬ್ಬರು ಫೋನ್ ಮಾಡಿದರು. ಏಳನೇ ಕ್ಯಾಸೆಟ್ ಬಂದಿದೆಯಂತೆ ಅದು ಮುಖ್ಯಮಂತ್ರಿಗಳಿಗೆ ತಲುಪಿದೆಯಂತೆ ಇದು ಬಂದಿದೆಯೇ ಎಂದು ನನ್ನನ್ನು ಕೇಳಿದರು. ನನಗೆ ಗೊತ್ತಿಲ್ಲಪ್ಪಾ ವಿಚಾರ, ಅದು ಬಂದಿಲ್ಲವೆಂದು ಕಾಣಿಸುತ್ತದೆ, ಆ ವಿಚಾರ ಇದ್ದಿದ್ದರೆ ಹೇಳುತ್ತಿದ್ದೆ ನನಗೇನೂ ಅದರ ಬಗ್ಗೆ ಗೊತ್ತಿಲ್ಲ ಎಂದೆ. ಅಷ್ಟನ್ನು ಮಾತ್ರ ಹೇಳಿದೆನೇ, ಹೊರತು ಬೇರೆ ಏನೂ ಇಲ್ಲ. ಬೇಕಾದರೆ ಈ ಟಿ.ವಿ. ಯವರನ್ನು ದಯವಿಟ್ಟು ಕೇಳಿ, ಅದು ಬಂದಿರುವ ವಿಚಾರ ಗೊತ್ತಿಲ್ಲ. ಆಗ ನನಗೆ ಸ್ವಲ್ಪ ಬೇಜಾರಾಯಿತು. ಆ ವಿಷಯ ಬಂದಿಲ್ಲವೆಂದು ಹೇಳಿದ ಮೇಲೆ ವಿಷಯವೇನಿದೆ ನೀವೇನು ಕೇಳುತ್ತೀರಿ? ಮುಖ್ಯಮಂತ್ರಿಗಳಿಗೆ ತಲುಪಿಸಿದ್ದಾರೋ ಏನೋ? ಫೋನ್‌ನಲ್ಲಿ ನಾನು ಹೇಗೆ ಆ್ಯಕ್ಟ್ ಮಾಡಲಿಕ್ಕಾಗುತ್ತದೆ? ಆದ್ದರಿಂದ ಆ ವಿಚಾರ ನನಗೆ ಗೊತ್ತಿಲ್ಲ, ಇಷ್ಟನ್ನು ಮಾತ್ರ ಹೇಳಿದ್ದೆ, ತಾವು ದಯವಿಟ್ಟು ಈ ಟಿ.ವಿ. ನೋ ಉದಯನೋ ಪರೀಕ್ಷೆ ಮಾಡಬಹುದು. ಅದರಲ್ಲಿ ಅವರು ಏನೇನೋ ಅಂದ್ದನ್ನು ಹೇಳಿಕೊಂಡು ಕುಳಿತುಕೊಂಡರೆ ಹೇಗೆ? ಮಹದೇವ್‌ರವರು ಹೇಳಿದ್ದಾರೆ, ಮಹದೇವ್‌ರವರಿಗೆ ಬಂದಿದೆ, ಎಂದರೆ ಹೇಗೆ? ಬಂದಿದ್ದರೆ ಹೇಳುವಂಥದ್ದು ಇದ್ದರೆ ಹೇಳುತ್ತಿದ್ದೆ. ಆಕಸ್ಮಿಕ ಒಂದು ಪಕ್ಷ ಏಳನೇ ಕ್ಯಾಸೆಟ್ಟು ಅದು ನನಗೆ ತಲುಪಿದ್ದರೆ ಮುಖ್ಯಮಂತ್ರಿಗಳಿಗೆ ತಲುಪಿಸಿದ್ದೇನೆ ಎಂದು ಹೇಳುತ್ತಿದ್ದೆ, ಮುಖ್ಯಮಂತ್ರಿಗಳು ನನಗೆ ತಲುಪಿದೆ, ವಿಷಯ ಹೀಗಿದೆಯೆಂದು ಹೇಳುತ್ತಿದ್ದರು, ಇದು ಕಾಲ್ಪನಿಕ, ಕಾಲ್ಪನಿಕ ವಿಚಾರಕ್ಕೆ ತಾವು ಇಷ್ಟೊಂದು ಮಹತ್ವವನ್ನು ತಾವು ಏಕೆ ಕೊಡುತ್ತೀರಾ? ಎರಡನೆಯದು, ಪತ್ರಿಕೆಯವರು ನಾನು ಹೇಳಿದ್ದೇನೆ, ಕ್ಯಾಸೆಟ್ಟು ಬಂದಿಲ್ಲ ಅಂತ, ಸನ್ಮಾನ್ಯ ನಾಯಕರಾದಂಥ ಮುಖ್ಯಮಂತ್ರಿಗಳು ಹೇಳಿದ್ದಾರೆ, ನಮ್ಮಿಬ್ಬರ ಮಾತನ್ನು ನಂಬದೆಯೇ, ಇಲ್ಲಾ ಬಂದಿದೆಯಂತೇ, ಬಂದಿದೆಯಂತೇ ಎಂದಾಗ, ಮುಖ್ಯಮಂತ್ರಿಗಳು, ಒಂದು ಸಾರಿ ಹೇಳಿದರೆ ಅವರಿಗೆ ಸ್ವಲ್ಪ ಅರ್ಥವಾಗುವುದಿಲ್ಲ, ಮೂರು ಸಾರಿಯಾದರೂ ಹೇಳಿ ಬಹುಶಃ ಅದು ಮನವರಿಕೆಯಾಗುತ್ತದೆ ಎನ್ನುವಂಥ ಮಾತನ್ನು ಹೇಳಿದರು, ಅದಕ್ಕೆ ಅಪಾರ್ಥ ಏಕೆ ಕಲ್ಪಿಸುತ್ತೀರಾ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಬೆಂಕಿ ಇಲ್ಲದೆಯೇ ಹೊಗೆಯಾಡಲು ಸಾಧ್ಯವಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಮಹದೇವ್‌ರವರಿಗೆ ಹೇಳುವುದಕ್ಕೆ ಬರಲಿಲ್ಲ. The matter was put into his mouth. ಹಾಗೆ ಹೇಳಿ ತಾವು ... ಅದು ಅಪಹಾಸ್ಯ.

ಶ್ರೀ ಎಂ. ಮಹದೇವ್ : ನಮ್ಮ ನಾಯಕರಾದ ಮುಖ್ಯಮಂತ್ರಿಗಳು ಹೇಳತಕ್ಕಂಥದ್ದು, ಬಂದಿಲ್ಲಾ ಅಂತ, ಒಂದು ಸಾರಿ ಹೇಳಿದರೆ ಅದನ್ನು ಬಿಡುತ್ತಾರೆಯೇ? ಅವರು ಪದೇ ಪದೇ ಪ್ರಶ್ನೆ ಹಾಕಿದಾಗ ಆ ರೀತಿ ಹೇಳಲಾಗಿದೆ. ಅದನ್ನು ಏಕೆ ಅಪಾರ್ಥದ ರೀತಿಯಲ್ಲಿ ಹೇಳುತ್ತೀರಾ?

ಶ್ರೀ ಎ.ಆರ್. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ದಯಮಾಡಿ ಈ ವಿಚಾರದಲ್ಲಿ, ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕದ್ದು ಸೆಕಂಡ್ ಆ್ಯಕ್ಟ್ ನನ್ನ ಪ್ರಕಾರ. ಆದರೆ, ಪಶುಸಂಗೋಪನಾ ಸಚಿವರಾದಂಥ ಮಾನ್ಯ ಎಂ. ಮಹದೇವ್‌ರವರು, ಈ ಟಿ.ವಿ. ನ್ಯೂಸ್ ಚಾನಲ್‌ನ್ನು ನಾನು

ನೋಡುತಿದ್ದೆ, ಆ ಸಂದರ್ಶನದಲ್ಲಿ ಅವರು ಒಂದು ಮೊಬೈಲ್‌ನಲ್ಲಿ ಮಾತನಾಡುತ್ತಿದ್ದಾರೆ, ಈ ಟಿ.ವಿ. ರಿಪೋರ್ಟರ್‌ರವರು ಪ್ರಶ್ನೆಯನ್ನು ಹಾಕಿದಾಗ ನನಗೆ ಈಗ ತಾನೇ ದೂರವಾಣಿ ಬಂತು ಮೊಬೈಲ್‌ಗೆ, ಆ ಕ್ಯಾಸೆಟ್ ಬಂದಿದೆಯಂತೆ, ಈಗ ಮುಖ್ಯಮಂತ್ರಿಯವರಿಗೆ ತಲುಪಿರಬಹುದು ಎನ್ನುವ ಮಾತನ್ನು ಸ್ಪಷ್ಟವಾಗಿ ಈ ಟಿ.ವಿ. ನ್ಯೂಸ್‌ನಲ್ಲಿ ಅವರು ಉತ್ತರ ಕೊಟ್ಟಿದ್ದಾರೆ. ಬೇಕಾದರೆ ಈ ಟಿ.ವಿ.ಯ ಆ ಕ್ಲಿಪಿಂಗ್ ತರಿಸಿ ಆ ವಿಜ್ಯುಯಲ್ಸ್ ನೋಡಿದರೆ ಸತ್ಯಾಸತ್ಯತೆ ಗೊತ್ತಾಗುತ್ತದೆ.

ಶ್ರೀ ಎಂ. ಮಹದೇವ್ : ತಾವು ಬೇಕಾದರೆ ಪರಿಶೀಲನೆ ಮಾಡಿ. ಮೊಬೈಲ್ ಬಂದಿದೆ ನನಗೆ ಗೊತ್ತಿಲ್ಲ ಎಂದು ಹೇಳಿದ್ದೇನೆ. ಕ್ಯಾಸೆಟ್ ಬಗ್ಗೆ ಏನೂ ಹೇಳಿಲ್ಲ. ನಾನು ಅದನ್ನು ಡಿನೈ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಹದೇವ್‌ರವರ ಹತ್ತಿರ ನಾನು ಎಕ್ಸ್‌ಪ್ಲನೇಷನ್ ಕೇಳುವಂಥ ಶಕ್ತಿ ನನಗಿಲ್ಲ, ಹಕ್ಕೂ ಇಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಇದೆ, ಅವರು ಕೇಳಿದ್ದಾರೆ. ಅದಕ್ಕೆ ನಾನು ಏಕೆ ಬಹಳ ಮಹತ್ವ ಕೊಡುವುದಕ್ಕೆ ಹೋಗುವುದಿಲ್ಲ ಎಂದರೆ, ಯಾರಾದರೂ ಸತ್ತ ಮೇಲೆ ಸರ್ಕಾರದಿಂದ ನಾವು ಪೊಲೀಸ್ ಗೌರವವನ್ನು ಕೊಡತಕ್ಕ ಸಂದರ್ಭದಲ್ಲಿ ಮೂರು ಸಾರಿ ತುಪಾಕಿಯ ಗುಂಡನ್ನು ಹಾರಿಸುತ್ತೇವೆ. ಹಾಗೆ ತಮ್ಮ ಕೈಯಲ್ಲಿ ಅವರು ಸತ್ತಮೇಲೆ ಮೂರು ಸಾರಿ ತುಪಾಕಿ ಗುಂಡನ್ನು ಅಲ್ಲಿ ಹಾರಿಸಲು ಆಗಲಿಲ್ಲ, ಇಲ್ಲಿ ಹಾರಿಸಿರಬೇಕು, ಮುಖ್ಯಮಂತ್ರಿಗಳು ನನಗೆ ಗೊತ್ತಿಲ್ಲ. ಆ ತರದ ಗುಂಡು ಎಂದು ನಾನು ಅಂದುಕೊಂಡಿದ್ದೇನೆ. ಈ ನಡವಳಿಕೆಗಳ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರದ ಸಹಾಯಕ್ಕೆ ಬರಲಿಲ್ಲ, this is a inter-state matter. They should have intervened. I acuse the Union Government being equally responsible for the killing of Nagappa ಬಟ್ ನಾಗಪ್ಪನವರು ಮರ್ಡರ್ ಆಗಬೇಕಾದರೆ, ಅವರ ಹತ್ಯೆಯಾಗಬೇಕಾದರೆ ನಿಮ್ಮಷ್ಟೇ ಜವಾಬ್ದಾರಿ ಕೇಂದ್ರ ಸರ್ಕಾರಕ್ಕೂ ಸಹಿತ ಇದೆ, ಇದನ್ನು ಹೇಳಲು ಬಯಸುತ್ತೇನೆ. ಅದರ ಜೊತೆಗೆ, ನಮ್ಮ ಲೋಕಸಭಾ ಸದಸ್ಯರುಗಳು ಅವರ ಆತ್ಮಶೋಧನೆಯನ್ನು ಮಾಡಿಕೊಳ್ಳತಕ್ಕದ್ದು ಈ ಸಂದರ್ಭದಲ್ಲಿ ಸೂಕ್ತವಾದುದು, ಯಾರು ನಾಗಪ್ಪನವರಿಂದ ಸಹಾಯವನ್ನು ಪಡೆದಿದ್ದಾರೆ, ಕೊನೆಯ ಪಕ್ಷ ಅವರ ಕುಟುಂಬದವರ ಮುಖವನ್ನಾದರೂ ನೋಡಿ ಸಹಾಯ ಮಾಡಬೇಕಾಗಿತ್ತು, ಎಂಬುದು ನನ್ನ ಅಭಿಪ್ರಾಯ. ವೀರಶೈವ ಮಠಾಧಿಪತಿಗಳು, ಇತರೆ ಜಾತಿಯ ಮಠಾಧಿಪತಿಗಳು ರಾಜ್ಯಕ್ಕೆ ಸಂಬಂಧಪಟ್ಟಂಥ ವಿಚಾರದಲ್ಲಿ ಅವರಿಗೆ ಎಲ್ಲಾ ಹಕ್ಕೂ ಇದೆ ಜನಸಮುದಾಯ ಅವರು ಹಿಂದುಗಡೆ ಇದೆ, ಅವರು ಸಂಧಾನಕ್ಕೆ ಕಳುಹಿಸಿ ಎನ್ನುವುದರಲ್ಲಿ ಏನು ತಪ್ಪು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಎಲ್ಲಾ ಜಾತಿ, ಎಲ್ಲಾ ಧರ್ಮಗಳ, ಮುಸಲ್ಮಾನರು, ಕ್ರಿಶ್ಚಿಯನ್ನರು, ಹಿಂದೂಗಳು, ಹಿಂದುಳಿದ ವರ್ಗದವರು ಪ್ರತಿಯೊಬ್ಬರೂ ಸಹಿತ ಬಂದಿದ್ದಾರೆ, ನಾಗಪ್ಪನವರನ್ನು ಬದುಕಿಸಬೇಕೆಂದು ಹೇಳಿದ್ದಾರೆ, ಆದ್ದರಿಂದ ತಪ್ಪೇನು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ನೀವು ನೀರಿನ ರಾಜಕಾರಣ ಮಾಡಿದಾಗ ಅದು ಸ್ವಾಮಿಗಳ ಆಶೀರ್ವಾದ ಇಲ್ಲಿ ಬಂದು ಮಾತನಾಡಿದಾಗ ಮಾತ್ರ ಅದು ಶಾಪವಾಗಿ ಬಿಡುತ್ತದಾ? ಇದು ನನಗೆ ಅರ್ಥವಾಗದಿರುವುದು ನಿಮ್ಮ ದ್ವಂದನೀತಿ. ಈ ಕೇಸಸ್‌ನ್ನು ವಿತ್‌ಡ್ರಾ ಮಾಡುವ ವಿಚಾರ. ಆ ಬಗ್ಗೆ ನಾನು ಹೇಳುತ್ತೇನೆ,

ನಾಗಪ್ಪನವರ ಅಪಹರಣ ಆಗಬೇಕಾದರೆ ನೀವು ಕೊಳತ್ತೂರು ಮಣಿಯ ಮೇಲೆ ಹಾಕಿರುವ ಕೇಸುಗಳೇ ಕಾರಣ. ಅದಕ್ಕೋಸ್ಕರವೇ ಯಾವತ್ತು ನಾಗಪ್ಪರವನ್ನು ಅಪಹರಣ ಮಾಡಿಕೊಂಡು ವೀರಪ್ಪನ್ ಹೋಗುತ್ತಾರೆ ಅವತ್ತೇ ಆ ಕ್ಯಾಸೆಟ್‌ನಲ್ಲಿ ಹೇಳುತ್ತಾನೆ, ಕಾರಣವೇನು ಎಂದು. ಎರಡನೇ ಕ್ಯಾಸೆಟ್‌ನಲ್ಲಿ ಹೇಳಿದ್ದಾನೆ. ಯಾವಾಗ ಮಣಿಯನ್ನು ಬಿಡುಗಡೆ ಮಾಡಿಸಲು ಆಗುವುದಿಲ್ಲ ಎಂದು ಹೇಳಿದಾಗ ಆಗ ರಾಜೂ ಗೌಡರ ಪ್ರಶ್ನೆ ಬರುತ್ತದೆ. ನಾನು ರಾಜೂಗೌಡರನ್ನು ಇಲ್ಲಿ ಒಬ್ಬ ಮಂತ್ರಿಯಾಗಿ ಸಂಭೋದಿಸುತ್ತಿಲ್ಲ. ಶ್ರೀಮಾನ್ ರಾಜೂಗೌಡರ ಉದಾಹರಣೆಯನ್ನು ನಾನು ಏಕೆ ತೆಗೆದುಕೊಂಡಿದ್ದೇನೆಂದರೆ ಆ ಕ್ಯಾಸೆಟ್‌ನಲ್ಲಿ ರಾಜೂಗೌಡರನ್ನು ಎಮಿಸರಿಯಾಗಿ ಕರೆಸಿ ಎನ್ನತಕ್ಕ ಮಾತನ್ನು ಹೇಳಿರುವುದರಿಂದ ನೀವು ಕೊಳತ್ತೂರು ಮಣಿ ಮೇಲೆ ಕೊನೆಯ ಹತ್ತು, ಹದಿನೈದು ದಿನಗಳಲ್ಲಿ ಯಾವಾಗ ಪ್ರಧಾನಿಗಳು ನಿಮಗೆ ಸೂಚನೆ ಕೊಡುತ್ತಾರೆ, ಯಾವಾಗ ಉಪ ಪ್ರಧಾನಿಗಳು ಸೂಚನೆ ಕೊಡುತ್ತಾರೆ ಯಾವಾಗ ರಾಷ್ಟ್ರಾಧ್ಯಕ್ಷರಿಗೆ ಪರಿಮಳಾ ನಾಗಪ್ಪನವರ ಪತ್ರ ಹೋಗುತ್ತದೆ, ಅದಾದ ನಂತರ ನೀವು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ, ನಿಮ್ಮ ಗೃಹ ಮಂತ್ರಿಗಳನ್ನು ಮತ್ತು ಒಬ್ಬ ಮಿನಿಸ್ಟರ್ ಆಫ್ ಸ್ಟೇಟ್ಸ್‌ರವರನ್ನು ಜಯಲಲಿತಾರವರನ್ನು ನೋಡಲು ಕಳುಹಿಸಿಕೊಡುತ್ತೀರಿ. ಇಷ್ಟೊಂದು ದೊಡ್ಡ ಮಹತ್ವವನ್ನು ಕೊಟ್ಟಿರತಕ್ಕಂಥ ನೀವು ಕರುಣಾನಿಧಿಯವರು ಮುಖ್ಯ ಮಂತ್ರಿಗಳಾಗಿದ್ದಾಗ, ರಾಜಕುಮಾರ್‌ರವರ ಅಪಹರಣವಾದಂಥ ಸಂದರ್ಭದಲ್ಲಿ ನೀವು ಎಷ್ಟು ಸಲ ತಮಿಳುನಾಡಿನ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದೀರಾ? ಎಷ್ಟು ಸಾರಿ ಮದ್ರಾಸ್‌ಗೆ ಹೋಗಿಬಂದಿದ್ದೀರಾ? ಇದಕ್ಕೆ ಎಷ್ಟು ಮಹತ್ವ ಕೊಟ್ಟಿದ್ದೀರಾ ಎನ್ನುವುದನ್ನು ತಾವೇ ಆತ್ಮವಿಮರ್ಶೆ ಮಾಡಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇದಾದಮೇಲೆ, ಮತ್ತೊಂದು ಬಹಳ ಮಹತ್ವದ ವಿಚಾರ, 1984-85, ನಾನು ಕನಕಪುರ ಕ್ಷೇತ್ರದಿಂದ ಲೋಕಸಭಾ ಅಭ್ಯರ್ಥಿಯಾಗಿದ್ದೆ. ನನ್ನ ದುರಾದೃಷ್ಟಕ್ಕೆ ನಾನು ಲೋಕಸಭೆಗೆ ನಿಂತಾಗಲೆಲ್ಲಾ ಯಾರಾದರೂ ಒಬ್ಬರು ದೊಡ್ಡ ಮನುಷ್ಯರು ತೀರಿ ಬಿಡುತ್ತಾರೆ. 1984ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಕೊಲೆಯಾಗಿ ಹೋಯಿತು, ಆ ಅನುಕಂಪದ ಅಲೆಯಲ್ಲಿ ನಾನು ಕೊಚ್ಚಿಹೊರಟುಹೋದೆ. ಅಯ್ಯೋ ಪಾಪ ಎಂದು ಕಾಂಗ್ರೆಸ್‌ಗೆ ಓಟು ಕೊಟ್ಟುಬಿಟ್ಟರು, ನಾನು ಕೇವಲ ಆರು ಸಾವಿರ ಓಟುಗಳಿಂದ ಸೋತೆ. ಎರಡನೆಯ ಸಾರಿ ನಾನು ನಿಂತುಕೊಂಡಿದ್ದೆ, ರಾಜೀವ್‌ಗಾಂಧಿಯವರು ಕೊಲೆಯಾಯಿತು. ಅದಕ್ಕೋಸ್ಕರವೇ ಈಗ ಲೋಕಸಭೆಗೆ ನಿಲ್ಲುವುದನ್ನೇ ನಿಲ್ಲಿಸಿಬಿಟ್ಟಿದ್ದೇನೆ, ನಾನು ಲೋಕಸಭೆಗೆ ನಿಲ್ಲುತ್ತಿಲ್ಲ. 1984ನೇ ಇಸವಿಯಲ್ಲಿ ನಾನು ಗೋಪಿನಾಥಂಗೆ ಹೋಗಿದ್ದೆ. ಅದು ಮಳವಳ್ಳಿಗೆ ಹತ್ತಿರ ಇರುವುದರಿಂದ ಅಲ್ಲಿಗೆ ಹೋಗಿದ್ದೆ. ಮಳವಳ್ಳಿ ನನ್ನ ಕ್ಷೇತ್ರ ಅಲ್ಲ ಅವತ್ತು ಸೋಮಶೇಖರ್‌ರವರು ನಾನು ನಿದ್ದೆ ಮಾಡಬೇಕೆಂದು ಬಂದಿರಲಿಲ್ಲ, ತಪ್ಪಿಸಿಕೊಂಡುಬಿಟ್ಟರು. ಅವತ್ತು ರಾತ್ರಿ 12-30, 1-00 ಗಂಟೆಗೆ ಹಾಗೇ ಆ ಕಡೆಗೆ ನಾನು ಹೋಗಿದ್ದೆ. ಗೋಪಿನಾಥಂಗೆ ಹೋದಾಗ ನಾನು ಒಂದು ಗೋಡೆ ಬರಹವನ್ನು ನೋಡಿದೆ, ಏನು ಆ ಗೋಡೆ ಬರಹ ಎಂದರೆ, "ಯಾರು ಹಸ್ತಕ್ಕೆ ಮತ ಹಾಕುವುದಿಲ್ಲವೋ ಅವರ ಕೈಯನ್ನು ಕತ್ತರಿಸಲಾಗುವುದು, ವೀರಪ್ಪನ್" ಈ ಚುನಾವಣೆಯಲ್ಲಿ ಆಗ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾರು ಆಗಿದ್ದರು ಎಂಬುದನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಆ ಅಭ್ಯರ್ಥಿನೇ ಏನಾದರೂ ವೀರಪ್ಪನ್‌ನನ್ನು ಉಪಯೋಗಿಸಿಕೊಳ್ಳುವುದಕ್ಕೆ

ಬರೆದುಕೊಂಡಿದ್ದರೋ, ಅಥವಾ ಕಾಂಗ್ರೆಸ್ ಅಭ್ಯರ್ಥಿಗೆ ಕೆಟ್ಟ ಹೆಸರನ್ನು ತರಬೇಕೆಂದು ಬೇರೆಯವರು ಯಾರಾದರೂ ಬರೆಸಿದ್ದರೋ, ಅಥವಾ ವೀರಪ್ಪನ್‌ನ್ನೇ ಬರೆಸಿದ್ದನೋ ಎನ್ನುವುದು ಇವತ್ತಿನವರೆಗೆ ಅದನ್ನು ಯಾರೂ ಡಿನೈ ಮಾಡಲು ಹೋಗಿಲ್ಲ.

ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ ಹೆಚ್. ತಹಸೀಲ್ದಾರ್)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

ಪರ್ಯಾಯ ಸಂಧಾನಕಾರರನ್ನು ನೀವು ಮಾಡುವಾಗ ಪೊನ್ನಾಚ್ಚಿ ಮಹದೇವಸ್ವಾಮಿಯವರನ್ನು ಹೋಗಿ ಎಂದು ಹೇಳಿದಿರಿ. ಮತ್ತೆ ಯಾರು ಯಾರೋ ಬಂದರು, ತಾವು ಕಳುಹಿಸುವುದಕ್ಕೆ ತಯಾರು ಇದ್ದಿರಿ, ಅದೂ ನನಗೆ ಗೊತ್ತಿದೆ. ನಾನು ಪ್ರಾರಂಭದಲ್ಲೇ ಹೇಳಿದೆ, ನನಗೆ ಮತ್ತು ನಮ್ಮ ಪಕ್ಷಕ್ಕೆ ಎರಡು ನಾಲಿಗೆ ಇಲ್ಲ ಎಂದು, ಎಸ್.ಟಿ.ಎಫ್. ಕಾರ್ಯಾಚರಣೆಯನ್ನು ನಿಲ್ಲಿಸಿ ಎಂದು ಹೇಳಿದವರು ನಾವೇ ತಮಗೆ ಮನವಿ ಮಾಡಿಕೊಂಡಿದ್ದೇವೆ, ಬರವಣಿಗೆಯಲ್ಲಿ ಮನವಿ ಕೊಟ್ಟಿದ್ದೇವೆ. ಇವರು ಸರ್ವಪಕ್ಷಗಳ ಸಭೆಯಲ್ಲಿ ಬಂದು ಹೇಳಿದರು. ಆದರೆ, ಇವತ್ತು ಆಚೆ ಹೋಗಿ ಬಿಟ್ಟಿದ್ದಾರೆ. ಏಕೆ ಎಂದು ನನಗೆ ಗೊತ್ತಿಲ್ಲ, ಅವರು ಇದ್ದು ಭಾಗವಹಿಸಬೇಕು. ಈ ವಿಚಾರಗಳನ್ನು ಹೇಳಬೇಕು. ಕೊಳತ್ತೂರು ಮಣಿ ಮೇಲೆ ಇರತಕ್ಕ ಕೇಸುಗಳನ್ನು ವಾಪಸ್ ತೆಗೆದರೆ, ನಾವು ಕೋರ್ಟಿಗೆ ಹೋಗುತ್ತೇವೆಂದು ಹೇಳಿದರು. ಈಗ ಇವರು, ನಾಗಪ್ಪನವರ ರಕ್ಷಣೆ ಮಾಡಲಿಕ್ಕೆ ಮಲ್ಲೇಶ್ವರಂನಲ್ಲಿ ಸಭೆ ಮಾಡುತ್ತಿದ್ದಾರೆ. ನಾಗಪ್ಪನವರ ಹೆಸರಿನಲ್ಲಿ ಓಟು ತೆಗೆದುಕೊಳ್ಳುವುದಕ್ಕೆ ನಾಗಪ್ಪನವರ ಹೆಸರಿನಲ್ಲಿ, ಅವರ ಶವದ ಮೇಲೆ ರಾಜಕೀಯ ಮಾಡಲಿಕ್ಕೆ ಹೊರಟಿದ್ದಾರೆ. ಕೇಂದ್ರ ಸರ್ಕಾರದವರು ಮಾಡಿದ್ದು ಏನು? ಇವರು ಏಕೆ ಈ ಮೂರು ಜನ ಮುಖ್ಯಮಂತ್ರಿಗಳನ್ನು ಕರೆಸುವುದಕ್ಕೆ ಆಗುತ್ತಿರಲಿಲ್ಲವೇ? ಇದಾದಮೇಲೆ, ವೀರಪ್ಪನ್‌ನ ಮೂರನೇ ಕ್ಯಾಸೆಟ್ ಬಂದಮೇಲೆ, ರಾಜುಗೌಡರನ್ನು ಕಳುಹಿಸಿ ಎಂದು ಹೇಳಿದಾಗ, ರಾಜುಗೌಡರು ಅದರ ಎರಡನೇ ದಿನವೇ ಹೇಳಿದರು. ಯಾರೋ ಒಂದು ಫೇಕ್ ಕ್ಯಾಸೆಟ್‌ನ್ನು ಮಾಡಿ, ನನಗೆ ರಾಜಕೀಯ ವಿರೋಧಿಗಳು ಇದನ್ನೂ ಕಳುಹಿಸಿರಬಹುದು ಎಂಬ ಹೇಳಿಕೆಯನ್ನು ರಾಜುಗೌಡರು ಮಾಡಿದರು. ಗೌರವಾನ್ವಿತ ಆಹಾರ ಸಂಸ್ಕರಣ ಸಚಿವರು ಇದನ್ನು ಹೇಳಿದರು. ಅದಾದಮೇಲೆ, ಇವರು ಹೇಳಿದರು. ಇಲ್ಲ, ನಾನು ಹೋಗಲಿಕ್ಕೆ ತಯಾರಿದ್ದೇನೆ ಎಂಬ ಮಾತನ್ನೂ ಸಹಿತ ಹೇಳಿದರು. ಆದಾದಮೇಲೆ ಮುಖ್ಯಮಂತ್ರಿಗಳು ಇವರಿಗೆ ಬಾಯಿಮುಚ್ಚಿಕೊಂಡು ಕುಳಿತುಕೋ ಎಂದು ಹೇಳಿದರು. ಮಹದೇವ್ ಒಬ್ಬರಿಗೇ ಅಲ್ಲ ಮೂರು ಸಾರಿ ಹೇಳಿ ಎಂದು ಹೇಳಿದ್ದು. ರಾಜುಗೌಡರಿಗೂ ಬಾಯಿಮುಚ್ಚಿಕೊಂಡು ಕುಳಿತುಕೊಳ್ಳಿ ಎಂದು ಹೇಳಿದರು. ಆಗ ರಾಜುಗೌಡರು ಸ್ವಲ್ಪ ಬಾಯಿಗೆ ಬೀಗ ಹಾಕಿಕೊಂಡರು. ಇಲ್ಲದೇ ಹೋಗಿದ್ದರೆ, ಇನ್ನೇನೋ ಮಾತನಾಡಿ ಇನ್ನೇನು ಅನಾಹುತ ಮಾಡಿಬಿಡುತ್ತಿದ್ದರೋ, ಗೊತ್ತಿಲ್ಲ. ಮಾನ್ಯ ಉಪಾಧ್ಯಕ್ಷರೇ, ರಾಜುಗೌಡರು ವಿವರಣೆ ಮಾಡುವುದು ಇದೆ. He has to explain to this House. I am having the patience to hear him. ನಾನು ಕೇಳುತ್ತೇನೆ. ದಯಮಾಡಿ, ನನಗಿರತಕ್ಕ ಸಂಶಯಗಳನ್ನು ನಿವಾರಣೆ ಮಾಡಬೇಕಾದರೆ ಅವರು ಒಂದು ಪುಸ್ತಕವನ್ನು ತೆಗೆದುಕೊಂಡು, ಅದರಲ್ಲಿ ಬರೆದುಕೊಂಡು, ಏನು ಎಕ್ಸ್‌ಪ್ಲನೇಷನ್ ಕೊಡಬೇಕೋ ಅದನ್ನು ಕೊಡಲಿ ತಾವು ಅವರಿಗೆ ಪರವಾನಗಿ ಕೊಡಿ, ಅವರು ಮಾತನಾಡಲಿ.

ಶ್ರೀ ಜಿ. ರಾಜುಗೌಡ : ಮಾನ್ಯ ಉಪಾಧ್ಯಕ್ಷರೇ, ನಾಗಪ್ಪನವರ ಮೇಲಿರತಕ್ಕ ಮಮತೆ ಮೇಲೆ, ವ್ಯಾಮೋಹದ ಮೇಲೆ, ಪ್ರೀತಿ ಮೇಲೆ ಹೇಳಿರುವುದು ನಿಜ, ಸತ್ಯ. ನಾನು ಹೇಳಿಕೆ ಕೊಟ್ಟಮೇಲೆ ಮಾನ್ಯ ಸ್ವಾಮೀಜಿಯವರು, ಸುತ್ತೂರು ಬುದ್ಧಿಯವರು ನನ್ನನ್ನು ನಾಗಪ್ಪನವರಿಗಿಂತ ನಿಮಗೆ ಜಾಸ್ತಿ ವಯಸ್ಸಾಗಿದೆ, ನಿಮಗೆ 70 ವರ್ಷವಾಗಿದೆ. ಅವರಿಗೆ 66 ವರ್ಷ ನೀನು ಕಾಡಿಗೆ ಹೋಗುವುದಕ್ಕಾಗುತ್ತದಾ? ಆಗುವುದಿಲ್ಲ. ದಯಮಾಡಿ ಹೇಳುತ್ತೇನೆ ಕೇಳು, ನೀವು ಬಾನುಲಿ ಮುಖಾಂತರ ವೀರಪ್ಪನ್‌ಗೆ ಸಂದೇಶ ಕಳುಹಿಸು. ನಾಗಪ್ಪನವರಿಗೆ ಹುಷಾರು ಇಲ್ಲ, ಅವರು ತುಂಬಾ ಒಳ್ಳೆಯವರು, ದಯಮಾಡಿ ಬಿಡಿರಿ, ಸರ್ಕಾರದಿಂದ ನಿಮಗೆ ಏನು ಕಾರ್ಯಕ್ರಮ ಹಾಕಿಕೊಳ್ಳಬೇಕೋ ಅದನ್ನು ಹಾಕಿಕೊಳ್ಳುತ್ತೇವೆಂದು ಆಶ್ವಾಸನೆ ಕೊಡುತ್ತೇವೆ ಎಂದು ಹೇಳಿದರು. ದಯವಿಟ್ಟು ನನ್ನನ್ನು ಕ್ಷಮಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ರಾಜುಗೌಡರು ತಪ್ಪಿತಸ್ಥರು ಎಂಬ ಭಾವನೆಯಿಂದ ಮಾತನಾಡತಕ್ಕ ಅವಶ್ಯಕತೆ ಇಲ್ಲ. ಆದರೆ, ತಾವು ಸುತ್ತೂರು ಜಗದ್ಗುರುಗಳ ಹೆಸರನ್ನು ಹೇಳಿ ಅದರ ರಕ್ಷಣೆಯನ್ನು ಪಡೆದು, ಅವರ ಹೇಳಿಕೆ ಪ್ರಕಾರವಾಗಿ ನಾನು ಕ್ಯಾಸೆಟನ್ನು ಕಳುಹಿಸಿದೆ ಎಂದು ತಾವು ಸುಳ್ಳು ಹೇಳುವುದಕ್ಕೆ ಹೋಗಬೇಡಿ. ಸದನವನ್ನು ತಪ್ಪುದಾರಿಗೆ ಎಳೆಯುವುದಕ್ಕೆ ಹೋಗಬೇಡಿ.

ಶ್ರೀ ಜಿ. ರಾಜುಗೌಡ : ಸತ್ಯ ಬರುವುದಕ್ಕೆ ಇದು. ಇದು ಸತ್ಯ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೇ, ಅದು ಸತ್ಯ ಅಲ್ಲ. That is not the truth. We know what is the truth.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಸಚಿವರು ಏನು ಇಲ್ಲಿ ಸುತ್ತೂರು ಸ್ವಾಮಿಜಿಯವರ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ, ಅವರು ಹೇಳುತ್ತಾ ಇರತಕ್ಕಂತಾದ್ದು ಪತ್ರಿಕೆಗಳಲ್ಲಿ ಬಂದಿದೆ, 4ನೇ ಕ್ಯಾಸೆಟ್‌ನಲ್ಲಿ, ಮಣಿಯನ್ನು ಕಳುಹಿಸಲು ನಿಮಗೆ ಸಾಧ್ಯವಾಗದಿದ್ದರೆ ರಾಜುಗೌಡರನ್ನು ಕಳುಹಿಸಿ ಎಂದು ಅವನು ಹೇಳಿದ್ದಾನೆ. ಆ ಕ್ಯಾಸೆಟ್ ಬರುವ ನಾಲ್ಕು ದಿನಗಳ ಹಿಂದೆಯೇ ಮಾನ್ಯ ಸಚಿವರು, ಗೃಹ ಸಚಿವರಿಗೆ ಪತ್ರ ಬರೆದು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದಾದಮೇಲೆ ಕ್ಯಾಬಿನೆಟ್ ಸಚಿವರಾಗಲೀ, ಶಾಸಕರಾಗಲೀ, ಯಾರೂ ಹೋಗುವುದಕ್ಕೆ ಸಾಧ್ಯವಿಲ್ಲ, ಅವರು ಮಾಡಲಿಕ್ಕೆ ಬೇರೆ ಬೇರೆ ಕೆಲಸಗಳಿವೆ ಎಂದು ಮಾನ್ಯ ವಾರ್ತಾ ಸಚಿವರು ಕ್ಯಾಬಿನೆಟ್ ತೀರ್ಮಾನವನ್ನು ಬ್ರೀಫ್ ಮಾಡಿದ್ದಾರೆ. ಆದಾದ ನಾಲ್ಕು ದಿನದ ಮೇಲೆ ಮುಖ್ಯಮಂತ್ರಿಗಳ ಜೊತೆಯಲ್ಲಿ ರಾಜುಗೌಡರು, ನಾವು ಸುತ್ತೂರು ಸ್ವಾಮಿಗಳ ಹತ್ತಿರ ಮಾತನಾಡುವಷ್ಟರಲ್ಲಿ ಅಷ್ಟರೊಳಗಾಗಲೇ ಸರ್ಕಾರ ಯಾರನ್ನೂ ಕಳುಹಿಸುವುದಿಲ್ಲವೆಂದು ತೀರ್ಮಾನ ಮಾಡಿ ಘೋಷಣೆ ಮಾಡಿಯಾಗಿತ್ತು. ಅಲ್ಲಿ ಮಾತನಾಡುವಾಗ ಅವರ ಪ್ರಯತ್ನವನ್ನೂ ನೀವು ಮಾಡಬೇಕೆಂದು ಕೋರಿಕೊಂಡಿರೇ ಹೊರತು, ನೀವು ಕಾಡಿಗೆ ಹೋಗಬೇಡಿ ಎಂದಲ್ಲ. ಅಲ್ಲಿ ನಡೆದಂಥ ವಿಚಾರವನ್ನು ಪ್ರಸ್ತಾಪ ಮಾಡಲೇ ಬೇಕೆಂದಾದರೆ, ಅವರು ಖಾಸಗಿಯಾಗಿ ಯಾದಾರೂ ಹೋಗಿ, ಕಾಡು ಪ್ರದೇಶದಲ್ಲಿ ನೀವು ಪೂರ್ತಿಯಾಗಿ ನಡೆಯುವುದಕ್ಕೆ ಸಾಧ್ಯವಾಗದಿದ್ದರೆ, ನೀವು ವೀರಪ್ಪನ್‌ಗೆ ಯಾವುದಾದರೊಂದು ಜಾಗ ಹೇಳಿ, ಇಂತಹ ಒಂದು ಗೆಸ್ಟ್ ಹೌಸ್‌ಗೆ ಬರುವುದಕ್ಕೆ ಹೇಳಿ, ಅಲ್ಲಿ ನೀವು ಭೇಟಿ ಮಾಡಿ ನಾಗಪ್ಪನವರ ಬಿಡುಗಡೆಗೆ ಪ್ರಯತ್ನ ಮಾಡಿಸಿ

ಎಂದು ಹೇಳಿದರೇ ಹೊರತು, ನೀವು ಹೋಗುವುದಕ್ಕೆ ಸಾಧ್ಯವಿಲ್ಲ, ಹೋಗಲೇಬೇಡಿ ಎಂದು ಅವರು ಹೇಳಿರಲಿಲ್ಲ. ನೀವು ಒಂದು ಕ್ಯಾಸೆಟ್‌ನ್ನೂ ಕಳುಹಿಸಿ, ಜೊತೆಗೆ ಮಧ್ಯದಲ್ಲಿ ಎಲ್ಲಾದರೂ ಒಂದು ಕಡೆ ನೀವು ನಡೆಯುವುದಕ್ಕೆ ಸಾಧ್ಯವಾಗದಿದ್ದರೆ ಯಾವುದಾದರೊಂದು ಅಂಚಿನಲ್ಲಿ ಭೇಟಿ ಮಾಡಿ ಎನ್ನುವ ವಿಚಾರ ಮಾತನಾಡಿದ್ದರು. ಆದ್ದರಿಂದ, ಅನಾವಶ್ಯಕವಾಗಿ ಸ್ವಾಮೀಜಿಯವರು ಹೇಳಿದ ವಿಚಾರಗಳಲ್ಲಿ ಗೊಂದಲ ಮಾಡುವುದು ಸರಿಯಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಜಿ. ರಾಜುಗೌಡ : ಸ್ವಾಮಿಗಳ ಅಪ್ಪಣೆ ತೆಗೆದುಕೊಂಡೇ ಕ್ಯಾಸೆಟ್ ಕಳುಹಿಸಿದ್ದು...

ಶ್ರೀ ವಿ. ಸೋಮಣ್ಣ : ವಾಸ್ತವಾಂಶ ಏನಿದೆ, ಅದರ ಬಗ್ಗೆ ಇಲ್ಲಿ ಚರ್ಚೆಯಾಗಲಿ. ಮಠಾಧಿಪತಿಗಳನ್ನಾಗಲೀ ಮತ್ತೊಬ್ಬರನ್ನಾಗಲೀ ಕುರಿತು ಮಾತನಾಡಿ ಈ ಸಭೆಯಲ್ಲಿ ಅನಾವಶ್ಯಕವಾಗಿ ಗೊಂದಲ ಮಾಡುವುದು ಬೇಡ. ದಯಮಾಡಿ ರಾಜುಗೌಡರು ಹಿರಿಯ ಸದಸ್ಯರು, ವಾಸ್ತವಾಂಶ ಏನಿದೆ ಅದರ ಬಗ್ಗೆ ಮಾತನಾಡುತ್ತಾ ಇದ್ದಾರೆ. ಮತ್ತೆ ಮಠಾಧಿಪತಿಗಳ ಬಗ್ಗೆಯೇ ಆಗಲೀ ಅಥವಾ ಮತ್ತೊಬ್ಬರ ಬಗ್ಗೆಯೇ ಆಗಲೀ ಮಾತನಾಡುವ ಅವಶ್ಯಕತೆ ಇಲ್ಲಿ ಇಲ್ಲ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಉಪಾಧ್ಯಕ್ಷರೇ, ಸದನದಲ್ಲಿ ಇಲ್ಲದೇ ಇರತಕ್ಕವರ ಬಗ್ಗೆ ನಾವು ಉಲ್ಲೇಖ ಮಾಡತಕ್ಕಂಥಾದ್ದು ಮತ್ತು ಅವರನ್ನು ಆಗಿಂದಾಗ್ಗೆ ಈ ಚರ್ಚೆಯ ವಸ್ತುವನ್ನಾಗಿ ಮಾಡಿಕೊಳ್ಳತಕ್ಕಂಥಾದ್ದು, ಅದರಲ್ಲಿಯೂ ಮಠಾಧೀಶರುಗಳ ಬಗ್ಗೆ. ನಾವು ಬಹಳ ನಿಯಂತ್ರಿತವಾದ ರೀತಿಯಲ್ಲಿ ಇದರ ಬಗ್ಗೆ ಮಾತನಾಡಬೇಕಾಗುತ್ತದೆ. ಆದ್ದರಿಂದ, ನಾನು ಎಲ್ಲರಿಗೂ ಮನವಿ ಮಾಡತಕ್ಕಂಥಾದ್ದು, ಮಠಾಧೀಶರುಗಳನ್ನು ಆದಷ್ಟು, ಕೆಲವು ಬೆಳವಣಿಗೆಗಳ ಬಗ್ಗೆ ಪ್ರಸ್ತಾಪ ಬಂದಾಗ, ಅದು ಪ್ರಸ್ತಾಪವಾಗುತ್ತದೆ. ಅದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮಾಡುತ್ತಿದ್ದಾರೆ. ಆದ್ದರಿಂದ, ಬಾಕಿಯವರು ಈ ಮಠಾಧಿಪತಿಗಳ ವಿಚಾರದಲ್ಲಿ ಅನಾವಶ್ಯಕವಾಗಿ ಅವರನ್ನು ಈ ಚರ್ಚೆಯ ಗ್ರಾಸವನ್ನಾಗಿ ಮಾಡಲಿಕ್ಕೆ ತಾವು ಸ್ವಲ್ಪ ನಿಯಂತ್ರಣ ಹಾಕಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆ, ಇದಾದ ನಂತರ, ಶ್ರೀಮಾನ್ ರಾಜುಗೌಡರು 1985 ರಲ್ಲಿ ಅಲ್ಲಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರು. ಆಗ ವೀರಪ್ಪನ್ ಗೋಪಿನಾಥಂನಲ್ಲಿ "ಯಾರು ಹಸ್ತಕ್ಕೆ ಮತ ಕೊಡುವುದಿಲ್ಲವೋ, ಅವರ ಕೈಯನ್ನು ಕತ್ತರಿಸಲಾಗುವುದು" ಎಂದು ಹಾಕಿಕೊಂಡಿರುತ್ತಾನೆ. ಆಗ ತಾವೇ ಕಾಂಗ್ರೆಸ್ ಅಭ್ಯರ್ಥಿಗಳಾಗಿರುತ್ತೀರಿ. ತಾವು ಬರೆಸಿದಿರಿ ಎಂದು ನಾನು ಆಪಾದನೆ ಮಾಡುತ್ತಾ ಇಲ್ಲ. ಬಹುಶಃ ವೀರಪ್ಪನ್ ಬೆಂಬಲಿಗರೇ ಬರೆದಿರಬಹುದು ಅಥವಾ ನಿಮ್ಮ ವಿರೋಧಿಗಳೇ ಹೋಗಿ, ನಿಮಗೆ ಕೆಟ್ಟ ಹೆಸರು ತರಬೇಕೆಂದು ಸಹ ಬರೆದಿರಬಹುದು ಅಥವಾ ವೀರಪ್ಪನ್ನೇ ಬಂದು ಬರೆದಿರಬಹುದು. ಇದು ನಾನು 1985 ರಲ್ಲಿ ನೋಡಿರತಕ್ಕ ವಿಚಾರ. ಇದಾದ ಮೇಲೆ ರಾಜುಗೌಡರು ಪ್ರತಿಯೊಂದು ಹಂತದಲ್ಲೂ ಸಹಿತ ದ್ವಂದ್ವವಾಗಿರತಕ್ಕಂಥ ಹೇಳಿಕೆಗಳನ್ನು ಕೊಟ್ಟುಕೊಂಡು ಬಂದರು. ನನಗೆ ಸ್ವತಃ ಒಬ್ಬ ಕ್ಷೌರಿಕ ಹೋಗಿ, ನಾಗಪ್ಪನವರಿಗೆ ಕ್ಷೌರ ಮಾಡಿಬಿಟ್ಟು ಬಂದ ಎಂದು ಹೇಳಿದರು. ಒಬ್ಬ ಕ್ಷೌರಿಕ ಕಾಡಿಗೆ ಹೋಗಿ, ನಾಗಪ್ಪನವರಿಗೆ ಕ್ಷೌರ ಮಾಡಿಬಿಟ್ಟು ಬಂದ ಎಂದು ಹೇಳಿದರು. ಇನ್ನೊಬ್ಬರು ಮಂತ್ರಿಗಳು ನನಗೆ ಸ್ವತಃ ಹೇಳಿದರು. ನಾನು ಹೆಸರನ್ನು ಹೇಳಲಿಕ್ಕೆ ಇಚ್ಛಿಸುವುದಿಲ್ಲ. ನಾಗಪ್ಪನವರಿಗೆ ಪ್ರತಿದಿನವೂ ಸಹಿತ ಊಟ ಹೋಗುತ್ತಾ ಇದೆ ಎಂಬ ಮಾತನ್ನು ಹೇಳಿದರು. ಆದರೆ, ನಾಗಪ್ಪನವರು

ಡೈರಿಯಲ್ಲಿ ಏನು ಬರೆದಿದ್ದಾರೆ, 15 ದಿನಕ್ಕೊಂದು ಸಾರಿ ಸ್ನಾನ, ಮಧ್ಯಾಹ್ನದ ಒಂದು ಹೊತ್ತು ಊಟ, ರಾತ್ರಿ ಹೊತ್ತು ಕೊಟ್ಟರೆ ಸೇಬು ಎಂಬ ಮಾತನ್ನು ಅವರು ಹೇಳಿದ್ದಾರೆ. ನಾವು ಯಾರನ್ನು ನಂಬಬೇಕು? ನಾಗಪ್ಪನವರ ಹೆಸರಿನಲ್ಲಿ ಬೇರೆಯವರು ಯಾರಾದರೂ ಡೈರಿ ಬರೆದಿರುತ್ತಾರೋ ಅಥವಾ ನಾಗಪ್ಪನವರ ಡೈರಿಯನ್ನು ವೀರಪ್ಪನ್ನೇ ಬರೆದುಬಿಟ್ಟಿದ್ದಾನೋ ಇದೆಲ್ಲಾ ಪತ್ತೆಯಾಗಬೇಕಾಗುತ್ತದೆ. ಇದಾದ ಮೇಲೆ ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳತಕ್ಕಂತಾದ್ದು, ದಿನಾಂಕ 27-10-2002 ರಲ್ಲಿ ಶ್ರೀಮಾನ್ ರಾಜುಗೌಡರು ತಮಗೆ ಒಂದು ಪತ್ರ ಬರೆದಿದ್ದಾರೆ. ಆ ಪತ್ರದಲ್ಲಿ ಏನು ಬರೆದಿದ್ದಾರೆ ಎಂಬುದನ್ನು ತಾವು ದಯವಿಟ್ಟು ಸಾರ್ವಜನಿಕರಿಗೆ ತಿಳಿಸಬೇಕು. ಏಕೆ ಸಂಶಯದ ಕತ್ತಿ ರಾಜುಗೌಡರ ಕಡೆ ಹೋಗುತ್ತಾ ಇದೆ ಎನ್ನುವುದಕ್ಕೆ ಇದೇ ಮೂಲಭೂತವಾಗಿರತಕ್ಕ ಆದಾರ. 1985ರಲ್ಲಿ ಇವರು ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರು. ಇದಾದ ಮೇಲೆ ಶ್ರೀಮಾನ್ ಎಸ್.ಎಂ. ಕೃಷ್ಣರವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ, ಗೋಪಿನಾಥಂ ಹನೂರು ಕ್ಷೇತ್ರಕ್ಕೆ ಹೋದ ಸಂದರ್ಭದಲ್ಲಿ ಗ್ರಾನೈಟ್ ಮಾಲೀಕರನ್ನೆಲ್ಲಾ ಕರೆಸಿ, ಆ ಸಂಘದ ಪರವಾಗಿ ರಾಜುಗೌಡರು ಮನವಿಯನ್ನು ಕೊಡಿಸಿದರು. ಆದಾದ ನಂತರ, ಎಸ್.ಎಂ. ಕೃಷ್ಣರವರ ನೇತೃತ್ವದಲ್ಲಿ ಸರ್ಕಾರ ಬಂದಾಗ, ಗ್ರಾನೈಟ್ ನಿರ್ಬಂಧವನ್ನು ವೀರಪ್ಪ ಮೊಯ್ಲಿಯವರ ಕಾಲದಲ್ಲಿ ಏನು ಹಾಕಿದ್ದರು, ನಾವು ಅದನ್ನು ಏನು ಮುಂದುವರಿಸಿಕೊಂಡು ಬಂದಿದ್ದೆವು ಅದನ್ನು ಸಡಿಲ ಮಾಡತಕ್ಕಂಥ ಮನವಿಯನ್ನು ಕೊಟ್ಟರು, ನಮ್ಮ ಪುಣ್ಯ ಮುಖ್ಯಮಂತ್ರಿಗಳು ಆ ಸಂದರ್ಭದಲ್ಲಿ ಮಾಡಲಿಲ್ಲ. ಆದಾದ ಮೇಲೆ ಈ ಕ್ಯಾಸೆಟ್‌ನಂದಲ್ಲವೆಂದು ಹೇಳಿ, ನಂದೇ ಎಂದು ಹೇಳಿದರು. ಆದಾದ ಮೇಲೆ ಇವರ ಜೊತೆಯಲ್ಲಿದ್ದಂಥ ಸಹಚರರು ನಾಗಪ್ಪನವರನ್ನು ಕಾಡಿನಲ್ಲಿ ಭೇಟಿ ಮಾಡಿ ಬಂದರು. ಅದಕ್ಕೆ ಸಾಕ್ಷಿ ಆಧಾರ ಇದೆ. ಇಷ್ಟೆಲ್ಲಾ ಆದಮೇಲೆ, ದಿನಾಂಕ 27-10-2002ರಂದು ಏನೆಂದು ಮುಖ್ಯಮಂತ್ರಿಗಳಿಗೆ ಅವರು ಪತ್ರ ಬರೆದಿದ್ದಾರೆ? ಅದನ್ನು ಇವತ್ತು ರಾಜ್ಯದ ಜನತೆಯ ದೃಷ್ಟಿಯಿಂದಾಗಿ, ತಾವು ಬಹಿರಂಗ ಪಡಿಸಬೇಕು ಎಂಬ ಆಗ್ರಹವನ್ನು ನಾನು ಮಾಡುತ್ತಾ ಇದ್ದೇನೆ. ಈಗ ಮಣಿಯನ್ನು ಕಳುಹಿಸುವುದಕ್ಕಾಗಲಿಲ್ಲ.

1.00 ಪಿಎಂ

ಮತ್ತೆ ಮಣಿಯನ್ನು ಕರೆದುಕೊಂಡು ಬಾರದೆ ಹೋದರೆ ಗುಂಡು ಹಾಕಿ ಕೊಲ್ಲುತ್ತೇನೆ ಎಂದು ಹೇಳಿದ. ಪೊನ್ನಾಚಿ ಮಹದೇವಸ್ವಾಮಿ ಅಲ್ಲಿಗೆ ಹೋಗುವ ಸ್ಥಿತಿಯಲ್ಲಿರಲಿಲ್ಲ. ಆಗ ಆಲ್ಟರ್‌ನೇಟಿವ್ ಎಮಿಸರಿಯನ್ನು ಕಳುಹಿಸುವುದಕ್ಕೆ ನೀವು ತೆಗೆದುಕೊಂಡಿರತಕ್ಕಂಥ ಕ್ರಮಗಳು ಏನು? ಮಾನ್ಯ ಅಧ್ಯಕ್ಷರೇ, ನಮ್ಮ ಗೃಹಮಂತ್ರಿಗಳು ಅನೇಕ ಹೇಳಿಕೆಗಳನ್ನು ಮಾಡಿದ್ದಾರೆ. ಆ ಎಲ್ಲಾ ಹೇಳಿಕೆಗಳನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಇವರು ಮೊನ್ನೆ ವಿಧಾನ ಪರಿಷತ್ತಿನಲ್ಲಿ ಈ ಚರ್ಚೆ ಪ್ರಾರಂಭ ಆಗುವುದಕ್ಕೆ ಮುಂಚೆ ಇದರ ಮೇಲೆ ಚರ್ಚೆ ಮಾಡಿ ಎಂದು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದರಲ್ಲಿ ಎಲ್ಲಾದರೂ ಒಂದು ಕಡೆ ನಮ್ಮ ಕಡೆಯಿಂದ ಅಪರಾಧವಾಗಿದೆ, ನಾಗಪ್ಪನವರ ಕುಟುಂಬಕ್ಕೆ ನಾವು ಕ್ಷಮೆ ಕೇಳುತ್ತೇವೆ ಎನ್ನತಕ್ಕಂಥಾದ್ದರನ್ನು ಕನಿಷ್ಟ ಸೌಜನ್ಯಕ್ಕಾದರೂ ಹೇಳತಕ್ಕಂಥಾದ್ದನ್ನು ಈ ಸರಕಾರದವರು ಮಾಡಲಿಲ್ಲ. ಇದನ್ನು ಯಾರು ಬರೆದರು? ಯಾರು ಇದನ್ನು ಡ್ರಾಫ್ಟ್ ಮಾಡಿದರು? ಇದರಲ್ಲಿ ಮಾನವೀಯ ಗುಣಗಳು ಸ್ವಲ್ಪವಾದರೂ ಬೇಡವೇ? ಆ ಹೇಳಿಕೆಯಲ್ಲಿ ಇವರು ಏನು ಹೇಳಿದ್ದಾರೆ? ನಾಗಪ್ಪನವರನ್ನು

ವೀರಪ್ಪನ್ ಹಿಡಿತದಿಂದ ಬಿಡುಗಡೆ ಮಾಡಿಸಲು ನಾಗಪ್ಪನವರ ಕುಟುಂಬದವರು ಕುಟುಂಬದ ಸದಸ್ಯರು, ನಾಗಪ್ಪನವರ ಹಿತೈಷಿಗಳು, ಸಂಘ ಸಂಸ್ಥೆಗಳು ಒತ್ತಡ ತಂದಿದ್ದುದರಿಂದ ವಿಶೇಷ ಕಾರ್ಯಾಚರಣೆಯನ್ನು ತತ್‌ಕ್ಷಣ ನಿಲ್ಲಿಸಿ, ಸಂಧಾನದ ಮೂಲಕ ಮಾತ್ರವೇ ವೀರಪ್ಪನ್ ಹಿಡಿತದಿಂದ ಬಿಡುಗಡೆ ಮಾಡಿಸಲು ಕಾರ್ಯಾಚರಣೆ ಪಡೆಯನ್ನು 08-09-02 ರಿಂದ ಸ್ಥಗಿತಗೊಳಿಸಲಾಯಿತು ಎಂದು ಹೇಳಿ ಇವರು ನಿಲ್ಲಿಸಿ ಬಿಟ್ಟರಂತೆ, ಹಾಗಾದರೆ ಆ ಹದಿನೈದು ದಿನಗಳಲ್ಲಿ ಇವರು ಕಡಿದುಕಟ್ಟೆ ಹಾಕಿದ್ದೇನು? ಹದಿನೈದು ದಿನ 25 ಆಗಸ್ಟ್ ನಿಂದ 09ನೇ ಸೆಪ್ಟಂಬರ್‌ವರೆಗೆ ನೀವು ಕಾರ್ಯಾಚರಣೆಯನ್ನು ಮಾಡಿದ್ದಿರಲ್ಲಾ ಅವೊತ್ತು ನೀವು ಮಾಡಿದ್ದೇನು? ಕಾರ್ಯಾಚರಣೆ ಪಡೆಯವರಿಂದ ಏನೂ ಮಾಡುವುದಕ್ಕೆ ಆಗಲಿಲ್ಲ. ಇದಾದ ಮೇಲೆ ... ಈ ಕಾರ್ಯಾಚರಣೆಯಿಂದ ವೀರಪ್ಪನ್‌ನನ್ನು ಹಿಡಿದು ನಾಗಪ್ಪನವರನ್ನು ಸುರಕ್ಷಿತವಾಗಿ ಬಿಡುಗಡೆ ಮಾಡುವ ಸಾಧ್ಯತೆ ಇದ್ದರೂ ಕೂಡ ಒತ್ತಾಯದ ಮೇರೆಗೆ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಯಿತು ಹಾಗಾದರೆ ಡಾ|| ರಾಜ್‌ಕುಮಾರ್‌ರವರು 105 ದಿನಗಳು ಇದ್ದರಲ್ಲಾ, ಆಗ ಏಕೆ ನೀವು ಕಾರ್ಯಾಚರಣೆಯನ್ನು ಮಾಡುವುದಕ್ಕೆ ಹೋಗಿರಲಿಲ್ಲ? ಈ ಪ್ರಶ್ನೆಯನ್ನು ನಾವು ನಿಮಗೆ ಕೇಳಬಹುದಲ್ಲಾ? ಇದು ಕೊಡತಕ್ಕಂಥ ಹೇಳಿಕೆಯೇ ಎಂಬುದನ್ನು ಮಾನ್ಯ ಅಧ್ಯಕ್ಷರೇ, ತಾವು ಹೇಳಬೇಕು. ಇದಾದ ಮೇಲೆ ಇನ್ನೊಂದು ಬಹಳ ಮುಖ್ಯವಾಗಿರತಕ್ಕಂಥ ವಿಚಾರ ಇದೆ. ದಿನಾಂಕ 25-8-2000ಕ್ಕೆ ಮಾನ್ಯ ಖರ್ಗೆಯವರ ಹೇಳಿಕೆ ನಾನು ಪತ್ರಿಕಾ ಹೇಳಿಕೆ ಬಗ್ಗೆ ಹೋಗುತ್ತಾ ಇಲ್ಲ ಸ್ವಾಮಿ ನಿನ್ನೆ ತಾನೇ ವಿಧಾನ ಪರಿಷತ್ತಿನಲ್ಲಿ ಮಂಡಿಸಿರತಕ್ಕಂಥ, ಇನ್ನೂ ಹಸಿಯಾಗಿರತಕ್ಕಂಥ, ಮಾನ್ಯ ಖರ್ಗೆಯವರ ಹೇಳಿಕೆ. ದಿನಾಂಕ 25-8-2002ಕ್ಕೆ ನಾಗಪ್ಪನರವರ ಅಪಹರಣದ ಬಳಿಕೆ ವೀರಪ್ಪನ್ ಕಳುಹಿಸಿದ ಒಂದು ಕ್ಯಾಸೆಟ್ ಬಂದು ಮುಟ್ಟಿತು. ಈ ಕ್ಯಾಸೆಟ್‌ನಲ್ಲಿ ನಾಗಪ್ಪರವರ ಬಿಡುಗಡೆ ಮತ್ತು ಇತರೆ ಸಂಧಾನಕಾರರ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ. ಇದು ಮೊದಲನೇ ಕ್ಯಾಸೆಟ್. ಹಿಂದೆ ರಾಜಕುಮಾರ್‌ರವರ ಬಿಡುಗಡೆಯ ಸಂದರ್ಭದಲ್ಲಿ ಕರ್ನಾಟಕ ಮತ್ತು ತಮಿಳುನಾಡು ಸರಕಾರಗಳು ನೀಡಿರುವ ಭರವಸೆಗಳನ್ನು ಇನ್ನೂ ಈಡೇರಿಸಲಿಲ್ಲ ಎಂದು ಮಾತ್ರ ಹೇಳಲಾಗಿತ್ತು. ನಮಗೊಂದು ಹಕ್ಕು ಇದೆಯಲ್ಲಾ ಸ್ವಾಮಿ? ಕರ್ನಾಟಕ ಸರಕಾರಕ್ಕೂ, ತಮಿಳುನಾಡು ಸರಕಾರಕ್ಕೂ ಮೌಖಿಕವಾಗಿ, ಲಿಖಿತವಾಗಿ ಆಗಿರತಕ್ಕಂಥ ಒಪ್ಪಂದ ಏನು? ಅದನ್ನು ನೀವು ಬಹಿರಂಗ ಪಡಿಸಿ. we want that to be published. ಅದು ಗೊತ್ತಾಗ ಬೇಕಾಗುತ್ತದೆ. ಮೊದಲನೇ ಕ್ಯಾಸೆಟ್‌ನಲ್ಲಿ ಅವರು ಹೇಳಿದ್ದಾರೆ. ಇಂಥವುಗಳನ್ನೆಲ್ಲಾ ನಾವು ಊಹೆ ಮಾಡಿ ಹೇಳಬಹುದಲ್ಲಾ? ನಾಗಪ್ಪನವರ ಡೈರಿ, ದಿನಕರ್‌ರವರು ಹೇಳಿರತಕ್ಕಂಥಾದ್ದು ದಿನಕರ್ ಸುಳ್ಳು ಹೇಳಿದ್ದಾರೆ ಎನ್ನುವುದಾದಲ್ಲಿ ಅವರು ಇವೊತ್ತೂ ಕರ್ನಾಟಕ ಸರಕಾರದ ಉಪ್ಪು ತಿನ್ನುತ್ತಾ ಇದ್ದಾರೆ. ಈ ಸದನಕ್ಕೆ ಅವರನ್ನು ಕರೆಸಿ. ಪುಸ್ತಕದಲ್ಲಿ ಕಾನೂನಿನಲ್ಲಿ ಅವಕಾಶವಿದೆ. ಕೇಳೋಣ ನಾವು. ಪಾಟೀ ಸವಾಲು ಹಾಕೋಣ. ದಿನಕರ್ ಇಲ್ಲಿಯೇ ಸಿಗುತ್ತಾರೆ. ಅವರನ್ನು ಇಲ್ಲಿಗೆ ಕರೆಸಿ. ಏಕೆ ಹೀಗೆ ಬರದೆ ನೀನು ಎಂದು ಕೇಳಿ? ಅವರು ಡಿ.ಜಿ.ಪಿ ಆಗಿದ್ದವರು. ಎಲ್ಲಾ ವಿಚಾರಗಳೂ ಗೊತ್ತಿರತಕ್ಕಂಥವರು. ನೀವು ನಾನು ದಿನಕರ್ ಬರೆದಿರುವ ಪುಸ್ತಕದ ಬಗ್ಗೆ ಕಾಮೆಂಟ್ಸ್ ಮಾಡುವುದಿಲ್ಲ ಎಂದು ಹೇಳಿದರೆ ಹೇಗೆ ಆಗುತ್ತದೆ? ನೀವು ಎಸ್.ಎಂ. ಕೃಷ್ಣರವರಾಗಿ ಕಾಮೆಂಟ್ಸ್ ಮಾಡುವುದು ಬೇಡ. ತಾವುಗಳು

ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಇದ್ದೀರಿ. ಈ ರಾಜ್ಯದ ಜನತೆಯ ರಕ್ಷಣೆಯನ್ನು ಮಾಡತಕ್ಕಂಥ ಜನ ತಾವು. ತಮ್ಮ ಬಾಯಿಯಿಂದ ಆ ಮಾತು ಬರಬಾರದಾಗಿತ್ತು. ನೀವು ಮುಖ್ಯಮಂತ್ರಿಗಳಾಗಿ ಆಡತಕ್ಕಂಥ ಮಾತು ಅಲ್ಲ ಅದು. ಏನು ಹೇಳಿದ್ದೀರಿ ನೀವು ಈ ಸಂದರ್ಭದಲ್ಲಿ? ಕರ್ನಾಟಕ ರಾಜ್ಯದ ಎಲ್ಲರಿಗೂ ಸಹಿತ ನಾನು ರಕ್ಷಣೆ ಕೊಡುವುದಕ್ಕೆ ಆಗುವುದಿಲ್ಲ. ಹಾಗಾದರೆ ಎಲ್ಲರಿಗೂ ಕೂಡ ರಕ್ಷಣೆ ಕೊಡುವುದಕ್ಕೆ ಆಗುವುದಿಲ್ಲ ಅಂದಮೇಲೆ ನೀವು ಮುಖ್ಯ ಮಂತ್ರಿಗಳಾಗಿ ಹೀಗೆ ಹೇಳಿದರೆ... ಅದು ಎಲ್ಲಾ ಪತ್ರಿಕೆಗಳಲ್ಲಿಯೂ ಬಂದಿದೆ. ನೀವು ನಿಮ್ಮ ಪತ್ರಿಕಾ ಕಾರ್ಯದರ್ಶಿಯವರಿಗೆ ಕೇಳಿ, ಹುಡುಕಿಸಿ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) : ನಾನು ಹುಡುಕಿಸುತ್ತೇನೆ...

ಶ್ರೀ ಪಿ.ಜಿ.ಆರ್. ಸಿಂಧ್ಯ : ಹುಡುಕಿಸಿ, ಯಾರೂ ಸಮಸ್ತ ಕರ್ನಾಟಕದ ಜನತೆಗೆ ರಕ್ಷಣೆ ಕೊಡುವುದಕ್ಕಾಗುವುದಿಲ್ಲ. ಅದು ನಮಗೂ ಗೊತ್ತಿದೆ. ನಾವು ಒಂದು ಕೋಟಿ ಜನಕ್ಕೆ ರಕ್ಷಣೆ ಕೊಡಿ ಎಂದು ನಿಮ್ಮ ಹತ್ತಿರ ಬಂದು ಕೇಳಲಿಲ್ಲ. ಒಂದು ಲಕ್ಷ ಜನಕ್ಕೆ ರಕ್ಷಣೆ ಕೊಡಿ ಎಂದು ಕೇಳಲಿಲ್ಲ. ಹತ್ತು ಜನಕ್ಕೆ ಕೇಳಿದ್ದೇವೆ. ಸುದರ್ಶನ್‌ರವರು ನಿಮ್ಮ ಟಾಸ್ಕ್ ಫೋರ್ಸ್‌ನಲ್ಲಿಯೇ ಇದ್ದಾರೆ. ರಾಜ್‌ಕುಮಾರ್ ಎಲ್ಲರಿಗೂ ಬೇಕಾಗಿರತಕ್ಕಂಥವರು. ನಾಗಪ್ಪ, ಮಹದೇವಪ್ರಸಾದ್, ವಾಟಾಳ್‌ನಾಗರಾಜ್, ಕೃಷ್ಣಮೂರ್ತಿಯವರು ವಿರೋಧ ಪಕ್ಷದಲ್ಲಿರುವವರು. ನಾನು ಕೇಳುತ್ತಾ ಇದ್ದೇನೆ ಮಾನ್ಯ ಮುಖ್ಯಮಂತ್ರಿಗಳನ್ನು. ನಿಮಗೂ ಕರುಣಾನಿಧಿಯವರಿಗೂ ಆಗಿರತಕ್ಕಂಥ ಒಪ್ಪಂದವನ್ನು ಇವೊತ್ತಾದರೂ ಬಹಿರಂಗಪಡಿಸಿ. ಡಾ॥ ರಾಜ್‌ಕುಮಾರ್ ಬಿಡುಗಡೆ ಆಯಿತು. ಎಲ್ಲರೂ ಸಿಹಿ ತಿಂದಿದ್ದೇವೆ. ವಿರೋಧ ಪಕ್ಷದವರು ಸಹಕಾರ ತಮಗೆ ಸಿಕ್ಕಿತು ಎಂದು ತಾವು ಈ ಸದನದಲ್ಲಿ ಹೇಳಿದ್ದೀರಿ, ಆ ದಿನವಾದರೂ ಈ ವೈಟ್ ಪೇಪರ್‌ನ್ನು ನೀವು ಪಬ್ಲಿಶ್ ಮಾಡಿದ್ದೀರಾ? ನಾಗಪ್ಪರವರ ಹತ್ಯೆ ಆಯಿತು ಎಂದು ಹೇಳಿ ವೈಟ್‌ಪೇಪರ್‌ನ್ನು ಪಬ್ಲಿಶ್ ಮಾಡುತ್ತೇವೆ ಎಂದು ಹೇಳುತ್ತಾ ಇದ್ದೀರಿ ಹಾಗಾದರೆ ರಾಜ್‌ಕುಮಾರ್ ಬಿಡುಗಡೆಯಾದ ಮೇಲೆ ನೀವು ಏತಕ್ಕೆ ವೈಟ್ ಪೇಪರ್ ಪಬ್ಲಿಶ್ ಮಾಡಲಿಲ್ಲ? ಏನಿದ್ರು ಸಿಕ್ರೇಟ್ ಪೇಪರ್? ಈಗ ಬ್ಲಾಕ್‌ಪೇಪರ್ ಪಬ್ಲಿಶ್ ಮಾಡಿ, ಆವೊತ್ತಿನ ಸಿಕ್ರೇಟ್ ಪೇಪರ್‌ನ್ನು ಹೊರಗಡೆ ಹಾಕಿ ನೀವು. ಆಗ ನಾವು ನಿಮ್ಮ ಮೇಲೆ ನಂಬಿಕೆ, ವಿಶ್ವಾಸವನ್ನು ಇಟ್ಟುಕೊಳ್ಳುತ್ತೇವೆ. ನೀವು ವಿಶ್ವಾಸಕ್ಕೆ ಅರ್ಹರಾಗಿರತಕ್ಕಂಥ ವ್ಯಕ್ತಿ, ನೀವು ಕೊಟ್ಟ ಮಾತಿನಂತೆ ನಡೆಯುತ್ತೀರಿ, ನೀವು ವಿರೋಧಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೀರಿ. ನೀವು ಸುಮ್ಮ ಸುಮ್ಮನೆ ಪಾದಯಾತ್ರೆಗೆ ಹೋಗುವುದಿಲ್ಲ ಎಂಬುದನ್ನು ನಾವು ಆಗ ಖಂಡಿತವಾಗಿ ನಂಬುತ್ತೇವೆ ಅದನ್ನು ಏಕೆ ನೀವು ಬಹಿರಂಗ ಪಡಿಸಬಾರದು? ಇದಾದ ಮೇಲೆ, ನಮ್ಮ ಖರ್ಗೆಯವರು ಇನ್ನೊಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ನಿನ್ನೆಯ ಹೇಳಿಕೆಯಲ್ಲಿ ಹೇಳಿದ್ದಾರೆ. ದಿನಾಂಕ 3-10-2002 ರಂದು ಮೂರನೆ ಕ್ಯಾಸೆಟ್ ನಾಗಪ್ಪರವರ ಮನೆಯ ಹತ್ತಿರ ಯಾರೋ ಬಿಸಾಡಿದ್ದು ಕಂಡು ಬಂದಿತು. ಆ ಕ್ಯಾಸೆಟ್‌ನಲ್ಲಿ ಕೊಳತ್ತೂರು ಮಣಿ ಮತ್ತು ಪೊನ್ನಾಚಿ ಮಹದೇವಸ್ವಾಮಿಯವರನ್ನು ಸಂಧಾನಕರರಾಗಿ ಕಳುಹಿಸಬೇಕೆಂದು ಹೇಳಲಾಗಿತ್ತು. ಇದರ ಬಗ್ಗೆ ಮಾನ್ಯ ಅಧ್ಯಕ್ಷರೇ, ಅವರ ಮನೆಯ ಮುಂದೆ ಯಾರೋ ಬಿಸಾಡಿದ್ದರು ಎಂದು ಹೇಳಿದ್ದೀರಲ್ಲಾ, ಇನ್ನೂ ಕೆಲವು ಮಂತ್ರಿಗಳು ಹೇಳಿದರು, ಎಲ್ಲಾ ಕ್ಯಾಸೆಟ್‌ಗಳೂ ಸಹಿತ ನಾಗಪ್ಪನವರ ಮನೆಗೆ ಹೋಗುತ್ತದಲ್ಲಾ? ಎಂದು

ಹಾಗದರೆ ಪಾಪ, ಅವರ ಹೆಂಡತಿಗೆ ಕ್ಯಾಸೆಟ್‌ಗಳನ್ನು ಕಳುಹಿಸಿ ಕೊಡದೆ, ಇನ್ಯಾರಿಗೆ ಅವರು ಕ್ಯಾಸೆಟ್‌ಗಳನ್ನು ಕಳುಹಿಸಿ ಕೊಡಬೇಕಾಗಿತ್ತು? ಗಂಡನನ್ನು ಕಳೆದುಕೊಂಡು ಇವೊತ್ತು ಯಾರು ದುಃಖದಲ್ಲಿರುವವರು? ರಾಜುಗೌಡರ ಮನೆಗೆ ಕಳುಹಿಸಬೇಕಾಗಿತ್ತೇ? ಇದಾದ ಮೇಲೆ ಮಾನ್ಯ ಅಧ್ಯಕ್ಷರೇ, ಒಟ್ಟು ಆರು ಕ್ಯಾಸೆಟ್‌ಗಳು ಬಂದಿವೆ ಏಳನೇ ಕ್ಯಾಸೆಟ್ ಬಂದಿಲ್ಲವೆಂದು ನಿಮ್ಮ ಅಭಿಪ್ರಾಯದಲ್ಲಿ ಹೇಳುತ್ತಿದ್ದೀರಿ. ಈ ಆರು ಕ್ಯಾಸೆಟ್‌ಗಳು ಸಹಿತ ಬಂದಂಥ ಸಂದರ್ಭದಲ್ಲಿ ಪೊಲೀಸ್ ಇಂಟಲಿಜೆನ್ಸ್ ಅಲ್ಲಿ ಇರಲಿಲ್ಲವೇ? ಎಸ್.ಟಿ.ಎಫ್. ಕಾರ್ಯಾಚರಣೆ ಕಾಡಿನೊಳಗೆ ಮಾಡುತ್ತಾ ಇರಲಿಲ್ಲ. ರೋಡ್‌ನಲ್ಲಿ ಪೊಲೀಸ್‌ನವರು ಅಯ್ಯಪ್ಪನ ವೇಷ ಹಾಕಿಕೊಂಡು, ಬೇರೆ ಬೇರೆ ವೇಷ ಹಾಕಿಕೊಂಡು ಅಲ್ಲಿ ಬಾಡಿಗೆ ಮನೆ ಮಾಡಿಕೊಂಡಿದ್ದರಲ್ಲಾ, ಅವರು ಯಾರು? ಕೊಳ್ಳೆಗಾಲದಲ್ಲಿ ಎರಡು ತಿಂಗಳುಗಳಲ್ಲಿ ಲಾಡ್ಜ್‌ಗಳಲ್ಲಿ ಇದ್ದುಕೊಂಡು ಬಾಡಿಗೆ ಕೊಡದೆ ಓಡಿ ಹೋಗಿದ್ದಾರಲ್ಲಾ, ಅವರು ಯಾರು? ಈ ಪ್ರಶ್ನೆಗಳೆಲ್ಲಾ ಬರುತ್ತವೆ ಮಾನ್ಯ ಚಂದ್ರೇಗೌಡರವರೇ.. ಇದಕ್ಕೆ ಯಾರ ಹತ್ತಿರ ಉತ್ತರ ಕೊಡಿಸಬೇಕು ನಾವು? ಪಾಪ ಡಿ.ಜಿ.ಪಿ ಮಡಿಯಾಳ್‌ರವರು ಅವರು ಯಾರೋ ಮಾಡಿದ ತಪ್ಪಿಗೆ ಇವರು ಹೇಳಿಕೆ ಕೊಟ್ಟಿದ್ದಾರೆ. ಇಲ್ಲ I will look into it ಅಂತ, ಅವರು ಒಬ್ಬ ಆನೆಸ್ಟ್ ಆಫೀಸರ್. ಇನ್ನೇನು ಮಾಡುತ್ತಾರೆ ಅವರು? ಅಲ್ಲಿ ಇದ್ದ ಪೊಲೀಸ್ ಅಧಿಕಾರಿಗಳು ಅಲ್ಲಿಂದ ಕ್ಯಾಸೆಟ್ ಬರುವಾಗ ಕತ್ತೆ ಕಾಯುತ್ತಾ ಇದ್ದರೆ? ಸ್ವಾಮಿ ಹೇಳುತ್ತೇನೆ ಕೇಳಿ. ಅವರ ಶವ ಬರುತ್ತದೆ ಎಂದು ಗೊತ್ತಾಯಿತು. ಅವರು ನಮ್ಮ ಪಕ್ಷದ ಕಲೀಗ್. ನಾವೆಲ್ಲಾ ಹೊರಟೆವಿ. ಕೊಳ್ಳೇಗಾಲ ಐ.ಬಿ.ಗೆ ನಾನು ಬೈರೇಗೌಡರು, ಸೋಮಶೇಖರ್, ಎ.ಬಿ. ಪಾಟೀಲರು, ಬಚ್ಚೇಗೌಡರು, ಎಸ್.ಎಸ್. ಪಾಟೀಲರು ಎಲ್ಲ ಹೋದಿವಿ. ಐಬಿಯಲ್ಲಿ ನಿಮ್ಮ ಅಧಿಕಾರಿಗಳು ಕೂತಿದ್ದರು. ಅವರು ಹೇಳಿದರು. ನೀವು ಹೋಗಬೇಡಿ ಅಲ್ಲಿಗೆ ಅಂತ. ಇಲ್ಲ ನಾವು ಹೋಗುತ್ತೇವೆ, ನಾವೇನು ತಪ್ಪು ಮಾಡಿಲ್ಲ, ನಾವ್ಯಾಕೆ ಹೋಗಬಾರದ್ರಿ, ಹೋಗ್ತೇವೆ ಅಂತ ಹೋದೆವು. ಅಷ್ಟು ಹೊತ್ತಿಗೆ ಇನ್ನೊಂದು ಹೆಣವನ್ನು ನಾವು ನೋಡತಕ್ಕಂತಹ ಸಂದರ್ಭ ಬಂದಿತ್ತು ಅಧ್ಯಕ್ಷರೇ, ಇನ್ಯಾರದೂ ಅಲ್ಲ, ಈ ಸದನದ ಪ್ರಸ್ತುತ ಸದಸ್ಯ ಶ್ರೀ ಎ.ಆರ್. ಕೃಷ್ಣಮೂರ್ತಿ ದಿವಂಗತ ರಾಜ್ಯಪಾಲರಾದ ರಾಚಯ್ಯನವರ ಸುಪುತ್ರರು. ಹೇಳುತ್ತಾ ಇದ್ದೇವೆ ಅಧ್ಯಕ್ಷರೇ, ಹೊಡೀಬೇಡಿ, ಹೊಡೀಬೇಡಿ, ಕೃಷ್ಣಮೂರ್ತಿ ಶಾಸಕ ಶಾಸಕ ಅಂತ. ಹೊರಗಡೆ 10-12 ಜನ ಶವದ ಸುತ್ತ ಮುತ್ತ ಇದ್ದರು, ಎಲ್ಲವನು ಸಿಂಧ್ಯಾ, ಎಲ್ಲವನೇ ನಾಗೇಗೌಡ, ಎಲ್ಲವನೇ ಭೈರೇಗೌಡ ಅಂತ ಹುಡುಕಿಸುತ್ತಾ ಇದ್ದರು. ಯಾರು ಅವರೆಲ್ಲಾ? ನಾನು ಹೇಳುತ್ತೇನೆ. ಅವರು ವೀರಪ್ಪನ್ ಕಡೆಯವರು ಅಂತ. ಅಲ್ಲಿ ವೀರಪ್ಪನ್ ಕಡೆಯವರು ಯಾರು? ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಯಾರು, ರಾಜುಗೌಡರ ಕಡೆಯವರು ಯಾರು - ದೊಂಬಿ. ನಾನು ನಿಮಗೆ ಹೇಳುತ್ತೇನೆ ಬರೀ ಕೃಷ್ಣಮೂರ್ತಿ ಸಾಯತಕ್ಕಂಥದಲ್ಲ, ಅಮಾನುಷವಾಗಿ ಅವರನ್ನು ಹೊಡೆದಿದ್ದಾರೆ. ಅವರು ಬದುಕಿದ್ದೇ ಹೆಚ್ಚು ಮಾನ್ಯ ಚಂದ್ರೇಗೌಡರೇ. ನಾಗಪ್ಪನವರ ಸಂಸ್ಕಾರ ಹನೂರಿನ ರಾಮಪುರದಲ್ಲಾಯಿತು, ಅದರ ಜೊತೆಯಲ್ಲಿ ಇವರ ಹೆಣವನ್ನು ತೆಗೆದುಕೊಂಡು ಹೋಗಿ ಆಲೂರಲ್ಲಿ ಶವಸಂಸ್ಕಾರ ಮಾಡಬೇಕಾಗಿತ್ತು. ನಗುವ ವಿಚಾರವಲ್ಲ ಮಾನ್ಯ ಅಧ್ಯಕ್ಷರೇ. ಯಾಕೆ ನಿಮ್ಮ ಪೊಲೀಸರು ಹೊರಗಡೆ ಬಂದರು? ಯಾಕೆ ನೀವು ವ್ಯವಸ್ಥೆ ಮಾಡುವುದಕ್ಕೆ ಆಗಿರಲಿಲ್ಲವಾ? 8 ದಿನಗಳ ಕಾಲ ಅಲ್ಲಿ

ಸರ್ಕಾರವೇ ಇರಲಿಲ್ಲವೇನೋ. That was really become Veerappan's land. Veerappan's law was prevailing there. ನಾಗೇಗೌಡರು ಬದುಕಿ ಬಂದದ್ದು ಹೆಚ್ಚು. ಅಯ್ಯಯ್ಯೋ ಅಯ್ಯಯ್ಯೋ ಅಂತ ಒಂದು ಫರ್ಲಾಂಗ್ ಓಡಿಹೋದರು. ಪತ್ರಿಕಾಮಿತ್ರರಿಗೆಲ್ಲಾ ಹೊಡೆದರು. ಯಾರು ಹೊಡೆದವರು? ನಾಗಪ್ಪನ ಫಾಲೋಯರ್ಸ್‌ಗೆ ಗೊತ್ತಿಲ್ಲವಾ? ಅವರ ದೇಹವನ್ನು ನೋಡುವುದಕ್ಕೆ ಆಗುತ್ತಿರಲಿಲ್ಲ ಅಧ್ಯಕ್ಷರೇ. ನಿಮ್ಮ ತೊಡೆಯಷ್ಟು ದಪ್ಪ ಅವರ ತುಟಿಗಳು ಊದಿಕೊಂಡಿದ್ದವು. ಕೇವಲ ಒಂದು ಚಹರೆ ಮಾತ್ರ ಕಾಣುತ್ತಿತ್ತೇ ಹೊರತು, ನಾಗಪ್ಪನವರ ಶ್ರೀಮತಿ ಅವರ ಜೊತೆ 40 ವರ್ಷ ದಾಂಪತ್ಯ ನಡೆಸಿದ್ದವರು, ಒಂದು ಸೆಕೆಂಡ್ ನಾಗಪ್ಪನವರ ದೇಹ ನೋಡುವುದಕ್ಕೆ ಅವರ ಕೈಲಿ ಆಗಲಿಲ್ಲ ಕಾರಣವೇನು? ನಾನು ಹೇಳುತ್ತೇನೆ ಯಾರು ನಾಗಪ್ಪನವರನ್ನು ಕೊಂದು ಬಂದಿದ್ದಾರೆ ಅವರು ವೀರಪ್ಪನ್ ಹೃದಯಕ್ಕಿಂತ ಕಠಿಣ ಹೃದಯಿಗಳು, ಆ ಶವವನ್ನು ಅಲ್ಲೇ ಬಿಟ್ಟು ಬರುತ್ತಾರೆ. ಯಾಕೆ ಬಿಟ್ಟು ಬಂದರು? ಯಾರು ಬಿಟ್ಟು ಬಂದರು? ಈ ಪ್ರಶ್ನೆಗೆ ಉತ್ತರಗಳನ್ನು ಕೊಡುವವರು ಯಾರು? ಇದಾದಮೇಲೆ ಅಧ್ಯಕ್ಷರೇ, ಅವತ್ತು ನಮಗೆ ಸುದ್ದಿ ಬಂತು. ನಾವು ಯಾವ ವಾಹನಗಳಲ್ಲಿ ಹೋಗಿದ್ದೆವು ಆ ವಾಹನಗಳಿಗೆಲ್ಲಾ ಸೀಮೆಯಣ್ಣೆ ಹಾಕಿ ಸುಡುಬೇಕೆಂದು ಇದ್ದರು. ಇದರ ಹಿಂದೆ ಯಾರಿದ್ದರು? ಇವರ ಬಗ್ಗೆ ಪತ್ತೆ ಆಗಬೇಕಾಗುತ್ತದೆ. ಪೊಲೀಸ್‌ರು ಯಾಕಿರಲಿಲ್ಲ? ಇದರ ಬಗ್ಗೆ ಪತ್ತೆ ಆಗಬೇಕಾಗುತ್ತದೆ. ಇದರ ಬಗ್ಗೆ ಸ್ವಲ್ಪನಾದರೂ ಮಾನ್ಯ ಗೃಹಮಂತ್ರಿಗಳು ಬೆಳಕನ್ನು ತಮ್ಮ ಹೇಳಿಕೆಯಲ್ಲಿ ಕೊಟ್ಟಿದ್ದಿದ್ದರೆ ಈ ಸರ್ಕಾರಕ್ಕೆ ಸಹಿತ ನಮಗೆ ಎಷ್ಟು ನಾಗಪ್ಪನವರ ಸಾವಿನ ಬಗ್ಗೆ ದುಃಖವಿದೆ, ದುಮ್ಮಾನವಿದೆ, ಅಷ್ಟೇ ದುಃಖ ಈ ಸರ್ಕಾರಕ್ಕೂ ಇದೆ ಅಂತ ನಾವು ಒಪ್ಪುತ್ತಾ ಇದ್ದೆವು. ಅದರ ಬಗ್ಗೆ ಕನಿಷ್ಟ ಪಕ್ಷ ಇವರು ತಮಗೆ ತೋರಿಸಲಿಲ್ಲವಾ ಅಥವಾ ತಾವೇ ಇದನ್ನು ಡ್ರಾಫ್ಟ್ ಮಾಡಿದ್ದೀರಾ? ನನಗಂತೂ ಅರ್ಥವಾಗುತ್ತಾ ಇಲ್ಲ ಮಾನ್ಯ ಅಧ್ಯಕ್ಷರೇ. ಈಗ ಇದನ್ನು ಜನಗಳಿಗೆ ತಪ್ಪು ದಾರಿಗೆಳೆಯಲು ಮಾಡುತ್ತಿರುವಂತಹ ಒಂದು ಪ್ರಯತ್ನ, ಅದಾದಮೇಲೆ, ಮಾನ್ಯ ಅಧ್ಯಕ್ಷರೇ ರಾಜುಗೌಡರು ನಾನು ಎಮಿಸರಿಯಾಗಿ ಹೋಗುತ್ತೇನೆ ಅಂತ ಒಂದು ಸಲ ಹೇಳಿದರು. ಹೋಗೋಲ್ಲ ಅಂತ ಒಂದು ಸಲ ಹೇಳಿದರು. ಬಿಟ್ಟುಬಿಡು ನಾಗಪ್ಪನವರನ್ನು ಅಂತ ಒಂದು ಸಲ ಹೇಳಿದರು. ನಿಮಗೇನೂ ಸಂಪರ್ಕ ಇಟ್ಟುಕೊಳ್ಳದೇ ಹೋಗಿದ್ದಿದ್ದರೆ ನಿಮಗೇನೂ ಗೊತ್ತಿಲ್ಲದೇ ಹೋಗಿದ್ದಿದ್ದರೆ ತಾವು ಯಾಕೆ ಈ ಹೇಳಿಕೆಗಳನ್ನು ಕೊಡುತ್ತಿದ್ದಿರಿ? ಇದು ನನಗಂತೂ ಅರ್ಥವಾಗುತ್ತಾ ಇಲ್ಲ. ತಾವೇನು ಹೇಳುತ್ತಿದ್ದೀರಿ ಮುಖ್ಯಮಂತ್ರಿಗಳು ಗದರಿಸಿದ್ದನ್ನು ನಾನು ಹೇಳಿದೆ, ಅವರಿಗೇ ಅಲ್ಲ ಮಹಾದೇವ್‌ಗೂ ಗದರಿಸಿದ್ದಾರೆ ಎಲ್ಲರಿಗೂ ಗದರಿಸಿದ್ದಾರೆ. ಅಧ್ಯಕ್ಷರೇ ಲಾಸ್ಟ್ ಕ್ಯಾಸೆಟ್ ಬಂತು ನಮ್ಮ ಅಭಿಪ್ರಾಯದಲ್ಲಿ ...

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಸಕ್ಕರೆ ಸಚಿವರು) : ಮಾನ್ಯ ಮುಖ್ಯಮಂತ್ರಿಗಳು ಗದರಿಸಿದ್ದಾರೆ ಗದರಿಸಿದ್ದಾರೆ ಅಂತ ಏನೋ ಒಂದು ಧಾಟಿಯಲ್ಲಿ ನೀವು ಏನೋ ಒಂದು ಮನಸ್ಸಿನಲ್ಲಿಟ್ಟುಕೊಂಡು ಹೇಳುವುದು ಸರಿಯಲ್ಲ ಮುಖ್ಯಮಂತ್ರಿಗಳು ನಮ್ಮ ಕ್ಯಾಪ್ಟನ್. ಹಾಗಾದರೆ ಈವಾಗ ಮಾತನಾಡಿ ಅಂತ ಹೇಳಿದರು. ಅದನ್ನು ನೀವು ಅಪಾರ್ಥ ಮಾಡಿಕೊಂಡು ಮುಖ್ಯಮಂತ್ರಿಗಳು ಮಹಾದೇವ್‌ಗೆ ಸದನದಲ್ಲಿ ಆದೇಶ ಕೊಟ್ಟರು ಮಾತನಾಡಿ ಅಂತ ಇದನ್ನೆಲ್ಲ ಅಪಾರ್ಥ ಮಾಡಿಕೊಳ್ಳಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಾನು ಮುಖ್ಯಮಂತ್ರಿಗಳ ಬಗ್ಗೆಯೂ ವೈಯಕ್ತಿಕವಾಗಿ ಗೌರವ ಇಟ್ಟುಕೊಂಡಿರುವಂಥವನು. ಮಹಾದೇವರ ಬಗ್ಗೇನೂ ಗೌರವ ಇಟ್ಟುಕೊಂಡಿರುವಂಥವನು. ಆದರೆ ನೀವು ಆ ಸಂದರ್ಭದಲ್ಲಿ ನೀಡಿರುವ ಹೇಳಿಕೆಗಳ ಬಗ್ಗೆ ಚರ್ಚೆ ಮಾಡುತ್ತಿದ್ದೇನೆಯೇ ಹೊರತು ವೈಯಕ್ತಿಕವಾಗಿ ಅಲ್ಲ ಎಂಬುದನ್ನು ತಾವು ಗಮನದಲ್ಲಿಟ್ಟಿದ್ದೀರಿ ಎಂಬ ವಿಶ್ವಾಸ ನನಗಂತೂ ಸಂಪೂರ್ಣವಾಗಿದೆ. ಮಾನ್ಯ ಅಧ್ಯಕ್ಷರೇ, ಲಾಸ್ಟ್ ಕ್ಯಾಸೆಟ್ ಇವರಿಗೆ ಬಂದದ್ದು 8ನೇ ತಾರೀಖು ಬೆಳಿಗ್ಗೆ 8 ಗಂಟೆಗೆ. ಮೂರನೇ ತಾರೀಖೇ ಒಂದು ಸಭೆ ನಡೆಯಿತು, ನಾಲ್ಕನೇ ತಾರೀಖೇ ಒಂದು ಸಭೆ ನಡೆಯಿತು. ಐದನೇ ತಾರೀಖು ಚಂಗಡಿಯಲ್ಲಿ ಎರಡು ರಿಗ್ ಹಾಕಿ ಬೋರ್‌ವೆಲ್‌ಗಳನ್ನು ತೋಡಿಸುತ್ತಿದ್ದರು. ಆದಾದನಂತರ ಚಂಗಡಿ ಜನ ಹೇಳುತ್ತಾ ಇದ್ದಾರೆ. ಹೌದು ಅಲ್ಲಿ ಚಕಮಕಿಯಾಗಿದ್ದು ನಿಜ ಅಂತ. ನನಗೆ ಬೆಳಿಗ್ಗೇನೆ 10 ಗಂಟೆಗೆ ಸೂಚನೆ ಬಂತು ನಮ್ಮ ಮನೆಯಲ್ಲಿ ಒಂಧು ಪ್ರೈವೇಟ್ ಫಂಕ್ಷನ್ ಇತ್ತು. 10 ಗಂಟೆ ಇರಬೇಕು, ಮಹಾದೇವಪ್ರಸಾದ್ ಅವರು ಕೃಷ್ಣಮೂರ್ತಿಯವರು ನನಗೆ ದೂರವಾಣಿ ಮೂಲಕ ಮಾತನಾಡಿ ನಾಗಪ್ಪನವರು ಹೊರಟು ಹೋಗಿದ್ದಾರೆ ಎಂಬ ಸೂಚನೆ ಕೊಟ್ಟಿದ್ದರು. ಆದರೆ ಸರ್ಕಾರದವರು ನೀವು ತಯಾರಿ ನಡೆಸಿಕೊಂಡು ಬಂದಿರಿ. ಇದರಲ್ಲಿ ಇನ್ನೊಂದು ಪ್ರಶ್ನೆ ಬರುತ್ತದೆ. STFನಲ್ಲಿ ಅಳಿದುಳಿರುವ ಅಧಿಕಾರಿಗಳು ಯಾರಿದ್ದಾರೆ, ಯಾರು ಲೆಕ್ಕದ ಪ್ರಕಾರ ಇದ್ದಾರೆ ಅವರೆಲ್ಲರಿಗೂ ಒಂದೇ ದಿನ ಫ್ಲೂ ಬಂತಾ? ಮಲೇರಿಯಾ ಬಂತಾ ಡಿಸೆಂಬರ್ 4ನೇ ತಾರೀಖಿನಿಂದ ಡಿಸೆಂಬರ್ 14ನೇ ತಾರೀಖಿನವರೆಗೆ ರಜೆ ಯಾಕೆ ಹಾಕಿದ್ದರು? ಕಾರಣವೇನು? ಈ ಸಂಶಯ ಸ್ವಾಭಾವಿಕವಾಗಿ ನಮಗೆ ಬರಬೇಕು ತಾನೇ? ಎಲ್ಲರಿಗೂ ಮನೆಯಲ್ಲಿ ಬಹಳ ಅವಸರದ ಕೆಲಸಗಳಿತ್ತು ಅಂತ ಕಾಣುತ್ತದೆ. ಅವರ ಪುತ್ರ ನನಗೆ ಬಂದು ಭೇಟಿ ಮಾಡಿದಾಗ ನಾನು ಹೇಳಿದೆ ನೀನು ಗೃಹಮಂತ್ರಿಗಳ ಮನೆಯಲ್ಲೇ ಇರಪ್ಪ ಅಂತ. ಸಾಯಂಕಾಲ ಆರೂವರೆ ಗಂಟೆಗೆ ತಿಳಿಸುತ್ತಾರೆ. ಇಲ್ಲ. ನಾಗಪ್ಪನವರ ಮೃತದೇಹ ಪೊಲೀಸರ ಕೈಗೆ ಸಿಕ್ಕಿದೆ ಅಂತ. ಪೊಲೀಸರ ಕೈಗೆ ಸಿಗಲಿಲ್ಲ, ನಾಗಪ್ಪನವರ ಅಭಿಮಾನಿಗಳ ಕೈಗೆ ಅಳಿದು ಕೊಳೆತು ನಾರುತ್ತಾ ಇದ್ದ ದೇಹ ಸಿಕ್ಕಿದ್ದು. ನಮ್ಮ ಗೃಹಮಂತ್ರಿಗಳಿಗೆ ಹಾಗೆ ಹೇಳತಕ್ಕಂತಹ ಧೈರ್ಯ ನಾಗಪ್ಪನವರ ಪುತ್ರನಿಗೆ ಬರುವುದಿಲ್ಲ. ಪೊಲೀಸ್ ಅಧಿಕಾರಿ ಒಬ್ಬರು ಬಂದು ಹೇಳುತ್ತಾರೆ. I am sorry, ನಾಗಪ್ಪನವರು ಹೊರಟುಹೋಗಿದ್ದಾರೆ ಅಂತ. ಯಾಕೆ ಟೈಂ ತಗೊಂಡ್ರಿ ನೀವು ಹೇಳೋಕೆ? ಯಾಕೆಂದರೆ ನಿಮಗೆ ಗೊತ್ತಿತ್ತು. ಎಲ್ಲಾ ಕಡೆಗಳಲ್ಲೂ ಗಲಾಟೆಯಾಗುತ್ತದೆ, ಎಲ್ಲಾ ಕಡೆಗಳಲ್ಲೂ ಬಂದೋಬಸ್ತು ಮಾಡಿಕೊಡಬೇಕು, ಇನ್ನೆಷ್ಟು ಜನಕ್ಕೆ ಫೈರಿಂಗ್ ಮಾಡಬೇಕು, ಕೃಷ್ಣಮೂರ್ತಿಗೆ ಹೇಗೆ ಹೊಡೆಸಬೇಕು? ಯಾರಿಗೇನು ಮಾಡಬೇಕು ಅಂತ ಪ್ಲಾನ್ ಮಾಡಿಕೊಳ್ಳಲಿಕ್ಕೆ ನೀವು ಅನೌನ್ಸ್ ಮಾಡಲಿಲ್ಲವಾ? ಯಾವ ಕಾರಣದಿಂದ ನೀವು ಹೇಳಲಿಲ್ಲ? ಮಾನ್ಯ ಅಧ್ಯಕ್ಷರೇ, STFನವರು ಕನಿಷ್ಠ ಪಕ್ಷ ಆ ಕ್ಯಾಸೆಟ್ ಬಂದ ಮೇಲಾದರೂ ಆ ಶವವನ್ನು ಹೋಗಿ ತೆಗೆದುಕೊಂಡು ಬರುವುದಕ್ಕೆ ಮಾಡಿರುವ ಕ್ರಮ ಎಷ್ಟೊಂದು ಅಮಾನವೀಯತೆಯಿಂದ ಕೂಡಿದೆ ಎಂಬ ಬಗ್ಗೆ ತಾವೇ ವಿಚಾರ ತರಿಸಿಕೊಳ್ಳಿ ಎಂದು ಈ ಸಂದರ್ಭದಲ್ಲಿ ನಾನಾದರೂ ಕೇಳಲಿಕ್ಕೆ ಬಯಸುತ್ತೇನೆ. ನಾಗಪ್ಪನವರು ಸತ್ತರು. ನಾಗಪ್ಪನವರ ಹತ್ಯೆಯಾಯಿತು. ಆದರೆ ಹೇಗೆ ಹತ್ಯೆಯಾಯಿತು? ಇದನ್ನು ತಿಳಿದುಕೊಳ್ಳುವಂತಹ ಹಕ್ಕು ನಮಗೆಲ್ಲಾ ಇದೆ. ಇಡೀ ರಾಜ್ಯದ ಜನತೆಗಿದೆ. ಒಂದು ಕಡೆ

ವೀರಪ್ಪನ್‌ನನ್ನು ಹಿಡಿದು ಅವನ ಅಟ್ಟಹಾಸವನ್ನು ಅಡಗಿಸುವುದು, ಬೇರೆಯವರು ನಾಗಪ್ಪ ಪರಿಮಳಾ ಆಗದಂತೆ ನೋಡಿಕೊಳ್ಳುವಂಥದ್ದು ಸರ್ಕಾರದ ಕರ್ತವ್ಯವೂ ಇದೆ ನಮ್ಮದೂ ಕರ್ತವ್ಯ ಇದೆ. ಈಗಾಗಲೇ ತಾವು ಹೇಳಿದ್ದೀರಿ ವೀರಪ್ಪನ್‌ನನ್ನು ನಾವು ಹಿಡಿಯುತ್ತೇವೆ ಅಂತ, ಹಿಡಿಯಿರಿ, ನಮ್ಮ ಸಹಕಾರ ಏನು ಬೇಕಾದರೂ ನಾವು ಮಾಡೋಣ. ಆದರೆ ಅವರು ಸತ್ತಿದ್ದು ಹೇಗೆ? ಇದರ ಬಗ್ಗೆ ನಮಗೆ ಗೊತ್ತಾಗಬೇಕಲ್ಲಾ ಸತ್ಯ ಹೊರಗಡೆ ಬರಬೇಕಲ್ಲಾ ಇದಕ್ಕೆ ಕಾರಣ ಯಾರು? ಇದು ಬಹಳ ಮುಖ್ಯವಾಗಿ ಇವತ್ತು ಸರ್ಕಾರದ ಮುಂದೆ ಇರತಕ್ಕಂತಹ ಪ್ರಶ್ನೆ. ಅವತ್ತು 9ನೇ ತಾರೀಖು ಗುಜರಾತಿನಲ್ಲಿ ಚುನಾವಣೆ ನಡೆಯುತ್ತಾ ಇತ್ತು. ನಮ್ಮ ಕೇಂದ್ರದ ಗೃಹಮಂತ್ರಿಗಳು ಸರ್ಟಿಫಿಕೇಟ್‌ನ್ನು ಕೊಡುತ್ತಾರೆ. ಸಾಯಂಕಾಲಕ ಏಳೂವರೆ ಗಂಟೆಗೆ ಸ್ಟಾರ್ ಟಿವಿಯಲ್ಲಿ ಬಂತು, ನಾನು ನೋಡಿದೆ ಮಾನ್ಯ ಅಧ್ಯಕ್ಷರೇ. ತಮಿಳುನಾಡು ಸರ್ಕಾರಕ್ಕೂ ನಾಗಪ್ಪನವರ ಕೊಲೆಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದು ಅದು ಹೇಗೆ ಅವರಿಗೆ ವೈರ್‌ಲೆಸ್ ಮೇಸೇಜ್ ತಲುಪಿತೋ ಏನು ತಲುಪಿತೋ ಅಂತೂ ಅಡ್ವಾನಿ ಸಾಹೇಬರು, ಕೇಂದ್ರದ ನಮ್ಮ ಮಾನ್ಯ ಗೃಹಮಂತ್ರಿಗಳು ಪ್ರಮಾಣವನ್ನು ಕೊಟ್ಟುಬಿಟ್ಟಿದ್ದಾರೆ. ತಮಿಳುನಾಡು ಸರ್ಕಾರಕ್ಕೂ ನಾಗಪ್ಪನವರ ಹತ್ಯೆಗೂ ಸಂಬಂದಾನೇ ಇಲ್ಲಾಂತ. ಅದ್ಯಾವ ವಿಚಾರಣೆ ಆ ಎರಡು ಗಂಟೆಯಲ್ಲಿ ಅವರು ಹೇಗೆ ಮಾಡಿಸಿದರು ಅಂತ ನನಗಂತೂ ಗೊತ್ತಿಲ್ಲ. ಯಾವುದರ ಮೂಲಕ ಎರಡು ಗಂಟೆಯಲ್ಲಿ ಮಾಡಿಸಿದರೋ ನನಗಂತೂ ಗೊತ್ತಿಲ್ಲ. ಅವರಿಗೆ ಮುಂಚಿತವಾಗಿ ಗೊತ್ತಿತ್ತೋ ಏನೋ ಅದು ಗೊತ್ತಿಲ್ಲ, ಏಕೆಂದರೆ ಅವರಿಗೆ ಬಹಳ ದೊಡ್ಡ ಮೆಷಿನರಿ ಇದೆ. ಆದಾದಮೇಲೆ ನಮ್ಮ ಕರ್ನಾಟಕದ ಪೊಲೀಸ್ ಅಧಿಕಾರಿಗಳೂ ಇವತ್ತಿನ ದಿವಸ ನಮಗೂ ಸಹಿತ ಆ ಸಾವಿಗೂ ನಮಗೂ ಏನೂ ಸಂಬಂಧ ಇಲ್ಲವೆಂದು ಹೇಳಿಬಿಟ್ಟಿದ್ದಾರೆ. ಆದಾದಮೇಲೆ ನಮ್ಮ ಜ್ಯೋತಿಪ್ರಕಾಶ್ ಮಿರ್ಜಿಯವರು ಒಂದು ಹೇಳಿಕೆಯನ್ನು ಕೊಟ್ಟುಬಿಟ್ಟಿದ್ದಾರೆ. ನಮಗೂ ಆ ಸಾವಿಗೂ ಯಾವುದೇ ರೀತಿ ಸಂಬಂಧವೇ ಇಲ್ಲವೆಂದು ಹೇಳಿಬಿಟ್ಟಿದ್ದಾರೆ. "We have nothing to do with that." ಎಂದು ಹೇಳಿದ್ದಾರೆ. ನಾನು ಅವತ್ತು ಊರಿನಲ್ಲಿ ಇರಲೇ ಇಲ್ಲ. That is correct. ಅವರು ಇರಲಿಲ್ಲ. ನಾನು ಅದೇ ಹೇಳುತ್ತಿರುವುದು. ಅವರು ಊರಲ್ಲಿ ಇರಲಿಲ್ಲ. ಹಾಗಾದರೆ ನಾಗಪ್ಪ ಅವರೇ ಗುಂಡು ಹಾಕಿ ಕೊಂದುಕೊಂಡುಬಿಟ್ಟರೇ? ನಾಗಪ್ಪ ಅವರೇ ಪಿಸ್ತೂಲನ್ನು ತೆಗೆದುಕೊಂಡು, ಕೊಡಪ್ಪ ಇಲ್ಲಿ ನಿನಗೇಕೆ ತೊಂದರೆ ನನ್ನನ್ನು ಏಕೆ ಹೊತ್ತುಕೊಂಡು ಹೋಗುವ ತೊಂದರೆ ಎಂದು ಹೇಳಿ ಹಾಗೆ ಮಾಡಿಕೊಂಡರೇ? ನಾನು ತಿಳಿದುಕೊಂಡು ಹಾಗೆ ಅವರಿಗೆ ನಡೆಯುವುದಕ್ಕೆ ಆಗುತ್ತಿರಲಿಲ್ಲ. ಆ ಸೇತುಕುಳಿ ಗೋವಿಂದನ್ ಹೆಗಲಮೇಲೆ ಇವರು ಅನೇಕ ಸಂದರ್ಭದಲ್ಲಿ ಮಗು ಹೋದ ಹಾಗೆ ಹೋಗುತ್ತಿದ್ದಂತೆ ಬೆನ್ನನ್ನು ಮೇಲೆ ಹತ್ತಿಕೊಂಡು. ಹಾಗಾದರೆ ಅವರೇ ವೀರಪ್ಪನ್ ಹತ್ತಿರವೋ ಸೇತುಕುಳಿ ಗೋವಿಂದನ್ ಹತ್ತಿರವೋ ಚಂದ್ರೇಗೌಡರ ಹತ್ತಿರವೋ, ಚಂದ್ರೇಗೌಡರು ಎಂದರೆ ಅವರು ಮಾನ್ಯ ಚಂದ್ರೇಗೌಡರೇ. ಅವರ ಹತ್ತಿರ ಬಂದೂಕನ್ನು ತೆಗೆದುಕೊಂಡು ಅವರೇ ಗುಂಡನ್ನು ಹಾಕಿ ಕೊಂದುಕೊಂಡುಬಿಟ್ಟರಾ ಅಥವಾ ಯಾವುದಾದರೂ ಬೇರೆ ಫೋರ್ಸಸ್ ಬಂದು ನಾಗಪ್ಪನವರನ್ನು ಕೊಂದುಬಿಟ್ಟಿತಾ ಅಥವಾ ಯಾರಾದರೂ ಒಬ್ಬ ಮಂತ್ರಗಾರ ದೂರದಲ್ಲಿ ಕುಳಿತುಕೊಂಡು ಒಂದು ಬಾಣ ಬಿಟ್ಟುಬಿಟ್ಟನಲ್ಲಾ ರಾಮಾಯಣ, ಮಹಾಭಾರತದಲ್ಲಿ ನಾವು ಕೇಳುತ್ತೇವಲ್ಲಾ ಆ ರೀತಿಯೇನಾದರೂ

ಗುಂಡನ್ನು ಬಿಟ್ಟು ನಾಗಪ್ಪನವರನ್ನು ಕೊಂದರೇ? ಈ ವಿಷಯದಲ್ಲಿ ಸರ್ಕಾರ ಸೂಕ್ಷ್ಮತ್ರೆಯನ್ನು ತೋರಿಸುತ್ತಿಲ್ಲ ಎನ್ನತಕ್ಕಂಥದ್ದು ನಮ್ಮ ಒಂದು ಕೋಪ. ನಮ್ಮ ಸಿಟ್ಟೇನು ಇದೆ ಮಾನ್ಯ ಅಧ್ಯಕ್ಷರೇ, ನಮ್ಮ ಸಿಟ್ಟು ಸರ್ಕಾರದ ಮೇಲೆ, ನಿಮ್ಮ ಮೇಲೆ, ಗೃಹಮಂತ್ರಿಗಳ ಮೇಲೆ, ನಮ್ಮ ಸಿಟ್ಟಿಗೆ ಕಾರಣ ನೋವಿದೆ ಎಂದು ತಾವು ಅರ್ಥ ಮಾಡಿಕೊಳ್ಳಬೇಕು. ನಾವೆಲ್ಲರೂ ನಾಗಪ್ಪನವರ ಕುಟುಂಬದ ಸದಸ್ಯರಿದ್ದಹಾಗೆ. ಕನಿಷ್ಟಪಕ್ಷ ಯಾವುದಾದರೂ ಒಂದು ಆಕ್ಸಿಡೆಂಟ್‌ನಲ್ಲಿ ಒಬ್ಬರು ಯಾರಾದರೂ ಸತ್ತರೆ ಮಹಜರ್ ಮಾಡುತ್ತೀರಿ. ಯಾವ ಯಾವ direction ನಲ್ಲಿ ಇತ್ತು ಎನ್ನುವುದನ್ನು ಯಾರದಾದರೂ ದೊಡ್ಡ ಮನುಷ್ಯರ ನಾಯಿ ಸತ್ತುಹೋಗಿಬಿಟ್ಟರೂ ಸಹಾ accident ನಲ್ಲಿ ಸತ್ತುಹೋದರೆ ಅಯ್ಯೋ ನನ್ನ ಅಲ್ಸೇಸಿಯನ್ ಡಾಗ್ ಎಂದು ಹೇಳಿ ಆ ನಾಯಿಗೆ ಮಹಜರ್ ಮಾಡಿರುವುದೂ ನನಗೆ ಗೊತ್ತಿದೆ. ಆ ನಾಯಿ ಸತ್ತಾಗ ಯಾವ ರೀತಿ ಸಾಯಿತು ಎಂದು ಮಹಜರ್ ಮಾಡತಕ್ಕಂಥವರು ನಾಗಪ್ಪನವರು ಈ ರಾಜ್ಯಕ್ಕೋಸ್ಕರ ಪ್ರಾಮಾಣಿಕವಾಗಿ ದುಡಿದಿರತಕ್ಕಂಥ ಒಬ್ಬ ವ್ಯಕ್ತಿ ರಾಜ್ಯದ ರಕ್ಷಣೆಯ ವೈಫಲ್ಯದಿಂದಾಗಿ ಒಬ್ಬ ನರಹಂತಕನ ಗುಂಡಿಗೆ ಬಲಿಯಾಗಿರುವ ಸಂದರ್ಭದಲ್ಲಿ, ಅವನ ಭೇಟಿಗೆ ಬಲಿಯಾಗಿರುವ ಸಂದರ್ಭದಲ್ಲಿ ನೀವು ನಡೆದುಕೊಂಡಿರುವ ರೀತಿನೀತಿಗಳು ಈ ಸರ್ಕಾರಕ್ಕೆ ಶೋಭೆಯನ್ನು ತರತಕ್ಕಂಥದ್ದಾ? ಇದು ನಮ್ಮ ಮುಂದೆ ಇರುವ ಬಹಳ ಮುಖ್ಯವಾಗಿರತಕ್ಕಂಥ ಪ್ರಶ್ನೆ. ಇದಕ್ಕೆ ಸರ್ಕಾರ ಉತ್ತರವನ್ನು ಕೊಡಬೇಕೆಂದು ಹೇಳಿ ನಾನು ಒತ್ತಾಯವನ್ನು ಮಾಡುವುದರ ಜೊತೆಗೆ ಇವತ್ತು ಕರ್ನಾಟಕ ಸರ್ಕಾರ ಅಲ್ಲ, ತಮಿಳುನಾಡು ಸರ್ಕಾರ ಅಲ್ಲ, ವೀರಪ್ಪನ್ ಅಲ್ಲ, ನಾಗಪ್ಪನವರಂತೂ ಅಲ್ಲವೇ ಅಲ್ಲ, ಹಾಗಾದರೆ ಯಾರು ಕೊಂದರು? ಈ ಪ್ರಶ್ನೆಗಳಿಗೆ ಉತ್ತರವನ್ನು ಯಾರು ಹುಡುಕತಕ್ಕಂಥದ್ದು? ತಾವು ಜ್ಯುಡಿಷಿಯಲ್ ಪ್ರೋಬ್‌ಗೆ ಕೊಟ್ಟಿದ್ದೀರಿ. ಒಂದು ಏನೆಂದರೆ ನಮ್ಮ ಪುಣ್ಯ ನ್ಯಾಯಾಂಗ ತನಿಖೆಗೆ ಕೊಟ್ಟರೂ ಸಹಿತ ನಮ್ಮ ಮಂತ್ರಿಗಳು ಮತ್ತು ತಾವು ಇನ್ನೂ ಆ ನ್ಯಾಯಾಧೀಶರನ್ನು ನೇಮಕ ಮಾಡದೇ ಇರುವುದರಿಂದಾಗಿ ಮುಕ್ತವಾಗಿ ಮಾತನಾಡುವುದಕ್ಕೆ ನಮಗೆ ಒಂದು ಅವಕಾಶ ಸಿಕ್ಕಿದೆ ಎನ್ನುವುದು. ಅಷ್ಟರಮಟ್ಟಿಗೆ ನಾನು ಅದನ್ನು ಒಪ್ಪುತ್ತೇನೆ. ಅದು ಬಿಟ್ಟರೆ ನೀವು ನಡೆದುಕೊಂಡಿರತಕ್ಕಂಥ ರೀತಿ ನೀವು ನಾಗಪ್ಪನವರಿಗೆ ಕೊಡತಕ್ಕಂಥ ಗೌರವ ಇರಲಿ, ನಾಗಪ್ಪನ ದೇಹಕ್ಕೆ ಕೊಟ್ಟಿರುವಂಥ ಗೌರವ, ಅವರ ಕುಟುಂಬದ ಸದಸ್ಯರ ಪಾಡಂತೂ ನೋಡುವುದಕ್ಕಾಗುವುದಿಲ್ಲ. ಅದೊಂದು ಗೋಳಿನ ಕತೆ. ನಾನು ಅವತ್ತು ಶ್ರದ್ಧಾಂಜಲಿ ಹೇಳುವ ಸನ್ನಿವೇಶದಲ್ಲಿ ಹೇಳಿದೆ. ಯುದ್ಧದಲ್ಲೂ ಸಹಿತ ಶತ್ರುಪಾಳಯದಲ್ಲಿರತಕ್ಕಂಥವನನ್ನು ಕೊಂದರೆ ಅವನ ಶವನ್ನು ಆ ದೇಶಕ್ಕೆ ಕಳುಹಿಸುವಂಥ ಸೌಜನ್ಯತೆಯನ್ನು ನಾವು ಮಾಡುತ್ತೇವೆ. ಆದರೆ ಈ ಸಂದರ್ಭದಲ್ಲಿ ಅದೂ ಸಹಿತ ಆಗಲಿಲ್ಲವೆನ್ನುವ ನೋವು ನಮ್ಮನ್ನು ಕಾಡುತ್ತಿದೆ ಮಾನ್ಯ ಅಧ್ಯಕ್ಷರೇ ಇದಾದಮೇಲೆ ಆ ಸ್ಥಳದಲ್ಲಿ ಏನೇನು ಸಿಕ್ಕಿತು ಮತ್ತು ಈಗ ಅದಕ್ಕೆ ಪ್ರಾಯಶ್ಚಿತ್ತ ಏನು ಈ ಸರ್ಕಾರಕ್ಕೆ ಇದಕ್ಕೆ ತಪ್ಪಿತಸ್ಥರು ಯಾರು ಎನ್ನುವುದನ್ನು ನಾನು ಮಧ್ಯಾಹ್ನದ ನಂತರದ ಭಾಷಣದಲ್ಲಿ ನಾನು ತಿಳಿಸುವವನಿದ್ದೇನೆ. ತಾವು ಬಹಳ ಮುಖ್ಯವಾಗಿ ಸರ್ಕಾರದವರು ಬಹಳ ಗಂಭೀರವಾಗಿ ನಾನು ಹೇಳಿರತಕ್ಕಂಥ ವಿಚಾರಗಳ ಕಡೆಗೆ ಗಮನವನ್ನು ಕೊಡುವುದರ ಜೊತೆಗೆ ಈ ಎಲ್ಲಾ ಪ್ರಶ್ನೆಗಳಿಗೂ ಸಹಿತ ನಾನು ಉತ್ತರವನ್ನು ಬಯಸಿ ನನ್ನ ಭಾಷಣವನ್ನು ಊಟದ ನಂತರ ಮುಂದುವರೆಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಕೆಲವು ವಿಚಾರಗಳನ್ನು ಅವರು ಗಂಭೀರವಾಗಿ ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಬಹಳ ಮುಖ್ಯಾವಾದುದು ಒಂದು ಕೊಳತ್ತೂರು ಮಣಿಯ ವಿರುದ್ಧ ಆಗಿರತಕ್ಕಂಥ ತೀರ್ಪಿನ ಮೊಕದ್ದಮೆಗಳಿಗೆ ಏನು ತೀರ್ಮಾನವಾಯಿತು, ಅದರ ಮೇಲೆ ಅಪೀಲ್ ಹಾಕಿಲ್ಲ ಎಂದು ಕೇಳಿದ್ದಾರೆ, ಯಾವ ಕೇಸ್ ನಂಬರ್ ಎಂದು ಕೊಟ್ಟರೆ ನಾನು ಅದರ ಮೇಟೀರಿಯಲ್‌ನ್ನು ತರಿಸಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೇ, ನಾನೇನು ಮಾತನಾಡಿದ್ದೇನೆ, ಇದನ್ನು ನಾನು ಮಾನ್ಯ ಮುಖ್ಯಮಂತ್ರಿಗಳೂ, ಗೃಹಮಂತ್ರಿಗಳಿಗೂ ಕಳುಹಿಸಿಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಜವಾಬ್ದಾರಿಯಿಂದ ಮಾತನಾಡೋಣ. ಕೊಳತ್ತೂರು ಮಣಿಯ ವಿರುದ್ಧ ಯಾವ ಕೋರ್ಟಿನಲ್ಲೂ ಯಾವ ದಾವಾಗೂ ಶಿಕ್ಷೆ ವಿಧಿಸಿಲ್ಲ. ಅದರ ಮೇಲೆ ಅಪೀಲು ಹಾಕುವುದಕ್ಕೆ ಅದಕ್ಕೆ ಯಾವ ನಂಬರ್ ಎಂದು ಕೇಳಿದೆ. ಈಗ ಹಾಕುತ್ತೀರೋ ಬಿಡುತ್ತೀರೋ? ನೇರವಾಗಿ ನಾವು ಸುಪ್ರೀಂ ಕೋರ್ಟಿಗೆ ಹೋಗಬೇಕು. ಟಾಡಾ ಕೇಸ್‌ನಲ್ಲಿ ಕೆಳಗಡೆ ಸೆಷನ್ಸ್ ಕೋರ್ಟಿನಲ್ಲಿ ಆದರೆ ಸುಪ್ರೀಂ ಕೋರ್ಟಿಗೆ ಹೋಗಬೇಕು. ಆದ್ದರಿಂದ ಆ ನಂಬರನ್ನು ಕೊಟ್ಟರೆ at least I can provide him the materials.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಆ ಡೀಟೈಲ್ಸ್ ಎಲ್ಲಾ ಕೊಡುತ್ತಾರೆ.

ಉಪಾಧ್ಯಕ್ಷರು : ಈಗ ಸದನವನ್ನು ಮಧ್ಯಾಹ್ನ ಎರಡೂವರೆ ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 1-26 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ ಎರಡೂವರೆ ಗಂಟೆಗೆ ಪುನಃ ಸಮಾವೇಶಗೊಳ್ಳಲು ನಿರ್ಧರಿಸಿತು).

(ಸದನವು ಪುನಃ 2 ಗಂಟೆ 50 ನಿಮಿಷಕ್ಕೆ ಸಮಾವೇಶಗೊಂಡಿತು. ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ ಹೆಚ್. ತಹಸೀಲ್ದಾರ್)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಉಪಾಧ್ಯಕ್ಷರು : ಮಾನ್ಯ ಸಿಂಧ್ಯಾರವರೆ, ತಮ್ಮ ಭಾಷಣವನ್ನು ಮುಂದುವರೆಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೆ, ನಾನು ಬೆಳಿಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ಮಾನ್ಯ ಕಾನೂನು ಮಂತ್ರಿಗಳು ನಾವು ಕೊಳತ್ತೂರು ಮಣಿ ಮೇಲೆ ಕೇಸು ಹಾಕಿರತಕ್ಕದ್ದನ್ನು ಅದಕ್ಕೆ ಕೆಲವು ವಿವರಣೆಗಳನ್ನು, ಸ್ಪಷ್ಟತೆಯನ್ನು ಕೊಡಬೇಕು ಎನ್ನುವ ಮಾತನ್ನು ನನಗೆ ಹೇಳಿದ್ದಾರೆ. ನಾನು ಹೇಳತಕ್ಕಂಥದ್ದು ಕೊಳತ್ತೂರು ಮಣಿ ಮೇಲೆ ಡಾಟಾ ಕೇಸು ಆಗಿರತಕ್ಕಂಥದ್ದು, ಇನ್‌ಸಿಡೆಂಟ್ ಆಗಿರತಕ್ಕಂಥದ್ದು 1993, ಆದಾದಮೇಲೆ ಟ್ರಯಲ್ ಆಯಿತು ಟಾಡಾ ಸ್ಪೆಶಲ್ ಕೋರ್ಟ್‌ನಲ್ಲಿ ಅಕ್ವಿಟ್ ಆಯಿತು ಅವನದ್ದು. ಅಲ್ಲಿ ಯಾರೋ ಒಬ್ಬ ಅಬ್‌ಸ್ಕಾಂಡರ್ ಎಂದು ಹೇಳಿ ಬಹುಶಃ ಯಾರೋ ನಾಲ್ಕೈದು ಜನರನ್ನು ತೋರಿಸಿದರು. ನೀವು ಆ ಟಾಡಾ ಕೋರ್ಟ್‌ನಲ್ಲಿ ಅಕ್ವಿಟ್ ಆದಮೇಲೆ ಸಂಬಂಧಪಟ್ಟಂಥ ಕೋರ್ಟ್‌ಗೆ ಕರ್ನಾಟಕ ಸರ್ಕಾರದಿಂದ ಈ ಅಕ್ವಿಟ್ ಆಗಿರತಕ್ಕದ್ದು ಸರಿಯಲ್ಲವೆಂದು ಹೋಗಬಹುದಾಗಿತ್ತು. If you really find that Kolathur Mani was a criminal ಕೊಳತ್ತೂರು ಮಣಿಯ ಮೇಲೆ

ಟಾಡಾದವರು ಕ್ಷಮಾಪಣೆಯ ಕೇಸನ್ನು ಖುಲಾಸ್ ಮಾಡಿರತಕ್ಕದ್ದು ಸರಿಯಲ್ಲ ಎಂದರೆ, ಹೈಯರ್ ಕೋರ್ಟ್‌ಗೆ ನೀವು ಹೋಗಿರಲಿಲ್ಲ, This is number one number two ಈ ರೀತಿ ಕೊಳತ್ತೂರು ಮಣಿ ಕ್ಯಾರೆಕ್ಟರ್‌ಸ್ಟಿಕ್ಸ್ ಇದ್ದಮೇಲೆ ನೀವು ಅಷ್ಟೊಂದು ಪವಿತ್ರವಾಗಿ ಸರ್ಕಾರದ ಪಾವಿತ್ರತೆಯನ್ನು ಉಳಿಸಿಕೊಳ್ಳಬೇಕು ಎನ್ನತಕ್ಕಂಥ ಮನೋಭಾವ ಇದ್ದರೆ ಏಕೆ ನೀವು ಕೊಳತ್ತೂರು ಮಣಿಯನ್ನು ರಾಜಕುಮಾರ್ ಬಿಡುಗಡೆಗೆ ಉಪಯೋಗಿಸಿಕೊಂಡಿರಿ? ಆಗ ಬಹಳ ಜನ ಎಮಿಸರೀಸ್ ಇದ್ದರು. ನನಗೆ ಗೊತ್ತಿರುವಂತೆ ನೆಡುಮಾರನ್ I have been told ಬಹಳ ಒಳ್ಳೆಯವರು ಎನ್ನತಕ್ಕದನ್ನು ಕೇಳಿದ್ದೇನೆ, ಸ್ವಾತಂತ್ರ್ಯ ಹೋರಾಟಗಾರರು ಎಂದು ಕೇಳಿದ್ದೇನೆ. ಅವರ idealogist extremist ಇರಬಹುದು, ಆದರೆ he is for human values ಎನ್ನತಕ್ಕದ್ದನ್ನು ನಾನು ಕೇಳಿದ್ದೇನೆ. ಅಂಥವರನ್ನು ಉಪಯೋಗಿಸಿಕೊಳ್ಳಬಹುದಾಗಿತ್ತು ನೀವು, ನೀವು ಬೇಕಾದಷ್ಟು ಜನರನ್ನು ಉಪಯೋಗಿಸಿ ಕೊಂಡಿದ್ದೀರಿ, ಅದರ ಬಗ್ಗೆ ನಾವು ತಕರಾರನ್ನು ಎತ್ತಲಿಲ್ಲ, ಡಾ।। ಭಾನುರವರನ್ನು ನೀವು ಕಳುಹಿಸಿದ್ದೀರಿ. ನಕ್ಕೀರನ್ ಗೋಪಾಲನ್ ಬಗ್ಗೆಯೂ ಆ ಸಂದರ್ಭದಲ್ಲಿ ವಿರೋಧ ಪಕ್ಷದವರೇನೂ ತಕರಾರು ಹತ್ತಿರಲಿಲ್ಲ. ಮಣಿ ಬಗ್ಗೆಯೂ ಸಹಿತ ನಮ್ಮ ತಕರಾರೇನೂ ಇರಲಿಲ್ಲ. ರಾತ್ರೋರಾತ್ರಿ ನಿಮ್ಮ ಎಸ್.ಟಿ.ಎಫ್ ಚೀಫ್ ಯಾರಿದ್ದರು ಅವರಿಗೆ ಕೊಳತ್ತೂರು ಮಣಿ ಮೇಲೆ ಏಕೆ ಸಿಟ್ಟು This is the most Himalayan blunders that the STF Chief has committed according to me. ನೀವು ಕೊಳತ್ತೂರು ಮಣಿ ಮೇಲೆ ಈ ಕೇಸುಗಳನ್ನು ಹಾಕದೆ ಹೋಗಿದ್ದರೆ ಬಹುಶಃ ಇವತ್ತು ನಾಗಪ್ಪನವರು ಬದುಕಿರುತ್ತಿದ್ದರು. ನೀವು ಹಾಕಿರತಕ್ಕದ್ದು ಫಾಲ್ಸ್ ಕೇಸು. ಆ ಫಾಲ್ಸ್ ಕೇಸನ್ನು ವಿತ್‌ಡ್ರಾ ಮಾಡಿಕೊಳ್ಳುವುದಕ್ಕೆ ನಿಮಗೆ ವಿರೋಧ ಪಕ್ಷದವರೆಲ್ಲರ ಸಹಕಾರ ಬೇಕು. ಏಕೆ ಬೀಕು? You were convinced about your false cases ಬೇಕಾದಷ್ಟು ಸಂದರ್ಭಗಳಲ್ಲಿ, ನೀವು ಒಂದು ಹದಿನೈದು ದಿನ ಕೋರ್ಟ್ ಮುಂದೆ ಹೋಗಿ ಈ ರೀತಿ ಕ್ರೈಸೀಸ್ ಇದೆ It is the maintenance of law and order ಎಂದು ಹೇಳಬಹುದಾಗಿತ್ತು. ಎಲ್ಲಿತ್ತು ಸರ್ಕಾರ ಹೇಳಿ? ನಾಗಪ್ಪನವರ ಹತ್ಯೆಯಾದ ಮೇಲೂ ಮೂರ್‍ನಾಲ್ಕು ದಿವಸ ಸರ್ಕಾರ ಕರ್ನಾಟಕದಲ್ಲಿ ಇರಲಿಲ್ಲ. ಸತ್ತಿತ್ತು ಎಂದು ನಾನು ಹೇಳುತ್ತೇನೆ. ಪೊಲೀಸ್ ಇಲ್ಲ, ಹಣಕಾಸಿನ ವ್ಯವಸ್ಥೆ ಇಲ್ಲ, ಮತ್ತೊಂದಿಲ್ಲ, ಸರ್ಕಾರ ಜೀವಂತವಾಗಿರಲಿಲ್ಲ. ಆ ಸಂದರ್ಭದಲ್ಲಿ ನಾನು ಕೇಳುತ್ತಿರತಕ್ಕಂಥದ್ದು, ನೀವು ಕೋರ್ಟ್ ಮುಂದೆ ಹೋಗಿ ಒಂದು ಹದಿನೈದು ದಿನ ಕೊಳತ್ತೂರು ಮಣಿಯನ್ನು ರಿಲೀಸ್ ಮಾಡಿಸಲಿಕ್ಕೆ ನೀವೇಕೆ ಡಿಲೇ ಮಾಡಿಸಿದರಿ? ನೀವು ಅಟೆಮ್ಪ್ಟ್ ಮಾಡಲಿಲ್ಲ ಎಂದು ನಾನು ಯಾವ ಬಾಯಿಯಿಂದ ಹೇಳಲಿ. ಕೊನೆಯಲ್ಲಿ ನೀವು ಅಟೆಮ್ಪ್ಟ್ ಮಾಡಿದ್ದೀರಿ, ಇದೇ ಅಟೆಮ್ಪ್ಟ್‌ನ್ನು ಪ್ರಾರಂಭದಲ್ಲಿ ಮಾಡಿದ್ದಿದ್ದರೆ ಯಾವ ಲೈಫ್‌ನ್ನು ಕಾಂಪನ್‌ಸೇಟ್ ಮಾಡಲು ಆಗುವುದಿಲ್ಲ ಆ ಲೈಫ್‌ನ್ನು ಇವತ್ತು ಬದುಕಿಸಬಹುದಾಗಿತ್ತು. ಈ ಮಧ್ಯದಲ್ಲಿ ನಮ್ಮ ಮುಖ್ಯ ಮಂತ್ರಿಗಳಿಗೆ ಯಾವ ಪ್ರೇರಣೆ ಬಂತೋ ಗೊತ್ತಾಗಲಿಲ್ಲ, ಯಾರು ಇದನ್ನು ಹೇಳಿಕೊಟ್ಟರೋ, ನನಗಂತೂ ಗೊತ್ತಿಲ್ಲ, ಅಡ್ವೈಸರ್ಸ್ ಯಾರು ಎಂದು ಗೊತ್ತಿಲ್ಲ. ಆ ಸಂದರ್ಭದಲ್ಲಿ, ಒಸಮಾಬಿನ್ ಲಾಡೇನ್‌ನನ್ನು ಅಮೇರಿಕಾ ಹಿಡಿಯಲು ಆಗಲಿಲ್ಲ ಇನ್ನು ವೀರಪ್ಪನ್‌ನನ್ನು ನಾನು ಹಿಡಿಯಲು ಆಗುತ್ತದೆಯೇ ಎಂದು ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳು

ಕೊಟ್ಟರು. ಅಂದರೆ ಒಸಮಾಬಿನ್ ಲಾಡೇನ್ ವೀರಪ್ಪನ್ ಒಂದೇ ಎನ್ನುವ ದೃಷ್ಟಿಯಿಂದಾಗಿ ಈ ರಾಜ್ಯದ ಮುಖ್ಯಮಂತ್ರಿಗಳು ಈ ರಾಜ್ಯದ ಎಲ್ಲರನ್ನೂ ರಕ್ಷಣೆ ಮಾಡತಕ್ಕವರ ಬಾಯಿಯಲ್ಲಿ ನಿರೀಕ್ಷೆ ಮಾಡತಕ್ಕ ಮಾತೇ ಇದು? ದಯವಿಟ್ಟು ಮುಖ್ಯಮಂತ್ರಿಗಳು ಇದರ ಬಗ್ಗೆ ಯೋಚನೆ ಮಾಡಬೇಕು. ಇದನ್ನು ನಾನು ಖಂಡಿಸುತ್ತೇನೆ. ಈ ರೀತಿ ಯಾವುದೇ ಕಾರಣಕ್ಕೂ ಸಹಿತ ಹೇಳಬಾರದು. ಒಸಮಾಬಿನ್ ಲಾಡೇನನ್ನು ಅಮೇರಿಕಾ ಹಿಡಿಯಲು ಆಗಲಿಲ್ಲ ಇನ್ನು ಕರ್ನಾಟಕ ಸರ್ಕಾರ ವೀರಪ್ಪನ್ ನನ್ನ ಹಿಡಿಯಲು ಸಾಧ್ಯವೇ ಅಂದರೆ ಹೇಗೆ? ಒಸಮಾಬಿನ್ ಲಾಡೇನ್ ಜೊತೆ ಅಮೇರಿಕಾ ಇದುವರೆಗೆ ಯಾವುದೇ ಸಂಧಾನವನ್ನು ಮಾಡುವುದಕ್ಕಾಗಿಲ್ಲ ನನಗೆ ತಿಳುವಳಿಕೆ ಇರುವಂತೆ ಮಾನ್ಯ ರೋಶನ್‌ಬೇಗ್‌ರವರೇ ಅಮೇರಿಕಾ ಸರ್ಕಾರದವರು ಏನಾದರೂ ಮಾಡಿದ್ದಾರಾ? ಮಾಡಿಲ್ಲ, ಒಸಮಾಬಿನ್ ಲಾಡೇನ್ ಜೊತೆಯಲ್ಲಿ ಹಾಗಾದರೆ, ನೀವು ವೀರಪ್ಪನ್ ಜೊತೆಯಲ್ಲಿ ಹೇಗೆ ಸಂಧಾನವನ್ನು ಮಾಡಿದಿರಿ? ಎರಡು ವರ್ಷದ ಹಿಂದೆ ನೀವು ವೀರಪ್ಪನ ಜೊತೆಯಲ್ಲಿ ಹೇಗೆ ಸಂಧಾನ ಮಾಡಿದಿರಿ? ವೀರಪ್ಪನ್‌ನ್ನು ಹಿಡಿಯಲು ಆಗುವುದಿಲ್ಲ ಏಕೆಂದರೆ ಅವನು ಒಸಮಾಬಿನ್ ಲಾಡೇನ್ ಅವನ ಜೊತೆ ಹೇಗೆ ಸಂಧಾನ ಮಾಡಿದಿರಿ ನೀವು? ನಿಮಗೆ ಸಂಧಾನ ಮಾಡಲು ಎಲ್ಲಾ ಸಿದ್ದತೆಗಳು ಸಿಕ್ಕಿತು ಏಕೆಂದರೆ ನಿಮ್ಮ ಅಧಿಕಾರ ಸ್ಥಾನ ಹೊರಟು ಹೋಗುತ್ತದೆ ಎಂಬ ಭಯ ಇಡೀ ರಾಜ್ಯದಲ್ಲಿ ಆವತ್ತು ಆವರಿಸಿಕೊಂಡಿತ್ತು. ನಾಗಪ್ಪನವರ ಪ್ರಾಣ ಇಂಪಾರ್ಟೆಂಟ್ ಅಲ್ಲ ಬೇರೆಯವರ ಪ್ರಾಣ ಮಾತ್ರ ನಿಮಗೆ ಬಹಳ ಇಂಪಾರ್ಟೆಂಟು. ನಿಮ್ಮ ಕ್ರೂರವಾದ ಮನಸ್ಸು, ಅದರ ಪ್ರಕಾರವೇ ನಿಮ್ಮ ಪೊಲೀಸ್‌ನವರೂ ಸಹಿತ ನಡೆದುಕೊಂಡಿದ್ದಾರೆ. ನಿಮಗೆ ಐದನೇ ಕ್ಯಾಸೆಟ್ ಬಂದಾಗ, ನಿಮ್ಮ ಹತ್ತಿರ ತೆಗೆದುಕೊಂಡು ಬಂದಾಗ ನೀವು ಏನು ಹೇಳುತ್ತೀರೆಂದರೆ ಆ ಬಿ.ಕೆ. ಚಂದ್ರಶೇಖರ್ ಮಂತ್ರಿಗಳ ಹತ್ತಿರ ತೆಗೆದುಕೊಂಡು ಕೊಡಿ ಎಂದು ಹೇಳುತ್ತೀರಿ ನನಗೆ ಕೇಳಲು ಟೈಮ್ ಇಲ್ಲವೆಂದು ಹೇಳುತ್ತೀರಿ ಹೌದು, ನಿಮಗೆ ಬೇಕಾದಷ್ಟು ಕೆಲಸ ಇರಬಹುದು, ನಾನು ಇಲ್ಲ ಎಂದು ಹೇಳುವುದಿಲ್ಲ, ಹಾಗಾದರೆ, ಇದನ್ನು ಬೇರೆ ಅಪಹರಣದ ಸಂದರ್ಭದಲ್ಲಿ ಕ್ಯಾಸೆಟ್‌ನ್ನು ನೀವೇ ಕುಳಿತುಕೊಂಡು ಕೇಳುತ್ತಿದ್ದಿರಲ್ಲಾ? ನಾಗಪ್ಪನವರ ಕ್ಯಾಸೆಟ್ ಬಂದಾಗ ಏಕೆ ಈ ತಿರಸ್ಕಾರದ ಮನೋಭಾವ? ಆಕ್ರೂರವಾದ ಮನಸ್ಸು ಏಕೆ? ಆಗ ಏಕೆ ನಿಮ್ಮ ಮನಸ್ಸು ಬಹಳ ಸ್ಪಷ್ಟವಾಗಿತ್ತು? ಇದೆಲ್ಲಾ ಆದಮೇಲೆ, ಈ ಕ್ರೂರವಾದ ಮನಸ್ಸಿನ ಸರ್ಕಾರ ಮತ್ತು ಮುಖ್ಯ ಮಂತ್ರಿಗಳು ಪೊಲೀಸ್‌ನವರು ನಡೆದುಕೊಂಡಿರತಕ್ಕಂಥ ರೀತಿ, ನಿಮಗೆ ಆವತ್ತು ಅವರ ದೇಹ ಸಿಕ್ಕಿತು. ಪೊಲೀಸ್‌ನವರಿಗಲ್ಲಾ ಸಿಕ್ಕಿದ್ದು, ಆ ಎಸ್.ಟಿ.ಎಫ್. ನ ಒಂದಿಬ್ಬರು ಅಧಿಕಾರಿಗಳು ಇದ್ದರು ಅಷ್ಟೆಯೇ? ನೂರು ಇನ್ನೂರು ಜನ, ನಾಗಪ್ಪನವರ ಅಳಿಯ ಕಿರಣ್ ಪಟೇಲ್, ನಾಗಪ್ಪನವರ ಅಭಿಮಾನಿಗಳು, ಕಾರ್ಯಕರ್ತರು ಹುಡುಕಿಕೊಂಡು ಹೋದರು. ಆರನೇ ಕ್ಯಾಸೆಟ್‌ನಲ್ಲಿ ಬಂದಿದ್ದಂಥ ವಿವರಣೆಗಳ ಮೇಲೆ, ಇಂಥ ಚಂಗಡಿ ಅರಣ್ಯದಲ್ಲಿ ಇಂಥ ಕಡೆ ಈ ಡೈರೆಕ್ಷನ್‌ನಲ್ಲಿ ಹೋದರೆ, ಇಂಥ ಕಡೆ ಹೋದರೆ ಅಲ್ಲಿ ಬಿದ್ದಿರಬಹುದು ಎಂದು ಹೇಳಿ, ಸಾಯಂಕಾಲ ಐದು ಗಂಟೆಗೆ ದೇಹ ಸಿಗುತ್ತದೆ. ಆಗ ಪೊಲೀಸ್‌ನವರು ಏನು ಮಾಡಬೇಕಾಗಿತ್ತು? ಪೊಲೀಸ್‌ನವರು ಬೇರೆ ಮರ್ಡ್‌ರ್ ಕೇಸ್‌ನಲ್ಲಿ ಏನು ಮಾಡಿದ್ದಾರೆ? ಬೇರೆ ಮರ್ಡ್‌ರ್ ಕೇಸ್ ಆಗಿದ್ದರೆ ಅಲ್ಲೇ ಇದ್ದು ಕೊಂಡು ಅಲ್ಲಿರತಕ್ಕಂಥ ಸ್ಥಳ ಮಹಜರ್‌ನ್ನು

ಮಾಡುತ್ತಿದ್ದರು, 8ನೇ ತಾರೀಖು ಮಹಜರ್ ಮಾಡಲಿಲ್ಲ, 9ನೇ ತಾರೀಖು ಯಾರೂ ಪೊಲೀಸ್‌ನವರು ಸಹಿತ ಹೆಣ ಬಿದ್ದಿರುವ ಕಡೆ ಹೋಗಲಿಲ್ಲ, ಚೆಂಗಡಿ ಅರಣ್ಯ ಪ್ರದೇಶಕ್ಕೆ, ಇವರ ಕ್ರೂರವಾದ ಮನಸ್ಸಿನ ಅನೇಕ ಆಯಾಮಗಳನ್ನು ನಾನು ಹೇಳುತ್ತಿದ್ದೇನೆ. ಆದಾದಮೇಲೆ ನೀವು ಮಾಡಿದ್ದು ಮಾಡಿದ್ದು ಏನು? 9ನೇ ತಾರೀಖು ಇಲ್ಲ, 10ನೇ ತಾರೀಖು ಅವರ ಮಗ, ಅವರ ಮಗಳು, ಅವರ ಅಳಿಯಂದಿರು ನಾವು ನಾಗಪೂಜೆ ಮಾಡುತ್ತೇವೆ ನಮ್ಮ ಅಪ್ಪ ಸತ್ತಿರುವ ಕಡೆ ಎಂದು ಹೇಳುತ್ತಾರೆ, ಆಗ ರಕ್ಷಣೆಗೋಸ್ಕರ ಎಂದು ನೀವು ಹೋಗುತ್ತೀರಿ. ಅಲ್ಲಿ ನೀವು ಹೇಳಿರತಕ್ಕಂಥ 27 ಕಾಡುತಾಸುಗಳಿವೆ ಎನ್ನುವುದು ಅದು ಮತ್ತೊಂದು ಸುಳ್ಳು, ನೂರಾರು ಕಾಡುತಾಸುಗಳು, ನಾನು, ಮಾನ್ಯ ಸೋಮಶೇಖರ್, ಬೈರೇಗೌಡರು, ನಾಗೇಗೌಡರು ಹೋದಾಗ ಕಾಡುತಾಸುಗಳು ಎಷ್ಟು ಬೇಕು ತೆಗೆದುಕೊಂಡು ಹೋಗಿ ಎನ್ನತಕ್ಕಂಥ ಜನ ಅಲ್ಲಿದ್ದಾರೆ, ಜೇಬುಗಳಲ್ಲಿ ಇಟ್ಟುಕೊಂಡಿದ್ದಾರೆ, ಕಡ್ಲೆಕಾಯಿ ಸಿಪ್ಪೆಯನ್ನು ಇಟ್ಟುಕೊಂಡಂತೆ ಕಾಡುತಾಸುಗಳನ್ನು ಮತ್ತು ಆ ಕಾಡುತಾಸುಗಳ ಮೇಲೆ ಮಾರ್ಕ್ ಇದೆ. ಎಲ್ಲಿ ಮ್ಯಾನುಫ್ಯಾಕ್ಚರ್ ಆಗಿದ್ದು, ಏನು, ಯಾವ ಸೀರಿಸು ಎಲ್ಲವೂ ಸಹಿತ ಇದೆ. ಅದು ತಮಿಳುನಾಡು ಪೊಲೀಸರು ಅಮಿನಿಷನ್ ಫ್ಯಾಕ್ಟರಿಯಿಂದ ತೆಗೆದುಕೊಂಡು ಬಂದರೋ ಅಥವಾ ಕರ್ನಾಟಕ ಪೊಲೀಸರು ತೆಗೆದುಕೊಂಡು ಬಂದಿದ್ದರೋ ಎಲ್ಲಿ ಎನ್ನತಕ್ಕದ್ದು ಸಹಿತ ಇದೆ. ಆ ಕಾಡುತಾಸುಗಳೆಲ್ಲಾ ಸಿಕ್ಕಿದೆ, ಆ ಬಂಡೆಯ ಮೇಲೆ ರಕ್ತ ಇದೆ, ಆ ಮರಗಳ ಮೇಲೆ ರಕ್ತ ಇದೆ. ಏನು ಕೆಲವೊಂದು ಔಷಧಿಗಳನ್ನು ಪೊನ್ನಾಚಿ ಮಹದೇವಸ್ವಾಮಿಯವರು ನಾಗಪ್ಪನವರಿಗೆ ಕೊಟ್ಟಿದ್ದರೋ, ಅವುಗಳು, ಆ ಬಟ್ಟೆ, ಆ ಬಿಸ್ಕತ್ತು ಆ ಸೇಬು ಅದೆಲ್ಲಾ ಅಲ್ಲಿ ಸಿಕ್ಕಿತ್ತು. ವೀರಪ್ಪನ್ ಹೊಡೆದು ಬಿಟ್ಟು ಹೋಗಿದ್ದರೆ ಅದನ್ನು ಏಕೆ ಬಿಸಾಕಿ ಬಿಟ್ಟು ಹೋಗುತ್ತಿದ? ನಾಗಪ್ಪನವರ ಹೆಣ ಅಥವಾ ದೇಹವನ್ನು ನೋಡಿದ ತಕ್ಷಣವೇ ನೀವು ಮಹಜರು ಮಾಡಿದ್ದರೆ ಅದೆಲ್ಲವನ್ನೂ ಸಹಿತ ಎತ್ತಿಕೊಳ್ಳಬಹುದಾಗಿತ್ತು. ಅವನು ಟಾರ್ಚ್ ಏನು ಬಾಸಾಕಿದ್ದ, ಅವನು ಬಟ್ಟೆ ಏನು ಬಿಸಾಕಿದ್ದ ಅಡಿಗೆ ಮಾಡುವ ಪದಾರ್ಥಗಳನ್ನು ಏನು ಬಿಸಾಕಿದ್ದ, ರೇಡಿಯೋ ಏನು ಬಿಸಾಕಿದ್ದ, ಅದನ್ನು ಎತ್ತಿಕೊಳ್ಳಬಹುದಾಗಿತ್ತು. ಅವನ ಬಹಳ ಪ್ರಮುಖವಾಗಿರತಕ್ಕಂಥ ಸಂಪರ್ಕ ಸಾಧನ ಎಂದರೆ, ನೀವು ಕಳುಹಿಸಿರತಕ್ಕಂಥ ವೈರ್‌ಲೆಸ್ ಜೊತೆಗೆ ರೇಡಿಯೋ. ಅದು ಬಿಟ್ಟರೆ ಇನ್ನೇನೂ ಅವನಿಗೆ ಸಂಪರ್ಕ ಸಾಧನ ಇಲ್ಲ. ಮಾನ್ಯ ಉಪಾಧ್ಯಕ್ಷರೇ, ನಾವು ನಾಗಪ್ಪ ಮಾರಡಗಿಯನ್ನು ನಂಬುವುದಾದರೆ, ನಾಗಪ್ಪ ಮಾರಡಗಿ ಏನು ಹೇಳಿದ್ದಾನೆ ಎಂದರೆ, "ವೀರಪ್ಪನ್ ಆಗಾಗ ಕಾಡಿನ ಅತಿಥಿಯಂತೆ ಬರುತ್ತಿದ್ದ ನಕ್ಕೀರನ್ ಗೋಪಾಲ್ ಉಪಗ್ರಹ ದೂರವಾಣಿ....." ನಾನು ಅದನ್ನು ನೋಡಿಲ್ಲ. ನಾನು ಹೋಮ್ ಮಿನಿಸ್ಟರ್ ಆಗಿದ್ದಾಗ ಒಂದು ಸಾರಿ ಶಂಕರ ಬಿದರಿಯವರು ಅದನ್ನು ನನಗೆ ತೋರಿಸಿದ್ದರು. "...... ಸ್ಯಾಟಿಲೈಟ್ ಫೋನ್ ಕಾಣಿಕೆಯನ್ನಾಗಿ ನೀಡಿದ. ಅದನ್ನು ವೀರಪ್ಪನ್ ಬಂದೂಕಿನಷ್ಟೇ ಜೋಪಾನವಾಗಿ ಇಟ್ಟುಕೊಳ್ಳುತ್ತಿದ್ದ. ಆತನಿಗೆ ಫೋನ್ ಬಗ್ಗೆ ಎಲ್ಲಿಲ್ಲದ ಪ್ರೀತಿ. ಸಣ್ಣ ಧೂಳು ಅದರ ಮೇಲೆ ಬಿದ್ದರೂ ಕೂಡ ಟವೆಲ್‌ನಿಂದ ಒರೆಸುತ್ತಿದ್ದ. ಜಗತ್ತಿನ ಅತಿ ಶ್ರೇಷ್ಠ ವಸ್ತು ತನ್ನ ಬಳಿ ಇದೆ ಎಂದು ಹೆಮ್ಮೆ ಅವನಿಗೆ. ಅನಿರೀಕ್ಷಿತವಾಗಿ ವಿಧಾನ ಸೌಧದಿಂದಲೂ ಕರೆ ಬರುತ್ತಿತ್ತು" ಇದನ್ನು ದಿನಕರ್ ಡೈರಿಯಲ್ಲಿ ಬರೆದಿದ್ದಾರೆ. ನಾಗಪ್ಪ ಮಾರಡಗಿ ಇದನ್ನು ಹೇಳಿದ್ದಾನೆ. "ಆಗ ನಮ್ಮಿಂದ ಬಹಳ ಬಹಳ ದೂರ ಹೋಗಿ ಸ್ವಲ್ಪ ಕಾಲ ಮಾತನಾಡುತ್ತಿದ. ಫೋನ್ ಬಂದ ದಿನ

ಅವನಿಗೆ ಎಲ್ಲಿಲ್ಲದ ಖುಷಿ. ಅಂದು ಕಾಡು ಕೋಳಿ, ಹಂದಿ, ಕರಿ, ಕೋತಿ, ಎಳೆ ಜಿಂಕೆ ಬೇಟೆ ಗ್ಯಾರಂಟಿ. ಮಾಂಸದ ಊಟದ ಮಧ್ಯೆ ವಿಶೇಷ ಬುದ್ಧಿ ಮಾತು. ತನಗೂ ವಿಧಾನ ಸೌಧಕ್ಕೂ ಇರುವ ಅವಿನೀಭಾವ ಸಂಬಂಧದ ಬಗ್ಗೆ ಜಂಭ ಬೇರೆ. ಪಾತಿಂಗಳಾ ಯಾರ್‌ಕ್ಕಿಟೆ ಪೇಸಿ ಫುಡಿಯಾ, ನೋಡಿದಿರೇನ್ರಿ? ಯಾರ ಜೊತೆಗೆ ಮಾತನಾಡಿದೆ ಗೊತ್ತಾ? ಎಂದು ಹುರಿದುಂಬಿಸುತ್ತಿದ್ದ" ನಾಗಪ್ಪ ಮಾರಡಗಿ ಅವರನ್ನು ಪೊಲೀಸ್ ಇಂಟರಾಗೇಟ್ ಮಾಡಿದ್ದಾರೆ. ಆ ಸ್ಟೇಟ್‌ಮೆಂಟ್ ಅನ್ನು ನೀವು ಅಸೆಂಬ್ಲಿಯಲ್ಲಿ ಇಡಿ. ನಾಗಪ್ಪ ಮಾರಡಗಿ ಹೇಗೆ ತಪ್ಪಿಸಿಕೊಂಡು ಬಂದ? ಅದನ್ನು ಏನಾದರೂ, ನೀವು ವೈಟ್ ಪೇಪರ್ ಪಬ್ಲಿಷ್ ಮಾಡುತ್ತೇವೆಂದು ಹೇಳುತ್ತಿದ್ದೀರಲ್ಲಾ, ಅದರಲ್ಲಿ ಏನಾದರೂ ಇಟ್ಟಿದ್ದೀರಾ? ಅದನ್ನು ಜನಗಳಿಗೆ ತಿಳಿಸಬೇಕಾಗುತ್ತದೆ. ಅವನು ಸುಳ್ಳು ಹೇಳಿದ್ದಾನೋ? ನಿಜ ಹೇಳಿದ್ದಾನೋ ಎನ್ನುವುದು ಇದರಿಂದ ನಮಗೆ ಗೊತ್ತಾಗುತ್ತದೆ. ಇದಾದ ಮೇಲೆ, ನಿಮಗೆ ಕಳುಹಿಸುತ್ತೇನೆ, ಮಾನ್ಯ ಉಪಾಧ್ಯಕ್ಷರೇ, ಆ ಪೊಸಿಷನ್, ಅವರ ಬಾಡಿ ಬಂಡೆ ಕೆಳಗಡೆ ಎಲ್ಲಿ ಬಿದ್ದಿತ್ತು, ಎಲ್ಲಾ ಸಹಿತ ಪಕ್ಕದಲ್ಲೇ 50 ಅಡಿ ಒಳಗಡೆ ಬಿದ್ದಿದೆ, ಆ ಕಾಡುತಾಸುಗಳು ಬಿದ್ದಿವೆ, ರಕ್ತಸಿಕ್ತವಾಗಿರತಕ್ಕಂಥ ಬಟ್ಟೆ, ಉಳಿದಿರತಕ್ಕಂಥ ಪಾತ್ರೆ ಪದಾರ್ಥಗಳು, ಆ ಟಾರ್ಚ್, ಯಾವುದನ್ನೂ ಸಹಿತ ನಾಲ್ಕು ಜನ ಪೊಲೀಸರು ಪತ್ತೆ ಮಾಡಲಿಲ್ಲ ಅಂತ ಹೇಳಿದರೆ, ಪೊಲೀಸರನ್ನು ಮತ್ತೆ ನಾವು ಸಮರ್ಥನೆ ಮಾಡಿಕೊಳ್ಳುತ್ತೇವೆ ಎಂದರೆ, ನಮ್ಮ ಪ್ರಾಣಕ್ಕೆ ಏನು ಅಪಾಯ ಕಾದಿದೆ ಎನ್ನುವುದನ್ನು ಈ ಸದನದ ಗೌರವಾನ್ವಿತ ಎಲ್ಲಾ ಸದಸ್ಯರುಗಳೂ ವಿಚಾರ ಮಾಡತಕ್ಕಂಥ ಕಾಲ ದೂರವಿಲ್ಲ ಇವತ್ತು ಇದನ್ನು ನಾವು ಯೋಚನೆ ಮಾಡಬೇಕಾಗಿದೆ. ಏಕೆ ಹೋಗಲಿಲ್ಲಾ? ನಾವು ಹೊಡೆದು ಬಿಟ್ಟು ಬಂದು ಬಿಟ್ಟಿದ್ದೇವೆ, ಇಲ್ಲೇನಾದರೂ ಹೋದರೆ ಎತ್ತಿಕೊಂಡು ಬರಬೇಕು" ಎಂಬ ಭಯವೇ? ಮಾನ್ಯ ಉಪಾಧ್ಯಕ್ಷರೇ, ವಿಚಿತ್ರವಾಗಿರತಕ್ಕಂಥ ವಿಚಾರ ಎಂದರೆ, ಕಾಡು ಹದ್ದುಗಳು, ರಣ ಹದ್ದುಗಳು, ಯಾವುದಾದರೂ ಒಂದು ನಾಯಿ ಸತ್ತು ಬಿದ್ದರೆ ಐದು ನಿಮಿಷದಲ್ಲಿ ಬಂದು ಬಿಡುತ್ತವೆ, ಅದರ ವಾಸನೆ ಹಿಡಿದು. ಆದರೆ ನಾಗಪ್ಪನವರ ಹೆಣದ ವಾಸನೆ ಈ ಕಾಡು ಹಂದಿಗಳಿಗೆ ನಾಲ್ಕು ದಿನ ತಲುಪಿರಲಿಲ್ಲವಂತೆ. ಹೇಗೆ ಇದು ಸಾಧ್ಯ? ನರಿಗಳು ಬಂದು ತಿಂದಿರಲಿಲ್ಲ? ಬಾಡಿ ಬಹಳ ಚೆನ್ನಾಗಿತ್ತು. ಅಂದರೆ ಯಾರೋ ಅಲ್ಲಿ ಕಾಯ್ದುಕೊಂಡು ಇದ್ದರು ಎಂಬ ಸಂಶಯ ಬಂದೇ ಬರುತ್ತದೆ? ಆಮೇಲೆ, ಮಾನ್ಯ ಉಪಾಧ್ಯಕ್ಷರೇ, ಗೌರವಾನ್ವಿತ ಸಚಿವ ಸಂಪುಟದ ಸಭೆಯಲ್ಲಿ ಮತ್ತು ನಮ್ಮ ಗೌರವಾನ್ವಿತ ಮಂತ್ರಿಗಳು ಖಾಸಗಿಯಾಗಿ ಏನೇನು ಮಾತನಾಡುತ್ತಿದ್ದರು ಎಂಬುದು ನಮಗೆ ಗೊತ್ತಿದೆ. ನಮಗೆ ನೋವು ಇತ್ತು, ಆದರೆ ಆ ನೋವನ್ನು ನಾವು ನುಂಗಿಕೊಂಡಿದ್ದೆವು. ಏಕೆ ನುಂಗಿದ್ದೆವು ಎಂದರೆ ನಾಗಪ್ಪನವರ ಬಿಡುಗಡೆ ಸುರಕ್ಷಿತವಾಗಿ ಆಗಬಹುದು ಎಂಬ ಒಂದೇ ಒಂದು ನಂಬಿಕೆಯಿಂದ. ಇಲ್ಲದಿದ್ದರೆ ನಾವು ನಂಬುತ್ತಿರಲಿಲ್ಲ. ಇದಾದ ನಾಲ್ಕು ದಿನವಾದ ಮೇಲೆ ಅವರು ನಾಗ ಪೂಜೆಗೆ ಹೋದಂತಹ ಸಂದರ್ಭದಲ್ಲಿ ನಮ್ಮ ಪೊಲೀಸ್‌ನವರು ಹೋಗಿ, ಅದೇನು ಸಿಕ್ಕಿತ್ತೋ ಅದನ್ನು ಎತ್ತಿಕೊಂಡು ಬಂದು, "ನಾವು ಹಿಡಿದಿದ್ದು", "ನಾವು ಹಿಡಿದಿದ್ದು" ಎಂದು ಪ್ರಪಂಚಕ್ಕೇ ಪ್ರದರ್ಶನ ಮಾಡುತ್ತಿದ್ದಾರೆ. ಇದಾದ ಮೇಲೆ, ಆ ದೇಹ ಹೇಗೆ ಬಂತು? ಆ ಸಂದರ್ಭದಲ್ಲಿ ಹೇಗೆ ನಡೆದುಕೊಂಡರು ಎಂಬುದನ್ನು ಮಾನ್ಯ ಮಹಾದೇವ ಪ್ರಸಾದ್‌ರವರು ಹೇಳುತ್ತಾರೆ. ಅಲ್ಲಿದ್ದ ಮಾನ್ಯ ಕೃಷ್ಣಮೂರ್ತಿಯವರು ಮತ್ತು ಇತರರು ಆ ಬಗ್ಗೆ ಹೇಳುತ್ತಾರೆ.

ಕೊನೆಯ ಹಂತಕ್ಕೆ ಈಗ ನಾನು ಬರುತ್ತಿದ್ದೇನೆ. ಹಾಗಾದರೆ ನಾಗಪ್ಪನವರನ್ನು ಕೊಂದವರು ಯಾರು? ತಮಿಳುನಾಡು ಪೊಲೀಸರು ಕೊಂದರು ಎಂದು ವೀರಪ್ಪನ್ ಹೇಳುತ್ತಾನೆ. ವೀರಪ್ಪನ್ನೇ ಕೊಂದು ಹೊರಟು ಹೋಗಿ ಬಿಟ್ಟಿದ್ದಾನೆ ಎಂದು ಮಾನ್ಯ ಖರ್ಗೆಯವರು ಹೇಳುತ್ತಾರೆ. ತಮಿಳುನಾಡು ಪೊಲೀಸರು "ನಾವಲ್ಲ ಕೊಂದವರು" ಎಂದು ಹೇಳುತ್ತಾರೆ. ಕರ್ನಾಟಕದ ಪೊಲೀಸರೂ ಸಹ "ನಾವಲ್ಲ ಕೊಂದವರು" ಎನ್ನುತ್ತಾರೆ. ಹಾಗಾದರೆ 3ನೇ ತಾರೀಖು ನಮ್ಮ ಕೆಲವು ಪೊಲೀಸ್ ಅಧಿಕಾರಿಗಳು ಆ ಅರಣ್ಯ ಪ್ರದೇಶದಲ್ಲಿ ನಡೆಸಿದಂತಹ ಸಭೆಯ ಗುಟ್ಟು ಏನು? ಏತಕ್ಕಾಗಿ ಆ ಸಭೆಯನ್ನು ನಡೆಸಿದರು? ಇದು ನಮಗೆ ಮತ್ತು ಸಾರ್ವಜನಿಕರಿಗೆ ಗೊತ್ತಾಗಬೇಕಾಗುತ್ತದೆ. ಒಂದು ಪಕ್ಷ, ವೀರಪ್ಪನ್ ಏತಕ್ಕೋಸ್ಕರ ನಾಗಪ್ಪನವರನ್ನು ಕೊಲ್ಲುತ್ತಾನೆ? 105 ದಿನಗಳ ಕಾಲ ಅವರನ್ನು ಹೊತ್ತುಕೊಂಡು ತಿರುಗಾಡಿದ್ದಾನೆ. ನಾಗಪ್ಪನವರ ಅವನ ಪ್ರೈಜ್ ಕ್ಯಾಚ್, ಇಡೀ ಕರ್ನಾಟಕವನ್ನೇ ಅವನು ಅಲುಗಾಡಿಸಲು ಹೊರಟ್ಟಿದ್ದವನು, ಏಕೆ ಅವನು ನಾಗಪ್ಪನವರನ್ನು ಕೊಲ್ಲುತ್ತಾನೆ? ಕೊಲ್ಲುವುದಾಗಿದ್ದರೆ 105 ದಿನ ಏಕೆ ಅವನು ಅವರನ್ನು ಇಟ್ಟುಕೊಳ್ಳುತ್ತಾನೆ? "ಕೊಳತ್ತೂರು ಮಣಿಗೆ ಬೇಲ್ ಇನ್ನೇನು ಸಿಕ್ಕಾಯಿತು ಸಿಕ್ಕಿದೆ" ಎಂದು ನಾವು ರೇಡಿಯೋದಲ್ಲಿ ಅವನಿಗೆ ಸಂದೇಶಗಳನ್ನು ಕಳುಹಿಸುತ್ತಿದ್ದೆವು. ಇನ್ನೇನು ಅವನು ಬಿಡುಗಡೆಯಾಗುತ್ತಾನೆ ಎನ್ನತಕ್ಕಂಥದ್ದದ್ದು ಅವನಿಗೆ ಗೊತ್ತಾದ ಮೇಲೆ ವೀರಪ್ಪನ್ ನಾಗಪ್ಪನವರನ್ನು ಕೊಲ್ಲತಕ್ಕಂಥ ಅವಶ್ಯಕತೆ ಏನು ಇತ್ತು? ಇದರಿಂದ ಅವನಿಗೆ ಸಿಗುತ್ತಿದ್ದಂತಹ ಗೇಯ್ನ್ ಏನು? ಇದು ನನಗೆ ಅರ್ಥವಾಗದೇ ಇರತಕ್ಕಂಥದ್ದಾಗಿದೆ. ಅದಕ್ಕೋಸ್ಕರವಾಗಿ, ಈಗ ಅದನ್ನು ನೀವು ಪತ್ತೆ ಮಾಡಬೇಕಾಗುತ್ತದೆ. ಯಾರು ಇದನ್ನು ಮಾಡಿದ್ದು ಎಂದು? ಇದನ್ನು ಪತ್ತೆ ಮಾಡಬೇಕಾದರೆ ಏನು ಮಾಡಬೇಕು? "ನಾವು ನ್ಯಾಯಾಂಗ ತನಿಖೆ ಮಾಡುತ್ತೇವೆ, ನ್ಯಾಯಾಂಗ ತನಿಖೆಯಿಂದ ಎಲ್ಲಾ ಆಚೆ ಬರುತ್ತದೆ." ಎಂದು ನೀವು ಹೇಳುತ್ತಿದ್ದೀರಿ. ಖಂಡಿತವಾಗಿ ನ್ಯಾಯಾಂಗ ತನಿಖೆಯಿಂದ ಸತ್ಯ ಹೊರಗಡೆ ಬರಲು ಸಾಧ್ಯವೇ ಇಲ್ಲ ಎಂಬುದು ನಮ್ಮ ವಾದವಾಗಿದೆ. ಕೊನೆಯ ಪಕ್ಷ, ನೀವು ಸರ್ಕಾರದವರು ನಿಮ್ಮ ಒಂದು ನೈತಿಕವಾದ ಹೊಣೆಗಾರಿಕೆಯನ್ನೇನು ಕಳೆದುಕೊಂಡಿದ್ದೀರಿ, ನೈತಿಕವಾಗಿ ನಿಮಗೆ ಜವಾಬ್ದಾರಿ ಇದೆ, ಅದರಲ್ಲಿ ನೀವು ವಿಫಲರಾಗಿದ್ದೀರಿ. ಅವರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ, ವೀರಪ್ಪನ್ ಹಿಡಿಯುವುದರ ಜೊತೆಗೆ, ಅವನ ಚಟುವಟಿಕೆಗಳನ್ನು ನಿಲ್ಲಿಸುವುದರ ಜೊತೆಗೆ, ನಾಗಪ್ಪನನ್ನು ಕೊಂದಿದ್ದು ಯಾರು ಎನ್ನುವಂತಹ ಮಾಹಿತಿಯನ್ನು ನೀವು ಹೊರಗಡೆ ತರಿಸಬೇಕು. ನಿಮ್ಮ ಗಮನಕ್ಕೆ ಬಾರದೇ ಇರುವ ಹಾಗೆ, ನಿಮ್ಮ ಪೊಲೀಸ್ ಅಧಿಕಾರಿಗಳು ನಿಮ್ಮ ನಿಮ್ಮ ಮಾತನ್ನು ಕೇಳುವುದಿಲ್ಲ, ಅವರು ನಿಮ್ಮ ಹಿಡಿತದಲ್ಲಿ ಇಲ್ಲ, ನಾನು ವಿಚಾರಣಾ ಆಯೋಗದ ಮುಂದೆ, ಸಿ.ಬಿ.ಐ. ಮುಂದೆ ಈ ವಿಚಾರವನ್ನು ಪ್ರತಿಪಾದನೆ ಮಾಡುತ್ತೇನೆ. ನನಗೆ ರಕ್ಷಣೆ ಸಿಗುತ್ತದೋ, ಇಲ್ಲವೋ ಎನ್ನತಕ್ಕಂಥ ಭಯ ಇದೆ. ಮಾನ್ಯ ಗೃಹ ಮಂತ್ರಿಗಳು ಹೇಳಿದ ಹಾಗೆ, ನನಗೆ 5-6 ತಿಂಗಳ ಹಿಂದೆ ನನ್ನ ಜೀವನಕ್ಕೂ ಅಪಾಯ ಇದೆ ಎನ್ನತಕ್ಕಂಥ ಮಾತುಗಳನ್ನು ಹೇಳಿದ್ದಾರೆ. ಅದರಿಂದಾಗಿ ನಾನು ಅನೇಕ ವಿಚಾರಗಳನ್ನು ಇನ್ನೂ ಸಹಿತ ನುಂಗಿಕೊಂಡೇ ಮಾತನಾಡುತ್ತಿದ್ದೇನೆ, ಏಕೆ ಅಂತ ಹೇಳಿದರೆ ನನಗೂ ಇದೇ ಗತಿಯಾಗಿದೆ, ನಾವಲು ತಯಾರು ಇರತಕ್ಕಂಥ ಮಾತು ಬೇರೆ? ತಪ್ಪು ಮಾಡಿದ್ದರೆ ತಯಾರಿರಬೇಕಾಗುತ್ತದೆ. ಏನು ತಪ್ಪಾಗಿದೆ? ಆ

ಭಯ ನನ್ನಲ್ಲೂ ಸಹಿತ ಇವತ್ತು ಕಾಡುತ್ತಿದೆ ಎನ್ನತಕ್ಕಂಥ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಪ್ಪಿತಸ್ಥರು ಎಂದು ನಾವು ಹೇಳಬೇಕು? ಒಂದು, ತಮಿಳುನಾಡು ಪೊಲೀಸರು ಅಥವಾ ಕರ್ನಾಟಕದ ಪೊಲೀಸರು ಅಥವಾ ತಮಿಳುನಾಡು-ಕರ್ನಾಟಕದ ಪೊಲೀಸ್‌ನವರು ಸೇರಿ ಮಾಡಿರಬಹುದು. ಅಥವಾ ತಮಿಳುನಾಡು ಪೊಲೀಸ್ - ಕರ್ನಾಟಕ ಪೊಲೀಸ್‌ನವರು, ಇಂತಹ ಕಡೆ ವೀರಪ್ಪನ್ ಇದ್ದಾನೆ ವೀರಪ್ಪನ್‌ನನ್ನು ಕೊಂದು ಬಿಡಬಹುದು ಎಂದೇಳಿ ಎನ್‌ಕೌಂಟರ್ ಮಾಡಿರಬಹುದು ಅದನ್ನು ನಿಮ್ಮ ಗಮನಕ್ಕೆ ತರಲೇಬೇಕು ಎನ್ನತಕ್ಕಂಥ ಕೆಲಸವನ್ನು ಮಾಡಿಲ್ಲದೇ ಇರಬಹುದು. ನಿಮ್ಮ ಗಮನಕ್ಕೆ ತರದೆಯೂ ಸಹ ಅವರು ಈ ಕೆಲಸವನ್ನು ಮಾಡಿರಬಹುದು ಅಥವಾ ಇದೇ ಕೆಲವು ಅಧಿಕಾರಿಗಳು, ನನಗೆ ಗೊತ್ತಿರುವ ಹಾಗೆ ರಜೆಗಳನ್ನು ಹಾಕಿದ್ದಾರೆ. ಯಾವ ಕಾರಣಕ್ಕೋಸ್ಕರ ರಜೆಗಳನ್ನು ಹಾಕಿದ್ದರು? ಇವರ ಉದ್ದೇಶ ಏನಿತ್ತು? ಯಾವ ಉದ್ದೇಶಕ್ಕೋಸ್ಕರ ಇದನ್ನೆಲ್ಲಾ ಮಾಡಿದ್ದಾರೆ? ಇವತ್ತು ವೀರಪ್ಪನ್ ಮುಗಿಸಬೇಕು ಎಂಬುದು ನಿಜ. ನೀವು ಕೊಳತ್ತೂರು ಮಣಿಯನ್ನು ಇಂಟಾರಗೇಟ್ ಮಾಡಿ, ಟಾರ್ಚರ್ ಮಾಡಿ ನೀವೇನು ದುಡ್ಡು ವಸೂಲಿ ಮಾಡಿಕೊಂಡಿದ್ದೀರಿ, ಅದರಲ್ಲಿ ಏನಾದರೂ ನಿಮ್ಮ ಪಾಲುಗಾರಿಕೆ ಇತ್ತೋ? ಇದೆಲ್ಲಾ ಪ್ರಶ್ನೆಗಳು ಬರುತ್ತವೆ. ಆದ್ದರಿಂದ ನೇರವಾಗಿ ನೀವು ಅದರ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಈ ಸತ್ಯವನ್ನು ನೀವು ಹೊರಗಡೆ ತರಲೇಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ನಾವು ಅಕ್ಯೂಸ್ ಮಾಡುತ್ತಿದ್ದೇವೆ, ಚಾಮರಾಜನಗರ ಎಸ್ಪಿ ಯಾರಿದ್ದಾರೆ, ಅವರು ಮತ್ತು ಮೈಸೂರಿನ ಎಸ್ಪಿಯವರು ನಾಗಪ್ಪನವರಿಗೆ ರಕ್ಷಣೆ ಕೊಡುವುದರಲ್ಲಿ ವಿಫಲರಾಗಿದ್ದಾರೆ. ನಿಮ್ಮ ಅಫೀಸಿನ ಇಂಟೆಲಿಜನ್ಸ್ ಡಿಪಾರ್ಟ್‌ಮೆಂಟ್‌ನವರು ಮತ್ತು ಎಸ್.ಟಿ.ಎಫ್. ಚೀಫ್‌ನವರು ಸ್ಕೇಲ್ ಸೆಕ್ಯೂರಿಟಿ ಇವರಿಗೆ ಕೊಡಬೇಕು ಅಂತೇಳಿ ಕಾಗದ ಬರೆದಿದ್ದಾರೆ. ಟರ್ಮ್ಸ್ ಆಫ್ ರೆಫರೆನ್ಸ್ ನೀವು ಸಿ.ಬಿ.ಐ.ಗೆ ಕೊಡತಕ್ಕಂಥ ಸನ್ನಿವೇಶದಲ್ಲಿ ಟರ್ಮ್ಸ್ ಆಫ್ ರೆಫರೆನ್ಸ್ ಬಹಳ ಇಂಪಾರ್ಟೆಂಟ್, ಸುಮ್ಮನೆ ಯಾವುದೋ ಒಂದು ಪರ್ಟಿಕ್ಯುಲರ್ ಇನ್ಸಿಡೆನ್ಸ್ ಅನ್ನು ಸಿ.ಬಿ.ಐ.ಗೆ ಕೊಡುತ್ತೇವೆ ಎನ್ನುವುದಾದರೆ, ಅದರಿಂದ ಏನೂ ಉಪಯೋಗ ಇಲ್ಲ. ನೀವು ಸಿ.ಬಿ.ಐ.ಗೆ Failure of protection to Nagappa when he was alive. This is number one. Number two, during the operations what has happened? Number three, who are the people who are having links with Veerappan ಎಂಬ ಮೂರು ಟರ್ಮ್ಸ್ ಆಫ್ ರೆಫರೆನ್ಸ್ ಕೊಡಬೇಕು. ಇವು ಮೂರು ಸಹಿತ ಹೊರಗಡೆ ಬರಬೇಕಾದರೆ, ನೀವು ತಪ್ಪಿತಸ್ಥ ಸ್ಥಾನದಲ್ಲಿ ಕುಳಿತಿರತಕ್ಕಂಥವರೇ ಜುಡಿಷಿಯಲ್ ಪ್ರೋಬ್ ಮಾಡುತ್ತೇವೆ ಅಂತೇಳಿ ನೀವು ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ನನಗೂ ಸಿ.ಬಿ.ಐ. ಲಿಮಿಟೇಷನ್ಸ್ ಗೊತ್ತಿದೆ. ಸಿ.ಬಿ.ಐ ಅಧಿಕಾರಿಗಳು, ಬೇರೆ ಬೇರೆ ರಾಜ್ಯಗಳ ಪೊಲೀಸ್ ಅಧಿಕಾರಿಗಳಿಂದ ಡ್ರಾ ಮಾಡಿರತಕ್ಕಂಥವರು ಎಂಬ ಅರಿವು ನನಗೆ ಇದೆ. ಚಿತ್ತರಂಜನ್ ಕೇಸ್‌ನಲ್ಲೂ ಸಹಿತ ಏನಾಗಿದೆ? ಸಿ.ಬಿ.ಐ.ನವರು ಅಲ್ಲಿ ಏನೂ ಮಾಡಿಲ್ಲ ಅನ್ನತಕ್ಕಂಥ ಅರಿವೂ ಸಹಿತ ನನಗೆ ಇದೆ. ಇವತ್ತಿನ ಸ್ಥಿತಿಯಲ್ಲಿ ನಮ್ಮ ಪೊಲೀಸರಿಗಿಂತ ಹೆಚ್ಚಾಗಿ, ಕೇಂದ್ರದ ಪೊಲೀಸ್ ಒಂದು ವ್ಯವಸ್ಥೆ ಏನು ಇದೆ, ಇದು ಎರಡು ರಾಜ್ಯಗಳಿಗೆ

ಸಂಬಂಧಪಟ್ಟಿದ್ದು. ನಿಮ್ಮ ಜ್ಯುಡಿಷಿಯಲ್ ಪ್ರೋಬ್‌ನಿಂದ ಯಾವುದೇ ಒಂದು ಫೈಂಡಿಂಗ್ ಬರುತ್ತದೆ. ಅದನ್ನು ತಮಿಳುನಾಡು ಸರ್ಕಾರದವರು ಕಾರ್ಯಗತಗೊಳಿಸಬೇಕು ಎನ್ನತಕ್ಕಂತಹ ಗ್ಯಾರಂಟಿ ಏನು ಇದೆ? ಅದನ್ನು ಕಾರ್ಯಗತಗೊಳಿಸಬೇಕೆಂಬ ಜವಾಬ್ದಾರಿ ಅವರ ಮೇಲೆ ಏನೂ ಇಲ್ಲ ಅಥವಾ ಅವರ ಪೊಲೀಸರು ಇಲ್ಲಿಗೆ ಬಂದು ನಮ್ಮ ನ್ಯಾಯಾಂಗ ತನಿಖೆ ಮುಂದೆ ಬಂದು ಸಾಕ್ಷಿ ಹೇಳಬೇಕು ಎನ್ನತಕ್ಕದ್ದು ಆಗುವುದಿಲ್ಲ. ಆದ್ದರಿಂದಾಗಿ ಜ್ಯುಡಿಷಿಯಲ್ ಪ್ರೋಬ್ ಬೇಡ ಎಂದು ಹೇಳುವುದು. ನಿಮ್ಮ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ನಾಗಪ್ಪನವರ ರಕ್ಷಣೆ ಬಗ್ಗೆ ವೈಫಲ್ಯ, ಎರಡನೆಯದು ಕೊಳತ್ತೂರು ಮಣಿ ಮೇಲೆ ಹಾಕಿರತಕ್ಕಂತಹ ಮೊಕದ್ದಮೆಗಳು ಮತ್ತು ಆ ಮೊಕದ್ದಮೆಗಳ ಮುಂಚೆ ಕೊಳತ್ತೂರು ಮಣಿ ಮೇಲೆ ಪೊಲೀಸರು ಮಾಡಿರತಕ್ಕಂತಹ ದೌರ್ಜನ್ಯ ಹಣದ ಅವ್ಯವಹಾರ, ಅಪಹರಣದ ಸಂದರ್ಭದಲ್ಲಿ ಸರ್ಕಾರ ಯಾವ ರೀತಿ ನಡೆದುಕೊಂಡಿತ್ತು ಇದರ ಬಗ್ಗೆ ಸಿಬಿಐ ತನಿಖೆ ಆಗಬೇಕು ಎನ್ನತಕ್ಕಂತಹ ಒಂದು ಬೇಡಿಕೆಯನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಮುಂದಿಡುತ್ತಿದ್ದೇನೆ. ಎರಡನೆಯದು, ರಾಜ್‌ಕುಮಾರ್‌ರವರ ಬಿಡುಗಡೆ ಸಂದರ್ಭದಲ್ಲಿ ಏನೇನು ಒಪ್ಪಂದ ಆಯಿತು ಎನ್ನತಕ್ಕದ್ದನ್ನು ಮಾನ್ಯ ಖರ್ಗೆಯವರು ತಮ್ಮ ಹೇಳಿಕೆಯಲ್ಲಿ ವೀರಪ್ಪನ್ ಕ್ಯಾಸೆಟ್‌ನಲ್ಲಿ ಹೇಳಿದ್ದಾರೆ. ಅದನ್ನು ತಾವು ದಯವಿಟ್ಟು ಬಹಿರಂಗಪಡಿಸಬೇಕು. ಏನೇನು ಒಪ್ಪಂದ ಆಗಿತ್ತು ಇವೆಲ್ಲಾ ಗೊತ್ತಾಗಬೇಕಾಗುತ್ತದೆ. ನಮಗೆ ತಿಳುವಳಿಕೆ ಇರುವ ಹಾಗೆ ರಾಜ್‌ಕುಮಾರ್‌ರವರು ಅಪಹರಣ ಆಗಿ ಬಿಡುಗಡೆ ಆದ ಸಂದರ್ಭದಲ್ಲಿ ಅನೇಕ ಭರವಸೆಗಳನ್ನು ಕರ್ನಾಟಕ ಸರ್ಕಾರ ಮತ್ತು ತಮಿಳುನಾಡು ಸರ್ಕಾರ ಕೊಟ್ಟಿದ್ದು ಇದೆ. ಲಿಖಿತವಾಗಿ ಕೊಟ್ಟಿದ್ದು ಕೆಲವು ಟಾಡಾ ಬಂಧಿಗಳನ್ನಾಗಿ ಮಾಡಿದ್ದವು ಅವರ ಫ್ಯಾಮಿಲಿಗಳನ್ನು ರಿಹ್ಯಾಬಿಲಿಟೇಟ್ ಮಾಡುವುದಕ್ಕೆ ಸ್ವಲ್ಪ ದುಡ್ಡು ಕೊಡತಕ್ಕಂತಹ ವಿಚಾರ ಹೇಳಿದ್ದಾರೆ, ಇದರ ಬಗ್ಗೆ ಸರ್ಕಾರಿ ಆಜ್ಞೆ ಆಗಿದೆ ಎಂದು ಕೇಳಿದ್ದೇನೆ. ಅದಲ್ಲದೆ ಕೆಲವು ಒಪ್ಪಂದಗಳು ಆಗಿವೆ. ಆ ಒಪ್ಪಂದಗಳು ಏನು ಎಂದು ತಾವು ಇವತ್ತು ಬಹಿರಂಗಪಡಿಸಬೇಕೆಂದು ಎರಡನೇ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಮೂರನೆಯದಾಗಿ, ನಾಗಪ್ಪನವರ ಕುಟುಂಬಕ್ಕೆ ರಕ್ಷಣೆ ಸಿಗಬೇಕು, ಬಹಳ ಪ್ರಮುಖವಾಗಿ ಆಗಬೇಕಾದ ವಿಚಾರ, ತತಕ್ಷಣ ಅವರ ಕುಟುಂಬ ವರ್ಗದವರಿಗೆ ನಾನು ಬಹಳ ದೊಡ್ಡ ನಿಮ್ಮಿಂದ ಪರಿಹಾರ ಕೇಳುವುದಕ್ಕೆ ಹೋಗುವುದಿಲ್ಲ. ನಿಜವಾಗಿ ಸಹಿತ ಅನೇಕ ಸಂದರ್ಭಗಳಲ್ಲಿ ನಿಮ್ಮ ಹೇಗೆ ಗಟ್ಟಿ ಹೃದಯ ಮಾಡಿ ಕೊಂಡಿದ್ದೀರಿ ಎಂದು ನನಗೆ ಅರ್ಥವಾಗುತ್ತಿಲ್ಲ. ಸೌಜನ್ಯಕ್ಕೋಸ್ಕರ ತಪ್ಪು ಮಾಡಿದ್ದೇವೆ ಅಪರಾಧ ಆಗಿದೆ ತಪ್ಪು ಮಾಡಿದ್ದೇವೆ ಕ್ಷಮಿಸಿ ಎಂದು ಸೌಜನ್ಯದ ಮಾತು ಹೇಳದೆ ಇರುವವರ ಹತ್ತಿರ ನಾವು ಹೋಗಿ ಕೇಳುವುದು ಸರಿಯಲ್ಲ. ಈ ದೇಶದಲ್ಲಿ ಬಹಳ ದೊಡ್ಡ ಮನುಷ್ಯರು ಸತ್ತಿದ್ದಾರೆ. ಅವರ ಹೆಸರುಗಳಲ್ಲಿ ಬೇಕಾದಷ್ಟು ಸ್ಮಾರಕಗಳು ಮಾಡುವುದು ಇವತ್ತು ಆಗಿದೆ. ಆ ಸ್ಮಾರಕಗಳು ನೀವು ಮಾಡಿ ಎಂದು ಇಂತಹ ಕಠಿಣ ಹೃದಯ ಇರತಕ್ಕಂತಹ ಜನಗಳ ಹತ್ತಿರ ನಾನು ಕೇಳುವುದಕ್ಕೆ ಹೋಗುವುದಿಲ್ಲ. ನಿಮ್ಮ ಹತ್ತಿರ ನಾನು ಕೇಳುವುದಕ್ಕೆ ಹೋಗುವುದಿಲ್ಲ. ನಿಮ್ಮ ಹೃದಯ ಬಹಳ ಕ್ರೂರವಾದ ಹೃದಯ. ಈ ಕ್ರೂರವಾದ ಹೃದಯ ಇರುವವರ ಹತ್ತಿರ ನಾಗಪ್ಪನವರಿಗೆ ಏನಾದರೂ ಸ್ಮಾರಕ ಮಾಡಿ ಎಂದು ಹೇಳುವಂತಹ ಸಾಹಸ ಮಾಡುವುದಕ್ಕೆ ಹೋಗುವುದಿಲ್ಲ. ಇನ್ನೊಂದು ಮಾಡುತ್ತಿದ್ದೀರಿ ನಾಗಪ್ಪನವರ ಅಭಿಮಾನಿಗಳ

ಮೇಲೆ ಕೇಸ್ ದಾಖಲಾಗಿವೆ. 47 ಕೇಸುಗಳು ಒಂದು ವಾರದ ಹಿಂದೆ ದಾಖಲಾಗಿವೆ. ಇನು ಮುಂದೆ ಬರತಕ್ಕಂತಹ ದಿನಗಳಲ್ಲಿ ನಾಗಪ್ಪನವರ ಕ್ಷೇತ್ರವಾದ ಹನೂರಿನಲ್ಲಿ ಅವರ ಸಂಬಂಧಿಕರು, ಅವರಿಗೆ ಸಹಾಯ ಮಾಡಿದವರು, ಅವರ ಬಿಡುಗಡೆಗೋಸ್ಕರ ನಾವು ವ್ಯವಹಾರ ಮಾಡಿದವರು. ನಮ್ಮ ಮೇಲೆ ಮೊಕದ್ದಮೆಗಳು ಬಂದರೆ ನಾವು ಎದುರಿಸುವುದಕ್ಕೆ ತಯಾರಿದ್ದೇವೆ. ಅಂತಹ ಇಂದಿರಾ ಗಾಂಧಿಯವರು ದೇಶದ ನಾಯಕ್‌ಯವರು ಬದುಕಿದ್ದಾಗ ತುರ್ತು ಪರಿಸ್ಥಿತಿಯಲ್ಲಿ ಎರಡೆರಡು ವರ್ಷ ಕಂಬಿ ಎಣಿಸಿರುವವರು ನಾವು ಇದಕ್ಕೆಲ್ಲಾ ಹೆದರತಕ್ಕಂತಹವರು ಅಲ್ಲ. ನೀವು ಮೊಕದ್ದಮೆಗಳನ್ನು ಹಾಕಿ, ಒಂದು ಜ್ಞಾಪಕದಲ್ಲಿ ಇಟ್ಟುಕೊಳ್ಳಿ. ಮುಂದಿನ ಸಾಲಿನಲ್ಲಿ ಏನು ಮುಖ್ಯ ಮಂತ್ರಿಗಳಾದಿಯಾಗಿ ಕುಳಿತಿದ್ದೀರಿ ಇದು ಶಾಶ್ವತ ಅಲ್ಲ. ಇದು ನೀರಿನ ಮೇಲಿನ ಗುಳ್ಳೆ ಎನ್ನುವುದನ್ನು ನೀವು ಜ್ಞಾಪಕದಲ್ಲಿಟ್ಟು ಕೊಳ್ಳಿ. ದಯವಿಟ್ಟು ಕಾರ್ಯಕರ್ತರ ಮೇಲೆ ನಾಗಪ್ಪನವರ ಅಭಿಮಾನಿಗಳ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹಾಕುವುದನ್ನು ತಕ್ಷಣ ವಾಪಸ್ ಪಡೆಯಿರಿ. ಇದನ್ನು ಮಾಡಿ, ದಿನಕರ್ ಯಾರಿದ್ದಾರೆ ಅವರು ಡಿಜಿಪಿ ಆಗಿರತಕ್ಕಂತಹ ಕಾಲದಲ್ಲಿ ಅವರು ಮಾಡಿರತಕ್ಕಂಥ ಕೆಲಸಗಳು, ಅವರು ಏಕೆ ತೆಪ್ಪಗೆ ಕೂತಿದ್ದರು ಎಂದು ಕೇಳಬೇಕಾಗುತ್ತದೆ. ನಾಗಪ್ಪನವರ ಡೈರಿ, ದಿನಕರ್ ಡೈರಿ, ಇದರಲ್ಲಿ ಸಿಮಿಲಾರಿಟೀಸ್ ಇದೆ. ಇಬ್ಬರು ನಾಗಪ್ಪನವರು, ಹುತಾತ್ಮನರಾದ ನಾಗಪ್ಪನವರು, ಹೊರಗಡೆ ಬಂದಿರತಕ್ಕಂಥ ಮಾರಡಗಿ ನಾಗಪ್ಪನವರು ಮತ್ತು ದಿನಕರ್ ಇವರು ಮೂವರಲ್ಲಿ ಸಿಮಿಲಾರಿಟೀಸ್ ಇದೆ. ಅದಕ್ಕೋಸ್ಕರ ದಿನಕರ್‌ರವರನ್ನು ವಿಧಾನಸಭೆಗೆ ಕರೆಸಿ. ಕಾನೂನು ಪುಸ್ತಕದಲ್ಲಿ ನಮಗೆ ಅವಕಾಶ ಇಲ್ಲದಿದ್ದರೆ ಅದನ್ನು ಪ್ರಾವಿಜನ್ ಮಾಡಿಕೊಳ್ಳಿ. ಏಕೆಂದರೆ ಇಂತಹ ಹತ್ಯೆ 50 ವರ್ಷಗಳಲ್ಲಿ ಎಂದೂ ಆಗಿಯೇ ಇಲ್ಲ. ಅದಕ್ಕೋಸ್ಕರ ದಿನಕರ್‌ರನ್ನೂ ಕರೆಸಿ ಸತ್ಯಾಸತ್ಯತೆಯನ್ನು ನಾವು ಕೇಳೋಣ. ನೀವು ಏಕೆ ಸುಮ್ಮನಿದ್ದಿರಿ ಎಂದು ನಾವು ದಿನಕರ್‌ರವರಿಗೆ ಕೇಳಬೇಕಾಗುತ್ತದೆ. ಡಿಜಿಪಿ ಆಗಿ ಇದನ್ನು ಮಾಡುವಾಗ ಏಕೆ ಸುಮ್ಮನಿದ್ದಿರಿ, ಇದು ಕ್ರಿಮಿನಲ್ ಅಫೆನ್ಸೆ ಆಗುವುದಿಲ್ಲವಾ? ಏಕೆ ಸುಮ್ಮನಿದ್ದಿರಿ ಎಂದು ಕೇಳ ಬೇಕಾಗುತ್ತದೆ. ಆದರೆ ಈ ಸಿಮಿಲಾರಿಟೀಸ್ ಇರುವುದರಿಂದ ಇದನ್ನೂ ಸಹಿತ ನಾವು ಕೇಳಬೇಕಾಗುತ್ತದೆ. ಸಿಬಿಐ ತನಿಖೆ ಆಗದೆ ಈ ಸತ್ಯಾಂಶ ಹೊರಗಡೆ ಬರಲಿಕ್ಕೆ ಸಾಧ್ಯವಿಲ್ಲ ಸಿಬಿಐ ತನಿಖೆ ಆಗಲೇಬೇಕೆಂದು ಹೇಳಿ, ನಾನು ಈ ಸಂದರ್ಭದಲ್ಲಿ ಕೊಳತ್ತೂರು ಮಣಿಗೆ ಹಿಂಸಾಚಾರ ಕೊಟ್ಟ ವಿಚಾರ, ಆ ಸಂದರ್ಭದಲ್ಲಿ ರಿಕವರಿ ಆದ ಎರಡೂವರೆ ಕೋಟಿ ರೂಪಾಯಿಗಳಲ್ಲಿ ಎಂಟು ಲಕ್ಷ ರೂಪಾಯಿಗಳು ಮಾತ್ರ ಕೊಯಮತ್ತೂರು ಕೋರ್ಟಿನಲ್ಲಿ ಇರತಕ್ಕಂಥದ್ದು, ಉಳಿದಿದ್ದು ಎಲ್ಲಿ ಹೋಯಿತು ಎಂಬುದು ನಮಗೆ ಗೊತ್ತಿಲ್ಲ. ಇವೆಲ್ಲಾ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಬರಬೇಕಾಗುತ್ತದೆ. ಆಗ ಸತ್ಯಾಂಶ ಹೊರಗಡೆ ಬರುತ್ತದೆ ಎಂದು ನಾನು ತಿಳಿದು, ಇವೆಲ್ಲಾ ಬೇಡಿಕೆಗಳನ್ನು ನೀವು ಪೂರೈಸುವುದರ ಜೊತೆಗೆ, ನೀವು ಸ್ವಲ್ಪ ನೈತಿಕವಾಗಿ ಯೋಚನೆ ಮಾಡಿ ವೀರಪ್ಪನ್ ಜೊತೆಯಲ್ಲಿ ಸಂಪರ್ಕ ಇಟ್ಟುಕೊಂಡಿದ್ದರು ಎನ್ನುವ ಕಾರಣಕ್ಕಾಗಿ ಕೊಳತ್ತೂರು ಮಣಿ ಮೇಲೆ ಕ್ರಿಮಿನಲ್ ಕೇಸ್ ಹಾಕುವುದಾದಲ್ಲಿ ವೀರಪ್ಪನ್ ಹೇಳಿರುವ ಹಾಗೆ 1984ರಲ್ಲಿ ಕೈಗೆ ಓಟು ಕೊಡದೆ ಹೋದರೆ ಕೈ ಕತ್ತರಿಸಿ ಎಂದು ಹೇಳಿ ಗೆದ್ದು ಬಂದಿರುವ ರಾಜೂಗೌಡರವರು ನನಗೆ ವೀರಪ್ಪನ್ ಗೊತ್ತು ಎಂದು ಹೇಳಿ ಅವರಿಗೆ ಸಂದೇಶ ಕಳುಹಿಸಿದ ಮೇಲೆ ಕೊಳತ್ತೂರು ಮಣಿ ಮೇಲೆ ಏನು ಕೇಸ್

ಹಾಕಿದ್ದೀರಿ ಅದೇ ಕೇಸ್ ನೀವು ರಾಜೂಗೌಡರ ಮೇಲೆ ಹಾಕಬೇಕಾಗುತ್ತದೆ. ಕೊಳತ್ತೂರು ಮಣಿ ಮೇಲೆ ಏನು ಕೇಸ್ ಹಾಕಿದ್ದೀರಿ, ಆ ಕೇಸನ್ನು ಇವರ ಮೇಲೆ ಸಹಿತ ಹಾಕಬೇಕಾಗುತ್ತದೆ. ಇದರ ಜೊತೆ ಒಂದು ಕ್ಷಣ ಸಹಿತ ಅವರು ಅಧಿಕಾರದಲ್ಲಿ ಇರಬಾರದಾಗಿತ್ತು. ರಾಜೂಗೌಡರು ವಯಸ್ಸಿನಲ್ಲಿ ಬಹಳ ದೊಡ್ಡವರಿದ್ದಾರೆ. ಅವರಿಗೆ ಆರೋಗ್ಯ ಚೆನ್ನಾಗಿ ಇಲ್ಲ. ಆದರೆ ಇವರ ಸರ್ಕಾರ, ಇವರ ಪಕ್ಷ, ಇವರ ವ್ಯಕ್ತಿತ್ವ ಉಳಿಸಿಕೊಳ್ಳಬೇಕಾಗಿದ್ದರೆ ಇಂತಹ ಎಂಬರಾಸ್‌ಮೆಂಟ್‌ಗೆ ಅವರು ಸಿಕ್ಕಿ ಹಾಕಿಕೊಳ್ಳಬಾರದಾಗಿತ್ತು. ಇವರು ರಾಜೀನಾಮೆ ಕೊಡಲೇಬೇಕು. ಈ ಸರ್ಕಾರ ಹೋಗಲೇ ಬೇಕು, ನೈತಿಕವಾಗಿ ನಿಮಗೆ ಅಧಿಕಾರದಲ್ಲಿ ಉಳಿಯಲಿಕ್ಕೆ ಏನು ಅಧಿಕಾರ ಇದೆ ಎಂಬುದನ್ನು ದಯವಿಟ್ಟು ಹೇಳಿ ಕೊನೆಯದಾಗಿ ಈ ಸರ್ಕಾರ ಒಂದು ಒಂದು ಕ್ಷಣ ಸಹಿತ ಅಧಿಕಾರದಲ್ಲಿ ಇರಕೂಡದು. ನಾನು ಅಂದುಕೊಂಡಿದ್ದೆ, ನಾಗಪ್ಪನವರ ಹತ್ಯೆ ಆದ ತಕ್ಷಣ ಅವರ ದೇಹ ಹೊರಗಡೆ ಬಂದ ತಕ್ಷಣ ಮನಸ್ಸು ಕರಗಿ ಅಧಿಕಾರದಲ್ಲಿ ನಾವು ಇರಬಾರದು, ಇಂತಹ ತಪ್ಪು ನಮ್ಮಿಂದ ಆಗಿದೆ ಎಂದು ರಾಜೀನಾಮೆ ಕೊಡುತ್ತಾರೆಂದು ಈಗಲೂ ಸಮಯ ಕಳೆದಿಲ್ಲ. ರಾಜೀನಾಮೆ ಕೊಟ್ಟು ಕರ್ನಾಟಕ ರಾಜ್ಯದ ಜನತೆ ಕ್ಷಮೆ ಕೇಳಬೇಕು. ಇಷ್ಟು ಮಾತನಾಡಿ ತಾವು ನನಗೆ ಸಾಕಷ್ಟು ಸಮಯ ಕೊಟ್ಟಿದ್ದೀರಿ ಅದಕ್ಕೆ ನಾನು ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಜಿ. ರಾಜೂಗೌಡ (ಆಹಾರ ಸಂಸ್ಕರಣ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ನಾನು ಮಳವಳ್ಳಿಗೆ ಹೋಗಿದ್ದೆ ಯಾರು ಹಸ್ತಕ್ಕೆ ಓಟು ಕೊಡುವುದಿಲ್ಲ ಅವರ ಕೈ ತೆಗೆಯುತ್ತೇವೆಂದು ಕಲ್ಲುಬಂಡೆ ಮೇಲೆ ಬರೆಯಲಾಗಿತ್ತು ಎಂದು ಹೇಳಿದ್ದಾರೆ. 1985ರಲ್ಲಿ ನಾನು ಸ್ವತಂತ್ರ ಅಭ್ಯರ್ಥಿ. ಶ್ರೀಮಾನ್ ಶಾಂತಮೂರ್ತಿಯವರು ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರು. ನೀವು ಅರ್ಥ ಮಾಡಿಕೊಳ್ಳಿ. ನಾನು ಕಾಂಗ್ರೆಸ್ ಅಭ್ಯರ್ಥಿಯಾಗಿರಲಿಲ್ಲ. ನಾನು ಇಂಡಿಪೆಂಡೆಂಟ್ ಅಭ್ಯರ್ಥಿಯಾಗಿದ್ದೆ, ದಯಮಾಡಿ ನೀವು ಅರ್ಥ ಮಾಡಿಕೊಂಡು ಮಾತನಾಡಿ, ಸುಮ್ಮನೆ ಮಾತನಾಡುವುದು ಬೇಡ.

ಉಪಾಧ್ಯಕ್ಷರು : ಮಾನ್ಯ ವೈ.ಕೆ. ರಾಮಯ್ಯನವರು ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೇ, ನನ್ನದೊಂದು ಮನವಿ. ನಾವು ಭಾವನಾತ್ಮಕವಾದ ವಿಚಾರದಲ್ಲಿ ನಾಗಪ್ಪನವರಿಗೆ ಬಹಳ ಹತ್ತಿರದಿಂದ ನೋಡಿರತಕ್ಕಂಥವರು. ತಾವು ದಯಮಾಡಿ ಮಾತನಾಡತಕ್ಕಂಥ ಸನ್ನಿವೇಶದಲ್ಲಿ ನನಗೆ ಅವಕಾಶ ಮಾಡಿಕೊಟ್ಟಿದ್ದೀರಿ, ಅವರ ಅಪಹರಣವಾದ ನಂತರ ಅವರ ಶವವನ್ನು ಕೊನೆಯವರೆಗೆ ಹೊತ್ತುಕೊಂಡು ಹೋದವರ ಪೈಕಿ ಶ್ರೀಮಾನ್ ಹೆಚ್.ಎಸ್. ಮಹದೇವಪ್ರಸಾದ್‌ರವರು ಒಬ್ಬರು. ಕೆಲವು ವಿಚಾರಗಳನ್ನು ಅವರು ಹೇಳುವುದು ಇದೆ. ನಮ್ಮ ಕಡೆಯವರಿಗೆ ನೀವು ದಯವಿಟ್ಟು ಅವಕಾಶ ಮಾಡಿ ಕೊಡಿ. ಆದಾದ ಮೇಲೆ ರಾಜೂಗೌಡರು ಮಾತನಾಡಬೇಕಾಗುತ್ತದೆ. ಅವರು ಮಾತನಾಡುವುದು ತಪ್ಪಿಸುವುದಕ್ಕೆ ನನಗೆ ಏನು ಹಕ್ಕಿದೆ? ರಾಮಯ್ಯನವರಿಗೆ ಮಾತನಾಡತಕ್ಕಂತಹ ಹಕ್ಕು ಇದೆ. ಮುಖ್ಯ ಮಂತ್ರಿಗಳಿದ್ದಾರೆ, ಗೃಹ ಮಂತ್ರಿಗಳಿದ್ದಾರೆ ಮತ್ತು ಕಾನೂನು ಮಂತ್ರಿಗಳಿದ್ದಾರೆ. ಸರ್ಕಾರದ ಪರವಾಗಿ ಅವರು ಉತ್ತರಕೊಡಬೇಕಾಗುತ್ತದೆ. ದಯಮಾಡಿ ಈ ಭಾವನಾತ್ಮಕ ವಿಚಾರದಲ್ಲಿ ನಮ್ಮ ಭಾವನೆಗಳನ್ನು ವ್ಯಕ್ತ ಮಾಡಲಿಕ್ಕೆ ನಮಗೆ ಆದ್ಯತೆ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರ ಈ ವಿಷಯದಲ್ಲಿ ವಿರೋಧ ಪಕ್ಷದ ಸದಸ್ಯರು ಪ್ರಸ್ತಾಪ ಮಾಡಿದ ವಿಚಾರಗಳಿಗೆ ಉತ್ತರ ಕೊಡುವಷ್ಟು ಸಮರ್ಥವಾಗಿದೆ. ಆ ಪ್ರಶ್ನೆಗಳಿಗೆ ನಾನು ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ. ನನ್ನ ಸ್ನೇಹಿತರಿಗೆ ಈ ವಿಷಯದ ಬಗ್ಗೆ ತಮ್ಮ ಭಾವನೆಗಳನ್ನು ವ್ಯಕ್ತಿ ಮಾಡಲಿಕ್ಕೆ ತಮ್ಮ ಅನಿಸಿಕೆಗಳನ್ನು ವಿಧಾನಸಭೆ ಮುಖಾಂತರ ಈ ರಾಜ್ಯದ ಜನತೆಗೆ ಹೇಳಲಿಕ್ಕೆ ಒಬ್ಬ ಸದಸ್ಯನಾಗಿ ನನಗೂ ಕೂಡ ಅಂತಹ ಭಾವನೆಗಳು ಇವೆ. ಅಂತಹ ಅನಿಸಿಕೆಗಳು ಇವೆ. ಅದನ್ನು ಹೇಳುತ್ತೇನೆ. ಅಷ್ಟು ಬಿಟ್ಟರೆ ಯಾವ ಬೇರೆ ಉದ್ದೇಶ ನನಗೆ ಇಲ್ಲ. ಆದ್ದರಿಂದ ನನ್ನ ಅನಿಸಿಕೆಗಳನ್ನು ಮಾತ್ರ ನಾನು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಶ್ರೀಮಾನ್ ವೈ.ಕೆ. ರಾಮಯ್ಯನವರು ಸ್ವತಃ ಒಳ್ಳೆಯ ನ್ಯಾಯವಾದಿಗಳು. ಪ್ರಶ್ನೆ ಏನಿದೆ, ನಿಲುವಳಿ ಸೂಚನೆ ಕಳುಹಿಸಿದವರು ನಾವು. ಅವರು ನಿಲುವಳಿ ಸೂಚನೆಗೆ ಸಹಿ ಹಾಕಿಲ್ಲ. ನಿಲುವಳಿ ಸೂಚನೆಯನ್ನು ತಾವು ನಿಯಮ 69ಕ್ಕೆ ಕನ್ವರ್ಟ್ ಮಾಡಿದ್ದೀರಿ. ಯಾರು ಸಹಿ ಹಾಕಿದ್ದಾರೆ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಆ ಮೇಲೆ ಅವರಿಗೆ ಕೊಡಿ. ನಮ್ಮದು ತಕರಾರು ಏನೂ ಇಲ್ಲ.

ಶ್ರೀ ವೈ.ಕೆ. ರಾಮಯ್ಯ : ನಾನು ಮಾತನಾಡಿದರೆ ಡೈಲ್ಯೂಟ್ ಆಗುತ್ತದೆ ಎನ್ನುವ ಭಯ ಇದ್ದರೆ ನಾನು ಮಾತನಾಡುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಡೈಲ್ಯೂಟ್ ಏನಾಗುತ್ತದೆ? ಡೈಲ್ಯೂಟ್ ಆಗುವುದು ಎಲ್ಲಾ ಆಗಿ ಹೋಗಿದೆ. ನಾಗಪ್ಪ ಸತ್ತ ಮೇಲೆ ಉಳಿದಿರುವುದಾದರು ಏನು? ಪೋಸ್ಟ್ ಮಾರ್ಟಂ ಅದೂ ಸರಿಯಾಗಿ ಆಗಲಿಲ್ಲ. ರೂಲ್ 69ರಲ್ಲಿ ಸಹ ನಾವು ಸಹಿ ಮಾಡಿರತಕ್ಕಂತಹವರು ಮಾತನಾಡುತ್ತೇವೆ. ಅವರ ಸಹಿ ಇದೆಯಾ?

ಶ್ರೀ ಕರಿಯಣ್ಣ : ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಮಾತನಾಡಬೇಕೆಂದು ನಾವು ಸಭಾಧ್ಯಕ್ಷರ ಹತ್ತಿರ ಕೇಳಿದಾಗ ವಿಷಯ ಕನ್‌ವರ್ಟ್ ಮಾಡಿ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದಾರೆ. ಅದಕ್ಕೋಸ್ಕರ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ನಾಗಪ್ಪನವರ ಬಗ್ಗೆ ಅವರೊಬ್ಬರಿಗೇ ಅಲ್ಲ ಕಳಕಳಿ ಇರುವುದು, ನಮಗೂ ಸಹ ಕಳಕಳಿ ಇದೆ. ಇದರ ಬಗ್ಗೆ ನಾವು ಸಹಿತ ಮಾತನಾಡುವವರಿದ್ದೇವೆ. ಅದಕ್ಕೋಸ್ಕರ ಅವರಿಗೆ ಒಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು, ನಮ್ಮ ಕಡೆಯ ಒಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಈ ಸದನದಲ್ಲಿ ನಮಗೆಲ್ಲರಿಗೂ ಅವಕಾಶ ಮಾಡಿಕೊಡಬೇಕು. ಕೇವಲ ನಿಲುವಳಿ ಸೂಚನೆ ಕೊಟ್ಟಿದ್ದು ಒಂದೇ ಅಲ್ಲ. ನಾವೂ ಸಹಿತ ಅಧ್ಯಕ್ಷರಿಗೆ ನೋಟೀಸ್ ಕೊಟ್ಟಿದ್ದೇವೆ.

3.20 ಪಿಎಂ

ಶ್ರೀ ಬಿ.ಎನ್. ಬಚ್ಚೇಗೌಡ : ನಿಯಮ 69ರಡಿಯಲ್ಲಿಯೇ ಎರಡೂ ಕಡೆಯವರು ಒಟ್ಟಿಗೆ ಮಾತನಾಡಿದರೆ ಸರ್ಕಾರದವರು ರಿಪ್ಲೈ ಯಾರಿಗೆ ಕೊಡುತ್ತಾರೆ?

ಶ್ರೀ ಕರಿಯಣ್ಣ : ನಾಗಪ್ಪನವರ ಬಗ್ಗೆ ನಮಗೂ ಕಳಕಳಿ ಇದೆ. ಸಿಂಧ್ಯಾರವರು ಕೊಟ್ಟ ನಿಲುವಳಿ ಸೂಚನೆ ಈಗ ಕನ್‌ವರ್ಟ್ ಆಗಿದೆ. ಕನ್‌ವರ್ಶನ್‌ಗೆ ನಾವು ಒಪ್ಪಿಕೊಂಡಿದ್ದೇವೆ. ನೀವು ಒಪ್ಪಿಕೊಂಡಿದ್ದೀರಿ ನಾವೂ ಕೂಡ ಮಾತನಾಡುವವರು ಇದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ತಾವು ಹೇಳಿ. ಈಗ ಅವರು ಧರಣಿ ಮಾಡಿದ್ದಕ್ಕೆ ಅವರು ಘೋಷಣೆಗಳನ್ನು ಕೂಗಿಕೊಂಡಿದ್ದಕ್ಕೆ ನೀತಿ ಹೇಳಿದಂಥ ಪಕ್ಷದವರು ಪುಸ್ತಕದ ನಿಯಮದ ಪ್ರಕಾರ ನಡೆಯಲಿ. ನಾವು ಭಾವನಾತ್ಮಕವಾಗಿ ಅದನ್ನು ನಮ್ಮ ನಾಗಪ್ಪನವರು ಸತ್ತರು ಎನ್ನುವ ಕಾರಣಕ್ಕಾಗಿ ಕೊಲೆಯಾಗಿದೆ ಎಂದು ಹೇಳಿ ನಾವು ನೋಟೀಸ್ ಕಳುಹಿಸಿದ್ದೇವೆ. ಅದನ್ನು ತಾವು ಅಧ್ಯಕ್ಷರು ರೂಲ್ 69ಕ್ಕೆ ಕನ್ವರ್ಟ್ ಮಾಡಿದ್ದೀರಿ. ನಾವು ಅವರಿಗೆ ಅವಕಾಶ ಕೊಡಬಾರದು ಎಂದು ಹೇಳುತ್ತಿಲ್ಲ. ಪುಸ್ತಕದಲ್ಲಿರುವ ನಿಯಮದ ಪ್ರಕಾರ ತಾವು ನಿಯಮ ಸಡಿಲಗೊಳಿಸಿ ಸಭಾಧ್ಯಕ್ಷರು ಗೌರವಾನ್ವಿತ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದಕ್ಕೆ ತಮಗೆ ಹಕ್ಕಿದೆ. ಆ ಹಕ್ಕನ್ನು ನಾನು ಪ್ರಶ್ನೆ ಮಾಡುತ್ತಿಲ್ಲ ಅಥವಾ ಅವರು ಮಾತನಾಡಬಾರದು ಎಂದೂ ನಾನು ಹೇಳುವುದಿಲ್ಲ. But it is not correct according to our Rule's book.

ಉಪಾಧ್ಯಕ್ಷರು : ನಿಯಮ 69ರ ಅಡಿಯಲ್ಲಿ ಮಾಡಲಾಗಿದೆ. ಈಗ ಅವಕಾಶವನ್ನು ಎಲ್ಲರಿಗೂ ಕೊಡುತ್ತೇವೆ. ಇದರ ಬಗ್ಗೆ ಪ್ರಶ್ನೆಯೇ ಇಲ್ಲ.

ಶ್ರೀ ಬಿ. ಸೋಮಶೇಖರ್ : ಈಗ ಈ ಸದನದಲ್ಲಿ ವಿರೋಧ ಪಕ್ಷದ ಸದಸ್ಯರಿಗೆ ಮಾತನಾಡಲು ಎಷ್ಟು ಹಕ್ಕಿದೆಯೋ ಹಾಗೆಯೇ ಆಡಳಿತ ಪಕ್ಷದ ಸದಸ್ಯರಿಗೂ ಮಾತನಾಡುವುದಕ್ಕೆ ಹಕ್ಕಿದೆ. ಅದರ ಬಗ್ಗೆ ಯಾವ ಭಿನ್ನಾಭಿಪ್ರಾಯವಿಲ್ಲ. ಆದರೆ,

ಶ್ರೀ ವೈ.ಕೆ. ರಾಮಯ್ಯ : ಎರಡನ್ನೂ ನೀವೇ ಹೇಳ್ತೀರಿ. ನನಗೆ ಮಾತನಾಡಲು ಅಧಿಕಾರ ಇಲ್ಲವೆಂದು ತಾವು ಹೇಳಿ, ನಾನು ಆಗ ಕುಳಿತುಕೊಳ್ಳುತ್ತೇನೆ. ಅಧಿಕಾರ ಇಲ್ಲ ಎಂದು ತಾವು ಹೇಳಿಬಿಡಿ, ನಾನು ಕುಳಿತುಕೊಳ್ಳುತ್ತೇನೆ. ಎರಡನ್ನೂ ಹೇಳುವುದೇಕೆ? ತೊಟ್ಟಿಲು ತೂಗುವುದು ಏಕೆ? ಮಗುವನ್ನೂ ಜಿಗುಟುವುದು ಏಕೆ? ಆ ಕಡೆ ಒಬ್ಬರನ್ನು ಮಾತನಾಡಲು ಕರೆದು ಮಾತನಾಡಿದ್ದಾರೆ. ಹಾಗೆಯೇ ಈ ಕಡೆ ಒಬ್ಬರನ್ನು ಮಾತನಾಡಲು ಕರೆಯಬೇಕು. ನಾನೂ ಕೂಡ ಮಾತನಾಡಬೇಕು. ಕೇವಲ ನೀವು ಹೇಳಿದ್ದನ್ನು ಕೇಳುವುದಕ್ಕೆ ಮಾತ್ರ ನಾನಿಲ್ಲ. ನೀವೂ ಮಾತನಾಡಿ. ಆ ಕಡೆ ಒಬ್ಬರನ್ನು ಕರೆಯಲಿ, ಈ ಕಡೆ ಒಬ್ಬರನ್ನು ಕರೆಯಲಿ. ಕಾನೂನು ಪುಸ್ತಕ ನಾನೂ ತರಿಸುತ್ತೇನೆ. ಕಾನೂನು ಪುಸ್ತಕವನ್ನು ಓದೋಣ ನೀವು ಕಾನೂನು ಕೇಳುವುದಾದರೆ ನಾನು ಕಾನೂನು ಪುಸ್ತಕವನ್ನು ತರಿಸಿ ಓದುತ್ತೇನೆ. ಸ್ವಾಮಿ, ನಾವು ಕೇಳುತ್ತಿರುವುದು, ಆ ಕಡೆ ಒಬ್ಬರಿಗೆ ಅವಕಾಶ ಕೊಡಿ, ಈ ಕಡೆ ಒಬ್ಬರಿಗೆ ಕೊಡಿ.

ಶ್ರೀ ಬಿ. ಸೋಮಶೇಖರ್ : ಉಪಾಧ್ಯಕ್ಷರು ಅವಕಾಶ ಕೊಟ್ಟರೆ ತಾವು ಮಾತನಾಡಿ.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಉಪಾಧ್ಯಕ್ಷರು ಮಾತನಾಡಲಿಕ್ಕೆ ಅವಕಾಶ ಕೊಟ್ಟಾಯ್ತು. ನೀವ್ಯಾಕೆ ಅಬ್ಜೆಕ್ಟ್ ಮಾಡ್ತೀರಾ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡ್‌ರ್ ಇದೆ.

ಶ್ರೀ ವೈ.ಕೆ. ರಾಮಯ್ಯ : ಏನು ಪಾಯಿಂಟ್ ಆಫ್ ಆರ್ಡ್‌ರ್? ನಾನೂ ಎಲೆಕ್ಟ್ ಆಗಿ ಬಂದಿದ್ದೀನ್ರಿ ನಿಮ್ಮ ಹಾಗೆ? ನಿಮಗೊಬ್ಬರಿಗೆಯೇ ಭಾವನೆ ಎನ್ನುವುದು? ನಿಮಗೊಬ್ಬರಿಗೆಯೇ ಮನುಷ್ಯತ್ವ ಇರುವುದು? ನಿಮಗೆಯೇ ಮಾತ್ರ ಕರುಣೆ ಇರುವುದೇ? ನಮಗೆಲ್ಲಾ ಕ್ರಾರ್ಯ

ಇರುವುದು, ಇವರೊಬ್ಬರಿಗೆ ಕರುಣೆ ಇರುವುದು? ನಮಗಿರುವ ಭಾವನೆಗಳನ್ನು ನಾವು ವ್ಯಕ್ತ ಮಾಡುವುದು ಬೇಡವೆ?

ಶ್ರೀ ಬಿ. ಸೋಮಶೇಖರ್ : ನಾನು ಪಾಯಿಂಟ್ ಆಫ್ ಆರ್ಡ್‌ರ್ ಎಂದು ಹೇಳಿದ್ದೇನೆ. ಇವರು ಕುಳಿತುಕೊಳ್ಳದಿದ್ದರೆ ಹೇಗೆ?

ಉಪಾಧ್ಯಕ್ಷರು : ಮಾನ್ಯ ರಾಮಯ್ಯನವರೇ ಒಂದ್ನಿ ಮಿಷ. ಸೋಮಶೇಖರ್‌ರವರೇ ಹೇಳಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೇ, ನಾನು ಹೇಳುವುದು ಏನೆಂದರೆ ಪ್ರತಿಯೊಬ್ಬ ಸದಸ್ಯರಿಗೂ ....

ಶ್ರೀ ವೈ.ಕೆ. ರಾಮಯ್ಯ : ಬೆಳಿಗ್ಗೆಯಿಂದ ಮಾತನಾಡಿದ್ದನ್ನು ನಾವೆಲ್ಲಾ ಇಷ್ಟು ಜನರು ಉಸಿರು ಬಿಡದ ಹಾಗೆ ಕುಳಿತುಕೊಂಡು ಕೇಳಲಿಲ್ಲವೇ? There must be some limitation ನೀವು ಪಾಯಿಂಟ್ ಆಫ್ ಆರ್ಡ್‌ರ್ ಎತ್ತಿದ್ದಾರೆ ನಮಗೂ ಗೊತ್ತಿದೆ, ಪಾಯಿಂಟ್ ಆಫ್ ಆಡರ್ ನನಗೆ ಎತ್ತುವುದಕ್ಕೆ ಬರುವುದಿಲ್ಲ ಎಂದು ತಿಳಿದುಕೊಳ್ಳಬೇಡಿ. ಸರಿ, ನೀವು ಪಾಯಿಂಟ್ ಆಫ್ ಆರ್ಡರ್ ಎತ್ತಿ, ನೀವು, ಮಾತನಾಡುವಾಗಲ್ಲೆಲ್ಲಾ ನಾನು ಪಾಯಿಂಟ್ ಆಫ್ ಆರ್ಡ್‌ರ್ ಎತ್ತುತ್ತೇನೆ ಕೇಳಲಿಲ್ಲವೇ ಬೆಳಿಗ್ಗಿನಿಂದ ನೀವು ಹೇಳಿದ್ದನ್ನು ಕುಳಿತುಕೊಂಡು ನಾವಿಲ್ಲಿ.

ಶ್ರೀ ಬಿ. ಸೋಮಶೇಖರ್ : ಪಾಯಿಂಟ್ ಆಫ್ ಆರ್ಡ್‌ರ್ ಹೇಳುವುದಕ್ಕೆ ಅಧಿಕಾರವಿಲ್ಲವೇ ನಮಗೆ?

ಉಪಾಧ್ಯಕ್ಷರು : ರಾಮಯ್ಯನವರೇ, ಒಂದ್ನಿಮಿಷ ಈಲ್ಡ್ ಆಗಿ. ಸೋಮಶೇಖರ್‌ರವರೇ, ನೀವು ಹೇಳಿ.

ಶ್ರೀ ಬಿ. ಸೋಮಶೇಖರ್ : ಇಷ್ಟು ಇಂಪೇಷೆನ್ಸ್ ಮಾನ್ಯ ಸದಸ್ಯರು ಆದರೆ ಬಹಳ ಕಷ್ಟವಾಗುತ್ತದೆ. ನಾನು ಹೇಳಿದ್ದು ಏನು ಎಂದರೆ ವಿರೋಧ ಪಕ್ಷದವರಾಗಲೀ ಆಡಳಿತ ಪಕ್ಷದವರಾಗಲೀ ಪ್ರತಿಯೊಬ್ಬರೂ ಮಾತನಾಡುವ ಹಕ್ಕು ಇದೆ. ಆದರೆ ಯಾವ ಸಂದರ್ಭದಲ್ಲಿ ಯಾರು ಮಾತನಾಡಬೇಕು ಎನ್ನುವುದು ಬಹಳ ಮುಖ್ಯ. ಅದಕ್ಕೋಸ್ಕರ ಕೆಲವು ನಿಯಮಾವಳಿಗಳನ್ನು ರಚನೆ ಮಾಡಿದ್ದೇವೆ. ನಮ್ಮ ಸದನದಲ್ಲಿ ಪ್ರತಿಯೊಂದಕ್ಕೂ ನಿಯಮಾವಳಿಗಳಿವೆ. ಆ ನಿಯಮಾವಳಿಗಳ ಪ್ರಕಾರವೇ ಈ ಸದನದ ಒಂದು ನಡವಳಿಕೆಗಳಿಗೆ ಅಡ್ಡಿ ಬಂದ ಸಂದರ್ಭದಲ್ಲಿ ಇಡೀ ಒಂದು ಪಕ್ಷದ ಎಲ್ಲಾ ಸದಸ್ಯರನ್ನೂ ಹೊರಗೆ ಹಾಕಿದ್ದೀರಿ. ರೂಲ್ 69ರಲ್ಲಿ ಯಾವ ರೀತಿ ನೋಟೀಸ್ ಕೊಡಬೇಕು, ಯಾರು ಮಾತನಾಡಬೇಕು? ಡಿಮ್ಯಾಂಡ್ಸ್‌ನಲ್ಲಿ ಯಾರು ಮಾತನಾಡಬೇಕು. ಡಿಮ್ಯಾಂಡ್ಸ್‌ನಲ್ಲಿ ಒಂದು ಪಕ್ಷದವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡುತ್ತೀರಿ, ತದನಂತರ ವಿರೋಧ ಪಕ್ಷದವರಿಗೂ ಅವಕಾಶ ಕೊಡುತ್ತೀರಿ. ಆದರೆ ಈಗ ಡಿಮ್ಯಾಂಡ್ ಮೇಲೆ ಚರ್ಚೆ ನಡೆಯುತ್ತಿಲ್ಲ. ಆದರೆ ಈಗ ನಡೆಯುತ್ತಿರುವುದು, ನಾವು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆವು, ತಾವು ನಿಯಮಾವಳಿ ಪ್ರಕಾರ ನಿಲುವಳಿ ಸೂಚನೆಗೆ ಒಪ್ಪಿಕೊಳ್ಳದೆ ಅದನ್ನು ರೂಲ್ 69ಕ್ಕೆ ಕನ್‌ವರ್ಟ್ ಮಾಡಿದ್ದೀರಿ. ನಿಯಮ 69ರಲ್ಲಿ ಕನ್‌ವರ್ಟ್ ಮಾಡಿರುವುದಕ್ಕೆ ಯಾರ್‍ಯಾರು ಸಿಗ್ನೇಟರೀಸ್ ಇದ್ದಾರೆ, ಬಹುಶಃ ಅವರು ಸಹಿ ಮಾಡಿದ್ದರೆ ನಾವು ಸಂತೋಷ ಪಡುತ್ತಿದ್ದೆವು.

ಅವರು ಮಾತನಾಡಬಾರದು ಎಂದು ನಾವು ಹೇಳುವುದಿಲ್ಲ. ಆದರೆ ನಿಯಮ 69ರಲ್ಲಿ ಯಾರಿಗೆ ಅವಕಾಶವಿದೆ ಅವರಿಗೇ ಮಾತನಾಡಲು ನಿಯಮಾವಳಿ ಪ್ರಕಾರ ಮೊದಲು ಅವಕಾಶ ಕೊಡಬೇಕು. ತಾವು ಅವರಿಗೆ ಅವಕಾಶ ಕೊಡುವುದಾದರೆ ಕೊಡಿ. ಇಲ್ಲ, ನಿಯಮ 69ರಲ್ಲಿಯೇ ತಿದ್ದುಪಡಿ ಮಾಡಿದ್ದೇನೆ ಆದ ಕಾರಣ ಅವರಿಗೆ ಅವಕಾಶ ಕೊಡುತ್ತೇನೆ ಎಂದು ಹೇಳಿ ಅವಕಾಶ ಕೊಡಿ, ಸಂತೋಷ ನನ್ನದು ಅಭ್ಯಂತರವಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ನಿಯಮ 69ರಲ್ಲಿ ಮಾತನಾಡುವುದಕ್ಕೆ ಸದಸ್ಯರು ಅಧ್ಯಕ್ಷರಿಗೆ ಸೂಚನೆ ಕಳುಹಿಸಿರಬೇಕು. ಅದರ ಜೊತೆಗೆ ಇಬ್ಬರು ಸಹಿ ಹಾಕಿರಬೇಕು. ಆದರೆ ನಾವು ನಿಲುವಳಿ ಸೂಚನೆಯನ್ನು ಕಳುಹಿಸಿರತಕ್ಕಂಥವರು, ಆದಕಾರಣ ನಾವು ಮೊದಲು ಮಾತನಾಡಲು ಅವಕಾಶ ಕೊಡಬೇಕು.

ಶ್ರೀ ವೈ.ಕೆ. ರಾಮಯ್ಯ : ಸ್ವಾಮಿ, ನಮ್ಮ ಪಕ್ಷದ ಮುಖ್ಯ ಸಚೇತಕರು ಸೂಚನೆ ಕಳುಹಿಸಿ ಕೊಟ್ಟಿದ್ದಾರೆ.

ಉಪಾಧ್ಯಕ್ಷರು : ನಿಲುವಳಿ ಸೂಚನೆಯನ್ನು ನಿಯಮ 69ಕ್ಕೆ ಕನ್‌ವರ್ಟ್ ಮಾಡಿ ಚರ್ಚೆಗೆ ಅವಕಾಶ ಕೊಡಲಾಗಿದೆ. ಎಲ್ಲರಿಗೂ ಅವಕಾಶ ಸಿಕ್ಕೇ ಸಿಗುತ್ತದೆ. ನಿಮಗೂ ಸಿಕ್ಕೇ ಸಿಗುತ್ತದೆ. ನೋ ಪ್ರಾಬ್ಲಮ್.

ಶ್ರೀ ಬಿ.ಎನ್. ಬಚ್ಚೇಗೌಡ : ನಿಯಮ 69ರಲ್ಲೂ ಅದೇ ಹೇಳುತ್ತದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ನಿಯಮದ ಪುಸ್ತಕದಲ್ಲಿ ಏನು ಇದೆ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಿಯಮ 69 ಆದಮೇಲೆ ನಿಯಮ 71ಕ್ಕೆ ತಾವು ದಯವಿಟ್ಟು ಬನ್ನಿ. ನಿಯಮ 71ರಲ್ಲಿ "There shall be no formal motion before the House nor voting. The member who has given notice may make a short statement and the Minister shall reply shortly. Any member who has previously intimated to the Speaker may be permitted to take part in the discussion. ಯಾವಾಗ? ನಾವು ಇವೊತ್ತಿನ ದಿವಸ ರಾಮಯ್ಯನವರನ್ನು ಮಾತನಾಡಬೇಡಿ ಎಂದು ಹೇಳುತ್ತಿಲ್ಲ. ಅವರಿಗೆ ಮಾತನಾಡುವ ಹಕ್ಕು ಇದೆ.

ಶ್ರೀ ವೈ.ಕೆ. ರಾಮಯ್ಯ : ಮಾತನಾಡುವ ಬಗ್ಗೆ ಇಂಟಿಮೇಶನ್ ಕಳುಹಿಸಲಾಗಿದೆ.

ಶ್ರೀ ಸಿ. ಬೈರೇಗೌಡ : ರಾಮಯ್ಯನವರಿಗೆ ಮಾತನಾಡುವ ಹಕ್ಕು ಇದೆ. ಅವರು ತಮಗೆ ಮೊದಲೇ ತಿಳಿಸಿರಬೇಕು. ಮತ್ತೆ ಯಾರು ರುಜು ಮಾಡಿ ಕಳುಹಿಸಿರುತ್ತಾರೋ ಅವರುಗಳು ಮಾತನಾಡಿದ ನಂತರ ಸರ್ಕಾರದಿಂದ ಉತ್ತರ ಬಂದನಂತರ, ಮೊದಲೇ ಯಾರು ಸೂಚನೆ ಕೊಟ್ಟಿರುತ್ತಾರೆ ಅವರಿಗೂ ಮಾತನಾಡುವುದಕ್ಕೆ ಸಂಪೂರ್ಣ ಹಕ್ಕಿದೆ. ಆದುದರಿಂದ ಇವೊತ್ತು ಮೊದಲು ನಮ್ಮ ಕಡೆಯವರು ರುಜು ಹಾಕಿರುವಂಥದ್ದು. ಆದ್ದರಿಂದ ನಮ್ಮವರುಗಳೆಲ್ಲರೂ ಮಾತನಾಡಿದ್ದು ಆದಮೇಲೆ ನೀವು ಇಷ್ಟಪಟ್ಟರೆ, ಅವರು ಮೊದಲೇ ತಮಗೆ ಬರವಣಿಗೆಯಲ್ಲಿ ತಿಳಿಸಿದ್ದರೆ, ದಯವಿಟ್ಟು ತಾವು ಅವರಿಗೆ ಅವಕಾಶ ಮಾಡಿಕೊಡಿ. ಆದುದರಿಂದ ಈ ನಿಯಮಾವಳಿಗಳು ಏನಿವೆ, ಆ ನಿಯಮಾವಳಿ ಪ್ರಕಾರ ತಾವು ಸದನವನ್ನು ನಡೆಸಬೇಕು ಎಂದು ತಮಗೆ ಮನವಿಯನ್ನು ನಾನು ಈ ಸಂದರ್ಭದಲ್ಲಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೆ, ನಾನೇನು ಪಾಯಿಂಟ್ ಆಫ್ ಆರ್ಡ್‌ರ್ ಎತ್ತಿದೆ ಅದಕ್ಕೆ ತಾವು ತೀರ್ಪು ಕೊಟ್ಟು ಮುಂದುವರೆಯಬೇಕು.

ಶ್ರೀ ವೈ.ಕೆ. ರಾಮಯ್ಯ : ಈಗ ಅವರೇ ಹೇಳಿದ್ದಾರೆ ಸ್ವಾಮಿ. ಸೂಚನೆಯನ್ನು ಕಳುಹಿಸಿದಂಥ ಎಲ್ಲಾ ಸದಸ್ಯರಿಗೂ ಮಾತನಾಡುವುದಕ್ಕೆ ಅಧಿಕಾರ ಇದೆ ಎಂದು ಹೇಳಿದ್ದಾರೆ. ನಮ್ಮ ಪಕ್ಷದಿಂದ ನನ್ನ ಹೆಸರನ್ನೂ ಸೇರಿಸಿ ಸೂಚನೆ ಕಳುಹಿಸಿಯಾಗಿದೆ. ನನಗೆ ಮಾತನಾಡಲಿಕ್ಕೆ ಅಧಿಕಾರ ಇದೆ. ಸೂಚನೆ ಕಳುಹಿಸಿದಂಥ ಎಲ್ಲಾ ಸದಸ್ಯರಿಗೂ ಅಧಿಕಾರ ಇದೆಯೆಂದು ಅವರೇ ಈಗ ಓದಿ ಹೇಳಿದ್ದಾರೆ ಅವರು ಹೇಳಿದ್ದೇ ಹೇಳ್ತಾ ಇದ್ದೇನೆ ನಾನು. ನಾವೂ ಸೂಚನೆ ಕಳುಹಿಸಿಯಾಗಿದೆ. ಆದ್ದರಿಂದ ನನಗೆ ಮಾತಿನಾಡಲಿಕ್ಕೆ ಅಧಿಕಾರ ಇದೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಮಾನ್ಯ ಉಪಾಧ್ಯಕ್ಷರೆ, ಬಿ.ಜೆ.ಪಿ.ಯವರು ಹೇಳಿದ ಹಾಗೆ ನಾವು ಮಾಡಬೇಕು ಎಂದು ಇದ್ಯಾ? ಕಾನೂನು ಪ್ರಕಾರ ನಡೆಯಿರಿ ಎಂದು ಹೇಳಿದರೆ ಅದಕ್ಕೂ ಕಷ್ಟ ಅಂಥ ಹೇಳಿದರೆ ಹೇಗೆ? ನಾವ್ಯಾಕೆ ಇಲ್ಲಿಗೆ ಬರಬೇಕು? ಏಕೆ ಬರಬೇಕು ಹೇಳಿ?

(ಗೊಂದಲ)

ಶ್ರೀ ಸಿ. ಬೈರೇಗೌಡ : ಅವರು ಮಾತನಾಡುವುದು ಬೇಡ ಎಂದು ಹೇಳುತ್ತಿಲ್ಲ. ರೂಲ್ಸ್ ಪ್ರಕಾರ ನಡೆಯಿರಿ ಎಂದು ಮಾತ್ರ ಹೇಳುತ್ತಿರುವುದು. ನಾವೇನೂ ಬೇರೆ ಕೇಳುತ್ತಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ರೂಲ್ಸ್ ಪ್ರಕಾರ ನಡೆಯೋಲ್ಲ ಎಂದರೆ ನೀವೇ ಮಾಡಿಕೊಳ್ಳಿ.

ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ : ಮೊದಲು ನಾವು ಮಾತನಾಡಿದ ಮೇಲೆ ಅವರಿಗೆ ಅವಕಾಶ ಕೊಡಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಕಾನೂನು ಪ್ರಕಾರ ನಡೆದುಕೊಳ್ಳುವುದಕ್ಕೂ ನಾವು ಇಷ್ಟು ಕೇಳಬೇಕೆ?

ಶ್ರೀ ಬಿ. ಸೋಮಶೇಖರ್ : ತಾವು ಅವರನ್ನು ಹೊರಗೆ ಹಾಕಿದಾಗ ನಾವು ಅವರಿಗೆ ಬೆಂಬಲ ಕೊಟ್ಟೆವಾ? ತಾವು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತಿದ್ದೀರಿ ಎಂದು ನಾವು ಸುಮ್ಮನೇ ಇದ್ವಿ. ನಿಯಮಾವಳಿ ಪ್ರಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ನಾವು ಹೇಳಿದ್ದೇವೆ. ಇಲ್ಲೂ ಕೂಡ ನಿಯಮಾವಳಿ ಪ್ರಕಾರ ತಾವು ಕ್ರಮ ತೆಗೆದುಕೊಳ್ಳಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಈ ವಿಚಾರದ ಬಗ್ಗೆ ನಮ್ಮ ಕಡೆಯ ಸದಸ್ಯರು ಮಾತನಾಡುತ್ತಾರೆ. ಒಂದಿಬ್ಬರು ಮೂವರು ಮಾತನಾಡಿದ ಮೇಲೆ ಅವರಿಗೂ ತಾವು ಅವಕಾಶ ಕೊಡಿ.

ಶ್ರೀ ವೈ.ಕೆ. ರಾಮಯ್ಯ : ಇಂಥ ಇಶ್ಯೂ ಬಗ್ಗೆ ಮಾತನಾಡುವುದೆಲ್ಲಾ ನಿಮ್ಮದ್ದೇ ಹಕ್ಕೇ? ಗಹನವಾದ ವಿಷಯಗಳನ್ನು ಮಾತನಾಡುವುದು ನಿಮ್ಮ ಗುತ್ತಿಗೆಯೇ? ಗಹನವಾದ ವಿಷಯಗಳನ್ನು ಮಾತನಾಡುವುದು ನಿಮಗೊಬ್ಬರಿಗೇ ಹಕ್ಕೇ? ನಮಗೇನು ಮಾತನಾಡುವುದಕ್ಕೆ ಅಧಿಕಾರವಿಲ್ಲವೆ?

ಶ್ರೀ ಕೆ. ಶ್ರೀನಿವಾಸ ಕುಡುವನಹಳ್ಳಿ : ಈ ರೀತಿ ಮಾತನಾಡುವುದಕ್ಕೆ ನಮಗೂ ಬರುತ್ತದೆ. ಬರೆ ಅವರಿಗೇ ಅಲ್ಲ ಗಂಟಲು ಇರುವುದು, ನಮಗೂ ಗಂಟಲು ಇದೆ. ನಮಗೂ ಕಿರುಚಾಡುವುದಕ್ಕೆ ಶಕ್ತಿ ಇದೆ. ಇನ್ನೂ ಅವರಿಗಿಂತಲೂ ನಮಗೆ ವಯಸ್ಸು ಕಡಿಮೆ.

ಉಪಾಧ್ಯಕ್ಷರು : ಆಯಿತು ಬಿಡಿ. ಒಂದ್ನಿಮಿಷ ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಈ ನಿಲುವಳಿ ಸೂಚನೆಯನ್ನು ಸಭಾಧ್ಯಕ್ಷರು ಪರಿವರ್ತನೆ ಮಾಡಿ ನಿಯಮ 69ರ ಕೆಳಗಡೆ ಈ ಚರ್ಚೆ ಪ್ರಾರಂಭವಾಗಿದೆ. ಹಿಂದಿನ ನಡವಳಿಕೆಗಳು ಬೇರೆ ಬೇರೆ ರೀತಿಯ ಅಪವಾದವಾಗಿರಬಹುದು. "There shall be no formal motion before the House, nor voting. The member who has given notice may make a short statement." Which the hon.member has made lasting for two hours, ".. and the Minister shall reply shortly." It is now our turn. ನೀವು ರೂಲ್ ಹೇಳಿಬಿಟ್ಟು ಈ ತರಹ ಮಾಡಿದಿರಿ ಅಂದರೆ. ಇದರಲ್ಲಿ ಏನು ರೂಲ್ ಪ್ರಿಂಟ್ ಆಗಿದೆ ಅದನ್ನು ನಾನು ಓದುತ್ತಿದ್ದೇನೆ. ಈಗ ಮಾನ್ಯ ಸೋಮಶೇಖರ್ ಅವರು ರೂಲಿಂಗ್ ಕೊಟ್ಟುಬಿಟ್ಟು ಮುಂದೆ ಕರೆಯಿರಿ ಎಂದು ಹೇಳಿದರು. ಕರೆಕ್ಟ್, ಪಾಯಿಂಟ್ ಆಫ್ ಆರ್ಡ್‌ರ್‌ನಲ್ಲಿ ನೀವೇನು ನಿಯಮ 69 ಅನ್ನು ರೈಸ್ ಮಾಡಿದ್ದೀರಿ, "Any member who has previously intimated to the Speaker may be permitted to take part in the discussion." That is the exemption clause for Rule 69. ಈಗ ಯಾರಿಗೆ ಹೆಚ್ಚು ನೋವಾಗಿದೆ ಎನ್ನುವಂತಹ ಪ್ರಶ್ನೆಯನ್ನು ಒತ್ತಟ್ಟಿಗೆ ಇಟ್ಟು ಇಲ್ಲಿ ಈ ಸದನದಲ್ಲಿ ಎಲ್ಲರೂ ಸಮಾನ ಹಕ್ಕನ್ನು ಪಡೆದಿರುತ್ತಾರೆ. ಮಾನ್ಯ ಸದಸ್ಯರಾದ ರಾಮಯ್ಯನವರು ತಮ್ಮ ಪರವಾನಿಗೆ ಕೇಳಿದ್ದರೆ, ಮಾನ್ಯ ಮಹದೇವಪ್ರಸಾದ್, ಕೃಷ್ಣಮೂರ್ತಿಯವರು ಹಾಗೂ ಚೆನ್ನಿಗಪ್ಪ ಅವರೆಲ್ಲಾ ಯಾರು ಪರವಾನಗಿ ಕೇಳಿದ್ದಾರೆ.

ಮಾನ್ಯ ಸದಸ್ಯರು : ಚನ್ನಿಗಪ್ಪನವರು ಇಲ್ಲ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಚೆನ್ನಿಗಪ್ಪನವರು ಕೊಟ್ಟಿದ್ದೇವೆ ಎಂದು ಕೈ ತೋರಿಸುತ್ತಿದ್ದಾರೆ. ನಮ್ಮದು, ಅವರದು ಕೈ ತೋರಿಸುತ್ತಿರುವುದರಿಂದ ಕೊಟ್ಟಿದ್ದೇನೆಂದು ಆಯಿತು. ನಾನು ಎಲ್ಲರ ಜೊತೆ ಚೆನ್ನಾಗಿ ಇರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಕೈ ಎಲ್ಲರಿಗೂ ಚಾಚುತ್ತೇನೆ. ಯಾರು ಅದನ್ನು ಗಟ್ಟಿಯಾಗಿ ಹಿಡಿಯುತ್ತಾರೆ ಅವರ ಜೊತೆ ಹೋಗುತ್ತೇನೆ. ಅದರ ಬಗ್ಗೆ ನಿಮಗೆ ಯಾವ ಅನುಮಾನವೂ ಬೇಡ. ಆದುದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು....

ಶ್ರೀ ಪಿ.ಜಿ.ಆರ್. ಸಿಂಧ್ಯ : ವಿರೋಧ ಪಕ್ಷದ ನಾಯಕರು ಅವರು ಹೊರಗೆ ಇದ್ದಾರೆ.

ಶ್ರೀ ಎಸ್.ಎಂ. ಕೃಷ್ಣ : ಈಗ ಇರತಕ್ಕಂಥಾದ್ದರಲ್ಲಿ ನೀವು ತಾನೇ ನಮ್ಮ ವಿರೋಧ ಪಕ್ಷದ ನಾಯಕರು. ಆ ವ್ಯಾಕ್ಯುಮ್ ಅನ್ನು ನೀವು ಬಹಳ ಸಮರ್ಥವಾಗಿ ತುಂಬಿದ್ದೀರಿ ಎಂದು ನಾನು ನಿಮಗೆ ಕಾಂಪ್ಲಿಮೆಂಟ್ಸ್ ಕೊಡುತ್ತೇನೆ. ಆದುದರಿಂದ ಈ ಹಿನ್ನೆಲೆಯಲ್ಲಿ ಅವರು ಸ್ವಲ್ಪ ಹೇಳುತ್ತಾರೆ. ಇಡೀ ದಿವಸ ಅಥವಾ ನಾಳೆ ಕೂಡ ಈ ಚರ್ಚೆ ಮುಂದುವರೆಯುತ್ತದೆ. ನಾಡಿದ್ದು ತಾವು ಅಪ್ಪಣೆ ಕೊಡುವುದಾದರೆ ಇದಕ್ಕೆ ಸರ್ಕಾರದ ಪರವಾಗಿ ನಾವು ಹಳಬೇಕಾದ್ದನ್ನು ಈ ಸದನದ ಮೂಲಕ ಹೇಳುತ್ತೇವೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೆ, ಆಡಳಿತ ಪಕ್ಷದವರಿಗೆ ಸದನದಲ್ಲಿ ಮಾತನಾಡುವ ಹಕ್ಕಿಲ್ಲವೆಂದು ನಾನು ಹೇಳುತ್ತಿಲ್ಲ. ಅವರು ಮಾತನಾಡಬೇಕು. ಎಲ್ಲರಿಗೂ ಮಾತನಾಡತಕ್ಕಂಥ ಹಕ್ಕಿದೆ. ನಿಯಮ 69ರಲ್ಲಿ ಯಾರು ಮೊದಲು ಸಿಗ್ನೇಟರೀಸ್ ಇದ್ದಾರೆ, "Provided further that the notice shall be supported by signatures of at least two other members." For raising discussion on a matter of urgent public importance, "Provided further that the notice shall be supported by signatures of at least two other members. ಎಂದರೆ ಯಾರು ಸಪೋರ್ಟ್ ಮಾಡಿದ್ದಾರೆ, ಆ ಸಿಗ್ನೇಟರ್ಸ್‌ಗೆ ಅವರು ಮಾತನಾಡತಕ್ಕಂಥ ಅವಕಾಶ ಇದೆ ಎಂದು ಹೇಳಿ ಕನ್‌ವೆನ್‌ಷನ್ ಆಗಿ ಬಂದಿರುವುದು. ರೂಲ್ ಇದೆ. ಅದರ ಜೊತೆಗೆ ಯಾರು ಸಿಗ್ನೇಟರ್ಸ್ ಇದ್ದಾರೆ ಅವರು ಮಾತನಾಡತಕ್ಕಂಥ ಅವಕಾಶ ಇದೆ ಎಂದು ನಡೆದು ಬಂದಿರತಕ್ಕಂಥ ದಾರಿ. ಇದಾದಮೇಲೆ ನಿಯಮ 71ರಲ್ಲಿ "The member who has given notice may make a short statment and the Minister shall reply shortly. Any member who was previously intimated to the Speaker may be permitted to take part in the discussion." ಎಂದರೆ ನಾವು ಸಿಗ್ನೇಟರೀಸ್ ಯಾರು ಇದ್ದೇವೆ ಅದರ ಅರ್ಥ ನಾವು ಅಧ್ಯಕ್ಷರಿಗೆ ಇಂಟಿಮೇಟ್ ಮಾಡಿದ್ದೇವೆ ಎಂದು. ಅವರಿಗೂ ಕೂಡ ಮಾತನಾಡುವುದಕ್ಕೆ ಅವಕಾಶ ಇದೆ. ನಮಗೆ ಮೊದಲು ಅವಕಾಶ ಕೊಟ್ಟು ನಂತರ ಅವರಿಗೆ ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿದ್ದವರು. ರೂಲ್ 69ರಲ್ಲಿ ಯಾರು ಸಿಗ್ನೇಟರ್ಸ್ ಇದ್ದಾರೆ ಅವರಿಗೆ ಮೊದಲು ಅವಕಾಶ ಕೊಡಬೇಕಾ ಅಥವಾ ಬೇರೆಯವರಿಗೆ ಮಧ್ಯದಲ್ಲಿ ರೂಲಿಂಗ್ ಪಾರ್ಟಿಯವರಿಗೆ ಅವಕಾಶ ಕೊಡತಕ್ಕಂಥಾದ್ದು ಎಲ್ಲಾದರೂ ಈ ನಿಯಮಾವಳಿಯಲ್ಲಿ ಇದೆಯಾ? ಅವರಿಗೆ ಮಾತನಾಡಬೇಡಿ ಎಂದು ಹೇಳುವುದಿಲ್ಲ. ಅವಕಾಶ ಅವರಿಗೂ ಕೊಡಿ. ಆದರೆ ಮೊದಲನೆ ಆದ್ಯತೆ ಯಾರು ಸಿಗ್ನೇಟರ್ಸ್ ಇದ್ದಾರೆ, ನಿಯಮ 69ರಲ್ಲಿ ಯಾರು ಸಿಗ್ನೇಚರ್ ಹಾಕಿದ್ದಾರೆ ಅವರಿಗೆ ಕೊಡಬೇಕು. ಇದೆಲ್ಲಾ ಆದಮೇಲೆ ಸರ್ಕಾರದ ಜೊತೆ ಅವರು ಸಮರ್ಥನೆ ಮಾಡಬೇಕಾದರೆ ಆ ಸದಸ್ಯರುಗಳು ಮಾತನಾಡತಕ್ಕಂಥ ಅವಶ್ಯಕತೆ ಇದೆ. ತಾವು ಅವಕಾಶ ಕೊಡಿ, ಮಾಡಲಿ. ಆದುದರಿಂದ ನಾನು ಹೇಳುವುದು ಮೊದಲು ನಮಗೆ ಅವಕಾಶ ಕೊಡಬೇಕು ನಂತರ ಅವರಿಗೆ ಅವಕಾಶ ಕೊಡಬೇಕು.

ಶ್ರೀ ಎಸ್.ಎಂ. ಕೃಷ್ಣ : ನಾನು ಎದುರಿಸುವುದಕ್ಕೆ ಅವಕಾಶ ಸಿಗಲಿಲ್ಲ. ನಾನು ಸ್ಪೀಕರ್ ಆಗಿದ್ದೆ ಎನ್ನುವ ಪ್ರಶ್ನೆಗಿಂತಲೂ ಹೆಚ್ಚು ಮುಖ್ಯವಾಗಿ ಬೇರೆಯವರು ಮಾತನಾಡಲಿ, ಮಾನ್ಯ ರಾಮಯ್ಯನವರ ತೊಂದರೆ ಏನೆಂದರೆ, ನಾಳೆ ಅವರು ಸದನದಲ್ಲಿ ಇರುವುದಿಲ್ಲ. ಆದುದರಿಂದ ಈ ದಿವಸ ಅವರಿಗೆ ಮಾತನಾಡಲಿಕ್ಕೆ ಅನುವು ಮಾಡಿಕೊಡಬೇಕು. ಇಬ್ಬರು ಸದಸ್ಯರು ಮಾತನಾಡಿದಮೇಲೆ ನೀವು ಮಾತನಾಡಿ. ಅವರನ್ನು ಸ್ಪೀಕರ್ ಕರೆದರು. ಮಾನ್ಯ ರಾಮಯ್ಯನವರು ನನ್ನ ಕೋರಿಕೆಗೆ ಮನ್ನಣೆ ಕೊಡುತ್ತಾರೆ. He will yield the floor to Mr. Mahadev Prasad, so that let him speak.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ಎಲ್ಲಾ ನನ್ನ ಹಳೆ ಸ್ನೇಹಿತರು ಹೇಗೆ ತೀರ್ಮಾನ ತೆಗೆದುಕೊಳ್ಳುತ್ತಾರೆ ನಾನು ಅದಕ್ಕೆ ಬದ್ಧನಾಗಿರುತ್ತೇನೆ.

†ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಉಪಾಧ್ಯಕ್ಷರೆ, ಕಾಡುಗಳ್ಳ ವೀರಪ್ಪನಿಂದ ಮಾನ್ಯ ನಾಗಪ್ಪನವರ ಅಪಹರಣ ಆಗಿ ನೂರ ಆರು ದಿನಗಳ ಕಾಲ ಕಾಡಿನಲ್ಲಿ ವನವಾಸ ಅನುಭವಿಸಿ ಕೊನೆಗೆ ನಿಗೂಢವಾದ ರೀತಿಯಲ್ಲಿ ಅವರ ಅಂತ್ಯವನ್ನು ಕಾಣತಕ್ಕಂಥ ಒಂದು ಪರಿಸ್ಥಿತಿ ಇವತ್ತು ನಮ್ಮ ಮುಂದೆ ಉಂಟಾಗಿದೆ. ವೀರಪ್ಪನ್ ಕಳೆದ 37 ವರ್ಷಗಳಿಂದ ಕಾಡಿನಲ್ಲಿ ಜೀವನ ನಡೆಸುತ್ತಿದ್ದಾನೆ. ಇದುವರೆಗೂ ಅವನು 2000 ಆನೆಗಳನ್ನು ಬಲಿ ತೆಗೆದುಕೊಂಡು, ಕರ್ನಾಟಕದ 54 ಮಂದಿ ಹಾಗೂ ತಮಿಳುನಾಡಿನ 66 ಮಂದಿಯನ್ನು ಕೊಲೆ ಮಾಡಿದ್ದಾನೆ. ಆದರೆ ಇದುವರೆಗೂ 18 ಜನರನ್ನು ಅಪಹರಣ ಮಾಡಿದ್ದಾನೆ. ಮಾಡಿದಂತಹ 18 ಜನರನ್ನೂ ಸಹ ಸುರಕ್ಷಿತವಾಗಿ ಬಿಡುಗಡೆ ಮಾಡಿದ್ದಾನೆ. ಆದರೆ 19ನೇ ವ್ಯಕ್ತಿ ದಿವಂಗತ ನಾಗಪ್ಪನವರು. ಇವರನ್ನು ನಾವು ವೀರಪ್ಪನ್‌ನಿಂದ ಬಿಡಿಸಿ ಕೊಳ್ಳುವುದಕ್ಕೆ ಆಗದೆ ಅವರ ದುರ್ಮರಣದ ಪರಿಸ್ಥಿತಿಯನ್ನು ಅವರ ಕುಟುಂಬ ಮತ್ತು ನಮ್ಮ ರಾಜ್ಯ ನೋಡಬೇಕಾದಂತಹ ಪರಿಸ್ಥಿತಿ ಬಂದೊದಗಿದೆ. ಆಗಸ್ಟ್ 25ನೇ ತಾರೀಖು, 26ನೇ ತಾರೀಖಿನಂದು ಚಾಮರಾಜನಗರದಲ್ಲಿ ಡಾ॥ ರಾಜ್‌ಕುಮಾರ್ ಅವರ ಮಗ ನಟಿಸಿದಂತಹ ಚಿತ್ರದ ಶತ್ರದಿನೋತ್ಸವ. ಆ ಒಂದು ಕಾರ್ಯಕ್ರಮಕ್ಕೆ ರಾಜ್‌ಕುಮಾರ್ ಅವರ ಮಗನನ್ನು ಆಹ್ವಾನಿಸಬೇಕೆಂದು ಆ ಚಿತ್ರಮಂದಿರದ ಮಾಲೀಕರು ಭೇಟಿ ಮಾಡುವುದಕ್ಕೆ ಹೋದಾಗ ಡಾ॥ ರಾಜ್‌ಕುಮಾರ್ ಆ ಒಂದು ಕಾರ್ಯಕ್ರಮಕ್ಕೆ ತಾವೇ ಬರುತ್ತೇವೆಂದು ಒಪ್ಪಿಗೆ ಕೊಟ್ಟರು. ಅವರು ಒಪ್ಪಿಗೆ ಕೊಟ್ಟಮೇಲೆ ಡಾ॥ ರಾಜ್‌ಕುಮಾರ್ ಅಲ್ಲಿಗೆ ಬರುವುದು ಸೂಕ್ತವೋ ಇಲ್ಲವೋ, ಅವರು ಎರಡು ವರ್ಷದ ಹಿಂದೆ ಅಪಹರಣಕ್ಕೆ ಒಳಗಾಗಿದ್ದರು, ಹೇಗೋ ಮಾಡಿ ಅವರನ್ನು ಬಿಡಿಸಿಕೊಂಡು ಬಂದೆವು, ಅಂತಹವರನ್ನು ಮತ್ತೆ ಆ ಪ್ರದೇಶಕ್ಕೆ ಕರೆದುಕೊಂಡು ಹೋಗಬೇಕೋ ಎಂದು ವಿವೇಚನೆ ಮಾಡದೆ ಗಾಜನೂರಿಗೆ ದಿನಾಂಕ 25ರಂದು ಭೇಟಿ ಮಾಡಿಸುವಂತಹ ಅವಕಾಶವನ್ನು ಪೊಲೀಸ್ ಅಧಿಕಾರಿಗಳು ಮಾಡಿಸಿಕೊಡುತ್ತಾರೆ. ಕೊಳ್ಳೇಗಾಲದ ರಾಮಪುರ, ಮಹದೇಶ್ವರ ಬೆಟ್ಟ ಪೊಲೀಸ್ ಠಾಣೆಯಿಂದ ಹಿಡಿದು ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಇರತಕ್ಕಂಥ ಎಲ್ಲಾ ಇನ್ಸ್‌ಪೆಕ್ಟರ್ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಕೇಡರ್ ಮೇಲಿನಿಂದ ಇರತಕ್ಕಂಥ ಎಲ್ಲಾ ಪೊಲೀಸ್ ಅಧಿಕಾರಿಗಳನ್ನು ಡಾ॥ ರಾಜ್‌ಕುಮಾರ್ ಅವರ ರಕ್ಷಣೆಗೆ ಅಲ್ಲಿ ನಿಯೋಜಿಸಿರುತ್ತಾರೆ. ಇಂತಹ ಒಂದು ಸನ್ನಿವೇಶವನ್ನು ಮನಗಂಡಂತಹ ವೀರಪ್ಪನ್ ರಾತ್ರಿ ಸುಮಾರು 9.45ಕ್ಕೆ, ನಾಗಪ್ಪನವರು ಅವರ ಮೊಮ್ಮಗುವಿನ ನಾಮಕರಣದ ಕಾರ್ಯಕ್ರಮದಲ್ಲಿ ಭಾಗವಹಿಸಿರುತ್ತಾರೆ. ನಾನೂ ಕೂಡ ಆ ದಿನ ಅವರಿಗೆ 30ನೇ ತಾರೀಖು ನಮ್ಮ ಪಕ್ಷದ ಕಾರ್ಯಕ್ರಮ ಇದೆ, ನೀವು ಬೆಂಗಳೂರಿಗೆ ಬರಬೇಕೆಂದು ನಾಲ್ಕು ಗಂಟೆಯಲ್ಲಿ ದೂರವಾಣಿಯಲ್ಲಿ ಅವರ ಜೊತೆ ಮಾತನಾಡಿದ್ದೇನೆ. ಆ ದಿನ ನಾವು ಈ ಕಡೆಯಿಂದ ಬರುತ್ತೇವೆ, ನೀವು ಆ ಕಡೆಯಿಂದ ಬನ್ನಿ ಎಂದು ಹತ್ತು ಹದಿನೈದು ನಿಮಿಷ ಯೋಗಕ್ಷೇಮ ಎಲ್ಲಾ ಮಾತನಾಡಿದ್ದೇವೆ. ಕೊಳ್ಳೇಗಾಲಕ್ಕೆ ಹೋಗಿ 9.30ಕ್ಕೆ ಕಾಮಗೆರೆಗೆ ವಾಪಸ್ಸು ಬಂದರು. ಹಾಗೆ ಬಂದು ಅವರು ಹಾಕಿಕೊಂಡಂತಹ ಬಟ್ಟೆ ತೆಗೆದು ಪಂಚೆ ಕಟ್ಟಿಕೊಳ್ಳುವ ಸಮಯಕ್ಕೆ ಒಬ್ಬ

ಬಾಗಿಲು ಕುಟ್ಟುತ್ತಾನೆ. ನಂತರ ವೀರಪ್ಪನ್ ಹಿಂದುಗಡೆಯಿಂದ ಬಂದು ನಾಗಪ್ಪ ಅವರನ್ನು ಅಪಹರಣ ಮಾಡಿಕೊಂಡು ಹೋಗುತ್ತಾನೆ. ಆಗ ನಾಗಪ್ಪ ಅವರಿಗೆ ಇದ್ದಂತಹ ಒಬ್ಬನೇ ಒಬ್ಬ ಪೊಲೀಸ್ ಪೇದೆ ರೂಮಿನಲ್ಲಿ ಮಲಗಿದ್ದು, ಅವನು ಅಲ್ಲಿಂದ ಗುಂಡು ಹಾರಿಸಿದ್ದೇನೆ ಎಂದು ಹೇಳುತ್ತಾನೆ. ಅದು ಎಷ್ಟರಮಟ್ಟಿಗೆ ನಿಜ ಎನ್ನುವುದನ್ನು ತನಿಖೆಯಿಂದ ಮಾತ್ರ ತಿಳಿಯುವುದಕ್ಕೆ ಸಾಧ್ಯ. ಎರಡು ಮೂರು ವರ್ಷದಿಂದ ನಾಗಪ್ಪನವರಿಗೆ ಸೆಕ್ಯುರಿಟಿ ವ್ಯವಸ್ಥೆ ಮಾಡಿದ್ದರೋ ಅವರಿಗೆ ಸರ್ಕಾರದಿಂದ ಸಂಬಳ ವಗೈರೆ ಇದ್ದರೂ ಕೂಡ ನಾಗಪ್ಪನವರ ಉದಾರತೆ ಹೇಗೆ ಇತ್ತು ಎಂದರೆ ಅವರ ಮನೆಯಲ್ಲಿ ಮಾಡಿದಂತಹ ಊಟೋಪಚಾರವನ್ನು ಆ ಒಂದು ಸೆಕ್ಯುರಿಟಿ ಸಿಬ್ಬಂದಿಗಳಿಗೆ ಮಾಡಿಕೊಂಡು ಬಂದರು. ಆ ದಿವಸವೂ ಕೂಡ ಊಟ ಮಾಡಿ ಅವನು ಸುರಕ್ಷಿತವಾಗಿ ಮಲಗಿರುತ್ತಾನೆ, ಅವನು ನಾಗಪ್ಪನವರನ್ನು ಅಪಹರಣ ಮಾಡಿಕೊಂಡು ಹೋದಾಗ ಸುಮಾರು ಒಂಭತ್ತೂ ಮುಕ್ಕಾಲು ಹತ್ತು ಗಂಟೆ ಒಳಗಡೆ ಇಡೀ ರಾಜ್ಯಾದ್ಯಂತ ಒಂದು ಸುದ್ಧಿ ಪ್ರಚಾರಕ್ಕೆ ಬರುತ್ತದೆ. ಹತ್ತು ಗಂಟೆಗೆ ಸರಿಯಾಗಿ ಕೃಷ್ಣಮೂರ್ತಿಯವರು ನಾಗಪ್ಪನವರ ಅಪಹರಣವಾಗಿದೆ ಎನ್ನುವ ಸುದ್ಧಿ ವೈರ್‌ಲೆಸ್‌ನಿಂದ ಪೊಲೀಸ್ ಮೂಲದಿಂದಲೇ ಗೊತ್ತಾಗಿದೆ ಎಂದು ನನಗೆ ತಿಳಿಸಿದರು, ಅದೇ ರೀತಿ ಎಲ್ಲಾ ಕಡೆ ತಿಳಿಸಿದ್ದಾರೆ. ಕಾಮಗೆರೆ ಈ ಕಡೆ ಹನೂರು ಪೊಲೀಸ್ ಸ್ಟೇಷನ್‌ಗೂ ಹತ್ತು ಕಿಲೋಮೀಟರ್ ಈ ಕಡೆ ಕೊಳ್ಳೇಗಾಲ ಪೊಲೀಸ್ ಸ್ಟೇಷನ್‌ಗೂ ಹತ್ತು ಕಿಲೋಮೀಟರ್ ಗುಂಡಾಲ್ ಡ್ಯಾಂನಲ್ಲಿರತಕ್ಕಂಥ ಗೇಸ್ಟ್ ಹೌಸ್ ಏನಿದೆ ಅಲ್ಲಿ ಎಸ್‌ಟಿಎಫ್‌ನ ಕ್ಯಾಂಪ್ ಇದೆ ಅದು 6 ಕಿಲೋಮೀಟರ್ ಆ ಗುಂಡಾಲ್‌ನಲ್ಲಿ 200 ಜನ ಎಸ್‌ಟಿಎಫ್ ಯೋಧರು ವೀರಪ್ಪನ್ ಕಾರ್ಯಾಚರಣೆಗೆಂದು ಇದ್ದಾರೆ. ಆದರೂ ಕೂಡ ನಾಗಪ್ಪನವರನ್ನು ಅಪಹರಣ ಮಾಡಿ ವೀರಪ್ಪನ್ ಸುಮಾರು ಒಂದೂವರೆ ಕಿಲೋಮೀಟರ್ ಜಮೀನಿನ ದಾರಿಯಲ್ಲೇ ನಡೆದುಕೊಂಡು ಹೋಗಿ ಆ ಕಡೆ ಚೆನ್ನಾಲಿಗನಹಳ್ಳಿ ಎನ್ನುವ ಪ್ರದೇಶದಲ್ಲಿ ರೋಡ್ ಕ್ರಾಸ್ ಮಾಡುತ್ತಾನೆ, ಅಲ್ಲಿಯವರೆಗೆ ಸುಮಾರು ಹನ್ನೆರಡೂವರೆ ಗಂಟೆ ಅಂದರೆ ಹತ್ತರಿಂದ ಹನ್ನೆರಡೂವರೆವರೆಗೆ ಸುಮಾರು ಎರಡೂವರೆ ಗಂಟೆಯವರೆಗೆ ಅವನು ಈ ನಾಡಿನಲ್ಲೇ ನಾಗಪ್ಪನವರನ್ನು ಅಪಹರಣ ಮಾಡಿ ಸಂಚಾರ ಮಾಡುತ್ತಾನೆ. ಅಲ್ಲಿ ಮೂರು ಪೊಲೀಸ್ ಸ್ಟೇಷನ್‌ಗಳು ಹತ್ತು ಕಿಲೋಮೀಟರ್ ವ್ಯಾಪ್ತಿಯಲ್ಲಿವೆ, ಎಸ್‌ಟಿಎಫ್ ಕ್ಯಾಂಪ್ ಆರು ಕಿಲೋಮೀಟರ್ ವ್ಯಾಪ್ತಿಯಲ್ಲಿದೆ, ಅಲ್ಲಿ 200 ಜನ ಎಸ್‌ಟಿಎಫ್ ಕ್ಯಾಂಪ್ ಮಾಡಿರುತ್ತಾರೆ, ಆದರೆ ಈ ನಾಗಪ್ಪನವರ ಅಪಹರಣದ ಸುದ್ಧಿ ನಾಡಿಗೆಲ್ಲಾ ಗೊತ್ತಾಗುತ್ತದೆ, ಅವರು ಚುರುಕಾಗಿ, ಕಾರ್ಯಾಚರಣೆ ಮಾಡುವುದಕ್ಕೆ, ನಾಗಪ್ಪನವರನ್ನು ಬಿಡಿಸುವುದಕ್ಕೆ ಮುಂದಾಗುವುದಿಲ್ಲ, ಕಾರಣವೇನು? ಆಗಿನ ಎಸ್‌ಟಿಎಫ್ ಚೀಫ್ ಆಗಿದ್ದಂಥ ಕಮಾಂಡೆಂಟ್‌ರವರು ಬೆಂಗಳೂರಿನಲ್ಲಿರುತ್ತಾರೆ. ಅವರಿಂದ ಆದೇಶ ಬರದೇ ನಾವು ಇಲ್ಲಿಂದ ಕದಲಲು ಸಾಧ್ಯವಿಲ್ಲವೆಂದು ಅವರ ಆದೇಶ ತೆಗೆದುಕೊಳ್ಳುವುದಕ್ಕೆ ಇಪ್ಪತ್ನಾಲ್ಕು ಗಂಟೆ ತೆಗೆದುಕೊಳ್ಳುತ್ತಾರೆ. ಅಲ್ಲಿಯವರೆಗೆ ಆ ಊರಿನ ಸುಮಾರು ಸಾವಿರಾರು ಜನ ನಾಗಪ್ಪನವರ ಅಪಹರಣವಾಯಿತೆನ್ನುವ ಸುದ್ಧಿ ತಿಳಿದ ತಕ್ಷಣ ನಾಗಪ್ಪನವರ ಮನೆಯ ಮುಂದೆ ಸೇರಿ ಈ ಘಟನೆಯಿಂದ ಕೋಪ ತಡೆಯಲಾರದೆ ಒಂದು ಬಸ್‌ಗೆ ಬೆಂಕಿ ಹಾಕುತ್ತಾರೆ. ಹನೂರಿನಲ್ಲಿ ಕೊಳ್ಳೇಗಾಲದ ಇನ್‌ಸ್ಪೆಕ್ಟರ್‌ರವರು ಯಾವುದೋ ಪಾರ್ಟಿಗೆ ಹೋಗಿ ಅದನ್ನು

ಮುಗಿಸಿಕೊಂಡು, ಕೊಳ್ಳೇಗಾಲಕ್ಕೆ ಕಾಮಗೆರೆ ಮಾರ್ಗದಲ್ಲಿಯೇ ಶಾರ್ಟ್ ರೂಟ್ ಇರುವುದು. ಆ ಮಾರ್ಗವಾಗಿ ಬರುವಾಗ ಎಲ್ಲಿ ನನಗೆ ಅಡ್ಡ ಹಾಕುತ್ತಾರೆಂದು ತಿಳಿದು ಅಲಪನಹಳ್ಳಿ ಮಾರ್ಗದಲ್ಲಿ ಬಳಸಿಕೊಂಡು ಬರಲು ಹೋದಾಗ, ಉದಯರಂಗ ಎನ್ನುವ ಬಸ್ ಅನ್ನು ರಾಜಾರೋಷವಾಗಿ ವೀರಪ್ಪನ್ ತಡೆದು, ಬಸ್ಸಿನಲ್ಲಿದ್ದ ಆ ಪ್ಯಾಸೆಂಜರ್ ಜೊತೆಯಲ್ಲಿ ನಾಗಪ್ಪನವರನ್ನು ಹತ್ತಿಸಿಕೊಂಡು, ಕರೆದುಕೊಂಡು ಬರುತ್ತಿರಬೇಕಾದರೆ, ದೂರದಲ್ಲಿ ಇನ್‌ಸ್ಪೆಕ್ಟರ್ ನಿಂತಿರುವುದನ್ನು ನೋಡಿ ಬಸ್‌ನ ಲೈಟ್ ಅನ್ನು ಅಫ್ ಮಾಡಬಾರದೆಂದು ಬಸ್‌ನ ಡ್ರೈವರ್‌ಗೆ, ನಾಗಪ್ಪನವರ ಮನೆಯಿಂದಲೇ ಏನೊಂದು ಮಚ್ಚನ್ನು ತೆಗೆದುಕೊಂಡು ಹೋಗಿರುತ್ತಾನೆ, ಅದನ್ನು ತೋರಿಸಿ, ಆ ಲೈಟ್ ಅನ್ನು ಆನ್‌ನಲ್ಲಿಯೇ ಇಟ್ಟುಕೊಂಡು ಹಿಂದುಗಡೆಯಿಂದ ಕಾಡಿನೊಳಗೆ ಸೇರಿಕೊಳ್ಳುತ್ತಾನೆ. ಸುಮಾರು ಮೂರ್‍ನಾಲ್ಕು ಗಂಟೆಗಳ ಕಾಲ ಸುಮಾರು ಒಂದೂವರೆ ಕಿಲೋಮೀಟರ್ ಸುತ್ತಳತೆಯಲ್ಲಿದ್ದರೂ ಕೂಡ ಆ ಪೊಲೀಸ್ ಅಧಿಕಾರಿಗಳು ಒಬ್ಬರು ಇನ್ನೊಬ್ಬರ ಅನುಮತಿಬೇಕೆಂದು ಹೇಳಿ ಒಬ್ಬರಿಗೊಬ್ಬರು ಕಾಲ ಕಳೆದರೆ ಹೊರತು, ವೀರಪ್ಪನ್ ಹಿಡಿಯುವುದಕ್ಕಾಗಲೀ ನಾಗಪ್ಪನವರನ್ನು ಬಿಡಿಸಿಕೊಂಡು ಬರುವುದಕ್ಕಾಗಲೀ ಮುಂದೆ ಬರುವುದಿಲ್ಲ. ಇದೇ ಇನ್‌ಸ್ಪೆಕ್ಟರ್‌ಗೆ ಬಸ್‌ನಲ್ಲಿದ್ದಂತಹ ಜನರು, ವೀರಪ್ಪನ್ ಕಡೆ ಕರೆದುಕೊಂಡು ಹೋಗಿದ್ದಾನೆ, ಬನ್ನಿ ನಾವು ದಾರಿ ತೋರಿಸಿಕೊಡುತ್ತೇವೆಂದು ಹೇಳಿದರೂ ಕೂಡ, ನಾನು ಈಗ ನೋಡುವುದಕ್ಕಾಗುವುದಿಲ್ಲ, ಕೊಳ್ಳೇಗಾಲಕ್ಕೆ ಹೋಗಿ ಬರುತ್ತೇನೆಂದು ಇನ್‌ಸ್ಪೆಕ್ಟರ್ ವಾಪಸ್ ಹೋಗುತ್ತಾನೆ. ಹೀಗಾಗಿ ಅಪಹರಣವಾದ ಆ ದಿವಸ ವೀರಪ್ಪನ್ ಹಿಡಿಯುವುದಕ್ಕೆ ಹಾಗೂ ನಾಗಪ್ಪನವರನ್ನು ಯಾವುದೇ ಕಾರ್ಯಾಚರಣೆಯಿಲ್ಲದೆ ಬಿಡಿಸಿಕೊಂಡು ಬರುವುದಕ್ಕೆ ಇದ್ದ ಅವಕಾಶವನ್ನು ಉಪಯೋಗಿಸಿಕೊಳ್ಳುವುದರಲ್ಲಿ ಸರ್ಕಾರ ಸಂಪೂರ್ಣ ವಿಫಲವಾಯಿತು. ಗುಂಡಾಲ್‌ನಲ್ಲಿ 200 ಜನ ಎಸ್‌ಟಿಎಫ್ ಯೋಧರು ಇದ್ದರಲ್ಲಾ ಅವರಿಗೆ ಕಾಮಗೆರೆಯಿಂದ ಜನರು ಹೋಗಿ ಅರ್ಧಗಂಟೆಯೊಳಗೆ ಈ ರೀತಿ ಅಪಹರಣವಾಗಿದೆ ಎಂದು ಪರಿಪರಿಯಾಗಿ ಸುದ್ದಿಯನ್ನು ಮುಟ್ಟಿಸಿದ್ದಾರೆ ಆದರೂ ಕೂಡ ಅವರು ನಮ್ಮ ಮೇಲಾಧಿಕಾರಿಯವರಿಂದ ನಮಗೆ ಸೂಚನೆ ಬರುವವರೆಗೆ ನಾವೇನೂ ಮಾಡುವುದಕ್ಕಾಗುವುದಿಲ್ಲವೆಂದು ಅವರು ಸುಮ್ಮನೆ ಕುಳಿತಿದ್ದಂಥ ಸನ್ನಿವೇಶವನ್ನು ಈ ಒಂದು ವಿಚಾರದಲ್ಲಿ ನಾವು ವಿಶೇಷವಾಗಿ ಗಮನಿಸಬೇಕಾಗಿದೆ. ಇದಾದ ತಕ್ಷಣ ಆವತ್ತೇ ಒಂದು ಕ್ಯಾಸೆಟ್ ಕಳುಹಿಸಿದ, ಅದರಲ್ಲಿ ಹಿಂದಿನ ನನ್ನ ಬೇಡಿಕೆಗಳು ಈಡೇರಿರುವುದಿಲ್ಲವೆನ್ನುವುದನ್ನು ಮಾತ್ರ ಹೇಳುತ್ತಾನೆ. ಅಂದರೆ ಯಾರನ್ನೇ ಅವನು ಅಪಹರಣ ಮಾಡಿದರು ಕ್ಯಾಸೆಟ್ ಕಳುಹಿಸುತ್ತಿದ್ದ ಎನ್ನುವುದು ಆ ಕ್ಯಾಸೆಟ್‌ನಲ್ಲಿರುವ ಒಂದು ಸಾರಾಂಶ. ಈ ಸನ್ನಿವೇಶ ಏನು ತೋರಿಸುತ್ತದೆಂದರೆ, ಕೋಟಿ ಸೂರೆ ಹೋದ ಮೇಲೆ ಕಿಟಕಿ ಬಾಗಿಲು ಹಾಕಿದ ಹಾಗೆ ಆಮೇಲೆ ಚುರುಕಾಗುತ್ತಾರೆ. ಬೆಳಕಾಗುವುದರೊಳಗೆ ಏನು ಪೊಲೀಸರು, ಜೀಪ್‌ಗಳು ಏನೋ ಪಾಕಿಸ್ತಾನ್ ಜೊತೆ ಯುದ್ಧಕ್ಕೆ ಹೋಗುತ್ತಿದ್ದಾರೇನೋ ಎನ್ನುವ ರೀತಿಯಲ್ಲಿ ಈ ಒಂದು ಕಾರ್ಯಾಚರಣೆಯ ಸದ್ದು, ಧೂಳು, ಸೈರನ್ ಸೌಂಡ್‌ಗಳು ಇವನ್ನೆಲ್ಲಾ ನೋಡಿ ಜನರು ಗಾಬರಿಯಾಗಬೇಕು ಆ ರೀತಿಯಲ್ಲಿ ಬೆಳಿಗ್ಗೆ ಇವರು ವೀರಾವೇಶದ ಚಲನವಲನವನ್ನು ನಡೆಸುತ್ತಾರೆ. ಇದಾದ ಮೇಲೆ ಸೆಪ್ಟೆಂಬರ್ 5ನೇ ತಾರೀಖು ಎರಡನೇ ಕ್ಯಾಸೆಟ್ ಅನ್ನು ಮಣಿಗೆ ಕಳುಹಿಸಿಕೊಡುತ್ತಾನೆ. ಮಾನ್ಯ ಮುಖ್ಯಮಂತ್ರಿಗಳು

ಕಾಮಗೆರೆಗೆ 30ನೇ ತಾರೀಖು ಭೇಟಿ ಕೊಡುತ್ತಾರೆ. ಬಹುಶಃ ಸರ್ಕಾರದ ಪರವಾಗಿ ಅಪಹರಣವಾದ 5 ದಿವಸಗಳ ನಂತರ ಮಾನ್ಯ ಮುಖ್ಯಮಂತ್ರಿಗಳು ಕಾಮಗೆರೆಗೆ ಭೇಟಿ ಕೊಡುತ್ತಾರೆ. ರಾಜ್‌ಕುಮಾರ್ ಪ್ರಕರಣದಲ್ಲಿ ಅಪಹರಣವಾದ ಅದೇ ದಿವಸ ತರಾತುರಿಯಲ್ಲಿ ಹೋಗಿ ಅವರ ಶ್ರೀಮತಿಯವರನ್ನು ಭೇಟಿ ಮಾಡಿ ಸಾಂತ್ವನವನ್ನು ಹೇಳಿದ ಮುಖ್ಯಮಂತ್ರಿಗಳು, ಆ ದಿವಸ ಬೆಂಗಳೂರಿನಲ್ಲಿ ಇರುವುದಿಲ್ಲ, ದೆಹಲಿಯಲ್ಲಿರುತ್ತಾರೆ, ಬಂದ ತಕ್ಷಣ 30ನೇ ತಾರೀಖು ಕಾಮಗೆರೆಗೆ ಅವರು ಭೇಟಿ ನೀಡಿದ ಸಂದರ್ಭದಲ್ಲಿ ನಾವೂ ಕೂಡ ಅಲ್ಲಿ ಇದ್ದೆವು. ಆಗ ಅವರೊಂದು ಮಾತನ್ನು ಹೇಳಿದರು, ನೀವೇನು ಗಾಬರಿಯಾಗಬೇಡಿ, ನಾಗಪ್ಪನವರನ್ನು ಸಂಪೂರ್ಣ ಸುರಕ್ಷಿತವಾಗಿ ಬಿಡುಗಡೆ ಮಾಡಿಸುತ್ತೇವೆ ನಮ್ಮಲ್ಲಿ ವಿಶ್ವಾಸ ವಿಡಿ ಏನು ರಾಜ್‌ಕುಮಾರ್ ಅಪಹರಣದಲ್ಲಿ ಧೋರಣೆಯನ್ನು ಅನುಸರಿಸಿದ್ದೆವು, ಅದೇ ಧೋರಣೆಯನ್ನು ಅನುಸರಿಸಿ ನಾಗಪ್ಪನವರನ್ನು ಬಿಡುಗಡೆ ಮಾಡಿಸುತ್ತೇವೆಂದು ಅಲ್ಲಿದ್ದ ಜನರಿಗೆ ಆಶ್ವಾಸನೆ ಕೊಡುವುದರ ಜೊತೆಗೆ ಹೊರಗಡೆ ಇದ್ದಂಥ ಸಾವಿರಾರು ಜನರಿಗೂ ಭಾಷಣ ಮಾಡಿ ವಿಚಾರವನ್ನು ತಿಳಿಸಿದರು. ಆದಾದ ಮೇಲೆ 5ನೇ ತಾರೀಖು ಎರಡನೇ ಕ್ಯಾಸೆಟ್ ವೀರಪ್ಪನ್‌ನಿಂದ ಬರುತ್ತಿದ್ದ ಹಾಗೆಯೇ ಅದರಲ್ಲಿ ನಿನ್ನೆದಿವಸ ಕೌನ್ಸಿಲ್‌ನಲ್ಲಿ ಕೊಟ್ಟಂತಹ ಹೇಳಿಕೆ ಏನಿದೆ, ಅದರಲ್ಲಿ ಎರಡನೇ ಕ್ಯಾಸೆಟ್‌ನಲ್ಲಿ ಮಣಿ ಕಳುಹಿಸಬೇಕೆಂದು ಹೇಳಿರುವುದನ್ನು ಅವರ ಹೇಳಿಕೆಯಲ್ಲಿ ಉಲ್ಲೇಖವೇ ಮಾಡಿಲ್ಲ. ಅವನು ಇನ್ನು ಬೇಕಾದಷ್ಟು ಕತೆಯನ್ನು ಹೇಳಿರುತ್ತಾನೆ. ಅದನ್ನೆಲ್ಲಾ ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆ ಕ್ಯಾಸೆಟ್ ತಂದುಕೊಟ್ಟ ವ್ಯಕ್ತಿಯ ಮೂಲವನ್ನು ಪತ್ತೆಹಚ್ಚಿ, ಏನು ಸಂಧಾನ ಮಾರ್ಗದ ಮುಖಾಂತರ ನಾವು ನಾಗಪ್ಪನವರನ್ನು ಬಿಡುಗಡೆ ಮಾಡಿಸುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರೋ ಇದ್ದಕ್ಕಿದ್ದಂತೆ 6ನೇ ತಾರೀಖು ಕಾರ್ಯಾಚರಣೆ ತೀವ್ರಗತಿಯಲ್ಲಿ ಪ್ರಾರಂಭವಾಗುತ್ತದೆ. 6ನೇ ತಾರೀಖು ಒಂದು ಟಿ.ವಿ. ಸುದ್ದಿಯಲ್ಲಿ ನಾಗಪ್ಪನವರು ಬಿಡುಗಡೆಯಾಗಿದ್ದಾರೆ, ಇಬ್ಬರು ಪೊಲೀಸ್ ಅಧಿಕಾರಿಗಳು ಅವರನ್ನು ಕಾಡಿನಿಂದ ಕರೆದುಕೊಂಡು ಬರುತ್ತಿದ್ದಾರೆಂದು ತಿಳಿಸಿದ ಮೇಲೆ ಅಲ್ಲಿ ರಾಮಪುರ ಪೊಲೀಸ್ ಠಾಣೆಯ ಬಳಿ, ಸುಮಾರು ಐದಾರು ಸಾವಿರ ಜನರು ಸೇರಿರುತ್ತಾರೆ. ನಾನು ಮತ್ತು ನನ್ನ ಸಹಸದಸ್ಯರಾದ ಕೃಷ್ಣಮೂರ್ತಿಯವರೂ ಕೂಡ ಪರವಾಗಿಲ್ಲ ಒಂದು ವಾರದೊಳಗೆ ನಾಗಪ್ಪನವರು ಬಿಡುಗಡೆಯಾಗುತ್ತಿದ್ದಾರೆ, ಅವರನ್ನು ನೋಡಬೇಕೆನ್ನುವ ಕಾತರದಲ್ಲಿ ರಾಮಪುರಕ್ಕೆ ಸುಮಾರು ರಾತ್ರಿ ಎಂಟು-ಒಂಭತ್ತು ಗಂಟೆಗೆ ಹೋದಾಗ, ಆ ಇಬ್ಬರು ಪೊಲೀಸ್ ಅಧಿಕಾರಿಗಳು ವಾಪಸ್ ಬಂದು, ನಮಗೆ ಇನ್ನು ನಾಗಪ್ಪನವರನ್ನು ಬಿಡಿಸಿಕೊಂಡು ಬರುವುದಕ್ಕೆ ಸಾಧ್ಯವಾಗಿಲ್ಲ, ಆಶಾದಾಯಕವಾಗಿರಿ ಸಧ್ಯದಲ್ಲೇ ನಿಮಗೆ ಒಂದು ಒಳ್ಳೆಯ ಫಲಿತಾಂಶವನ್ನು ಕೊಡುತ್ತೇವೆ ಇಲ್ಲಿರುವ ಜನರಿಗೆ ಆವರವರ ಊರಿಗೆ ಹೋಗಲಿಕ್ಕೆ ನೀವು ತಿಳಿಸಬೇಕೆಂದು ಹೇಳುತ್ತಾರೆ. ನಾವು ಸಾಕಷ್ಟು ಕೇಳಿಕೊಂಡೆವು ಮುಖ್ಯಮಂತ್ರಿಗಳು ಹೇಳಿದ್ದಾರೆ ಕಾರ್ಯಾಚರಣೆ ಬೇಡ, ಸಂಧಾನ ಮಾರ್ಗದಲ್ಲಿ ಬಿಡಿಸುತ್ತೇವೆಂದು ನೀವೇನೇ ಹೇಳಿದರೂ ಒಂದು ಕಾರ್ಯಾಚರಣೆಯಿಂದ ನಾಗಪ್ಪನವರಿಗೆ ತೊಂದರೆಯಾಗುತ್ತದೆ ಬೇಡವೆಂದರೆ ಎಷ್ಟೇ ಹೇಳಿದರೂ ಕೂಡ ನಮ್ಮ ಮೇಲೆ ವಿಶ್ವಾಸವಿಡಿ ಈ ಕಾರ್ಯಾಚರಣೆಯಲ್ಲಿ ನಾಗಪ್ಪನವರಿಗೆ ಒಂದು ಚೂರು ತೊಂದರೆಯಾಗದಂತೆ ಕರೆದುಕೊಂಡು ಬರುತ್ತೇವೆಂದು ಹೇಳಿದರು. ಆದರೆ ಕಾರ್ಯಾಚರಣೆ 12ನೇ ತಾರೀಖುನವರೆಗೆ ನಡೆಯುತ್ತದೆ. ಈ

ಮಧ್ಯೆ ಆಗಿನ ಡಿ.ಜಿ.ಪಿ. ಆಗಿದಂಥವರು, ಈಗ ನಿವೃತ್ತರಾಗಿದ್ದಾರೆ, ಇದ್ದಕ್ಕಿದ್ದಂತೆ ಬೆಂಗಳೂರಿನಿಂದ ಪತ್ರಿಕಾ ವರದಿಗಾರರನ್ನೆಲ್ಲಾ ಕರೆದುಕೊಂಡು ಬಂದು ಹೆಲಿಕಾಪ್ಟರ್ ಹಾರಾಟ, ದೆಹಲಿಯಿಂದ ನ್ಯಾಷನಲ್ ಸೆಕ್ಯುರಿಟಿ ಫೋರ್ಸ್ ಇವರನ್ನೆಲ್ಲಾ ಕರೆದುಕೊಂಡು ಬಂದು ಒಂದು ದೊಡ್ಡ ವ್ಯೂಹವನ್ನು ರಚಿಸಿದ್ದೇವೆ, ನಾಗಪ್ಪನವರನ್ನು ಬಿಡುಗಡೆ ಮಾಡಿಸಿ, ವೀರಪ್ಪನ್ ಹಿಡಿದು ನಾಳೆ ನಾಡಿದ್ದು ತರುತ್ತೇವೆ ಎಂದು ವೀರಾವೇಶದ ಮಾತನಾಡುವುದರ ಜೊತೆಗೆ, ಯಾರ್ಯಾರು ಸುತ್ತಮುತ್ತ ಗ್ರಾಮದಲ್ಲಿದ್ದಾರೆ, ಸೋಲಿಗರಿರಬಹುದು, ಸುತ್ತಮುತ್ತಲಿನ ಬೇರೆ ಬೇರೆ ಗಿರಿಜನರು, ಅಂತಹ ಮಾಹಿತಿದಾರರು ಇದ್ದರೆ ಅಂತಹವರನ್ನೆಲ್ಲಾ ಕೋಕಾ ಕಾಯಿದೆಯಡಿ ಬಂಧಿಸುತ್ತೇವೆಂದು ಹೇಳಿದರು.

3.50 ಪಿಎಂ

ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ, ನಾವು ಇನ್ನೂ ಕೋಕಾ ಕಾಯಿದೆಯನ್ನು ಜಾರಿಗೆ ಕೊಟ್ಟಿಲ್ಲ ಎಂದು ಆದರೆ, ಡಿ ಜಿ ಪಿ ಯವರು, ನಾನು ಕೋಕಾ ಕಾಯಿದೆಯಡಿಯಲ್ಲಿ ಬಂಧಿಸುತ್ತೇನೆ ಎಂದು ವೀರಾವೇಶದಿಂದ ಘೋಷಣೆ ಮಾಡಿದರು. ನಿನ್ನೆ ಸರ್ಕಾರದವರು ಕೊಟ್ಟಂಥ ಹೇಳಿಕೆಯಲ್ಲಿ, ಕಾರ್ಯಾಚರಣೆ ಮಾಡದಿರುವುದಕ್ಕೆ ಕಾರಣ ಏನು ಹೇಳುತ್ತಾರೆ ಎಂದರೆ, ಸುಮಾರು 300-400 ಜನರು ಸತ್ಯಾಗ್ರ, ಧರಣಿ ಮಾಡಿದರು, ನಾಗಪ್ಪನವರ ಕುಟುಂಬ ವರ್ಗದವರು ಬಂದು ಕಾರ್ಯಾಚರಣೆ ನಿಲ್ಲಿಸಬೇಕು ಎಂದು ಹೇಳಿದರು, ಆ ಒಂದು ಕಾರಣಕ್ಕಾಗಿ ನಾವು ಕಾರ್ಯಾಚರಣೆಯನ್ನು ಸ್ಥಗಿತ ಮಾಡಿದೆವು, ಇಲ್ಲದಿದ್ದರೆ ನಾವು ನಾಗಪ್ಪನವರನ್ನು ಸುರಕ್ಷಿತವಾಗಿ ಬಿಡುಗಡೆ ಮಾಡಿಸುತ್ತಿದ್ದೆವು ಎಂದು ಸರ್ಕಾರ ನಿನ್ನೆ ಹೇಳಿಕೆ ಕೊಟ್ಟಿದೆ. ಆದರೆ, ವಾಸ್ತವವಾದ ಪರಿಸ್ಥಿತಿ ಏನೆಂದರೆ, 8-10 ದಿನಗಳ ಕಾಲ ಕಾರ್ಯಾಚರಣೆ ಮಾಡಿ, ಎಲ್ಲೂ ಶೋಧನೆ ಮಾಡಲು ಸಾಧ್ಯವಾಗದೇ ಇದ್ದಾಗ, ವಿಧಿ ಇಲ್ಲದೇ ಪೊಲೀಸರನ್ನು ವಾಪಸ್ಸು ಕರೆಸಿಕೊಳ್ಳ ಬೇಕಾದಂಥ ಪರಿಸ್ಥಿತಿ ಬಂದಿತ್ತು, ಕೇಂದ್ರದಿಂದ ಬಂದಿದ್ದಂಥ ಯೋಧರು, ನಾವು ಬಂದು 5-6 ದಿನಗಳಾಗಿವೆ, ನಾವು ಇನ್ನೂ ಹೆಚ್ಚು ದಿನ ಇರಲು ಆಗುವುದಿಲ್ಲ ಎಂದು ಅವರು ವಾಪಸ್ಸು ಬಂದ ಮೇಲೆ ಮತ್ತು ವಿರೋಧ ಪಕ್ಷಗಳವರು, ಎಲ್ಲರೂ ಸೇರಿ ಸರ್ವಪಕ್ಷಗಳ ಸಭೆಯಲ್ಲಿ, ಕಾರ್ಯಾಚರಣೆ ನಿಲ್ಲಿಸಬೇಕು ಎನ್ನುವ ಒತ್ತಡ ಬಂದ ಮೇಲೆ ಅದನ್ನು ನಿಲ್ಲಿಸಿದರೇ ಹೊರತು, ಕೇವಲ ಅವರ ಕುಟುಂಬ ವರ್ಗದವರು ಕೇಳಿದ್ದಕ್ಕೋಸ್ಕರ ಕಾರ್ಯಾಚರಣೆ ನಿಲ್ಲಿಸಿದ್ದರಿಂದ ನಾಗಪ್ಪನವರ ಬಿಡುಗಡೆಗೆ ತೊಡಕಾಯಿತು ಎಂದು ಹೇಳತಕ್ಕಂಥಾದ್ದು ಸರಿಯಾದ ವಿಚಾರವಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದಾದ ಮೇಲೆ ನಾವು ಪ್ರತಿ ಹಂತದಲ್ಲೂ ಕೂಡ ಸರ್ಕಾರವನ್ನು, ಮಾನ್ಯ ಮುಖ್ಯ ಮಂತ್ರಿಗಳನ್ನು, ಗೃಹ ಸಚಿವರನ್ನು ಭೇಟಿ ಮಾಡಿದ ವಿರೋಧ ಪಕ್ಷಗಳವರಾದ ನಾವುಗಳು, ಅದರಲ್ಲೂ ವಿಶೇಷವಾಗಿ ಸಂಯುಕ್ತ ಜನತಾದಳ ಮುಖಂಡರುಗಳು, ಅನೇಕ ವಿಚಾರಗಳ ಬಗ್ಗೆ, ನಾಗಪ್ಪನವರನ್ನು ಬಿಡಿಸಿಕೊಂಡು ಬರಬೇಕಾದರೆ ಯಾವ ರೀತಿಯ ಕ್ರಮಗಳನ್ನು ಅನುಸರಿಸಬೇಕು, ಯಾವ ರೀತಿ ಸಂಧಾನ ಮಾರ್ಗವನ್ನು ಮಾಡಬೇಕು ಎನ್ನುವ ಬಗ್ಗೆ ಸ್ಥಳೀಯವಾಗಿರತಕ್ಕಂಥ ವಿಚಾರಗಳನ್ನು ತಿಳಿದು ಆಗಾಗ ಹೇಳುತ್ತಿದ್ದಂಥ ಪ್ರಸಂಗಗಳು ಉಂಟು. ನಾವಾಗಿಯೇ ಹೋಗಿ ವಿಚಾರಗಳನ್ನು ಹೇಳುವಂಥ ಪರಿಸ್ಥಿತಿಯನ್ನು ಸರ್ಕಾರ ನಿರ್ಮಾಣ ಮಾಡಿತ್ತೇ ಹೊರತು, 106 ದಿನಗಳ ಅವಧಿಯಲ್ಲಿ ಯಾವುದೇ ಸಂದರ್ಭದಲ್ಲೂ ಸಹ, ಯಾವುದೇ ಒಂದು ದಿನ ತಾವಾಗಿಯೇ ನಮ್ಮನ್ನು ಕರೆದು,

ನೀವು ಸ್ಥಳೀಯರಿದ್ದೀರಿ, ನಿಮ್ಮ ಅಭಿಪ್ರಾಯ ಏನಿದೆ, ನೀವು ಇದಕ್ಕೆ ಏನು ಸಲಹೆ ಕೊಡುತ್ತೀರಿ, ಯಾವ ರೀತಿ ಕಾರ್ಯಕ್ರಮಗಳನ್ನು ಮಾಡಬೇಕು ಎನ್ನುವ ವಿಚಾರಗಳನ್ನು ಅವರಾಗಿಯೇ ಮಾಡಿದಂತಹ ಒಂದು ಸನ್ನಿವೇಶವನ್ನು ನಾವು ನೋಡಲಿಲ್ಲ. ಎಲ್ಲವನ್ನೂ ಮಾಡಿದ್ದು ನಾವು. ಆಗಾಗ ಬಂದು ನಾವು ಹೇಳಿದಾಗ, ಮಾತ್ರ ಇವರು ಸ್ಪಂದಿಸುತ್ತಿದ್ದರು. ಆದಾದ ನಂತರ ಮತ್ತೆ ಯಥಾಸ್ಥಿತಿ ಮುಂದುವರೆಯುತ್ತಿತ್ತು. ಇಲ್ಲಿ ಮೂಲಭೂತವಾಗಿ ಸಂಧಾನಕ್ಕೆ ಕೊಳತ್ತೂರು ಮಣಿಯೇ ಬೇಕು ಎಂದು ವೀರಪ್ಪನ್ ಕಳುಹಿಸಿದ ಆರು ಕ್ಯಾಸೆಟ್‌ಗಳ ಪೈಕಿ ನಾಲ್ಕು ಕ್ಯಾಸೆಟ್‌ಗಳಲ್ಲಿ ಪುನರುಚ್ಛಾರ ಮಾಡಿದ್ದಾನೆ. ಯಾವ ಕಾರಣಕ್ಕಾಗಿ ಅವನು ಮಣಿಯೇ ಬೇಕು ಎಂದು ಕೇಳುತ್ತಿದ್ದನೋ ಗೊತ್ತಿಲ್ಲ. ಆದರೂ ಮಣಿಯನ್ನು ಬಿಡಿಸುವಂಥಾದ್ದು ಸರ್ಕಾರಕ್ಕೆ ಅಂಥ ದೊಡ್ಡ ಕೆಲಸವಾಗಿರಲಿಲ್ಲ. ಯಾವುದೇ ಸಂದರ್ಭದಲ್ಲೂ ಮಣಿಯ ಮೇಲಿರತಕ್ಕಂಥ ಮೊಕದ್ದಮೆಗಳನ್ನು ಸರ್ಕಾರ ವಾಪಸ್ಸು ತೆಗೆದುಕೊಂಡು, ಅವನನ್ನು ಸಂಧಾನಕ್ಕೆ ಕಳುಹಿಸಿ ಕೊಡಬೇಕು ಎನ್ನುವ ಬಗ್ಗೆ ಸಾರ್ವತ್ರಿಕವಾಗಿ ಎಲ್ಲಾ ಕಡೆಯಿಂದ ಒತ್ತಾಯವಿತ್ತು. ಆದರೆ ಸರ್ಕಾರ ಅವನ ಮೇಲಿನ ಕೇಸುಗಳನ್ನು ವಿತ್‌ಡ್ರಾ ಮಾಡುವ ವಿಚಾರದಲ್ಲಿ ಬಹಳ ಮೀನಾಮೇಷ ಎಣಿಸುತ್ತಾ, ದಿನಗಳನ್ನು ಮುಂದೂಡತ್ತಾ, ರಾಜಕುಮಾರ್‌ರವರು 108 ದಿನಗಳ ಕಾಲ ಕಾಡಿನಲ್ಲಿದ್ದರು, ಆದ್ದರಿಂದ ನಾಗಪ್ಪನವರ ಬಿಡುಗಡೆ ಸ್ವಲ್ಪ ವಿಳಂಬವಾಗಬಹುದು, ಹೆಚ್ಚು ಕಡಿಮೆ ಅಷ್ಟೇ ದಿನಗಳಾದರೂ ಆಗಬಹುದು ಅಥವಾ ಇನ್ನೂ ಜಾಸ್ತಿ ದಿನಗಳಾಗಬಹುದು, ಒಟ್ಟಿನಲ್ಲಿ ಅವರು ಸುರಕ್ಷಿತವಾಗಿ ಬರುತ್ತಾರೆ, ನೀವು ಗಾಬರಿಯಾಗುವುದು ಬೇಡ ಎನ್ನುವ ವಿಚಾರವನ್ನು ಪದೇ ಪದೇ ಮುಖ್ಯಮಂತ್ರಿಗಳು ಮತ್ತು ಸರ್ಕಾರ ತಿಳಿಸುತ್ತಿದ್ದುದರಿಂದ, ನಾಗಪ್ಪನವರು ಇವತ್ತಲ್ಲ ನಾಳೆ ಬರಬಹುದು ಎನ್ನುವ ಆಶಾಭಾವನೆಯಿಂದ, ನಾವು ವಿರೋಧ ಪಕ್ಷದ ಸದಸ್ಯರು ಎನ್ನುವುದನ್ನೂ ಮರೆತು, ಪ್ರತಿ ಹಂತದಲ್ಲೂ ಸರ್ಕಾರಕ್ಕೆ ಸಹಕಾರವನ್ನು ಕೊಟ್ಟುಕೊಂಡು ಬಂದೆವು. ಮೂರನೇ ಕ್ಯಾಸೆಟ್‌ನಲ್ಲಿ ಅವನು, ಕೊಳತ್ತೂರು ಮಣಿಯ ಜೊತೆಯಲ್ಲಿ ಮಹದೇವಸ್ವಾಮಿಯನ್ನು ಕಳುಹಿಸಿಕೊಡಿ ಎಂದು ಹೇಳಿದ್ದಾನೆ. ಅದು ಬಿಟ್ಟು, ಕೇವಲ ಮಹದೇವಸ್ವಾಮಿ ಒಬ್ಬರನ್ನೇ ಕಳುಹಿಸಿ ಎಂದು ಹೇಳಿರುವುದಿಲ್ಲ. ಮಹದೇವಸ್ವಾಮಿಯವರು ಏಕಾಂಗಿಯಾಗಿ ಹೋಗಲು ಸಾಧ್ಯವಿಲ್ಲ ಎಂದು ಆದಮೇಲೆ ನಾಲ್ಕನೇ ಕ್ಯಾಸೆಟ್ ಬಂತು. ಆ ನಾಲ್ಕನೇ ಕ್ಯಾಸೆಟ್ಟಿನಲ್ಲಿ, ನೀವು ಮಣಿಯನ್ನು ಕಳುಹಿಸಲು ಸಾಧ್ಯವಿಲ್ಲ ಎನ್ನುವುದಾದರೆ ರಾಜುಗೌಡರನ್ನು ಕಳುಹಿಸಿಕೊಡಿ. ಹಿಂದೆ ಅವರು ಮತ್ತು ಅವರ ಅಣ್ಣನವರಿಗೆ ಚುನಾವಣೆಗಳಲ್ಲಿ ಸಹಾಯ ಮಾಡಿದ್ದೇನೆ, ಅವರಿಂದಲೂ ನಾನು ಸಹಾಯ ಪಡೆದಿದ್ದೇನೆ, ಅವರು ನನಗೆ ಒಳ್ಳೆಯದು ಮಾಡುತ್ತಾರೆ ಆದ್ದರಿಂದ ಅವರನ್ನು ಕಳುಹಿಸಿಕೊಡಿ ಎನ್ನುವ ಮಾತನ್ನು ಅವನು ಹೇಳಿದ್ದಾನೆ. ಈ ಕ್ಯಾಸೆಟ್ ಬರುವ ಎಂಟು ದಿನಗಳ ಮುಂಚೆಯೇ ಈ ರೀತಿಯ ಒಂದು ಕ್ಯಾಸೆಟ್ ಬರುತ್ತದೆ ಎನ್ನುವುದನ್ನು ಅಂಟಿಸಿಪೇಟ್ ಮಾಡಿ, ನಮ್ಮ ಸಚಿವರು ಇದರ ಬಗ್ಗೆ ಗೃಹ ಸಚಿವರಿಗೆ ಒಂದು ಪತ್ರ ಬರೆದಿದ್ದರು ಎನ್ನುವುದು ಪತ್ರಿಕೆಗಳಲ್ಲಿ ಬಂದಿದೆ. ಅವರು ಗೃಹಸಚಿವರಿಗೆ ಬರೆದಂಥ ಪತ್ರದಲ್ಲಿ ಏನು ಒಕ್ಕಣೆ ಇತ್ತು, ಎಂಟು ದಿನಗಳ ಹಿಂದೆಯೇ ಅವರಿಗೆ ಈ ವಿಚಾರ ಹೇಗೆ ಗೊತ್ತಾಯಿತು ಎನ್ನುವುದು ನಿಗೂಢವಾಗಿದೆ. ಈ ವಿಚಾರವನ್ನು ಸದನದಲ್ಲಿ ಉತ್ತರ ಕೊಡುವಾಗ ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು ಎಂದು ಕೇಳುತ್ತೇನೆ. ನಾವು ಮಾಡುವ ಪ್ರಯತ್ನಗಳನ್ನೆಲ್ಲಾ ಮಾಡಿದ್ದೇವೆ ಎಂದು ಸರ್ಕಾರದವರು ಹೇಳುತ್ತಾರೆ.

ನವೆಂಬರ್ 28ನೇ ತಾರೀಖು ಒಂದು ಉಪ ಸಮಿತಿಯನ್ನು ರಚನೆ ಮಾಡುತ್ತಾರೆ. ಅಂದರೆ, ನಾಗಪ್ಪನವರ ಅಪಹರಣವಾಗಿ 75 ದಿನಗಳು ಧಾಟಿದ ಮೇಲೆ, ಈ ಪ್ರಕರಣಕ್ಕೆ ಒಂದು ಉಪ ಸಮಿತಿಯನ್ನು ಮಾಡಬೇಕು ಎನ್ನುವ ಬಗ್ಗೆ ಸರ್ಕಾರಕ್ಕೆ ಜ್ಞಾನೋದಯವಾಗುತ್ತದೆ. ಆಗ ಮಾನ್ಯ ಗೃಹ ಸಚಿವರು, ಕಾನೂನು ಸಚಿವರು, ಪಶುಸಂಗೋಪನಾ ಸಚಿವರು ಮತ್ತು ಲೋಕೋಪಯೋಗಿ ಸಚಿವರುಗಳನ್ನೊಳಗೊಂಡ ಸಚಿವ ಸಂಪುಟದ ಉಪ ಸಮಿತಿಯನ್ನು ರಚನೆ ಮಾಡುತ್ತಾರೆ. ಈ ಉಪ ಸಮಿತಿ ರಚನೆ ಮಾಡುವುದಕ್ಕೆ ಇವರು ಆಗಸ್ಟ್ 25ರಿಂದ ನವೆಂಬರ್ 23ರ ವರೆಗೆ ಕಾಲಾವಕಾಶ ತೆಗೆದುಕೊಂಡಿರತಕ್ಕಂಥಾದ್ದನ್ನು ನೋಡಿದಾಗ, ನಾಗಪ್ಪನವರ ಅಪಹರಣ ಪ್ರಕರಣದಲ್ಲಿ ಇವರು ಎಷ್ಟು ಆಸಕ್ತಿಯನ್ನು ಹೊಂದಿದ್ದರು ಎನ್ನುವುದು ತಿಳಿಯುತ್ತದೆ. ಆ 106 ದಿನಗಳಲ್ಲಿ, ವೀರಪ್ಪನ್ ಕಡೆಯಿಂದ 5 ಕ್ಯಾಸೆಟ್ಟುಗಳು ಬಂದಂಥ ಸಂದರ್ಭಗಳಲ್ಲಿ ಮಾತ್ರ 2-3 ದಿನಗಳ ಕಾಲ ಸರ್ಕಾರ ಚುರುಕಾಗಿ ವಿಚಾರ ಮಾಡತಕ್ಕಂಥಾದ್ದು, ವಿಮರ್ಶೆ ಮಾಡತಕ್ಕಂಥಾದ್ದು ನಡೆಯುತ್ತಿತ್ತು. ಮತ್ತೆ ನಾವಾಗಿಯೇ ಹೋಗಿ ಹೇಳುವಂಥ ಪರಿಸ್ಥಿತಿ ಇತ್ತು. ನಾಗಪ್ಪನವರ ಮನೆಯವರನ್ನು ನಾನು ಹತ್ತಿರದಿಂದ ಬಲ್ಲವನಾಗಿದ್ದೇನೆ. ಅವರ ಶ್ರೀಮತಿಯವರಾಗಲೀ ಅಥವಾ ಅವರ ಮಕ್ಕಳಾಗಲೀ, ಒಂದು ದಿನವೂ ಮನೆಯಿಂದ ಹೊರಗೆ ಬಂದವರಲ್ಲ. ಅಂಥವರು, ಕರ್ನಾಟಕದ ಎಲ್ಲಾ ಮುಖಂಡರನ್ನು, ದೆಹಲಿಯಲ್ಲಿ ರಾಷ್ಟ್ರಾಧ್ಯಕ್ಷರಿಂದ ಹಿಡಿದು, ಪ್ರಧಾನಿ, ಕಾಂಗ್ರೆಸ್ ಅಧ್ಯಕ್ಷೆ ಈ ಎಲ್ಲಾ ಮುಖಂಡರುಗಳನ್ನು ಭೇಟಿ ಮಾಡಿ ಬಂದರೂ ಸಹ ನಾಗಪ್ಪನವರ ಬಿಡುಗಡೆಗೆ ಎಲ್ಲಿಂದಲೂ ಯಾವುದೇ ಒಂದು ಪ್ರಯತ್ನ ನಡೆದಂಥ ಕುರುಹು ಈ ಒಂದು ಪ್ರಕರಣದಲ್ಲಿ ಕಂಡುಬರುತ್ತಿಲ್ಲ. ಈ ವಿಚಾರದಲ್ಲಿ ರಾಜ್ಯ ಸರ್ಕಾರವನ್ನು ಮತ್ತೊಂದು ಸಂಶಯ ಕಾಡುತ್ತಿತ್ತು. ಒಂದು ಪಕ್ಷ ನಾವು ಮಣಿಯ ಮೇಲಿರತಕ್ಕಂಥ ಕೇಸುಗಳನ್ನು ವಿತ್‌ಡ್ರಾ ಮಾಡಿದರೆ, ಹಿಂದೆ ರಾಜ್‌ಕುಮಾರ್ ಅಪಹರಣ ಪ್ರಕರಣದಲ್ಲಿ ಟಾಡಾ ಕಾಯಿದೆಯಡಿ ಬಂಧಿತರಾಗಿದ್ದವರನ್ನು ಬಿಡುಗಡೆ ಮಾಡಿಸಿದಾಗ, ಅಬ್ದುಲ್ ಕರೀಂರವರು ಸುಪ್ರೀಂ ಕೋರ್ಟಿಗೆ ಹೋಗಿ, ಅಲ್ಲಿ ಯಾವ ರೀತಿಯ ಛೀಮಾರಿ ಹಾಕಿದ್ದರೋ, ಮತ್ತೊಂದು ಸಾರಿ ಅದೇ ರೀತಿಯ ಮುಜುಗರಕ್ಕೆ ಒಳಗಾಗಬೇಕಾಗುತ್ತದೆ ಎನ್ನುವ ಸಂಶಯ ಸರ್ಕಾರವನ್ನು ಕಾಡುತ್ತಿತ್ತು. ಆದ್ದರಿಂದ, ನಾವು ಈ ಸಲ ಕೇಸುಗಳನ್ನು ವಿತ್‌ಡ್ರಾ ಮಾಡುವ ಪ್ರಯತ್ನಕ್ಕೇ ಹೋಗುವುದಿಲ್ಲ ಆದರೆ ಮಣಿಗೆ ಬೇಲ್ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತಿದ್ದರು. ಮಣಿಗೆ ಬೇಲ್ ಕೊಡಿಸುವುದು ಎಷ್ಟು ಕಷ್ಟಕರವಾದ ಕೆಲಸವೋ, ಅದಕ್ಕಿಂತ ಕಠಿಣವಾದಂಥಾದ್ದು ಅಬ್ದುಲ್ ಕರೀಂರವರನ್ನು ಒಪ್ಪಿಸತಕ್ಕಂಥ ಕೆಲಸ. ಇಂಥ ಒಂದು ಕೆಲಸವನ್ನು, ಸುತ್ತೂರು ಸ್ವಾಮೀಜಿಯವರು, ನಾವು ಎಲ್ಲರೂ ಸೇರಿ, ಅಬ್ದುಲ್ ಕರೀಂರವರನ್ನು ಕರೆದು, ಅವರ ಮನ ಕರಗಿಸಿ ಅವರನ್ನು ನಾಗಪ್ಪನವರ ಕುಟುಂಬಕ್ಕೆ ಬೇಟಿ ಮಾಡಿಸಿ, ಅವರ ಕಡೆಯಿಂದ ಮುಖ್ಯ ಮಂತ್ರಿಗಳಿಗೆ ದೂರವಾಣಿಯಲ್ಲಿ ಮಾತನಾಡಿಸಿ, ನಮ್ಮಿಂದ ಯಾವ ತೊಂದರೆಯೂ ಆಗುವುದಿಲ್ಲ, ನೀವು ನಾಗಪ್ಪನವರ ಬಿಡುಗಡೆಗೆ ಯಾವ ಕ್ರಮವನ್ನು ಬೇಕಾದರೂ ತೆಗೆದುಕೊಳ್ಳಿ ಎನ್ನುವವರೆಗೂ ಪ್ರಯತ್ನಗಳನ್ನು ನಡೆಸಿದ್ದಾಯಿತು. ಮಣಿ ಮೇಲಿನ ಕೇಸುಗಳನ್ನು ವಿತ್‌ಡ್ರಾ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದಂಥ ಸರ್ಕಾರ, ಕೊನೆಗೆ ಒಂದು ದಿನ ಕ್ಯಾಬಿನೆಟ್ ಸಭೆ ಕರೆದು, ಆದರಲ್ಲಿ, ಮಣಿ ಮೇಲಿರತಕ್ಕಂಥ ಕೇಸುಗಳನ್ನು

ನಾವು ವಾಪಸ್ಸು ತೆಗೆದುಕೊಳ್ಳುವುದಕ್ಕೆ ತೀರ್ಮಾನ ಮಾಡಿದ್ದೇವೆ ಎಂದು ಘೋಷಣೆ ಮಾಡಿದರು. ಹೀಗೆ ಘೋಷಣೆ ಮಾಡಿದ ಎರಡೇ ದಿನಗಳಲ್ಲಿ ಮಣಿಗೆ ಎರಡು ಕೇಸುಗಳಲ್ಲಿ ಬೆಂಗಳೂರಿನ ಹೈಕೋರ್ಟ್‌ನಿಂದ ಬೇಲ್ ಸಿಕ್ಕಿತು. ಆ ಬೇಲ್ ಸಿಕ್ಕಿದ ತಕ್ಷಣವೇ ಸರ್ಕಾರ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳುವ ಕೆಲಸವನ್ನು ಕೈಬಿಟ್ಟು, ಇನ್ನುಳಿದ 3-4 ಕೇಸುಗಳಲ್ಲಿ ಸ್ಥಳೀಯವಾಗಿ ಕೊಳ್ಳೇಗಾಲ ಮತ್ತು ಚಾಮರಾಜನಗರ ಕೋರ್ಟುಗಳಲ್ಲಿ ಬೇಲ್ ಸಿಗುತ್ತದೆ ಎಂದು ಹೇಳಿ, ನಾವು ಕೇಸುಗಳನ್ನು ವಾಪಸ್ಸು ಪಡೆಯುವ ತೀರ್ಮಾನವನ್ನೇ ಮಾಡಿಲ್ಲ ಎಂದು ಮಾನ್ಯ ವಾರ್ತಾ ಸಚಿವರು ಪತ್ರಿಕಾ ಗೋಷ್ಠಿಯಲ್ಲಿ ಹೇಳಿ ಅದನ್ನು ಅಲ್ಲಿಗೆ ಮುಕ್ತಾಯ ಮಾಡಿದರು. ಹೀಗಾಗಿ ಮಣಿಗೆ ಸಿಗತಕ್ಕಂಥ ಬೇಲ್ ಕೂಡಾ ಸಿಗಲಿಲ್ಲ, ಈ ಕಡೆ ಕೇಸುಗಳನ್ನೂ ವಿತ್‌ಡ್ರಾ ಮಾಡಲಿಲ್ಲ. ಹೀಗಾಗಿ ಪ್ರತಿ ದಿನ ಒಂದಲ್ಲ ಒಂದು ಕಾರಣದಿಂದ ಈ ಒಂದು ಪ್ರಕರಣವನ್ನು ವಿಳಂಬ ಮಾಡುತ್ತಾ ಹೋಗಿದ್ದ ಪರಿಣಾಮವೇ ನಾಗಪ್ಪನವರ ಅಂತ್ಯಕ್ಕೆ ಕಗ್ಗೊಲೆಗೆ, ಹತ್ಯೆಗೆ ಕಾರಣವಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ನಾಗಪ್ಪನವರ ಹತ್ಯೆ ವಿಚಾರದಲ್ಲಿ 6ನೇ ಕ್ಯಾಸೆಟ್‌ನ್ನು ಭಾನುವಾರ ಬೆಳಿಗ್ಗೆ ಸುಮಾರು 10 ರಿಂದ 10-30 ಗಂಟೆಗೆ ಕೊಳ್ಳೇಗಾಲದಿಂದ ಕೆಲವು ಸ್ನೇಹಿತರು ಮೈಸೂರಿಗೆ ನನ್ನ ಹತ್ತಿರ ತೆಗೆದುಕೊಂಡು ಬರುತ್ತಾರೆ. ನಾವು ಆ ಕ್ಯಾಸೆಟ್‌ನ್ನು ಆಲಿಸಿದಾಗ ವೀರಪ್ಪನ್ ಹೇಳಿದಾಗ ಪ್ರಕಾರ ಬಹುಶಃ ನಾಗಪ್ಪನವರ ಹತ್ಯೆ ಆಗಿರುವುದು ಖಚಿತ ಎಂದು ಹೇಳಿ, ಕೂಡಲೇ ನೀವು ಆ ಸ್ಥಳಕ್ಕೆ ಧಾವಿಸಿ, ಆ ಚೆಂಗಡಿ ಪ್ರದೇಶದಲ್ಲಿ ನಾಗಪ್ಪನವರ ಮೃತದೇಹವನ್ನು ಪತ್ತೆ ಹಚ್ಚಿ ಎಂದು ಹೇಳಿ ಅವರನ್ನು ಕಾಡಿಗೆ ಕಳುಹಿಸಿ ಆ ಕ್ಯಾಸೆಟ್‌ನ್ನು ನಾವು ಅಡಿಶನಲ್ ಡಿ.ಜಿ.ಪಿ. ಅವರಿಗೆ ಫೋನ್ ಮುಖಾಂತರ ಕ್ಯಾಸೆಟ್‌ನ್ನು 12 ಗಂಟೆಗೆ ಕೇಳಿಸಿದೆವು. ಕೇಳಿಸಿದಾಗಲೇ ಸರ್ಕಾರಕ್ಕೆ 12 ಗಂಟೆಗೆ ಆ ವಿಚಾರ ಅಧಿಕೃತವಾಗಿ ಗೊತ್ತಾಗಿದೆ. ಆದರೆ ಸಂಜೆ 5-30 ಗಂಟೆ ಆದರೂ ಕೂಡ ಆ ವಿಚಾರವನ್ನು ಸರ್ಕಾರ ಬಹಿರಂಗಪಡಿಸುವುದಿಲ್ಲ. ಇನ್ನೊಂದು ಕಡೆ ಒಂದು ಟಿ.ವಿ. ಮಾಧ್ಯಮದಲ್ಲಿ ನಾಗಪ್ಪನವರು ಬಿಡುಗಡೆ ಆಗಿದ್ದಾರೆ, ಮಾನ್ಯ ಪಶುಸಂಗೋಪನಾ ಸಚಿವರು ಬಹುಶಃ ಈ ಮಾಹಿತಿಗಳನ್ನು ಸಂಗ್ರಹಿಸುವುದಕ್ಕೆ ಅಲ್ಲಿಗೆ ಹೋಗುವ ಮೊದಲಲ್ಲಿ ನಮ್ಮಂಥ ಮುಖಂಡರುಗಳು, ಸ್ಥಳೀಯ ಲೀಡರ್‌ಗಳು ಮತ್ತು ಪೊಲೀಸ್ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ಅವರನ್ನು ಯಾವರೀತಿ ಬಿಡಿಸಬೇಕು ಎನ್ನುವ ವಿಚಾರ ಮಾಡದೆಯೇ 7ನೇ ತಾರೀಖು ಮಹದೇಶ್ವರ ಬೆಟ್ಟಕ್ಕೆ ಹೋಗುತ್ತಾರೆ. ಅವರ ಪ್ರಕಾರ ಸಂಪುಟದ ಉಪ ಸಮಿತಿ ರಚನೆ, ಅವರೇ ಚಾಮರಾಜನಗರದಲ್ಲಿ ಒಂದು ಭಾಷಣದಲ್ಲಿ ಹೇಳುತ್ತಾ ಇದು ಒಂದು ಐತಿಹಾಸಿಕ ತೀರ್ಪು ಅನ್ನು ಸರ್ಕಾರ ಮಾಡಿದೆ 4 ಜನರ ಕ್ಯಾಬಿನೆಟ್ ಉಪಸಮಿತಿಯನ್ನು ಎಂದು ಹೇಳಿದರು. ಅವರು 7ನೇ ತಾರೀಖು ಮಹದೇಶ್ವರ ಬೆಟ್ಟದಲ್ಲಿ ವಾಸ್ತವ್ಯ 8ನೇ ತಾರೀಖು ಆ ಭಾಗದ 3-4 ಗ್ರಾಮಗಳಲ್ಲಿ ಜನರನ್ನು ಭೇಟಿ ಮಾಡಿ ಇದರ ಬಗ್ಗೆ ತನಿಖೆ ಮಾಡಬೇಕೆನ್ನುವ ವಿಚಾರಕ್ಕಾಗಿ ಈ ಒಂದು ಸಮಿತಿಯ ಸದಸ್ಯರ ಪ್ರಿವಿಲೇಜನ್ನು ಬಳಸಿಕೊಂಡು ಮಾಡಬೇಕೆಂದು ಬರುತ್ತಾರೆ. ಅಷ್ಟರೊಳಗೆ ನಮ್ಮ ಭಾಗದ ಪೊಲೀಸರಿಗೆ ಏನೋ ಒಂದು ಅನುಮಾನ ಕಾಡಿದೆ. ಏಕೆಂದರೆ ಯಾರ ಮುಖದಲ್ಲೂ ಅಂಥ ಕಳೆ ಇರಲಿಲ್ಲ. 2-3 ದಿವಸದಿಂದಲೂ ಏನೋ ಒಂದು ತರಹ ಇಲ್ಲಿ ಸಂಚು ನಡೆದಿದೆ ಎನ್ನುವ ಗುಮಾನಿ ಅವರ ಒಂದು ಮಾತುಕತೆಯಲ್ಲಿ ಕಂಡುಬರುತ್ತಿತ್ತು.

ಅವರು ಡಿ.ಜಿ.ಯವರಿಗೆ ಮತ್ತು ಬೇರೆ ಬೇರೆ ಅಧಿಕಾರಿಗಳಿಗೆಲ್ಲಾ ಮಾನ್ಯ ಸಚಿವರು ಆ ಭಾಗದಲ್ಲಿ ಪ್ರವಾಸ ಬರುವುದು ಬೇಡ ಎಂದೇನೋ ಸೂಚಿಸಿದ್ದರೂ ಕೂಡ, ಇಲ್ಲ, ನಾನು ಹೋಗಲೇ ಬೇಕು ಎಂದು ಹೇಳಿ ಇವರು ಆ ಕಡೆ ಬಂದವರು ಕಾಮಗೆರೆಗೂ ಇವರ ಭೇಟಿ ಕಾರ್ಯಕ್ರಮ ಇರುತ್ತದೆ. ಆದರೆ ಮಹದೇಶ್ವರ ಬೆಟ್ಟದಲ್ಲಿ ನಾಗಪ್ಪನವರನ್ನು ರಿಸೀವ್ ಮಾಡಿಕೊಳ್ಳುವುದಕ್ಕೆ ಹೋಗಿದ್ದವರು ನಾಗಪ್ಪನವರ ಹತ್ಯೆ ಆಗಿರುವ ಸುದ್ಧಿ ತಿಳಿದು ಏಕಾಏಕಿ ಇವರು ವಾಪಸ್ಸು ಬಂದಿದ್ದಾರೆ. ಈ ತರಹ ಇವರು ಉದಾಸೀನ ಧೋರಣೆ, ಕಾಳಜಿಯನ್ನು ತೋರಿಸದೇ ಇರತಕ್ಕಂಥದ್ದು ಇವರ ಒಂದು ನಡವಳಿಕೆಗಳಿಂದ ಪತ್ತೆ ಆಗುತ್ತದೆ. ನಾಗಪ್ಪನವರ ಅಪಹರಣ ಸಂದರ್ಭದಲ್ಲಿ ನಮ್ಮ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ...

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) : ಒಂದ್ನಿಮಿಷ. ಮಾನ್ಯ ಉಪಾಧ್ಯಕ್ಷರೆ, ನಾಗಪ್ಪನವರ ಬಗ್ಗೆ ನನಗೆ ಅತ್ಯಂತ ಅಭಿಮಾನ ಇದೆ. ಕ್ಯಾಬಿನೆಟ್ ಉಪ ಸಮಿತಿ ರಚನೆ ಮಾಡಿದಾಗ ಅಲ್ಲಿ ಎಸ್.ಟಿ.ಎಫ್.ನವರ ಹತ್ತಿರ ಚರ್ಚೆ ಮಾಡಿ, ಸಾರ್ವಜನಿಕರ ಹತ್ತಿರ ಚರ್ಚೆ ಮಾಡಿ, ನಾಗಪ್ಪನವರ ಕುಟುಂಬದವರ ಹತ್ತಿರ ಚರ್ಚೆ ಮಾಡಿ, ಸರ್ಕಾರದಿಂದ ಏನು ಸಹಕಾರ ಬೇಕು ಅದನ್ನೆಲ್ಲಾ ಕೊಡಲಿಕ್ಕೆ ಸಿದ್ಧ ಇದ್ದೇವೆ, ತಮ್ಮೆಲ್ಲರದ್ದು ಏನಾದರೂ ಅಭಿಪ್ರಾಯ ಇದ್ದರೆ ತಿಳಿಸಿ ಎಂದು ಹೇಳಿ ಮಾಹಿತಿ ಸಂಗ್ರಹಣೆ ಮಾಡಿ ನಾಗಪ್ಪನವರ ಬಿಡುಗಡೆಗೆ ನಾವು ಏನಾದರೂ ಪ್ರಯತ್ನ ಮಾಡೋಣ ಎಂದು ಎಸ್.ಟಿ.ಎಫ್. ನವರ ಹತ್ತಿರ ಚರ್ಚೆ ಮಾಡಲಿಕ್ಕೆ ಹೋಗಿದ್ದೇನೆಯೇ ಹೊರತು ಬೇರೆ ಇನ್ನು ಯಾವ ಉದ್ದೇಶದಿಂದಲೂ ಅಲ್ಲಿ ಹೋಗಿಲ್ಲ. ಅದನ್ನು ಕ್ಯಾಬಿನೆಟ್ ಸಬ್‌ಕಮಿಟಿಯಲ್ಲಿ ನಾವು ಚರ್ಚೆ ಮಾಡಿ ಮಾನ್ಯ ಗೃಹಸಚಿವರಿಗೆ ನಾನು ಈಗ ಹೋಗುತ್ತಿದ್ದೇನೆ, ಅಲ್ಲಿ ಎಸ್.ಟಿ.ಎಫ್. ನವರ ಹತ್ತಿರ ಚರ್ಚೆ ಮಾಡುತ್ತೇನೆ, ನಾಗಪ್ಪನವರ ಕುಟುಂಬದವರ ಹತ್ತಿರ ಚರ್ಚೆ ಮಾಡುತ್ತೇನೆ, ನಾಗಪ್ಪನವರ ಹಿತೈಷಿಗಳ ಹತ್ತಿರ ಚರ್ಚೆ ಮಾಡುತ್ತೇನೆ, ಸಾರ್ವಜನಿಕರ ಹತ್ತಿರ ಚರ್ಚೆ ಮಾಡುತ್ತೇನೆ, ಏನಾದರೂ ವಿವರಗಳು ಇದ್ದರೆ, ಮಾಹಿತಿಗಳು ಏನಾದರೂ ಇದ್ದರೆ ಸಂಗ್ರಹಣೆ ಮಾಡಿ ಸಹಾಯ ಮಾಡಲಿಕ್ಕೆ ಅನುಕೂಲವಾಗುತ್ತದೆ ಎನ್ನುವ ಉದ್ದೇಶದಿಂದ ಅಲ್ಲಿಗೆ ಹೋಗಿದ್ದೆಯೇ ಹೊರತು ಅಲ್ಲಿ ನಾನು ಕ್ಯಾಂಪ್ ಮಾಡಲಿಕ್ಕೆ ಅಥವಾ ಇನ್ಯಾವುದೋ ಉದ್ದೇಶದಿಂದ ಹೋಗಿಲ್ಲ. ಬೆಳಿಗ್ಗೆ ಅಲ್ಲಿಗೆ ಹೋಗಿ ಸಾಯಂಕಾಲ ನಾನು ಅಲ್ಲಿಂದ ಬಂದಿದ್ದೇನೆ. ಅದನ್ನು ದಯವಿಟ್ಟು ತಪ್ಪಾಗಿ ತಿಳಿದುಕೊಳ್ಳಬೇಡಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಕೊಡುತ್ತಿರುವ, ವಿವರಣೆ ಸರಿಯಾಗಿದೆ. ಅವರು ಹೋದವರು ಕಾಮಗೆರೆಯಲ್ಲಿ ನಾಗಪ್ಪನವರ ಕುಟುಂಬವನ್ನು ಮಾತನಾಡಿಸಿಕೊಂಡು, ಅಲ್ಲಿ ಏನು ಘಟನೆಗಳು ಆಗಿವೆ, ಅವರಿಂದ ತಾನೇ ಇವರು ಮಾಹಿತಿ ಪಡೆಯಬೇಕಾಗಿರುವುದು. ಇವರು ಮಧ್ಯಾಹ್ನವೇ ವಾಪಸ್ಸು ಬಂದಿರುವುದನ್ನು ನೋಡಿದರೆ ಬಹುಶಃ ಮುಂಚಿತವಾಗಿಯೇ ಪೊಲೀಸ್ ಅಧಿಕಾರಿಗಳಿಗೆ ಈ ಒಂದು ವಿಚಾರ ಗೊತ್ತಿತ್ತು ಎನ್ನುವ ವಿಚಾರಕ್ಕಾಗಿ, ಏಕೆಂದರೆ ಇವರಿಗೆ ಪ್ರೊಟೆಕ್ಷನ್ ಕೊಡತಕ್ಕಂಥ ಸೆಕ್ಯುರಿಟಿ ಪೊಲೀಸ್ ಏನು ಹೋಗಿದ್ದರೋ ಅವರೆಲ್ಲಾ ಖಾಸಗಿ ವಾಹನಗಳಲ್ಲಿ ಹೋಗುತ್ತಾರೆ. ಮಾರುತಿ ಕಾರುಗಳು, ಪ್ರೈವೇಟ್ ಕಾರುಗಳಲ್ಲಿ ಪೊಲೀಸರು ಕುಳಿತುಕೊಂಡು ಇವರಿಗೆ ಪ್ರೊಟೆಕ್ಷನ್ ಕೊಡುವುದಕ್ಕೆ

ಹೋಗಿದ್ದಾರೆ. ಏಕೆಂದರೆ ಪೊಲೀಸರು ಬೇಡ ಎಂದು ಹೇಳಿದರೂ ಮಂತ್ರಿಗಳು ಆ ಪ್ರದೇಶದಲ್ಲಿ ಪ್ರವಾಸ ಹೋಗಿದ್ದರಲ್ಲವೇ ಆವತ್ತು, ಆದರಿಂದ ಈ ಪೊಲೀಸ್ ಅಂತಲೇ ಬಂದರೆ. ಆದರ ಪರಿಣಾಮ ಬೇರೆ ಆಗಬಹುದು ಜನಗಳಲ್ಲಿ ಎಂದು ಆ ರೀತಿ ಮಾಡಿದ್ದಾರೆ.

ಶ್ರೀ ಎಂ. ಮಹದೇವ್ : ಮಾನ್ಯ ಉಪಾಧ್ಯಕ್ಷರೆ, ಹಾಗಲ್ಲ, ಪೊಲೀಸ್‌ನವರು ಯಾರೂ ನನ್ನನ್ನು ಬರಬೇಡಿ ಎಂದು ಹೇಳಲಿಲ್ಲ. ಏಕೆಂದರೆ ಅವರಿಗೆ ಮಾಹಿತಿ ಕೊಟ್ಟು ಅಧಿಕೃತ ಕಾರ್ಯಕ್ರಮ ಹಾಕಿಕೊಂಡೇ ನಾವು ಹೋದದ್ದು. ಮೊದಲು ನಾವು ನಾಗಪ್ಪನವರ ಮನೆ ಹತ್ತಿರ ನಿಂತು ಹೋಗುವಾಗ, ಅವರ ಕುಟುಂಬದವರು ಅಲ್ಲಿ ಇಲ್ಲದೆ ಬೆಂಗಳೂರಿನಲ್ಲಿ ಇದ್ದಾರೆಂದು ಹೇಳಿದರು. ಸರಿ ಆ ಮೇಲೆ ಬೇರೆ ಎಸ್.ಟಿ.ಎಫ್. ಅಧಿಕಾರಿಗಳ ಜೊತೆಯಲ್ಲಿ ನಾನು ಮಾತನಾಡಿ ಕೊಂಡು ಬರುವಾಗ ನಿಮ್ಮ ಹತ್ತಿರವೂ ಮಾತನಾಡುತ್ತೇನೆ, ಆ ಮೇಲೆ ಪತ್ರಿಕಾಗೋಷ್ಠಿ ಮೀಟ್ ಮಾಡುತ್ತೇನೆ ಎನ್ನುವ ಉದ್ದೇಶದಿಂದ ಬಂದಿದ್ದೆ. ಅದನ್ನು ಏಕೆ ಈ ರೀತಿ ನೀವು ಪ್ರಸ್ತಾಪ ಮಾಡುತ್ತೀರಾ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ನಾನು ಹೇಳತಕ್ಕಂಥ ವಿಚಾರ ಏನೆಂದರೆ, ಸರ್ಕಾರ, ಮಂತ್ರಿಮಂಡಲದವರು ಇವರೆಲ್ಲಾ ನಾಗಪ್ಪನವರ ಬಿಡುಗಡೆಗೆ ಎಷ್ಟೊಂದು ಆಸಕ್ತಿ ಹೊಂದಿದ್ದರು ಎನ್ನುವ ವಿಚಾರಕ್ಕೆ ಈ ಪ್ರಸ್ತಾಪ ಮಾಡಿದೆನೇ ಹೊರತು ಅವರೇ ನಿಂತುಕೊಂಡು ಆ ಪ್ರಕರಣ ಮಾಡಿಸಿಬಿಟ್ಟರು ಎಂದು ನಾನು ಆರೋಪ ಮಾಡುತ್ತಿಲ್ಲ.

ಶ್ರೀ ಎಂ. ಮಹದೇವ : ನಾನು ಏನಾದರೂ ಉಸ್ತುವಾರಿ ಸಚಿವನಾಗಿದ್ದರೆ ನೀವು ನನ್ನ ಅಂತೂ ಎಲ್ಲರೂ ಸೇರಿಕೊಂಡು ಜೀವ ಸಹಿತ ಬಿಡುತ್ತಿರಲಿಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಉಪಾಧ್ಯಕ್ಷರೆ, ಪಾಪ, ಈಗಿನ ಜಿಲ್ಲಾ ಉಸ್ತುವಾರಿ ಸಚಿವರು ನಾಗಪ್ಪರವರ ಅಪಹರಣ ಆದ ಎರಡೇ ದಿನಕ್ಕೆ ಅವರು ಇನ್ನು 10 ದಿನದಲ್ಲಿಯೇ ನಾಗಪ್ಪನವರ ಬಿಡುಗಡೆ ಖಚಿತ ಎಂದು ಹೇಳಿದರು ಬಹುಶಃ ಅವರು ಹೇಳಿದ ಮೇಲೆ ನಮಗೆ ಆ ಭಾಗದ ಜನರ ಸಂಪರ್ಕ, ಮತ್ತು ಅವರ ನಿಕಟ ಚಲನವಲನ ವಿಚಾರಗಳನ್ನು ಗಮನಿಸಿದಾಗ ಇನ್ನು 10 ದಿನಗಳಲ್ಲಿ ನಾಗಪ್ಪನವರು ವಾಪಸ್ಸು ಬರಬಹುದು ಎನ್ನುವ ಆಶಾಭಾವನೆ ನಮಗೂ ಇತ್ತು. 10 ದಿನ ಆಯಿತು. 20 ದಿನ ಆಯಿತು, 40,50,60 ದಿವಸಗಳು ಆದಮೇಲೆ 4ನೇ ಕ್ಯಾಸೆಟ್‌ನಲ್ಲಿ ಮಾನ್ಯ ರಾಜೂಗೌಡರೇ ಬರಬೇಕೆಂದು ವೀರಪ್ಪನ್ ಕೋರಿಕೆ ಬಂದಮೇಲೆ ಇವರು ಆ ಕ್ಯಾಸೆಟ್ಟೇ ನಕಲಿ ಎಂದು ಹೇಳಿದರು. ಮತ್ತು ಆದೆಲ್ಲವನ್ನೂ ಸೃಷ್ಟಿ ಮಾಡಿಕೊಂಡು ಹೇಳಿರತಕ್ಕಂಥದ್ದು, ಅವನ ನಕಲಿ ಕ್ಯಾಸೆಟ್ ಎಂದು ಹೇಳಿದರು. ಆ ಮೇಲೆ ಅದು ಆಸಲಿ ಕ್ಯಾಸೆಟ್ ಎಂದು ಸರ್ಕಾರದಲ್ಲಿ ಮಾನ್ಯ ಗೃಹಸಚಿವರು ದೃಢಪಡಿಸಿದರು. ನಮ್ಮ ಮಾನ್ಯ ಸಹಕಾರ ಸಚಿವರು ಈಗತಾನೆ ಇಲ್ಲಿ ಸದನದಲ್ಲಿ ಕುಳಿತಿದ್ದರು. ಶ್ರೀ ರಾಜೂಗೌಡರು ಮಾತನಾಡುತ್ತಾ, ನಾನು ಕಾಡಿಗೆ ಹೋಗಿ ನಾಗಪ್ಪನವರನ್ನು ಬಿಡಿಸಿಕೊಂಡು ಬರುತ್ತೇನೆ ಎಂದು ಹೇಳಿದಾಗ ಅದಕ್ಕೆ ಇವರು ಸ್ವಾಗತ ಮಾಡಿದರು. ಹೋಗಿಬಿಟ್ಟು ಬರಲಿ, ಅವರು ಹೇಳಿರತಕ್ಕಂಥದ್ದು ಸ್ವಾಗತ ಮಾಡತಕ್ಕಂಥ ಕ್ರಮ ಎಂದು ಹೇಳಿ. ನಾಗಪ್ಪನವರ ಮನೆಗೆ ಹೋಗಿ ಸಾಂತ್ವನ ಹೇಳತಕ್ಕಂಥ ಕೆಲಸವನ್ನು ಯಾರೂ ಮಾಡದಿದ್ದರೂ ಕೂಡ ನಮ್ಮ ಭಾಗದ, ನಮ್ಮ ಸ್ಥಳೀಯ ಸಚಿವರುಗಳು

ಪತ್ರಿಕೆಗಳ ಮುಖಾಂತರ ಮತ್ತು ಬೇರೆ ಬೇರೆ ಅವರ ಹಿಂಬಾಲಕರು ಕುಳಿತಿದ್ದಂಥ ಸಂದರ್ಭದಲ್ಲಿ ಅವರ ಮನಸ್ಸಿಗೆ ತೋಚಿದ ಹಾಗೆ ಈ ಪ್ರಕರಣವನ್ನು ಮಾತನಾಡತಕ್ಕಂಥ ಪರಿಸ್ಥಿತಿಯನ್ನು ನಾವು ಪ್ರತಿನಿತ್ಯ ಕೇಳುತ್ತಿದ್ದೆವು, ನೋಡುತ್ತಿದ್ದೇವೆ. ಹೋಗಲಿ, ನಿಜವಾದ ಕಾಳಜಿ ಇದ್ದರೆ, ಅದು ಎಷ್ಟೇ ಕಷ್ಟ ಆಗಲಿ ನಾವು ನಾಗಪ್ಪನವರ ಮನೆಗೆ ಭೇಟಿ ಕೊಟ್ಟು ಅಲ್ಲಿಯ ಅವರ ಸನ್ನಿವೇಶ ಏನು ಇದೆ ಮತ್ತು ಅಲ್ಲಿಯ ಜನಗಳ ಭಾವನೆ ಏನು ಇದೆ ಅದಕ್ಕೆ ನಾವು ಸ್ಪಂದಿಸಿ ಈ ಕಾರ್ಯಕ್ರಮ ಮಾಡುತ್ತೇವೆಂದು ಹೇಳಿ ಮಾಡಬಹುದಾಗಿತ್ತು. ಆದರೆ ಸಚಿವರು, ಅದರಲ್ಲೂ ನಮ್ಮ ಸಹಕಾರ ಸಚಿವರು ಮಾತನಾಡಿದಂಥ ಲಘುವಾದ ಭಾಷೆಯ ಬಳಕೆ, ಅವರು ಯಾವತ್ತೂ ಇದನ್ನು ಭಾವನಾತ್ಮಕವಾಗಿ ಇದು ಸೀರಿಯಸ್ ಮ್ಯಾಟರ್ ಎನ್ನುವ ಒಂದು ವಿಚಾರಕ್ಕೆ ಅವರು ಬರಲಿಲ್ಲ. ಇದರಿಂದ ಈ ಸರ್ಕಾರಕ್ಕೆ ಈ ಪ್ರಕರಣದಲ್ಲಿ ಅಷ್ಟೊಂದು ಆಸಕ್ತಿ ಇರಲಿಲ್ಲವೇನೋ ಎನ್ನುವ ಒಂದು ಸಂಶಯ, ಅನುಮಾನ ನಮ್ಮನ್ನು ಕಾಡುತ್ತಿದೆ. ಇದರ ಜೊತೆಗೆ ಬಹುಶಃ ವೀರಪ್ಪನ್ ನಾಗಪ್ಪನವರನ್ನು ಅಪಹರಣ ಮಾಡಬೇಕಾದರೆ ಡಾ॥ ರಾಜ್‌ಕುಮಾರ್ ಅವರ ಅಪಹರಣ ಸಂದರ್ಭದಲ್ಲಿ ಮತ್ತು ಅವರನ್ನು ಬಿಡುಗಡೆ ಮಾಡಿಸಿಕೊಳ್ಳುವ ಸಂದರ್ಭದಲ್ಲಿ ಹೋಗಿದ್ದಂಥ ಸಂದರ್ಶಕರಿಗೆ ಸರ್ಕಾರ ಏನು ಆಶ್ವಾಸನೆ ಕೊಟ್ಟಿತ್ತೋ, ಏನು ವ್ಯವಹಾರಗಳು ನಡೆಯಿತೋ ಅದು ನಮಗೆ ಗೊತ್ತಿಲ್ಲ. ಆದರೆ ಅದರಲ್ಲಿ ಕೊಟ್ಟಂಥ ಆಶ್ವಾಸನೆಗಳನ್ನು ಪೂರ್ಣ ಈಡೇರಿಸಿಲ್ಲ ಎನ್ನುವ ಕಾರಣವೇ ನಾಗಪ್ಪನವರನ್ನು ಅಪಹರಣ ಮಾಡುವುದಕ್ಕೆ ಮೂಲ ಕಾರಣ. ಅದರಲ್ಲೂ ವಿಶೇಷವಾಗಿ ಈ ಟಾಡಾ ಕೇಸ್‌ನಲ್ಲಿ ಜೈಲಿನಲ್ಲಿ ಇದ್ದಂಥ ನಿರಾಶ್ರಿತರು ಏನು ಇದ್ದಾರೆ ಅವರ ಪುನರ್‌ವಸತಿಗೆ ಎರಡೂ ರಾಜ್ಯಗಳು ಐದೈದು ಕೋಟಿ ರೂಪಾಯಿಗಳನ್ನು ಪರಿಹಾರ ಕೊಟ್ಟು ಅವರಿಗೆ ಪುನರ್‌ವಸತಿ ಕಲ್ಪಿಸಿಕೊಡುತ್ತೇವೆಂದು ಹೇಳಿ ಒಂದು ಘೋಷಣೆಯನ್ನು ಮಾಡಿದ್ದರು. ಆ ಘೋಷಣೆ ಎರಡು ವರ್ಷಗಳು ಆದರೂ ಕೂಡ ಕಾರ್ಯಗತವಾಗದೆ, ಅದರ ಬಗ್ಗೆ ಕಾರ್ಯಕ್ರಮ ರೂಪಿಸಿಕೊಳ್ಳದೆ ಇರುವುದು ನಾಗಪ್ಪನವರ ಅಪಹರಣಕ್ಕೆ ಕಾರಣವಾಗಿರಬಹುದು ಎನ್ನುವ ಒಂದು ಶಂಕೆಯನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತಾ ಈ ಒಂದು ನಾಗಪ್ಪನವರ ಹತ್ಯೆ ಸಂದರ್ಭದ ಬಗ್ಗೆ ನಾನು ಹಿಂದೆಯೇ ಹೇಳುತ್ತಿದ್ದೆ. ಈ ವಿಚಾರ ಮಧ್ಯಾಹ್ನ 12.00, 12.30 ಗಂಟೆಗೆ ಸರ್ಕಾರಕ್ಕೆ ಎಡಿಜಿಪಿ ಮೂಲಕ ಸುದ್ದಿ ಮುಟ್ಟಿರುತ್ತದೆ. ಆದಾದಮೇಲೆ, ಅಲ್ಲಿ ಸಾಯಂಕಾಲ 4 ಗಂಟೆಯೊಳಗೆ ಚಂಗಡಿ ಅರಣ್ಯ ಪ್ರದೇಶಕ್ಕೆ ಸುಮಾರು ನೂರಾರು ಜನರು 3-4 ಗುಂಪುಗಳಲ್ಲಿ ಹೋಗಿ ಆ ಒಂದು ಶೋಧನೆಯನ್ನು ನಡೆಸಿದಾಗ, ಸುಮಾರು 100 ಜನರಿರುವ ಒಂದು ಗುಂಪಿಗೆ 5.30 ಗಂಟೆಯಲ್ಲಿ ನಾಗಪ್ಪನವರ ಶವವಿರುವುದು ಪತ್ತೆಯಾಗುತ್ತದೆ. ಆದಾದಮೇಲೆ, ಅದನ್ನು ಹೊರಗಡೆ ತರಬೇಕು. ಇವರು ಹೋದ ಮೇಲೆ 20-30 ಜನ ಪೊಲೀಸರು ಇವರನ್ನು ಹಿಂಬಾಲಿಸಿಕೊಂಡು ಹೋಗಿರುತ್ತಾರೆ. ಆದರೆ, ಅದಕ್ಕೆ ಮುಂಚೆ ಯಾವುದೇ ಪೊಲೀಸ್ ಆಗಲಿ ಅಥವಾ ಪೊಲೀಸ್ ಅಧಿಕಾರಿಗಳಾಗಲಿ ಹೋಗಲಿಲ್ಲ. ಎಲ್ಲಿ ಸರ್ಕಾರ ಮೈ ಮರೆತಿದೆ ಎಂಬ ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ. 12 ಗಂಟೆಗೆ ಸರ್ಕಾರಕ್ಕೆ ಚಂಗಡಿ ಅರಣ್ಯ ಪ್ರದೇಶದಲ್ಲಿ ನಾಗಪ್ಪನವರ ಹತ್ಯೆಯಾಗಿದೆ ಎನ್ನುವ ವಿಚಾರ ವೀರಪ್ಪನ್‌ನ ಕ್ಯಾಸೆಟ್‌ನಿಂದ ಗೊತ್ತಾದ ಮೇಲೆ, ಆ ಪೊಲೀಸ್ ಅಧಿಕಾರಿಗಳು ಈ ಜನರು ಹೋಗುವುದಕ್ಕೆ ಮುಂಚೆ ಆ ಒಂದು ಶವದ

ಬಳಿ, ಅವನು ಹೇಳಿರುವ ಮಾಹಿತಿಯ ಜಾಗದಲ್ಲಿ ಇರಬೇಕಾಗಿತ್ತು. ಆದರೆ, ಯಾರೂ ಹೋಗಿರುವುದಿಲ್ಲ. ಈ ಜನರು ಹೋಗಿ ಕಾಡಿಗೆ ನುಗ್ಗಿದ ಮೇಲೆ ಇವರನ್ನು ಹಿಂಬಾಲಿಸಿಕೊಂಡು ಹೋದ ಪೊಲೀಸ್ ಅಧಿಕಾರಿಗಳಿಗೆ ಶವ ಪತ್ತೆಯಾಗುತ್ತದೆ. ಪತ್ತೆಯಾದ ಮೇಲೆ, ಶವವನ್ನು ಎತ್ತಿಕೊಂಡು ಹೋಗುವ ಯಾವುದೇ ವಿಚಾರದಲ್ಲಿ ಇವರು ತಮ್ಮ ಸಹಕಾರವನ್ನು ನೀಡುವುದಿಲ್ಲ. ತಮ್ಮ ಸ್ಟೇಟ್‌ಮೆಂಟ್‌ನಲ್ಲಿ, ಸ್ಟ್ರೆಚರ್‌ನಲ್ಲಿ ಶವವನ್ನು ಚೆಂಗಡಿಯಿಂದ ಸಮೀಪದ ರಸ್ತೆಗೆ ತಂದು ಅಲ್ಲಿಂದ ವಾಹನದಲ್ಲಿ ರಾಮಾಪುರ ಆಸ್ಪತ್ರೆಗೆ ಮರುದಿನ ಬೆಳಿಗ್ಗೆ ತರಲಾಯಿತೆಂದು ಹೇಳುತ್ತಾರೆ. ಈ ಸದನದಲ್ಲಿ ನಾನು ಹೇಳುತ್ತೇನೆ, ಈ ಅಧಿಕಾರಿಗಳು ರೆಡಿ ಮಾಡಿದ ಸ್ಟೇಟ್‌ಮೆಂಟ್‌ನಲ್ಲಿ ಎಷ್ಟು ಲೋಪವಿದೆ ಎಂದರೆ, ಸ್ಟ್ರೆಚರ್ ತಂದಿದ್ದು ನಿಜ. ಅವರು ತಂದಿದ್ದ ಸ್ಟ್ರೆಚರ್‌ನಲ್ಲಿ ಮೃತದೇಹ ಹಿಡಿಸುತ್ತಿರಲಿಲ್ಲ. ಆಮೇಲೆ ಅಲ್ಲಿ ಇರತಕ್ಕಂಥ ಬಿದಿರನ್ನೆಲ್ಲಾ ಕಟ್ ಮಾಡಿ ಅಂಬಿನಿಂದ ಕಟ್ಟಿ ಸ್ಥಳೀಯ ಜನರು ಆ ದೇಹವನ್ನು 7-8 ಕಿಲೋಮೀಟರ್ ಹೊರಗಡೆ ಎತ್ತಿಕೊಂಡುಬರುತ್ತಾರೆ. ಅಲ್ಲಿಯವರೆಗೆ ಪೊಲೀಸರಿಗೆ ಸಹಕಾರ ಕೊಡಿ ಎಂದರೆ ಕೂಡ, ಆ ಬಾಡಿ ಎತ್ತುವುದಕ್ಕಾಗಲೀ ಹೊರಗಡೆ ತರುವುದಕ್ಕಾಗಲೀ ಸಹಕಾರ ಕೊಡುವುದಿಲ್ಲ. ಈ ತರಹ ಅವರ ಹೇಳಿಕೆ ಮೇಲೆ ನೀವು ಸ್ಟೇಟ್ ಮೆಂಟ್ ಅನ್ನು ಕೊಟ್ಟಿರುವುದನ್ನು ನಾನು ಇಲ್ಲಿ ಪ್ರಸ್ತಾಪಿಸಬೇಕಾಗುತ್ತದೆ. ಹೇಳಿಕೆಯಲ್ಲಿ, ನಾಗಪ್ಪನವರ ಅಪಹರಣ ಮಾಡಿಕೊಂಡು ಹೋಗುವುದಕ್ಕೆ 8 ಜನರು ಬಂದಿದ್ದರೆಂದು ಇದೆ. ವೀರಪ್ಪನ್ ಜೊತೆಯಲ್ಲಿ ಕಾಡಿನಲ್ಲಿರುವವರು ನಾಲ್ಕು ಜನರೆಂದು ಕಂಡು ಬರುತ್ತದೆ. ಉಳಿದವರನ್ನು ಸರ್ಕಾರ ಅರೆಸ್ಟ್ ಮಾಡಿದೆಯೇ? ಅವರ ಮೇಲೆ ಕೇಸ್ ಬುಕ್ ಮಾಡಿದೆಯೇ? ಅವರು ನಾಲ್ಕು ಜನರು ಯಾರು? ಇದೊಂದು ಸಂಶಯದ ಪ್ರಶ್ನೆ ಇಲ್ಲಿ ಆಡಗಿದೆ. ಅದರ ಬಗ್ಗೆ ಸರ್ಕಾರ ಹೇಳಬೇಕಾಗುತ್ತದೆ. ಈ ಸ್ಟೇಟ್‌ಮೆಂಟ್‌ನಲ್ಲಿ ಎಂಟು ಜನರೆಂದು ಇದೆ. ಇವತ್ತು ವೀರಪ್ಪನ್ ಹತ್ತಿರ ಎಷ್ಟು ಜನರಿದ್ದಾರೆ? ಮತ್ತೆ ಎಂಟು ಜನರು ಇಲ್ಲಿ ಬಂದಿದ್ದರೆಂದು ನಿಮ್ಮ ವರದಿ ಹೇಳುವುದಾದರೆ, ನಾಲ್ಕು ಜನರು ಎಲ್ಲಿ ಹೋಗಿದ್ದರೆಂಬ ವಿಚಾರವನ್ನು ಸರ್ಕಾರ ತಿಳಿಸಬೇಕಾಗುತ್ತದೆ. ಈ ಒಂದು ಸನ್ನಿವೇಶದಲ್ಲಿ ನಾಗಪ್ಪನವರ ಬಿಡುಗಡೆಯಾಗಬೇಕೆಂದು ಹೇಳಿ ದಿನಾಂಕ 20.11.02ರಂದು ಸಾತ್ವಿಕ ಸಮಾವೇಶ ಬೆಂಗಳೂರಿನಲ್ಲಿ ಜರುಗುತ್ತದೆ. ಅದರ ಬಗ್ಗೆ ಆಗಲೇ ಮಾತನಾಡಿದ್ದಾರೆ. ಅದರ ಬಗ್ಗೆ ಮತ್ತೆ ಪ್ರಸ್ತಾಪಿಸುವುದಕ್ಕೆ ಹೋಗುವುದಿಲ್ಲ. ನಾಗಪ್ಪನವರ ಅಪಹರಣಕ್ಕೆ ಸಂಬಂಧಪಟ್ಟ ಹಾಗೆ ಮತ್ತು ಹತ್ಯೆ ವಿಚಾರಕ್ಕಾಗಿ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿರುತ್ತಾರೆ. ಇನ್ನೊಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ತಿಳಿಸುವುದೇನೆಂದರೆ, 7ನೇ ತಾರೀಖು ನಮ್ಮಲ್ಲಿ ಕನ್ನಡ ಪ್ರಭ, ಪ್ರಜಾವಾಣಿ ದಿನಪತ್ರಿಕೆಗಳಿದ್ದ ಹಾಗೆ, ದಿನಕರನ್, ಕೊಯಮತ್ತೂರಿನಿಂದ ಪಬ್ಲಿಶ್ ಆಗುವ ತಮಿಳು ದಿನಪತ್ರಿಕೆ ಇದೆ. ಅದರಲ್ಲಿ ನಾಗಪ್ಪ ಮತ್ತು ವೀರಪ್ಪನ್ ಇಬ್ಬರ ಫೋಟೋ ಹಾಕಿ, ಒಂದು ಸುದ್ದಿ ಪ್ರಕಟವಾಗಿದೆ. ನಮಗೆ ಕ್ಯಾಸೆಟ್ ಸಿಕ್ಕಿದ್ದು 8ನೇ ತಾರೀಖು. ಅವರ ದೇಹ ಪತ್ತೆಯಾಗಿದ್ದು 8ನೇ ತಾರೀಖು ಸಂಜೆ 5.30 ಗಂಟೆಗೆ. ಆದರೆ, 7ನೇ ತಾರೀಖು ಇಲ್ಲಿ ಸುದ್ದಿ ಪ್ರಕಟವಾಗಬೇಕಾದರೆ ಬಹುಶಃ 6ನೇ ತಾರೀಖು ಅವರಿಗೆ ಸುದ್ದಿ ಮುಟ್ಟಿರಬೇಕು. ಆ ಒಂದು ಪತ್ರಿಕೆಯಲ್ಲಿ ಏನು ಹೇಳುತ್ತಾರೆಂದರೆ, ದಿನಕರನ್ ದಿನಾಂಕ 7.12.02 ವೀರಪ್ಪನ್ ವಾಯಿದೆ ಮುಗಿದು 7 ದಿಗಳಾದುವು, ನಾಗಪ್ಪನ ಗತಿ ಏನು? ಸತ್ಯಮಂಗಲದಲ್ಲಿ

ಉದ್ರಿಕ್ತ ಪರಿಸ್ಥಿತಿ. ಗುಂಡಿಟ್ಟು ಕೊಂದಿರುವುದಾಗಿ ವದಂತಿ ಮತ್ತು ಆತಂಕವನ್ನು ಎಂದು ಹೆಡ್‌ಲೈನ್ ಹಾಕಿ 7ನೇ ತಾರೀಖು ಬೆಳಗಿನ ಪತ್ರಿಕೆ ಇಡೀ ಕೊಯಮತ್ತೂರಿನಲ್ಲಿ ಸತ್ಯಮಂಗಲ ಊಟಿ ಈ ಒಂದು ಪೂರ್ಣ ಪ್ರದೇಶದಲ್ಲಿ ಸಿಕ್ಕಿದೆ. ಈ ಒಂದು ಪತ್ರಿಕೆಯಲ್ಲಿ ಬರೆದಿರುವ ಕನ್ನಡ ವರ್ಷನ್ ಹೇಳುತ್ತೇನೆ, "ಕೊಳತ್ತೂರು ಮಣಿಯನ್ನು ಸಂಧಾನಕ್ಕೆ ಕಾಡಿಗೆ ಕಳುಹಿಸಲು ಮತ್ತೆ ತೊಂದರೆ ಏರ್ಪಟ್ಟಿದೆ. ಅವರ ಮೇಲಿರುವ ಮೊಕದ್ದಮೆಗಳಿಗೆ ಜಾಮೀನು ಸಿಗಲಿಲ್ಲ. ಆದುದರಿಂದ, ಕೊಳತ್ತೂರು ಮಣಿ ಮೇಲೆ ಮತ್ತೆ ಮೊಕದ್ದಮೆ ಹೇರಲಾಗಿದೆಯೆಂದು ಗೊತ್ತಾಗಿದೆ. ಇದರಿಂದ ಜಾಮೀನು ಮೇಲೆ ಬಿಡುಗಡೆಯಾಗುವುದು ತಡವಾಗಿದೆ. ಇದರಿಂದ ಆತಂಕಗೊಂಡ ವೀರಪ್ಪನ್ ಕಾಡಿನಲ್ಲಿರುವ ನಾಗಪ್ಪನವರನ್ನು ಕೊಂದುಬಿಡುವುದಾಗಿ ಕಾಮಗೆರೆ ಸುತ್ತಲೂ ಜನರು ಮಾತನಾಡುತ್ತಿದ್ದಾರೆ. ಇದರ ಮಧ್ಯೆ ಮೊನ್ನೆ ಗುರುವಾರ ರಾತ್ರಿ 10 ಗಂಟೆಗೆ ಕರ್ನಾಟಕದಿಂದ ಬಂದ ಕೆಲವರು ನಾಗಪ್ಪನವರನ್ನು ವೀರಪ್ಪನ್ ಬಂದೂಕಿನಿಂದ ಸುಟ್ಟು ಕೊಂದಿದ್ದಾನೆಂದು ಹೇಳಿದರು. ಈ ವರದಿ ಕಾಳ್ಗಿಚ್ಚಿನಂತೆ ಸತ್ತಿ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಹರಡಿತ್ತು. ಇದರಿಂದ ಕೊಳ್ಳೇಗಾಲ, ತಾಳವಾಡಿ, ಚಾಮರಾಜನಗರ ಕ್ಷೇತ್ರಗಳಲ್ಲಿ ಆತಂಕ ಉಂಟಾಯಿತು. ಇದರಿಂದ ಈ ಪ್ರದೇಶದಲ್ಲಿ ಜನರು ದಿಗ್ಭ್ರಮೆ ಗೊಂಡರು. ಇದರ ಬಗ್ಗೆ ಸತ್ತಿ ಪೊಲೀಸ್ ಮೇಲಾಧಿಕಾರಿಯವರನ್ನು ಕೇಳಿದಾಗ, ನಾಗಪ್ಪನವರನ್ನು ವೀರಪ್ಪನ್ ಸುಟ್ಟು ಕೊಂದಿದ್ದಾನೆಂಬ ವರದಿ ಸುಳ್ಳು ಮತ್ತು ಇದು ಬರಿಯ ವದಂತಿ, ಯಾರೂ ನಂಬ ಬೇಡಿ ಎಂದು ಹೇಳಿದರು. ಎಂದು 7ನೇ ತಾರೀಖಿನ ಪತ್ರಿಕೆಯಲ್ಲಿ ಬರುತ್ತದೆ. ನಮ್ಮ ಇಂಟೆಲಿಜೆನ್ಸ್ ಎಲ್ಲಿ ಹೋಗಿತ್ತು? ನನಗೆ ಪಕ್ಕದ ಊಟಿಯಲ್ಲಿ ಸಿಕ್ಕಿರುವ ಪೇಪರ್ ಇದು. ಗುಡ್ಲೂರು, ಗುಂಡ್ಲುಪೇಟೆಯಿಂದ 40 ಕಿಲೋಮೀಟರ್ ದೂರದಲ್ಲಿದೆ. ಅಲ್ಲಿ ಈ ಪತ್ರಿಕೆಯ ಫ್ರಂಟ್ ಪೇಜ್‌ನಲ್ಲಿ ದೊಡ್ಡ ಪೋಸ್ಟರ್ ತರಹ ಮಾಡಿ, ಪಬ್ಲಿಶ್ ಮಾಡಿದ್ದಾರೆ. ಈ ಒಂದು ಸುದ್ಧಿ ನಮ್ಮ ಕರ್ನಾಟಕದ ಮಾಹಿತಿದಾರರಿಗೆ, ಪೊಲೀಸರಿಗೆ ಸಿಗಲಿಲ್ಲವೇ? ಇದನ್ನೆಲ್ಲಾ ಗಮನಿಸಿದಾಗ, ಇದರಲ್ಲಿ ಏನೋ ಒಳಸಂಚು ನಡೆದಿದೆ, ನಾಗಪ್ಪನವರ ಹತ್ಯೆ ವೀರಪ್ಪನ್ ಕ್ಯಾಸೆಟ್ ಪ್ರಕಾರ 5ನೇ ತಾರೀಖು ಬೆಳಿಗ್ಗೆ 10 ಗಂಟೆಗೆ ಆಗಿದೆ. ಅದು ಅನೇಕರಿಗೆ ಗೊತ್ತಿರುವ ವಿಚಾರ. ಈ ಒಂದು ಸಂದರ್ಭದಲ್ಲಿ 4ನೇ ತಾರೀಖು ಶಬರಿಮಲೈಗೆ ಹೋಗುವ ರೀತಿಯಲ್ಲಿ ಹಿಂದಿನ ದಿನ ಚೆಂಗಡಿ ಗ್ರಾಮಕ್ಕೆ 7-8 ಜನರು ಟೆಂಪೋ ಟ್ರಾವಲಸ್ ವೆಹಿಕಲ್‌ನಲ್ಲಿ ಬರುತ್ತಾರೆ. ಬಂದು, ನಾವು ಶಬರಿಮಲೈಗೆ ಹೋಗುತ್ತಿದ್ದೇವೆಂದು ಹೇಳಿ, ಅಲ್ಲಿ ಒಂದು ಮನೆಯಲ್ಲಿ ತಂಗಿದ್ದು, 5ನೇ ತಾರೀಖು ಬೆಳಿಗ್ಗೆ ಎದ್ದು ಅಲ್ಲಿಂದ ಅವರ ಅಯ್ಯಪ್ಪಸ್ವಾಮಿ ವೇಷ ಬದಲಿಸಿ ಷೂ, ಬೇರೆ ಪ್ಯಾಂಟ್ ಹಾಕಿಕೊಂಡು, ಹೋಗಿದ್ದಾರೆ. ಇದು ನಮಗೆ ಸಿಕ್ಕಿರುವ ಮಾಹಿತಿ, 5ನೇ ತಾರೀಖು ಬೆಳಿಗ್ಗೆ ಹೋಗಿ ಸುಮಾರು 12 ಗಂಟೆ ಹೊತ್ತಿಗೆ ಮಹದೇಶ್ವರಸ್ವಾಮಿ ಬೆಟ್ಟದ ಕೆಳಗಿರುವ ತಾಳಬೆಟ್ಟದ ಪ್ರದೇಶದಲ್ಲಿ ಮಧ್ಯಾಹ್ನ ಸುಮಾರು 2 ಗಂಟೆ, 2-30ರಲ್ಲಿ ಕಾಡಿನ ಪೊದೆ ಸಂದಿಯಲ್ಲಿ ಅವಿತು ಕೊಂಡಿರುತ್ತಾರೆ. ಅದನ್ನು ಒಬ್ಬ ಹೆಂಗಸು ಗಮನಿಸುತ್ತಿರುತ್ತಾಳೆ. ಅವಳು ಇದೇನೋ ಇಲ್ಲಿ ಮಾಡುತ್ತಿದ್ದಾರೆಂದು ಯೋಚಿಸುತ್ತಿರುವಾಗ, 7 ಜನರ ಗುಂಪಿನಲ್ಲಿ ಒಬ್ಬ ಬಂದು ವೆಹಿಕಲ್ ತಡೆದ ತಕ್ಷಣ, ಅಲ್ಲಿ ಓಡಿ ಹೋಗಿ ವೆಹಿಕಲ್ ಹತ್ತಿಕೊಂಡು ಅಲ್ಲಿಂದ ಮುಂದೆ ಪರಾರಿಯಾಗುತ್ತಾರೆ. ಈ ಒಂದು ಘಟನೆಯನ್ನು ಅಲ್ಲಿನ ಜನರು ನೋಡಿರುತ್ತಾರೆ ಮತ್ತು ಅಲ್ಲೇನು ನಡೆಯಿತೆನ್ನುವ

ವಿಚಾರವನ್ನು ಅಲ್ಲಿ ಹೋದ ಸಂದರ್ಭದಲ್ಲಿ ಜನರಿಗೆ ತಿಳಿಸಿರತಕ್ಕದ್ದು. ಒಬ್ಬ ಜೋಸೆಫ್ ಅಲೆಗ್ಸಾಂಡರ್ ಆಲಿಯಾನ್ ರಾಜಾ ಎನ್ನುವವನ ಅಪಹರಣವಾಗಿದೆ. ಅವನು ಸತ್ತಿದ್ದಾನೋ, ಬದುಕಿದ್ದಾನೋ ಇದುವರೆಗೆ ಆ ವಿಚಾರ ಗೊತ್ತಾಗಲಿಲ್ಲ. ಆದರೆ, ಅವನ ತಂದೆತಾಯಿಗಳು ದಿನಾಂಕ 28.11.02ರಲ್ಲಿ ಕೊಳ್ಳೇಗಾಲ ಪೊಲೀಸ್ ಸ್ಟೇಷನ್‌ನಲ್ಲಿ ಪೊಲೀಸ್ ಕಂಪ್ಲೇಂಟ್ ಲಾಡ್ಜ್ ಮಾಡಿದ್ದಾರೆ. ಅಂದರೆ, ಜೋಸೆಫ್ ಅಲೆಗ್ಸಾಂಡರ್ ಎನ್ನುವವ ಏನಾದ ಎನ್ನುವ ವಿಚಾರ ಈಗ ನಿಗೂಢವಾಗಿ ಉಳಿದಿದೆ. ಈ ಕೇಸ್‌ಗೆ ಸಂಬಂಧಪಟ್ಟ ಹಾಗೆ ಪೊಲೀಸ್ ಕಂಪ್ಲೇಂಟ್ ಲಾಡ್ಜ್ ಆಗಿದೆ. ಅದರ ಜೊತೆಗೆ, 9ನೇ ತಾರೀಖು ಮೃತದೇಹ ಸಿಕ್ಕಿದ ಮೇಲೆ ಅಲ್ಲಿಂದ ಅದನ್ನು ತೆಗೆದುಕೊಂಡು ಬರಬೇಕಾದರೆ 8ನೇ ತಾರೀಖು ಭಾನುವಾರ ರಾತ್ರಿ ನಾವೂ ಕೂಡ ಚಂಗಂಡಿ ಪ್ರದೇಶಕ್ಕೆ ಹೋಗಿದ್ದೆವು.

4.20 ಪಿಎಂ

ನಾನು ಚಾಮರಾಜನಗರದ ಶಾಸಕರಾದ ಗುರುಸ್ವಾಮಿಯವರು ಇನ್ನು ಕೆಲವು ಮಿತ್ರರು ನಾವು ಒಂದು ಕಡೆಗೆ ಹೋದರೆ, ಕೃಷ್ಣಮೂರ್ತಿಯವರು ನಮಗಿಂತ ಮುಂಚೆ ಚಂಗಂಡಿ ಗ್ರಾಮಕ್ಕೆ ಹೋಗಿರುತ್ತಾರೆ. ನಾಗಪ್ಪನವರ ಅಪಹರಣವಾದ ಮೇಲೆ ನಮಗೆ ಪೊಲೀಸ್ ಎಸ್ಕಾರ್ಟ್‌ನ್ನು ಕೊಟ್ಟಿದ್ದಾರೆ. ನೀವು ಏನಾದರೂ ಕಾಡು ಪ್ರದೇಶಗಳಲ್ಲಿ ಓಡಾಡಬೇಕು ಎಂದರೆ ಪೊಲೀಸ್‌ರ ನೆರವು ತೆಗೆದುಕೊಂಡು ಹೋಗಬೇಕು ಎಂದು ಹೇಳಿದ್ದಾರೆ. ಅದೇರೀತಿ ಇವರು ಪೊಲೀಸ್ ಎಸ್ಕಾರ್ಟ್‌ನ್ನು ತೆಗೆದುಕೊಂಡು ನಮ್ಮ ಗುಂಡ್ಲುಪೇಟೆಯಲ್ಲಿ ಒಂದು ಮದುವೆ ಕಾರ್ಯಕ್ರಮ ಮುಗಿಸಿಕೊಂಡು ನಾಗಪ್ಪನವರ ವಿಚಾರ ತಿಳಿದು ಅಲ್ಲಿಗೆ ಹೋಗುವಂಥ ಸಂದರ್ಭದಲ್ಲಿ, ಹೋಗುವವರೆವಿಗೂ ನಿಧಾನಕ್ಕೆ ಎಸ್ಕಾರ್ಟ್ ಮಾಡಿಕೊಂಡು ಹೋಗುತ್ತಾರೆ, ಅಲ್ಲಿ ನಾಗಪ್ಪನವರ ಬಾಡಿ ಸಿಕ್ಕಿದೆ ಎಂದಾಕ್ಷಣ ಎಸ್ಕಾರ್ಟ್‌ನವರು ಹೇಳದೆ ಕೇಳದೆ ಹೊರಟು ಹೋಗುತ್ತಾರೆ, ನಾವು ಕೌದಳ್ಳಿ ಎನ್ನುವ ಗ್ರಾಮದಲ್ಲಿ ನಿಂತುಕೊಂಡು ಸುಮಾರು ರಾತ್ರಿ 8 ಗಂಟೆ ಸಮಯದಲ್ಲಿ ಸಮಾಚಾರ ಸಿಕ್ಕಿದೆ ಎಂದು ಜನರ ಹತ್ತಿರ ಮಾತನಾಡಿಕೊಂಡು ನಿಂರಿರಬೇಕಾದರೆ, ಸುಮಾರು 80 ಕಿಲೋಮೀಟರ್ ಫಾಸ್ಟ್‌ನಲ್ಲಿ ರೊಯ್ಯ್ ಎಂದು ಪೊಲೀಸ್ ವೆಹಿಕಲ್ ಹೋಗುತ್ತದೆ. ನಾವು ಬಹಳ ಮುಖ್ಯವಾದ ಸುದ್ದಿ ತೆಗೆದುಕೊಂಡು ಹೋಗುತ್ತಿರಬೇಕು ಎಂದು ನಾವು ಅಲ್ಲಿ ನಿಂತುಕೊಂಡು ನೋಡುತ್ತಿದ್ದರೆ, ಅಷ್ಟರಲ್ಲಿ ಅರ್ಧಗಂಟೆಯ ಬಳಿಕ ಕೃಷ್ಣಮೂರ್ತಿಯವರು ನಮ್ಮ ಬಳಿ ಬಂದು ನೋಡಿ ನನಗೆ ಒದಗಿಸಿದ್ದ ಎಸ್ಕಾರ್ಟ್‌ನವರು ನನಗೆ ಹೇಳದೆ ಹೊರಟು ಹೋಯಿತು ಎನ್ನುವ ಮಾತನ್ನು ಹೇಳುತ್ತಾರೆ. ಅಂದರೆ ಇವರಿಗೆ ಕಳುಹಿಸಿದಂಥ ಎಸ್ಕಾರ್ಟ್‌ನವರು ಇವರಿಗೂ ತಿಳಿಸದೆ ಹೇಳದೆ ಕೇಳದೆ ಪಲಾಯನ ಮಾಡುತ್ತಾರೆಂದರೆ ಇಲ್ಲಿ ಪೊಲೀಸ್ ವ್ಯವಸ್ಥೆ ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿತ್ತು ಮತ್ತು ಅವರಿಗೆ ಎಷ್ಟು ಜೀವಭಯ ಇಟ್ಟುಕೊಂಡು ಕೆಲಸ ನಿರ್ವಹಿಸುತ್ತಿದ್ದರು ಎನ್ನುವ ಪ್ರಶ್ನೆಯನ್ನು ನಾವಿಂದು ಕೇಳಬೇಕಾಗಿದೆ. ನಂತರದಲ್ಲಿ ನಾವು ಅಲ್ಲಿಂದ ಬರಬೇಕಾದರೆ, ಇಲ್ಲಿ ಕಾಮಗೆರೆಯಲ್ಲಿ ಇವರ ಸೆಕ್ಯೂರಿಟಿಗೆ ಇಟ್ಟಿದ್ದ ಇಬ್ಬರು ಪೊಲೀಸ್‌ರವರನ್ನು ಕೂಡ ಹಾಕಿದ್ದಾರೆಂದು ಹೇಳಿ ಮೂರು ಪೊಲೀಸ್ ರಿಸರ್ವ್ ವ್ಯಾನ್‌ಗಳು ಕಾಮಗೆರೆಯ ನಾಗಪ್ಪನವರ ಮನೆಯ ಮುಂದೆ ಬಂದು ನಿಂತಿವೆ. ಅಲ್ಲಿ ಟಿಯರ್ ಗ್ಯಾಸ್ ಸ್ಪ್ರೆಡ್ ಮಾಡಿ ಮನೆಯಲ್ಲಿದ್ದಂಥವರು ಯಾರೂ

ಹೊರಗಡೆ ಬರುವುದಕ್ಕೆ ಆಗಬಾರದು ಆ ರೀತಿಯ ವಾತಾವರಣ ಅಲ್ಲಿ ನಿರ್ಮಾಣವಾಗಿತ್ತು. ಆಗ ನಾವು ಅಲ್ಲಿದ್ದ ಮೂರು ರಿಸರ್ವ್ ವ್ಯಾನ್‌ಗಳನ್ನು ವಾಪಸ್ ಕಳುಹಿಸಿ, ಅಲ್ಲಿದ್ದ ಇಬ್ಬರು ಪೇದೆಗಳನ್ನು ವಾಪಸ್ ಕಳುಹಿಸಿ, ಅಡಿಷನಲ್ ಡಿ.ಜಿ.ಯವರನ್ನು ಕೊಳ್ಳೇಗಾಲದಲ್ಲಿ ನಾವು ಮೂರು ಜನ ಶಾಸಕರು ಒಗ್ಗೂಡಿ ನೋಡಿ, ಅಲ್ಲಿ ಪರಿಸ್ಥಿತಿ ಬಹಳ ಟೆನ್ಸ್‌ನ ಇದೆ ನೀವು ಯಾವುದೇ ಕಾರಣಕ್ಕೂ ಅವರ ಅಂತ್ಯಕ್ರಿಯೆ ಆಗುವವರೆವಿಗೂ ಪೊಲೀಸ್‌ನವರನ್ನು ಓಡಾಡುವುದಕ್ಕೆ ಬಿಡಬೇಡಿ, ನಾಗಪ್ಪನವರಂತೂ ನೀವು ಸುರಕ್ಷಿತವಾಗಿ ಕರೆದುಕೊಂಡು ಬರುವುದಕ್ಕೆ ಆಗಲಿಲ್ಲ, ಕೊನೇಪಕ್ಷ ಅವರ ಅಂತ್ಯಕ್ರಿಯೆಗಾದರೂ ಅವಕಾಶವಾಗಲಿ ಎಂದು ಹೇಳಿದಾಗ ಅವರು ಒಪ್ಪಿಕೊಂಡರು. ಅದೇರೀತಿಯಲ್ಲಿ ಅವರು ಕಾಮಗೆರೆಯಲ್ಲಿ ಪೊಲೀಸ್‌ರನ್ನು ಹಾಕಿರಲಿಲ್ಲ, ಆದರೆ ಪೋಸ್ಟ್‌ಮಾರ್ಟಂ ಮಾಡಿ ತಂದಂಥ ಬಾಡಿಯ ಹಿಂದೆ ಮೂರು ಪೊಲೀಸ್ ವ್ಯಾನ್‌ಗಳನ್ನು ಫಾಲೋ ಮಾಡಿಸುತ್ತಿದ್ದರು. ಈ ವ್ಯಾನ್‌ಗಳನ್ನು ನೋಡಿದಾಗ ಸಹಜವಾಗಿ ಜನ ಉದ್ರೇಕಗೊಂಡರು, ಆಗ ಲಾಠಿ ಚಾರ್ಜ್ ಆಯಿತು. ಆ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಕೃಷ್ಣಮೂರ್ತಿಯವರು ಜನಗಳಿಗೆ ಸಮಾಧಾನ ಮಾಡಿ ಪೊಲೀಸ್ ಇಲ್ಲಿ ಈ ಡೆಡ್ ಬಾಡಿ ತೆಗೆದುಕೊಂಡು ಮುಂದೆ ಹೋಗೋಣ ಎಂದು ಹೇಳುವಷ್ಟರಲ್ಲಿ ಲಾಠಿಚಾರ್ಜ್ ಮಾಡಿದರು, ಅವರು ನಾನು ವಿಧಾನ ಸಭಾ ಸದಸ್ಯನೆಂದು ಹೇಳುತ್ತಿದ್ದರೂ ಕೂಡ ಅವರಿಗೆ ಹೊಡೆದರು. ಲಾಠಿ ಚಾರ್ಜ್ ಮಾಡಬೇಕಾದರೆ ಮಂಡಿಯಿಂದ ಕೆಳಗೆ ಹೊಡೆಯಬೇಕು ಎನ್ನುವುದು ಒಂದು ನಿಯಮ, ಆದರೆ ಅವರು ಹೊಡೆದಿರುವುದರಿಂದ ಅವರ ಕೆನ್ನೆಯ ಮೇಲೆ ಇದುವರೆವಿಗೂ ಮಾರ್ಕ್ ಇದೆ, ಪೊಲೀಸರು ನಾವೇ ಒಂದು ರೀತಿಯಲ್ಲಿ ಅಪರಾಧಿಸ್ಥಾನದ ಮೇಲೆ ನಿಂತಿರುವವರು ಎಂದು ತೋರಿಸುವ ರೀತಿಯಲ್ಲಿ, ಜನಗಳ ಕಲ್ಲು ತೂರಾಟದಲ್ಲಿ ಇಬ್ಬರು ಶಾಸಕರಿಗೆ ತೀವ್ರ ಪೆಟ್ಟಾಗಿದೆ ಎಂದು ಟಿವಿ ಹಾಗೂ ಇತರೆ ಮಾಧ್ಯಮಗಳಲ್ಲಿ ಬಿತ್ತರಿಸುವಂತೆ ನೋಡಿಕೊಂಡರು. ಆದರೆ ವಾಸ್ತಾವಾಗಿ ತಾವು ಈ ಫೋಟೊಗಳನ್ನು ನೋಡಿದರೆ ಗೊತ್ತಾಗುತ್ತದೆ, ಅಲ್ಲಿ ಲಾಠಿ ಚಾರ್ಜ್‌ನ್ನು ಶಾಸಕರ ಮೇಲೆ ಯಾವ ರೀತಿ ಮಾಡಿದ್ದಾರೆಂಬುದು ಗೊತ್ತಾಗುತ್ತದೆ, ನಾನು ಈ ಫೋಟೊಗಳನ್ನು ತಮಗೆ ಕಳುಹಿಸಿ ಕೊಡುತ್ತೇನೆ. ಈ ರೀತಿಯಾಗಿ ಅನೇಕ ತಪ್ಪುಗಳನ್ನು ಪೊಲೀಸ್ ಇಲಾಖೆಯವರು ಮಾಡಿಕೊಂಡು ಬಂದಿರುವುದನ್ನು ತಾವು ಈ ಸಂದರ್ಭದಲ್ಲಿ ಗಮನಿಸಬಹುದು. ನಾಗಪ್ಪನವರ ಕುಟುಂಬಕ್ಕೆ ವೈ ಸ್ಕೇಲ್ ಸೆಕ್ಯೂರಿಟಿಯನ್ನು ಒದಗಿಸಿದ್ದೇವೆಂದು ಮಾನ್ಯ ಎಸ್‌ಪಿಯವರು ಇಂಟಲಿಜೆನ್ಸ್ ಡಿ.ಜಿ ಯವರಿಗೆ ಪತ್ರ ಬರೆಯುತ್ತಾರೆ. ನಾಗಪ್ಪನವರ ಅಪಹರಣವಾಗುವ ಸುದ್ದಿ ಇದೆ ಎಂದು ಮುಂಚೆನೇ ನಿರೀಕ್ಷೆ ಮಾಡಿದ್ದ ಎಸ್‌ಟಿಎಫ್ ಚೀಫ್ ಆರ್.ಕೆ. ಶರ್ಮ್‌ರವರು ಬರೆದಂಥ ಒಂದು ಪತ್ರಕ್ಕೆ ವೈ ಸ್ಕೇಲ್ ಸೆಕ್ಯೂರಿಟಿಯನ್ನು ನಾವು ಈಗಾಗಲೇ ಒದಗಿಸಿದ್ದೇವೆ ಎನ್ನುವ ಏನು ಉತ್ತರ ಕೊಡುತ್ತಾರೋ, ಆ ವಿಚಾರವನ್ನು ಅವರ ಕುಟುಂಬಕ್ಕೆ ತಿಳಿಸುವ ಒಂದು ಸೌಜನ್ಯ ಕೂಡ ಈ ಸರ್ಕಾರದ ಪೊಲೀಸ್ ಅಧಿಕಾರಿಗಳು ಮಾಡುವುದಿಲ್ಲ. ಈ ರೀತಿ ಒಂದು ಪತ್ರ ಬಂದಿದ್ದು ಇದರಿಂದಾಗಿ ನಿಮಗೆ ನಾವು ವೈ ಸ್ಕೇಲ್ ಸೆಕ್ಯೂರಿಟಿ ಕೊಟ್ಟಿದ್ದೇವೆಂದು ರಿಪ್ಲೈ ಮಾಡಿದ್ದೇವೆ ನಿಮಗೆ ಕೊಟ್ಟಿರುವ ಸೆಕ್ಯೂರಿಟಿ ಸಮಾಧಾನವಾಗಿದೆಯೇ? ಇನ್ನು ಏನಾದರೂ ಹೆಚ್ಚಿನ ವ್ಯವಸ್ಥೆಯಾಗಬೇಕೇ? ಎಸ್‌ಟಿಎಫ್‌ನ ಕಮಾಂಡೆಂಟ್‌ರವರು ಈ ರೀತಿಯ ಅನುಮಾನ

ವ್ಯಕ್ತಪಡಿಸಿದ್ದು ನೀವು ಸ್ವಲ್ಪ ಓಡಾಡುವಾಗ ಎಚ್ಚರಿಕೆಯಿಂದ ಇರಬೇಕೆಂದು, ಯಾರ್‍ಯಾರ ಹೆಸರುಗಳನ್ನು ಮೆನ್ಷನ ಮಾಡಿದ್ದಾರೋ ಅವರಿಗೆ ತಿಳಿಸುವಂಥ ಸಾಮಾನ್ಯ ತಿಳುವಳಿಕೆ ಪೊಲೀಸ್ ಅಧಿಕಾರಿಗಳಿಗೆ ಇಲ್ಲ. ಇವರು ಒಂದು ಪತ್ರಕ್ಕೆ ಉತ್ತರ ಬರೆದು ನಾವು ವೈ ಸ್ಕೇಲ್ ಸೆಕ್ಯೂರಿಟಿ ಪ್ರೊ ವೈಡ್ ಮಾಡಿದ್ದೇವೆಂದು ಸುಮ್ಮನೆ ಇದ್ದು ಬಿಟ್ಟರೆ ಹೊರತು ಅವರಿಗೆ ಈ ರೀತಿಯ ಅಪಘಾತ ಕಾದಿದೆ, ಅಪಹರಣ ಕಾದಿದೆ ಎನ್ನುವ ಮುನ್ಸೂಚನೆಯನ್ನು ಯಾವುದೇ ಪೊಲೀಸ್ ಅಧಿಕಾರಿಗಳಾಗಲೀ ಸರ್ಕಾರದವರಾಗಲೀ ನಾಗಪ್ಪನವರಿಗೆ ನೀಡಿರುವುದಿಲ್ಲ. ಹಾಗೇನಾದರೂ ನೀಡಿದ್ದರೆ ಅವರು ಸ್ವಲ್ಪ ಎಚ್ಚೆತ್ತುಕೊಂಡು ಈ ಅಪಹರಣ ತಡೆಗಟ್ಟುವುದಕ್ಕೆ ಒಂದು ಅವಕಾಶವಿತ್ತು. ನಾಗಪ್ಪನವರ ಅಂತ್ಯಕ್ರಿಯೆ ಆದಂಥ ಸಂದರ್ಭದಲ್ಲಿ ಅನೇಕ ಜನ ಮುಖಂಡರುಗಳು ಭಾಗವಹಿಸಬೇಕೆಂದು ಬಂದರೂ ಸಹ ಅವರನ್ನು ಕೊಳ್ಳೇಗಾಲದಲ್ಲಿ ತಡೆದು ಅವರನ್ನು ಅಲ್ಲಿಂದ ವಾಪಸ್ ಕಳುಹಿಸುವ ಪ್ರಯತ್ನ ಮಾಡಿದರು. ಏಕೆಂದರೆ, ಅಲ್ಲಿ ಜನ ಉದ್ರೇಕದಿಂದ ಇದ್ದಾರೆ ಇವರು ಬಂದರೆ ಏನಾದರೂ ಅನಾಹುತ ಆಗಬಹುದು ಎಂದು ಅವರು ಆ ರೀತಿ ಮಾಡಿದ್ದಾರೆ. ಆದರೂ ನಮ್ಮ ಸಂಯುಕ್ತ ದಳದ ಅನೇಕ ಮುಖಂಡರುಗಳು ಅಲ್ಲಿಗೆ ಬಂದಂಥ ಸಂದರ್ಭದಲ್ಲಿ ಅವರ ಮೇಲೆ ಹಲ್ಲೆ ನಡೆಯುವಂಥ ಪ್ರಯತ್ನ ಕೂಡ ಅಲ್ಲಿ ನಡೆಯಿತು. ಇದರಲ್ಲಿ ಒಳಸಂಚು ಏನಿದೆ ಅದು ಜನತೆಗೆ ಗೊತ್ತಾಗಬೇಕಾಗಿದೆ. ಈ ಮಧ್ಯೆ ಇಲ್ಲಿಂದ ಹೊರ ಹಾಕಿಸಿಕೊಂಡ ಬಿಜೆಪಿಯವರು, ಮಾನ್ಯ ಕೇಂದ್ರ ಸಚಿವರಾದ ಅನಂತಕುಮಾರ್‌ರವರು, ಈ ಘಟನೆಯ ಬಗ್ಗೆ ಎಷ್ಟು ಆಸಕ್ತಿ ವಹಿಸಿದ್ದರು ಎನ್ನುವುದಕ್ಕೆ ನಾನು ಈ ಮಾತನ್ನು ಹೇಳುತ್ತೇನೆ. 6ನೇ ತಾರೀಖಿನ ದಿನ ಮೈಸೂರಿಗೆ ಒಂದು ಕಾರ್ಯಕ್ರಮಕ್ಕೆ ಅವರು ಬಂದಿರುತ್ತಾರೆ, ಅವರು "ಕಳೆದ 104 ದಿನಗಳಿಂದ ಕಾಡುಗಳ್ಳ ವೀರಪ್ಪನ್ ವಶದಲ್ಲಿ ವನವಾಸ ಅನುಭವಿಸುತ್ತಿರುವ ಮಾಜಿ ಸಚಿವ ಹೆಚ್. ನಾಗಪ್ಪನವರು ಇನ್ನು ಹದಿನೈದು ದಿನಗಳೊಳಗೆ ಬಿಡುಗಡೆಯಾಗಲಿದ್ದಾರೆಂದು ಕೇಂದ್ರ ನಗರಾಭಿವೃದ್ಧಿ ಸಚಿವ ಅನಂತ್‌ಕುಮಾರ್ ಭವಿಷ್ಯ ನುಡಿದಿದ್ದಾರೆ" ಅವರು 5ನೇ ತಾರೀಖು ಹತ್ಯೆ ಆಗಿದ್ದಾರೆ ಇವರು 6ನೇ ತಾರೀಖು ಒಂದು ಕಾರ್ಯಕ್ರಮದಲ್ಲಿ ಇನ್ನು ಹದಿನೈದು ದಿನದೊಳಗಡೆ ಇವರು ಬಿಡುಗಡೆಯಾಗುತ್ತಾರೆಂದು ಹೇಳುತ್ತಾರೆ, ಅಂದರೆ ಇವರು ಎಷ್ಟು ಬದ್ಧತೆಯನ್ನು ನಾಗಪ್ಪನವರನ್ನು ಬಿಡುಗಡೆ ಗೊಳಿಸುವ ವಿಚಾರದಲ್ಲಿ ಹೊಂದಿದ್ದರು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಅವರ ಅಂತ್ಯಕ್ರಿಯೆ ಎಲ್ಲಾ ಮುಗಿದು ಏಳು ದಿನಗಳ ನಂತರ, ನಾಗಪ್ಪನವರ ಕುಟುಂಬದವರ ವಿಶೇಷವಾಗಿ ಅವರ ಪುತ್ರಿ ಆ ಒಂದು ಜಾಗದಲ್ಲಿ ಹೋಗಿ ನಾವು ಪೂಜೆ ಸಲ್ಲಿಸಿ ಬರಬೇಕು, ನಾಗಪ್ಪನವರು ಹತ್ಯೆಯಾದ ಜಾಗವನ್ನು ನೋಡಬೇಕು ಎಂದು ಹೇಳಿ, ಆ ಊರಿನ ಕೆಲವು ಮುಖಂಡರನ್ನು ಕರೆದುಕೊಂಡು ಆ ಕುಟುಂಬದವರು ಅಲ್ಲಿಗೆ ಹೋದಾಗ, ಆ ಸಂದರ್ಭದಲ್ಲಿ ಅಲ್ಲಿಗೆ ಹೋಗುವರೆವಿಗೂ ಯಾವ ಪೊಲೀಸ್‌ನವರು ಇವರನ್ನು ಫಾಲೋ ಮಾಡಿರುವುದಿಲ್ಲ. ಕಾಡು ಒಳಗೆ ಹೋಗುವಂಥ ಸಂದರ್ಭದಲ್ಲಿ ಕೆಲವು ಎಸ್‌ಟಿಎಫ್ ಅಧಿಕಾರಿಗಳು ಮತ್ತೆ ಪೊಲೀಸರು ಅವರನ್ನು ಹಿಂಬಾಲಿಸುತ್ತಾರೆ. ಅಲ್ಲಿ ಹೋದಂಥ ಸಂದರ್ಭದಲ್ಲಿ ಏನೇನು ವಸ್ತುಗಳು ಸಿಕ್ಕಿದವೋ ಬುಲೆಟ್ ಇರಬಹುದು, ಮತ್ತೊಂದು ಇರಬಹುದು, ಅವೆಲ್ಲವನ್ನೂ ನಾಗಪ್ಪನವರ ಕುಟುಂಬ ವರ್ಗ ಮತ್ತು ಅವರ ಅನುಯಾಯಿಗಳು ಇವರು ಶೇಖರಣೆ ಮಾಡಿದಂತವುಗಳು. ನಂತರ

ಇವರು ಅವಲ್ಲೆವನ್ನೂ ಕಲೆಕ್ಟ್ ಮಾಡಿಕೊಂಡು, ನಾವು ಇವೆಲ್ಲವನ್ನೂ ಸಂಶೋಧನೆ ಮಾಡಿ ವಶಪಡಿಸಿಕೊಂಡಿದ್ದೇವೆ, ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಇದು ಸುಳ್ಳಾದಂಥ ವಿಚಾರ. ಹತ್ಯೆಯಾದ ಚಂಗಡಿ ಪ್ರದೇಶಕ್ಕೆ ಹೋಗಿ ಹುಡುಕುವ ಪ್ರಯತ್ನ ಮಾಡದೇ ಇದ್ದರೆ, ಬಹುಶಃ ಈ ಒಂದು ನಿಗೂಢತೆ ಹಾಗೆಯೇ ಉಳಿಯುತ್ತಿತ್ತೇ ಹೊರತು ಈ ಒಂದು ಹತ್ಯೆ ಬಗ್ಗೆ ಬೆಳಕು ಚೆಲ್ಲುವಂಥ ವಿಚಾರಗಳು ಬೆಳಕಿಗೆ ಬರುತ್ತಿರಲಿಲ್ಲ. ಈಗಾಗಲೇ ನಮ್ಮ ನಾಯಕರಾದ ಮಾನ್ಯ ಸಿಂಧ್ಯಾರವರು ಮಾತನಾಡುತ್ತಾ ಹೇಳಿದ ಹಾಗೆ, ಪೊಲೀಸ್‌ರು ಪಂಚನಾಮೆ, ಮಹಜರ್ ಹಾಗೂ ಸ್ಥಳ ಪರಿಶೀಲನೆ ಮಾಡಬೇಕು. ಆದರೆ ಎರಡನೇ ದಿನ ಆ ಸ್ಥಳಕ್ಕೆ ಹೋದಾಗ ಅಳತೆ ಮಾಡತಕ್ಕಂಥ ಟೇಪ್ ಆಗಲಿ ಅಥವಾ ಇತರೆ ಯಾವುದೇ ವಸ್ತುಗಳನ್ನು ಅವರು ತಂದಿರಲಿಲ್ಲ. ಅಂದರೆ ಅವರ ಪ್ರಕಾರ ಈ ಪ್ರಕರಣದ ಬಗ್ಗೆ ಏನೂ ಆಸಕ್ತಿ ಇಲ್ಲವೇನೋ ಅನ್ನುವ ರೀತಿಯಲ್ಲಿ ಅಲ್ಲಿಗೆ ಹೋಗಿದ್ದ ಜನಗಳಿಗೆ ಇವರ ನಡವಳಿಕೆ ಕಂಡು ಬಂತು ಎಂದು ಹೇಳಬೇಕಾಗುತ್ತದೆ. ಆ ಸ್ಥಳದಲ್ಲಿ ಅವರು ಬರೆದಿರುವಂಥ ಎರಡು ನೋಟ್ ಪುಸ್ತಕಗಳು ಆ ಸಂದರ್ಭದಲ್ಲಿ ಸಿಕ್ಕಿರುತ್ತವೆ. ಆ ನೋಟ್ ಬುಕ್‌ಗಳಲ್ಲಿ ಈಗಾಗಲೇ ಅವರು ಮಾತನಾಡುತ್ತಾ ಹೇಳಿದರು, ಓಂ ನಮಃ ಶಿವಾಯ ಎಂದು ಬರೆದಿರುವ ಮಂತ್ರದಲ್ಲಿ ಮಧ್ಯೆ ಮಧ್ಯೆಯಲ್ಲಿ ಕೆಲವು ಮಾಹಿತಿಗಳನ್ನು ಅವರು ಬರೆದಿರುತ್ತಾರೆ. ಅದರಲ್ಲಿ ಈಗಾಗಲೇ ಎಲ್ಲಾ ವಿಚಾರಗಳನ್ನು ಹೇಳಿರುತ್ತಾರೆ, ತೆಂಗನೂರು ಬಸವರಾಜ ಬಂದಿದ್ದರು ಎನ್ನುವ ಪದವನ್ನು ಅವರು ಅಲ್ಲಿ ಮೆನ್‌ಷನ್ ಮಾಡಿರುತ್ತಾರೆ. ಈಗಾಗಲೇ ಅದರ ಜೆರಾಕ್ಸ್ ಪ್ರತಿಯನ್ನು ಸರ್ಕಾರ ವಶಪಡಿಸಿಕೊಂಡಿದೆ. ಅದನ್ನು ಸರ್ಕಾರ ನೋಡಿರುತ್ತದೆ, ವೀರಮಣಿ ಎಂದು ಇದೆ, 40 ಕೋಟಿ ಎಂದು ಇದೆ, ಟೆಂಟ್ ಮತ್ತು ಸೋಲಾರ್ ಸಿಸ್ಟಮ್, ಡಾಕ್ಟರ್ ತಂದಿದ್ದು ಎಂದು ಇದೆ, ಮತ್ತು 50 ಲೋಡ್ ಎಂದು ಇದೆ, ಬೆಂಗಳೂರು ಖುದ್ದೂಸ್ ಎಂದು ಇದೆ, ಇವೆಲ್ಲವನ್ನೂ ಅವರು ಏತಕ್ಕಾಗಿ ಅಲ್ಲಿ ಬರೆದುಕೊಂಡಿದ್ದಾರೆ. ಅದರ ಹಿನ್ನೆಲೆ ಏನು? ಅವರ ಹೆಸರುಗಳು ಕಾಡಿನಲ್ಲಿ ಪ್ರಸ್ತಾಪವಾಗುವುದಕ್ಕೆ ಕಾರಣವೇನು? ಈ ವಿಚಾರ ಇವತ್ತು ಚರ್ಚೆಯಾಗಬೇಕಾಗಿದೆ. ಈ ತೆಂಗನೂರು ಎನ್ನುವ ವ್ಯಕ್ತಿ ಬಸವರಾಜು ಅವನು ಸಾಗ್ಯ ಗ್ರಾಮದ ಒಬ್ಬ ವ್ಯಕ್ತಿಯಾಗಿದ್ದಾನೆ. ಅವನು ತೆಂಗನೂರಿನಲ್ಲಿ ಸೊಸೈಟಿಯ ಕಾರ್ಯದರ್ಶಿಯಾಗಿ ಇವತ್ತು ಕೂಡ ಕೆಲಸವನ್ನು ಮಾಡುತ್ತಿದ್ದಾನೆ. ಶ್ರೀ ಮಹದೇವಸ್ವಾಮಿಯು ಕಾಡಿಗೆ ಹೋಗಿ ಬಂದ ವಿಚಾರವು ಸರ್ಕಾರಕ್ಕೂ ಗೊತ್ತು, ಅದಕ್ಕಾಗಿ ಓಡಾಡುತ್ತಿದ್ದಂತಹ ಪ್ರಮುಖರಿಗೂ ಕೂಡ ಗೊತ್ತಿರುವಂತಹ ವಿಚಾರವಾಗಿದೆ. ಅವರು ಬಂದ ಮೇಲೆ ಅವರು ಹೇಳಿದಂತಹ ವಿಚಾರಗಳು ಮುಖ್ಯಮಂತ್ರಿಗಳ ಗಮನಕ್ಕೆ ಬಂದ ಗಳಿಗೆಯಲ್ಲಿಯೇ ಅವನು ವಿಚಾರವನ್ನು ಮುಟ್ಟಿಸಿದ್ದಾನೆ. ಹಾಗಾಗಿಯೇ ಅವನು ಹೋಗಿ ಬಂದಿರುವಂತಹ ಒಂದು ವಿಚಾರ, ಈ ತೆಂಗನೂರು ಬಸವರಾಜು ಏತಕ್ಕಾಗಿ ಹೋಗಿದ್ದಾ? ಈತನನ್ನು ಕಳುಹಿಸಿದ್ದಾವರು ಯಾರು? ಈತನಿಗೆ ಸುಮಾರು 40 ರಿಂದ 42 ವರ್ಷಗಳಿರಬಹುದು, ಅಬ್ಬಾಬ್ಬಾ ಎಂದರೆ 45 ವರ್ಷಗಳಿರಬಹುದು. 37 ವರ್ಷಗಳ ಹಿಂದೆಯೇ ಕಾಡಿಗೆ ಹೋದಂತಹ ವೀರಪ್ಪನ್‌ಗೆ ಮುಖ ಪರಿಚಯ ಇಲ್ಲದೆ ಇರುವುದಕ್ಕೂ ಸಾಧ್ಯ. ಇಂತಹವನನ್ನು ಗುರುತಿಸಿ ಮಾತನಾಡಿಸಿದರೆ, ಅವನು ಏನು ಮಾತನಾಡಿದ್ದ? ಏತಕ್ಕಾಗಿ ಹೋಗಿದ್ದ? ಆತನು ಯಾರ ಬೆಂಬಲಿಗ ಆಗಿದ್ದ? ಈ ಒಂದು ಹಿನ್ನೆಲೆಯನ್ನು ತನಿಖೆಯಿಂದ

ತಿಳಿಯಬೇಕಾಗಿದೆ. ಬಹುಶಃ ಈಗಾಗಲೇ ಆತನನ್ನು ವಿಚಾರಣೆಗೆ ಒಳಪಡಿಸಿರುತ್ತಾರೆಂದು ನಾವು ನಿರೀಕ್ಷಣೆ ಮಾಡಿದ್ದೆವು. ಆದರೆ ಅಂತಹ ಪ್ರಯತ್ನಗಳು ನಡೆದ ಹಾಗೆ ಕಾಣಲಿಲ್ಲ. ಆದರೆ ನಿನ್ನೆಯೂ ಕೂಡ ಶಾಸಕರ ಭವನದಲ್ಲಿ ಓಡಾಡಿಕೊಂಡು ಇರುವುದನ್ನು ನಮ್ಮ ಸ್ಥಳೀಯ ಮುಖಂಡರುಗಳು ನೋಡಿದ್ದಾರೆ. ಅಲ್ಲಿಗೆ ಈ ಒಂದು ವಿಚಾರದಲ್ಲಿ ಅವರ ಹತ್ಯೆಯ ನಿಗೂಢತೆಯನ್ನು ಪತ್ತೆಹಚ್ಚಿ ಹೇಳುವುದಕ್ಕೂ ಕೂಡ ಸರ್ಕಾರದವರು ಸಿದ್ಧವಿಲ್ಲವೆಂದರೆ, ಅವರನ್ನು ಬದುಕಿಸಿಕೊಡುವುದಕ್ಕೂ ನಿಮ್ಮಿಂದಾಗಲಿಲ್ಲ, ಅವರು ಹೇಗೆ ಸತ್ತರು ಎಂದು ತಿಳಿದುಕೊಳ್ಳುವಂತಹ ಅಧಿಕಾರ ನಮಗೆ ಇಲ್ಲವೇ? ಅದನ್ನಾದರೂ ಮಾಡಬೇಕೆಂದು ನಾವು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ. ತಾವು ವಿಧಾನಸಭಾ ಅಧಿವೇಶನವನ್ನು ಕರೆದಿದ್ದೀರಿ, ಅದನ್ನು ಕರೆದ ಉದ್ದೇಶ, ನಾವು ನಾಗಪ್ಪನವರ ಹತ್ಯೆಯ ವಿಚಾರದಲ್ಲಿ ವಿವರವಾದ ಚರ್ಚೆಯನ್ನು ಮಾಡಿ, ನಾವು ಏನು ಮಾಡಿದ್ದೇವೆಂದು ತಿಳಿಸುತ್ತೇವೆನ್ನುವಂತಹ ವಿಚಾರವನ್ನು ತಾವು ಹೇಳಿದಿರಿ. ಅದಕ್ಕಾಗಿ ವಿಧಾನಸಭಾ ಅಧಿವೇಶನವನ್ನು ಕರೆದಿದ್ದಾರೆ, ಆದರೆ ಕೊನೆಯಲ್ಲಿ ತನಿಖೆಗೆ ಆದೇಶವನ್ನು ಮಾಡುತ್ತಾರೆಂದು ನಮ್ಮ ನಿರೀಕ್ಷೆಯಾಗಿತ್ತು. ಯಾವಾಗ ಈ ಡೈರಿ ಮತ್ತು ಇವುಗಳೆಲ್ಲವೂ ಸಿಕ್ಕಿದವೋ ಸಡನ್ ಆಗಿ ನ್ಯಾಯಾಂಗ ತನಿಖೆಯನ್ನು ಮಾಡಲು ಸರ್ಕಾರದವರು ಘೋಷಣೆಯನ್ನು ಮಾಡಿಬಿಟ್ಟರು. ಅಧಿವೇಶನವನ್ನು ಕರೆದು, ಅನಂತರ ಅಷ್ಟು ತರಾತುರಿಯಲ್ಲಿ ನ್ಯಾಯಾಂಗ ತನಿಖೆ ಆದೇಶ ಮಾಡುವಂತಹ ಅವಶ್ಯಕತೆ ಏನಿತ್ತು? ಈ ಅಧಿವೇಶನದಲ್ಲಿಯೇ ತಾವು ಅದನ್ನು ಘೋಷಣೆ ಮಾಡಬಹುದಾಗಿತ್ತು. ಅನೇಕ ಸಂಶಯಗಳು ಕಾಡುತ್ತಿದೆ, ನ್ಯಾಯಾಂಗ ತನಿಖೆಯ ಬಗ್ಗೆ ತಾವು ಹೇಳಿದ್ದೀರಿ, ಈ ಒಂದು ಹಿನ್ನೆಲೆಯಲ್ಲಿ ಕೊಯಮತ್ತೂರು ಸೆಷನ್ಸ್ ಕೇಸ್ ನಂ. 164:2002, ಕನಕರಾಜು ಎನ್ನುವವನು ತಮಿಳುನಾಡು, ಜಡೇಸ್ವಾಮಿ ಕೊಳ್ಳೇಗಾಲ, ಇವರಿಂದ ಎರಡು ಲಕ್ಷ ರೂಪಾಯಿಗಳನ್ನು ರಿಕವರಿ ಮಾಡಿದ್ದಾರೆ. ಈ ತರಹದ ಕೇಸ್‌ಗಳು ಸುಮಾರು ಕೊಯಮತ್ತೂರಿನಲ್ಲಿ ಹಣ ರಿಕವರಿ ಮಾಡಿದ ಬಗ್ಗೆ ನಡೆಯುತ್ತಿವೆ. ಇವೆಲ್ಲಾ ವೀರಪ್ಪನ್ ಜನಗಳಿಗೆ ಬೇರೆ ಬೇರೆಯವರಿಗೆ ಕೊಟ್ಟಂಥ ಹಣವನ್ನು ಅಲ್ಲಿಯ ಪೊಲೀಸರು ಪತ್ತೆಹಚ್ಚಿ ಅದನ್ನು ಪಾರ್ಟಿಗಳ ಮುಖಾಂತರ ಬ್ಯಾಂಕುಗಳಿಗೆ ಕರೆದುಕೊಂಡು ಹೋಗಿ ಅಕೌಂಟ್ ಓಪನ್ ಮಾಡಿಸಿ ದುಡ್ಡನ್ನು ಡಿಪಾಸಿಟ್ ಮಾಡಿಸಿ ಡ್ರಾ ಮಾಡಿಸಿ ರಿಕವರಿ ಮಾಡಿಕೊಂಡು ಕೇಸ್‌ಗಳನ್ನು ಬುಕ್ ಮಾಡಿದ್ದಾರೆ. ಈ ತರಹದ 60-70 ಕೇಸ್‌ಗಳನ್ನು ಕೊಯಮತ್ತೂರಿನ ಸೆಷನ್ಸ್ ಕೋರ್ಟಿನಲ್ಲಿ ಇವತ್ತೂ ಕೂಡ ನಡೆಯುತ್ತಿವೆ. ಈ ವ್ಯಕ್ತಿಗಳಿಗೆಲ್ಲಾ ಇತ್ತೀಚಿಗೆ ಹಣ ಬಂದಿರತಕ್ಕಂಥದ್ದು, ಎರಡು ವರ್ಷಗಳ ಈಚಿಗೆ ಇವರಿಂದ ಈ ಹಣವನ್ನು ರಿಕವರಿ ಮಾಡಿರುವಂಥದ್ದು. ಇದರ ಬಗ್ಗೆ ಕೂಡ ಬೆಳಕನ್ನು ಚೆಲ್ಲಬೇಕಾಗಿದೆ. ಮತ್ತೆ ನಾಗಪ್ಪನವರ ಅಪಹರಣ ಆದಾಗ ಅಬ್ಡಕ್ಷನ್ ಕೇಸ್ ರಿಜಿಸ್ಟರ್ ಮಾಡಿದರು. ಅಪಹರಣ ಕೇಸ್ ಕೊಳ್ಳೇಗಾಲ ರೂರಲ್ ಪೊಲೀಸ್ ಸ್ಟೇಶನ್‌ನಲ್ಲಿ ರಿಜಿಸ್ಟರ್ ಆಗಿದೆ. ಎಫ್‌ಐಆರ್ ಹಾಕಿದ್ದಾರೆ. ಆದಾದ ಮೇಲೆ ಅದರಲ್ಲಿ 3 ಜನ ಹಾಗೂ ಇತರರು ಎಂದು ಅಬ್ಡಕ್ಷನ್ ಕೇಸ್ ಹಾಕಿದ್ದಾರೆ. ಇದನ್ನು ಗಮನಿಸಬೇಕು, 8 ಜನ ವೀರಪ್ಪನ್ ಜೊತೆ ಅಪಹರಣ ಮಾಡಿಕೊಂಡು ಹೋಗುವುದಕ್ಕೆ ಬಂದಿದ್ದರು ಎಂದು ಸರ್ಕಾರದ ವರದಿ ಇದೆ. ಅಲ್ಲಿ ಕೊಳ್ಳೇಗಾಲ ರೂರಲ್ ಪೊಲೀಸ್ ಸ್ಟೇಶನ್‌ನಲ್ಲಿ ಒಂದು ಅಬ್ಡಕ್ಷನ್ ಕೇಸ್ ರಿಜಿಸ್ಟರ್ ಮಾಡುತ್ತಾರೆ. ಅದರಲ್ಲಿ

3 ಜನ ಮತ್ತು ಇತರರು ಎಂದು ಹೇಳುತ್ತಾರೆ. ಏಕೆ ಅಲ್ಲಿ ಎಂಟು ಜನರ ಹೆಸರುಗಳನ್ನು ಕೊಡಬಾರದಾಗಿತ್ತು ಅದೊಂದು ಪ್ರಶ್ನೆ ಈ ಮೂರು ಜನ, ಒಬ್ಬ ಸೇತುಕುಳಿ ಗೋವಿಂದ ಚಂದ್ರೇಗೌಡ, ವೀರಪ್ಪನ್ ಎಂದು ಮೂರು ಜನರ ಹೆಸರನ್ನು ಮೆನ್‌ಷನ್ ಮಾಡಿ ಇತರರು ಎಂದು ಅಲ್ಲಿ ಕೇಸ್ ಬುಕ್ ಆಗಿರುವುದು ನಾಗಪ್ಪನವರ ಹತ್ಯೆಯಾದ ಮೇಲೆ ಅದನ್ನು ಇವತ್ತು 302ಕ್ಕೆ ಕೇಸ್ ಕನ್‌ವರ್ಟ್ ಮಾಡಿದ್ದಾರೆ, ಆ ಎಫ್‌ಐಆರ್ ನಲ್ಲಿ ಈ ಕೇಸ್ ಈ ರೀತಿಯಲ್ಲಿ ಇರುವಾಗ ಇನ್‌ವೆಸ್ಟಿಗೇಶನ್ ಮಾಡುವಂಥ ಒಂದು ಸನ್ನಿವೇಶ ಇಲ್ಲಿ ಅಡಗಿದೆ. ಏನು, ಈಗ ಕಳುಹಿಸಿರುವಂಥ 5-6 ಕ್ಯಾಸೆಟ್‌ಗಳಲ್ಲೂ ಕೂಡ ನಾಗಪ್ಪನವರು ಆ ವೀರಪ್ಪನ್‌ನ ಜೊತೆ ಇದ್ದರು ಎನ್ನುವುದು ರುಜುವಾತು ಆಗುತ್ತದೆ. ನೀವು ಕೇಸ್‌ನ್ನು 302ಕ್ಕೆ ಕನ್‌ವರ್ಟ್ ಮಾಡಿದ ಮೇಲೆ ಆ ಪ್ರಕರಣವನ್ನು ಇವತ್ತು ಒಂದು ಪೊಲೀಸ್ ತನಿಖೆಯಿಂದ ಪತ್ತೆ ಹಚ್ಚುವುದಕ್ಕೆ ಸಾಧ್ಯವೇ ಹೊರತು ನ್ಯಾಯಾಂಗ ತನಿಖೆಯಿಂದ ಇದನ್ನೂ ಪತ್ತೆ ಹಚ್ಚುವುದಕ್ಕೆ ಹೇಗೆ ಸಾಧ್ಯ ಎನ್ನುವ ಪ್ರಶ್ನೆಗೆ ಸರ್ಕಾರ ಉತ್ತರ ಕೊಡಬೇಕು ಎನ್ನುವ ಮಾತನ್ನೆ ಹೇಳಿ, ಈ ಎಲ್ಲಾ ಕಾರಣಕ್ಕಾಗಿ ನಾವು ಈ ಒಂದು ಪ್ರಕರಣವನ್ನು ಸಿಬಿಐ ತನಿಖೆಗೆ ಒಳಪಡಿಸುವುದರಿಂದ ಮಾತ್ರ ಸತ್ಯವನ್ನು ತಿಳಿಯುವುದಕ್ಕೆ ಸಾಧ್ಯ ಎನ್ನುವ ಮಾತನ್ನು ಹೇಳುತ್ತೇನೆ. ಇಲ್ಲದಿದ್ದಾರೆ ಯಾವ ವಿಚಾರಗಳು ಕೂಡ ಇಲ್ಲಿ ಬೆಳಕಿಗೆ ಬರುವುದಿಲ್ಲ ಇದು ಹೀಗೆಯೇ ಮುಚ್ಚಿ ಹೋಗಿ ಬಿಡುತ್ತದೆ. ಏಕೆಂದರೆ ಇಲ್ಲಿ ಅವರ ಡೈರಿ ಸಿಕ್ಕಿದೆ. ಅದರಲ್ಲಿರುವ ಮಾಹಿತಿಗಳು ಬಹಿರಂಗ ಆಗಬೇಕು. ಮತ್ತೆ 7ನೇ ತಾರೀಖಿಗೆ ದಿನಕರನ್ ಎನ್ನುವ ಪತ್ರಿಕೆಯಲ್ಲಿ ನಾಗಪ್ಪನವರ ಹತ್ಯೆಯಾಗಿರುವ ಬಗ್ಗೆ ವರದಿಯಾಗಿದೆ. 7ನೇ ತಾರೀಖಿಗೆ ತಮಿಳುನಾಡಿಗೆ ಗೊತ್ತಾಗುತ್ತದೆ, ಆದರೆ ಕರ್ನಾಟಕಕ್ಕೆ ಗೊತ್ತಾಗುವುದಿಲ್ಲ ಎನ್ನುವ ವಿಚಾರ, ಜನರಿಗೆ ಗೊತ್ತಾಗಬೇಕು. ನೂರಆರು ದಿನಗಳವರೆಗೆ ಕೊಳತ್ತೂರು ಮಣಿಯನ್ನು ಕಳುಹಿಸುವುದಕ್ಕೆ ಸರ್ಕಾರ ಏಕೆ ವಿಳಂಬ ಮಾಡಿತು, ಇದರ ಹಿನ್ನೆಲೆ ಏನು? ವೀರಪ್ಪನ್ ಅವನೇ ಕೊಂದಿದ್ದಾನೋ ಹೇಗೆ? ಮತ್ತೆ ಜಯಲಲಿತಾರವರು ಹೇಳುತ್ತಾರೆ ತಮಿಳುನಾಡು ಪೊಲೀಸ್‌ರು ಕರ್ನಾಟಕದ ಬಾರ್ಡರ್ ಒಳಗಡೆ ಪ್ರವೇಶವಾಗುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಇದು ನಮ್ಮ ಕೆಲಸವೇ ಅಲ್ಲವೆಂದು ಅವರು ಹೇಳುತ್ತಾರೆ. ಕೇಂದ್ರ ಗೃಹ ಸಚಿವರು ಹೇಳುತ್ತಾರೆ. ನಾವು ಆ ಕಾರ್ಯಾಚರಣೆಯನ್ನು ಸ್ಥಗಿತ ಮಾಡಿರುವುದರಿಂದ ನಮಗೂ ಆ ಹತ್ಯೆಯಾಗಿರುವುದಕ್ಕೂ ಯಾವ ಸಂಬಂಧವಿಲ್ಲವೆಂದು ತಾವು ಹೇಳುತ್ತೀರಿ. ಹಾಗಾದರೆ ಈ ಕೊಲೆಯಾಗಿರುವುದು ಹೇಗೆ? ನಾವು ವೀರಪ್ಪನ್ ಕ್ಯಾಸೆಟ್‌ನ್ನು ನಂಬಬೇಕೋ ಅಥವಾ ತಾವು ಕೊಡುವ ಹೇಳಿಕೆಯನ್ನು ನಂಬಬೇಕೋ ಅಥವಾ ತಮಿಳುನಾಡಿನ ಮುಖ್ಯಮಂತ್ರಿಗಳಾದ ಜಯಲಲಿತಾರವರು ಹೇಳಿಕೆಯನ್ನು ನಂಬಬೇಕೋ, ಕೇಂದ್ರ ಗೃಹ ಸಚಿವರ ಹೇಳಿಕೆಯನ್ನು ನಂಬಬೇಕೋ ಮತ್ತು ಅನಂತಕುಮಾರ್‌ರವರು ಇನ್ನು 15 ದಿವಸದೊಳಗೆ ಬಿಡುಗಡೆಯಾಗುತ್ತದೆ ಎಂದು ಹೇಳಿರುವ ಭವಿಷ್ಯವಾಣಿಯನ್ನು ನಂಬಬೇಕೋ ಈ ಒಂದು ಜಿಜ್ಞಾಸೆಯಲ್ಲಿ ನಮ್ಮ ಭಾಗದ ಎಲ್ಲಾ ಜನತೆಯೂ ಕೂಡ ಪಕ್ಷಬೇಧವನ್ನು ಮರೆತು ಇವತ್ತು ಈ ಒಂದು ವಿಚಾರದಲ್ಲಿ ಆಸಕ್ತಿಯಿಂದ ಗಮನಿಸುತ್ತಿದ್ದಾರೆ, ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆಂದು. ಅನೇಕ ಗುಂಡುಗಳು ಸಿಕ್ಕಿವೆ. ಅಲ್ಲಿ ಕಾರ್ಯಾಚರಣೆ ನಡೆದಿರುವ ಬಗ್ಗೆ ಸ್ಪಷ್ಟವಾಗಿ, ಮಾಹಿತಿಗಳು ಸಿಕ್ಕಿದೆ. ಮತ್ತೆ 7ನೇ ಕ್ಯಾಸೆಟ್‌ನ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದೂ ಕೂಡ

ಬಂದಿದೆಯೇ ಹೇಗೆ ಎನ್ನುವ ಬಗ್ಗೆ ನಮಗೆ ಇನ್ನು ಅನುಮಾನ ಕಾಡುತ್ತಿದೆ. ಅನೇಕ ವಿಚಾರಗಳ ಬಗ್ಗೆ ಇಲ್ಲಿ ಬೆಳಕನ್ನು ಚೆಲ್ಲಬೇಕಾದರೆ ಇದನ್ನು ಸಿಬಿಐ ತನಿಖೆಗೆ ಒಳಪಡಿಸಬೇಕು. ಮತ್ತೆ ನಮ್ಮ ಭಾಗದಲ್ಲಿ ಒಂದು ಘಟನೆ ನಡೆದಿದೆ. ಈ ಒಂದು ಹಿನ್ನೆಲೆಯಲ್ಲಿ ನಮ್ಮ ಜಿಲ್ಲೆಯವರು ಒಬ್ಬರು ಸಚಿವರಾಗಬೇಕು ಎಂದು ಒತ್ತಾಯ ಮಾಡಿದವರಲ್ಲಿ ನಾವೂ ಕೂಡ ಒಬ್ಬರು. ಆದರೆ ಈ ಘಟನೆ ನಡೆದ ಮೇಲೆ, ನಾಗಪ್ಪನವರು ಸುರಕ್ಷಿತವಾಗಿ ಬಂದಿದ್ದರೆ ಒಂದು ತರಹ, ಇವತ್ತು ಅವರ ಹತ್ಯೆಯಾಗಿ ಇಷ್ಟೊಂದು ನಿಗೂಢವಾಗಿ ಆಗಿರುವಂಥ ಒಂದು ಸನ್ನಿವೇಶದಲ್ಲಿ ಇಡೀ ಜಿಲ್ಲೆಯ ಜನ, ನೂರ ಆರು ದಿನಗಳ ಕಾಲ ಕರ್ನಾಟಕ ಬಂದಾಯಿತು, ಮೈಸೂರು ಬಂದಾಯಿತು, ಚಳುವಳಿಗಳು ಆಯಿತು, ಏನೆಲ್ಲಾ ಪ್ರತಿಭಟನೆಗಳನ್ನು ಮಾಡಬಹುದೋ, ಸರ್ಕಾರಕ್ಕೆ ಯಾವ್ಯಾವ ರೀತಿಯ ಒತ್ತಡಗಳನ್ನು ತರಬಹುದೋ, ಎಲ್ಲವನ್ನೂ ತಂದು ಆಯಿತು, ಆದರೆ ಆ ಮಣೆಯ ಮೇಲೆ ಇರುವಂಥ ಕೇಸ್‌ಗಳನ್ನು ವಿತ್‌ಡ್ರಾ ಮಾಡಬೇಕು ಎನ್ನುವ ತೀರ್ಮಾನಕ್ಕೆ ಸರ್ಕಾರ ಬರದೇ ಇರುವ ಹಿನ್ನೆಲೆಯಲ್ಲಿ ನಾವು ಏನು ಮಾಡಬೇಕು? ಮತ್ತೆ ಒಬ್ಬ ಐಪಿಎಸ್ ಅಧಿಕಾರಿಗಳು, ಎರಡು ತಿಂಗಳವರೆಗೆ ಸತತವಾಗಿ ರಜೆಯನ್ನು ಹಾಕಿಕೊಂಡು ಇದ್ದಾರೆ. ಅದರ ಹಿನ್ನೆಲೆ ಏನು? ಅವರು ಏತಕ್ಕಾಗಿ ಹಾಕಿಕೊಂಡಿದ್ದರು? ಅವರು ಎಲ್ಲಿ ಓಡಾಡುತ್ತಿದ್ದರು ಎನ್ನುವ ಒಂದು ವಿಚಾರ. ಪೊಲೀಸ್ ಇಲಾಖೆಯಲ್ಲಿ ಎರಡು ವರ್ಗಗಳು ನಮ್ಮ ಕಣ್ಣಿಗೆ ಸ್ಪಷ್ಟವಾಗಿ ಕಾಣುತ್ತಿತ್ತು. ಹೇಗಾದರೂ ಮಾಡಿ ವೀರಪ್ಪನ್‌ನ್ನು ಸೆರೆಹಿಡಿಯಬೇಕು, ಅದರಲ್ಲಿ ಶ್ರೀ ನಾಗಪ್ಪನವರು ಬಲಿಯಾದರೂ ಪರವಾಗಿಲ್ಲ, ಎನ್ನುವಂತಹ ವರ್ಗ ಒಂದು, ಮುಖ್ಯಮಂತ್ರಿಗಳ ಆದೇಶವನ್ನು ಪರಿಪಾಲನೆ ಮಾಡಬೇಕೆನ್ನುವ ಅಧಿಕಾರಿಗಳ ಮತ್ತೊಂದು ವರ್ಗ. ಈ ಒಂದು ಜಂಜಾಟದಲ್ಲಿ ಮತ್ತೆ ನಾವು ಈ ಬಗ್ಗೆ ಪದೇಪದೇ ಹೇಳುತ್ತಿದ್ದೆವು, ನೀವು ಕಾರ್ಯಾಚರಣೆಯನ್ನು ನಿಲ್ಲಿಸಿದರೂ ಕೂಡ ತಮಿಳುನಾಡು ಪೊಲೀಸರು ಮಾಹಿತಿ ಸಂಗ್ರಹ ಮಾಡುವ ನೆಪದಲ್ಲಿ ಸಂಚರಿಸುತ್ತಿದ್ದಾರೆ. ಅವರುಗಳು ಎಲ್ಲಾ ಕಡೆಗಳಲ್ಲೂ ಓಡಾಡುತ್ತಿದ್ದಾರೆ, ಅವರು ಬರದ ಹಾಗೆ ತಡಗಟ್ಟಬೇಕೆಂದು ಹೇಳಿದ್ದೇವೆ, ನಾವು ನಮ್ಮ ಎಸ್‌ಟಿಎಫ್ ಚೀಫ್‌ರವರಿಗೆ ಹೇಳಿ ತಡೆಯುತ್ತೇವೆಂದು ಹೇಳಿದರು, ಮುಖ್ಯಮಂತ್ರಿಯವರ ಆದೇಶವಿಲ್ಲದೆ, ನಿಲ್ಲಿಸುವ ಸಿದ್ಧತೆಯಲ್ಲಿ ಅವರು ಇರಲಿಲ್ಲ. ಪ್ರತಿದಿನ ಅವರು ಸಂಚಾರ ಮಾಡುತ್ತಿದ್ದ ಚಲನವಲನಗಳನ್ನು ನಮ್ಮ ಜನಗಳು ಗಮನಿಸಿದ್ದಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು, ತಮಿಳುನಾಡು ಮುಖ್ಯಮಂತ್ರಿಗಳನ್ನು ದೆಹಲಿಯಲ್ಲಿ ಒಂದು ಸಾರಿ ಭೇಟಿ ಮಾಡಿರುವುದನ್ನು ಬಿಟ್ಟರೆ, ಆ ಪ್ರಕರಣವು ಕೊನೆಯಾಗುವವರೆಗೂ ಕೂಡ ತಮಿಳುನಾಡು ಮುಖ್ಯಮಂತ್ರಿಗಳ ಜೊತೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇದರ ಉದ್ದೇಶವೇನು? ನಿಮ್ಮ ವೈಯಕ್ತಿಕ ಅಥವಾ ಬೇರೆ ರಾಜಕೀಯ ಭಿನ್ನಾಭಿಪ್ರಾಯಗಳು ಏನೇ ಇರಲಿ, ಈ ಒಂದು ಸನ್ನಿವೇಶದಲ್ಲಿ ತಾವು ಡಾ॥ ರಾಜ್‌ಕುಮಾರ್‌ರವರು ಪ್ರಕರಣದಲ್ಲಿ ಹೇಗೇ ಪದೇಪದೇ ತಮಿಳುನಾಡು ಮುಖ್ಯಮಂತ್ರಿಗಳನ್ನು ಭೇಟಿ ಮಾಡುತ್ತಿದ್ದಿರೋ ಆ ರೀತಿಯಲ್ಲಿ ಒಂದು ಸಟವಾದರೂ ಕೂಡ ತಮಿಳುನಾಡಿಗೆ ಮಾಡಿದ್ದರೆ ನಮಗೆ ಎಷ್ಟೋ ಒಂದು ಸಮಾಧಾನವಾಗುತ್ತಿತ್ತು. ತಾವು ಕೊನೆಗೆ ಭೇಟಿ ಮಾಡದಿದ್ದರೂ ಸಹ ಕೊನೆಗೆ ಗೃಹಸಚಿವರು ಮತ್ತು ಇತರ ಸಚಿವರನ್ನು ಅಲ್ಲಿಗೆ ಕಳುಹಿಸಿದಿರಿ ಅವರು ಅಲ್ಲಿಗೆ ಹೋಗಿದಂತಹ ಸಂದರ್ಭದಲ್ಲಿ ಅವರ ಪರಿಣಾಮ ಎಷ್ಟರಮಟ್ಟಿಗೆ ಆಯಿತು ಎಂಬುದರ ಬಗ್ಗೆಯೂ

ಕೂಡ ಗೊತ್ತಾಗಲಿಲ್ಲ. ನಮ್ಮ ಹಿರಿಯ ಪೊಲೀಸ್ ಅಧಿಕಾರಿಗಳು ರಾಜಕೀಯವಾಗಿ ತಮಿಳುನಾಡು ಮುಖ್ಯಮಂತ್ರಿ, ಕುಮಾರು ಜಯಲಲಿತಾರವರನ್ನು ಭೇಟಿ ಮಾಡಿ ಮಾತುಕತೆ ನಡೆಸಿರತಕ್ಕಂತಹ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ? ಅವರು ಯಾರ್‍ಯಾರು ತಮಿಳುನಾಡು ಮುಖ್ಯಮಂತ್ರಿಯವರನ್ನು ಭೇಟಿ ಮಾಡುವುದಕ್ಕೆ ಹೋಗಿದ್ದರು? ಅವರು ಯಾವ ಸಂದರ್ಭದಲ್ಲಿ ಹೋಗಿದ್ದರು? ಅವರು ಹೋಗಿರುವಂತಹ ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದಾರೆಯೇ? ಏನು ಎಂಬ ವಿಚಾರಗಳೂ ಕೂಡ ಇಲ್ಲಿ ನಿಗೂಢವಾಗಿಯೇ ಇದೆ. ಈ ಒಂದು ಹಿನ್ನೆಲೆಯಲ್ಲಿ ಮತ್ತು ಡಾ|| ರಾಜ್‌ಕುಮಾರ್‌ರವರು ಬಿಡುಗಡೆಯಾದಾಗ ಏನು ಅವರ ನೆರವನ್ನು ಪಡೆದುಕೊಂಡರೋ ಆ ಜನಗಳನ್ನು ಬಂಧನದಲ್ಲಿಟ್ಟಿದ್ದರಿಂದ ನಾಗಪ್ಪನವರ ಹತ್ಯೆ ಪ್ರಕರಣವು ಈ ರೀತಿಯಾಗಿ ಅವರ ಅಪಹರಣವು ಅಂತ್ಯವಾಗುವುದರಲ್ಲಿ ಕಾರಣವಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ನಮ್ಮ ಜಿಲ್ಲೆಯ ಈಗಿನ ಉಸ್ತುವಾರಿ ಸಚಿವರು ಮಂತ್ರಿಗಳಾಗಬೇಕೆಂದು ಹೇಳಿದವರು ನಾವು ನಾನು ಆಗಲೇ ಹೇಳಿದೆ. ನಮ್ಮ ಜಿಲ್ಲೆಯವರೇ ಸಚಿವರಾಗಬೇಕೆಂದು ನಾವು ಒತ್ತಡವನ್ನು ತಂದಿದ್ದೆವು. ಆ ಬಗ್ಗೆ ನಾವು ನಿರೀಕ್ಷಣೆಯನ್ನು ಇಟ್ಟುಕೊಂಡಿದ್ದೆವು. ಆದರೆ ಇವತ್ತು ಈ ಒಂದು ಸನ್ನಿವೇಶದಲ್ಲಿ ಅವರು ನೈತಿಕ ಹೊಣೆಯನ್ನು ಹೊತ್ತು ರಾಜೀನಾಮೆಯನ್ನು ಕೊಡಬೇಕಾಗಿತ್ತು ನನಗೆ ಗೊತ್ತಿರುವ ಪ್ರಕಾರ ಏಕೆಂದರೆ ಅವರು ಮಂತ್ರಿಯಾಗಬೇಕೆಂಬ ಆಸೆ ಪಟ್ಟವರಲ್ಲ. ಅವರು ಈ ಒಂದು ಹಿನ್ನೆಲೆಯಲ್ಲಿ ಆ ಭಾಗದ ಜನರ ಭಾವನೆಗಳಿಗೆ ಸ್ಪಂದಿಸಿ, ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟು ತಮ್ಮ ಒಂದು ನೈತಿಕ ಹೊಣೆಯನ್ನು ಹೊರಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದನ್ನು ಸಿಬಿಐ ತನಿಖೆಗೆ ವಹಿಸುವುದಕ್ಕೆ ಸರ್ಕಾರ ಸಿದ್ಧವಿಲ್ಲದಿದ್ದರೆ ಮುಖ್ಯಮಂತ್ರಿಗಳೂ ಕೂಡಲೇ ಈ ಪ್ರಕರಣದಲ್ಲಿ ರಾಜೀನಾಮೆಯನ್ನು ಕೊಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. 9ನೇ ತಾರೀಖು ಸುಮಾರು 47 ಕೇಸ್‌ಗಳನ್ನು ಎಲ್ಲಾ Non bailable case 143 section. ಕೆಳಗಡೆ so, IPC 143, 341 ಈ ತರಹ 8-8 ಸೆಕ್ಷನ್‌ಗಳನ್ನು ಹಾಕಿ accused, not known, not known public public ಅಂತಹ 41 ಕೇಸ್‌ಗಳು ಬುಕ್ಕಾಗಿದೆ ಮಾನ್ಯ ಉಪಾಧ್ಯಕ್ಷರೆ. ಈ ಕೇಸ್‌ಗಳ ನೆಪದಲ್ಲಿ ಇವತ್ತು ಸುಮಾರು ಗ್ರಾಮಗಳಲ್ಲಿ ನಿರಪರಾಧಿಗಳಿಗೆ ಕರೆದು ಎನ್‌ಕ್ವಯರಿ ಮಾಡತಕ್ಕಂಥದ್ದು, ಅವರನ್ನು ಪೊಲೀಸರಿಂದ ಹಿಂಸೆಗೆ ಒಳಪಡಿಸುವುದು, ಈ ರೀತಿಯಾಗಿ ಅನೇಕ ಗ್ರಾಮಗಳಲ್ಲಿ ಇವತ್ತು ಸಾವಿರಾರು ಜನರು ಗ್ರಾಮಗಳನ್ನು ಬಿಟ್ಟು ಬೇರೆ ಕಡೆಗೆ ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇವು ಆ ಸನ್ನಿವೇಶದಲ್ಲಿ ನಡೆದಂತಹ ಘಟನೆ, ಅವರು ಬರುವ ನಿರೀಕ್ಷೆಯಲ್ಲಿದ್ದಂತಹ ಜನಗಳಿಗೆ, ಅವರ ಹತ್ಯೆಯ ಸುದ್ದಿಯನ್ನು ಕೇಳಿ ಆಕ್ರೋಶಕ್ಕೆ ಒಳಗಾಗಿ ನಡೆದಂತಹ ಘಟನೆಗಳನ್ನು ಆಧಾರವಾಗಿಟ್ಟುಕೊಂಡು ಏನು ಕೇಸ್‌ಗಳನ್ನು ಬುಕ್ ಮಾಡಿದ್ದಾರೆ, ಈ ಕೇಸ್‌ಗಳನ್ನು ವಿತ್‌ಡ್ರಾ ಮಾಡಿಬೇಕೆಂದು ಸರ್ಕಾರವನ್ನು ನಾನು ಈ ಸಂದರ್ಭದಲ್ಲಿ ಒತ್ತಾಯಮಾಡುತ್ತೇನೆ. ಏನೇ ಆಗಲಿ ಈ ಒಂದು ಅಪಹರಣ ಪ್ರಕರಣದಲ್ಲಿ, ಅವರ ಅಂತ್ಯ ಈ ರೀತಿಯಲ್ಲಿ ಆಗುತ್ತದೇನೋ ಎನ್ನುವ ಊಹೆಯೂ ಕೂಡ ನಮಗೆ ಇರಲಿಲ್ಲ. ಶ್ರೀ ನಾಗಪ್ಪನವರಂತಹ ಸಜ್ಜನ ವ್ಯಕ್ತಿ, ಬಹುಶಃ ಅವರ ಜೀವಮಾನ ಉದ್ದಕ್ಕೂ ಕೂಡ ಯಾರಿಗೂ ನೋವನ್ನುಂಟು ಮಾಡದ, ಯಾರೊಬ್ಬರಿಗೂ ಜೋರಾಗಿ

ಮಾತನಾಡದೆ ಇದ್ದಂತಹ ವ್ಯಕ್ತಿಗೆ ಇಂತಹ ಒಂದು ದುರುಂತದ ಹತ್ಯೆ ಆಗಬಾರದಾಗಿತ್ತು. ಅಂತಹ ಒಂದು ಹತ್ಯೆಯ ಹಿನ್ನೆಲೆ ಮತ್ತು ಸತ್ಯಾಂಶ ತಿಳಿಯಬೇಕಾದ್ದು ಈ ನಾಡಿನ ಎಲ್ಲಾ ಜನರ ಕರ್ತವ್ಯ ಮತ್ತು ಹಕ್ಕಾಗಿದೆ. ಆ ಒಂದು ಕಾರಣಕ್ಕಾಗಿ ಇದನ್ನು ಮತ್ತೊಮ್ಮೆ ಸಿಬಿಐ ತನಿಖೆಗೆ ಒಳಪಡಿಸಬೇಕೆಂದು ಕೇಳುತ್ತೇನೆ. ನಮ್ಮ ಶಾಸಕರಾದ ಶ್ರೀ ಎ.ಆರ್. ಕೃಷ್ಣಮೂರ್ತಿಯವರಿಗೆ ಲಾಠಿ ಚಾರ್ಜ್‌ನಲ್ಲಿ ಏಟು ಮಾಡಿದ್ದಾರೆ ಅದರ ಬಗ್ಗೆಯೂ ಕೂಡ ಸರ್ಕಾರ ತನಿಖೆಯನ್ನು ಮಾಡಿಸಬೇಕು ಮತ್ತು ಅವರುಗಳ ಮೇಲೆ ಕ್ರಮವನ್ನು ಕೈಗೊಳ್ಳಬೇಕೆಂಬ ಮಾತನ್ನು ಹೇಳುತ್ತೇನೆ. 9ನೇ ತಾರೀಖಿನ ದಿವಸ ಏನು ಕೇಸ್‌ಗಳನ್ನು ಬುಕ್ ಮಾಡಿದ್ದಾರೆ, ಅದನ್ನು ವಾಪಸ್ಸು ಪಡೆಯಬೇಕೆಂಬ ಮಾತನ್ನು ಹೇಳುತ್ತೇನೆ. ಕೂಡಲೇ ಇದು ಸಿಬಿಐ ತನಿಖೆಗೆ ಹೋಗಬೇಕೆಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ.ಆರ್. ಕೃಷ್ಣಮೂರ್ತಿ : ಮಾನ್ಯ ಉಪಾಧ್ಯಕ್ಷರೆ, ನಾನು ಆ ಜಿಲ್ಲೆಯವನಾಗಿರುವುದರಿಂದ ನನಗೆ ಮಾತನಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಕೃಷ್ಣಮೂರ್ತಿಯವರೆ, ನಾಳೆ ದಿವಸ ಮಾನ್ಯ ವೈ.ಕೆ. ರಾಮಯ್ಯ ನವರು ಇರುವುದಿಲ್ಲ, ಅದಕ್ಕಾಗಿ ಅವರು ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ (ಹುಲಿಯೂರು ದುರ್ಗ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ನಾಗಪ್ಪನವರನ್ನು ಕಾಮಗೆರೆಯಲ್ಲಿ ವೀರಪ್ಪನ್ ಅಪಹರಿಸಿಕೊಂಡು ಹೋಗಿ 106 ದಿನಗಳ ಕಾಲ ಅವನ ಹಿಡಿತದಲ್ಲಿ ಬಂಧನದಲ್ಲಿಟ್ಟುಕೊಂಡಿದ್ದು, ಅವರನ್ನು ಕೊಂದು ದೇಹವನ್ನು ಕಾಡಿನಲ್ಲಿ ಹಾಕಿ ಹೋಗಿದ್ದಾನೆ ಎನ್ನುವುದು ಇಡೀ ಪ್ರಕರಣದ ಸಂಕ್ಷಿಪ್ತವಾದಂತಹ ವಿಷಯವಾಗಿದೆ. ಶ್ರೀ ನಾಗಪ್ಪನವರನ್ನು ಅಪಹರಿಸಿಕೊಂಡು ಹೋದ ಮೇಲೆ ಅವರನ್ನು ಬಿಡಿಸಿಕೊಂಡು ಬರುವುದಲ್ಲಿ, ಅವರ ಪ್ರಾಣವನ್ನು ಕಾಪಾಡುವುದರಲ್ಲಿ ಮತ್ತೆ ವೀರಪ್ಪನ್‌ನ್ನು ಸೆರೆ ಹಿಡಿಯುವುದರಲ್ಲಿ ಈ ಸರ್ಕಾರ ವಿಫಲವಾಗಿದೆ ಎನ್ನುವುದು ವಿರೋಧಪಕ್ಷದವರ ಒಂದು ತಕರಾರು ಆಗಿದೆ. ಬಹುಶಃ ಇಡೀ ವಿಷಯವನ್ನು ವಿಶ್ಲೇಷಣೆ ಮಾಡಿದರೆ, ಇದಕ್ಕಿಂತ ಮುಂದೆ ಅಥವಾ ಹಿಂದೆ ನಾವು ಯಾರು ಹೋಗಲಿಕ್ಕೆ ಸಾಧ್ಯವಾಗುವುದಿಲ್ಲ, ಅವರಿಗೂ ಆಗುವುದಿಲ್ಲ, ನಮಗೂ ಆಗುವುದಿಲ್ಲ. ಶ್ರೀ ನಾಗಪ್ಪನವರನ್ನು ಅಪಹರಿಸಿಕೊಂಡು ಹೋಗಿರುವುದು ನಿಜ, ಶ್ರೀ ನಾಗಪ್ಪನವರನ್ನು ಕೊಂದಿರುವುದು ನಿಜ, ಆದರೆ ಇಲ್ಲಿ ಸ್ವಲ್ಪ ಕ್ಲಿಷ್ಟವಿದೆ, ಯಾರು ಕೊಂದರೂ ಎಂಬ ಬಗ್ಗೆ ಸ್ವಲ್ಪ ವ್ಯತ್ಯಾಸದ ಮಾತುಗಳಿವೆ. ಈ ಒಂದು ದುಃಖದ ಸಂಗತಿಯ ಬಗ್ಗೆ ನಾನು ಮೊಟ್ಟಮೊದಲಿಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾಗಪ್ಪನವರ ಸಾವಿನಿಂದ ನಮ್ಮ ಸ್ನೇಹಿತರಿಗೆ ಎಷ್ಟು ನೋವಾಗಿದೆಯೋ, ಅಷ್ಟೇ ನೋವು ನಮಗೆ ಆಗಿದೆ. ಏಕೆಂದರೆ ನಾಗಪ್ಪನವರಿಗೆ ಇದ್ದಹಾಗೆ ನಮಗೂ ಕೂಡ ಹೆಂಡತಿ ಮಕ್ಕಳು ಇದ್ದಾರೆ. ಇದರ ಜೊತೆಗೆ ಈ ಮಾನವೀಯ ಮೌಲ್ಯಗಳು ವಚ್ಯೂಸ್, ಹ್ಯೂಮನ್ ವ್ಯಾಲ್ಯೂಸ್ ಅದು ಯಾವುದೇ ಒಂದು ಪಕ್ಷಕ್ಕೆ, ಯಾವುದೇ ಒಬ್ಬ ವ್ಯಕ್ತಿಗೆ, ಯಾವುದೇ ಒಂದು ಜಾತಿಗೆ, ಯಾವುದೇ ಒಂದು ಸಮುದಾಯಕ್ಕೆ ಯಾವುದೇ ಒಂದು ವರ್ಗಕ್ಕೆ ಸೀಮಿತವಾದವುಗಳಲ್ಲ. ಈ ಮಾನವೀಯ ಮೌಲ್ಯಗಳು ಬಹುತೇಕ ಎಲ್ಲರಿಗೂ ಕೂಡ

ಇದೆ. ಅದು ಕರುಣೆ, ಅನುಕಂಪ, ದಯೆಯಿರಬಹುದು ಇವುಗಳು ಎಲ್ಲರಿಗೂ ಇರುವಂತದ್ದಾಗಿದೆ. ಈ ದೃಷ್ಟಿಯಿಂದ ಈ ವಿಷಯದಲ್ಲಿ ನಾಗಪ್ಪನವರ ಕುಟುಂಬಕ್ಕೆ ಆಗಿರುವಂತಹ ಅನ್ಯಾಯದ ವಿಷಯದಲ್ಲಿ ಅವರಿಗೆ ಆಗಿರುವಂತಹ ದುಃಖದ ವಿಷಯದಲ್ಲಿ, ಅವರಿಗೆ ಇರುವಷ್ಟೇ ನಮಗೂ ಕೂಡ ಅನುಕಂಪವಿದೆ ಎನ್ನುವ ಮಾತನ್ನೂ ಕೂಡ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ನಾಗಪ್ಪನವರನ್ನು ಬಲ್ಲೆ ಇವರೆಲ್ಲರ ಜೊತೆಯಲ್ಲಿ ನಾನು ಇದ್ದಾಗ ಅವರ ಜೊತೆಯಲ್ಲಿ ರಾಜಕಾರಣವನ್ನು ಮಾಡಿದ್ದೇನೆ. ಈ ಬಗ್ಗೆ ನಾನು ಒಂದು ಮಾತನ್ನು ಹೇಳಿದರೆ ಸಾಕೆಂದು ಕಾಣುತ್ತದೆ. ಇವತ್ತಿನ ರಾಜಕಾರಣದ ಪರಿಸ್ಥಿತಿಯನ್ನು ವಿಶ್ಲೇಷಣೆ ಮಾಡಿದಲ್ಲಿ ಇದ್ದುದ್ದರಲ್ಲಿ ವಿಭಿನ್ನವಾದಂತಹ ಗುಣ ಮತ್ತು ಗೌರವವನ್ನು ಉಳ್ಳಂತಹ ವ್ಯಕ್ತಿಯಾಗಿದ್ದರು ಅವರು. ಅದಕ್ಕಿಂತ ಹೆಚ್ಚಿಗೆ ನಾನು ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಅವರ ಕುಟುಂಬಕ್ಕೆ ಇವತ್ತು ಆಗಿರುವಂತಹ ಅನ್ಯಾಯದ ಬಗ್ಗೆ, ದುಃಖದ ಬಗ್ಗೆ, ಅವರಿಗೆ ಎಷ್ಟು ನೋವು ಆಗಿರುತ್ತದೆ ಅದನ್ನೂ ಕೂಡ ನಾನು ಅರಿತುಕೊಳ್ಳಬಲ್ಲೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನನ್ನ ಸ್ನೇಹಿತರ ಜೊತೆ ಸೇರಿಕೊಂಡು ಅವರ ಸಾವಿಗೆ ನಾನೂ ಕೂಡ ಸಂತಾಪವನ್ನು ಅರ್ಪಿಸಿ ಅವರ ಕುಟುಂಬಕ್ಕೆ ದುಃಖವನ್ನು ಸಹಿಸಿಕೊಳ್ಳುವಂತಹ ಶಕ್ತಿಯನ್ನು ಭಗವಂತನು ಕೊಡಲೆಂದು ಹಾರೈಸುತ್ತೇನೆ. ಆದರೆ ಪ್ರಶ್ನೆ ಇಷ್ಟೆ, ಈ ಪ್ರಕರಣವನ್ನು ನಾನು ಈಗಾಗಲೇ ಹೇಳಿದ ಹಾಗೆ It is a simple murder case. Nagappa has been kidnapped by Veerappan. He killed.

4.50 ಪಿಎಂ

ನನಗೆ ಗೊತ್ತಿಲ್ಲ. ನಾನು ಸರ್ಕಾರದ ಪರವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಅವರ ಅವಶ್ಯಕತೆ ನನಗೆ ಇಲ್ಲ. ಅವರೆಲ್ಲರೂ ಸಮರ್ಥರಿದ್ದಾರೆ, ಅವರಿಗೆ ಅನುಭವ ಇದೆ. ಅದು ಅವರ ಕರ್ತವ್ಯ ಇದೆ, ಅವರು ಅದನ್ನು ನಿರ್ವಹಿಸುತ್ತಾರೆ. ನಾನು ಅದಕ್ಕೆ ಹೋಗುವುದಿಲ್ಲ. ಏಕೆಂದರೆ ನಾನು ಈ ಘಟನೆ ಆದಮೇಲೆ ಎಲ್ಲಿಯೂ ಕೂಡ ಪತ್ರಿಕೆಗೆ ಹೇಳಿಕೆ ಕೊಟ್ಟಿಲ್ಲ. ಸಾರ್ವಜನಿಕ ವೇದಿಕೆಯಿಂದ ಪ್ರಸ್ತಾಪ ಮಾಡಿಲ್ಲ. ಇವತ್ತು ನಾನು ಪ್ರಾಮಾಣಿಕವಾಗಿ ಮಾತನಾಡಬೇಕು ಅಂತ ಆಸೆನೂ ಇರಲಿಲ್ಲ. ಆದರೆ ಇವತ್ತಿನ ವಿರೋಧ ಪಕ್ಷದ ನಾಯಕರು ರಾಮಯ್ಯನವರೇ, ನೀವು ವಕೀಲರು ಹೇಳಿ ಅಂತ ನನ್ನನ್ನು ಪ್ರಚೋದನೆ ಮಾಡಿದವರೇ ಅವರು. ಈಗ ನಾನು ಮಾತನಾಡುವುದಕ್ಕೆ ಬಿಡದೆ ತಕರಾರು ಮಾಡುವವರು ಅವರೇ. ಏನು ಮಾಡೋಣ ಹೇಳಿ? ಅಲ್ಲಿಂದ ಓಡಿಸಿದ್ದಾಯ್ತು. ಇಲ್ಲಿ ಎಲ್ಲಿಯಾದರೂ ಬದುಕೋಣವೆಂದರೆ ಇಲ್ಲೂ ಬದುಕುವುದಕ್ಕೆ ನನ್ನನ್ನು ಬಿಡುವುದಿಲ್ಲ. (ನಗು) ಏನು ಮಾಡೋಣ?

ಶ್ರೀ ಪಿ.ಜೆ.ಆರ್. ಸಿಂಧ್ಯ : ಪುಕಸಟ್ಟೆ ನಾನು ಸಿಕ್ಕಿದ್ದೇನೆ ಅಂತ ಹೀಗೆ ಮಾತನಾಡುತ್ತಿದ್ದೀರಲ್ಲಾ? ನೀವು ಗೌಡರ ಗದ್ದಲದಲ್ಲಿ ಆ ಕಡೆಗೆ ಹೊರಟುಹೋಗಿಬಿಟ್ಟು ಈಗ ನನ್ನ ಮೇಲೆ ತಲೆ ಹಾಕಿದ್ದೀರಲ್ಲಾ ಏಕೆ? ಮುಖ್ಯಮಂತ್ರಿಗಳು ನಿಮಗೆ ಅಲ್ಲಿಯಾದರೂ ರಕ್ಷಣೆ ಕೊಡಲಿ.

Sri Y.K. Ramaiah : I am capable of take care of myself.

ಶ್ರೀ ಸಿ. ಬೈರೇಗೌಡ : ರಾಮಯ್ಯನವರು ಎದೆಮುಟ್ಟಿಕೊಂಡು ಹೇಳಲಿ. ನೀವು ನಿಜವಾಗಿಯೂ ಅಲ್ಲಿಯಾದರೂ ಕೂಡ ಸುಖ, ಶಾಂತಿಯಿಂದ ಇದ್ದೀರಾ?

ಶ್ರೀ ವೈ.ಕೆ. ರಾಮಯ್ಯ : ಎಲ್ಲಿ ಯಾದರೂ ಇರಬೇಕಲ್ಲಪ್ಪಾ?

ಶ್ರೀ ಸಿ. ಬೈರೇಗೌಡ : ಎಲ್ಲಿಯಾದರೂ ಇರಬೇಕು ಅಂತ ಅಲ್ಲಿ ಇದ್ದೀರಿ, ಅಷ್ಟೇನೇ. ಆದರೆ ಸಂತೋಷದಿಂದ ಇದ್ದೀರಿ ಎನ್ನತಕ್ಕಂಥ, ಮಾತು ನಿಮ್ಮ ಬಾಯಿಯಿಂದ ಬರಲಿ ನೋಡೋಣ.

ಶ್ರೀ ವೈ.ಕೆ. ರಾಮಯ್ಯ : ಕತ್ತು ಹಿಡಿದು ನೂಕಿದಮೇಲೆ ಎಲ್ಲಿ ಯಾದರೂ ಬದುಕಬೇಕಲ್ಲಾ? ಆದ್ದರಿಂದ ನಾನು ಬದುಕುತ್ತಿದ್ದೇನೆ. ಹುಟ್ಟಿದ ತಪ್ಪಿಗೆ, ಅದು ಇರಲಿ. ಮಾನ್ಯ ಉಪಾಧ್ಯಕ್ಷರೇ, ಈ ವೀರಪ್ಪನ್ ವಿಷಯ ಬಂದಾಗ ನಮಗೆಲ್ಲರಿಗೂ ಅರ್ಥವಾಗದಿರುವ ಒಂದು ವಿಷಯ ಇದೆ. ವೀರಪ್ಪನ್‌ನ ಅಕೃತ್ಯ ಅಧ್ಯಾಯ ಅದು ಇವತ್ತು ಪ್ರಾರಂಭವಾಗಿಲ್ಲ. ವೀರಪ್ಪನ ದಂತಚೋರತನ ಇವತ್ತು ಪ್ರಾರಂಭವಾಗಲಿಲ್ಲ, ಕಾಡುಗಳ್ಳತನ ಇವತ್ತು ಪ್ರಾರಂಭವಾಗಲಿಲ್ಲ, ಇಡೀ ಪ್ರಪಂಚದಲ್ಲಿ, ಇವತ್ತು ನಾವು ವಿಜ್ಞಾನದಲ್ಲಿ, ಕಳ್ಳತನ ಮಾಡಿಕೊಂಡಂಥ ಒಬ್ಬ ವ್ಯಕ್ತಿಯನ್ನು ಒಂದು ನಾಯಿ ಮೂಸಿನೋಡಿ ಅವನ ಹೆಗ್ಗು ಬರುತ್ತದೆ ಎನ್ನುವಂಥ ಈ ಯುಗದಲ್ಲಿ ರಿಪೋರ್ಟ್ ಸೆನ್‌ಸಿಂಗ್ ಎಕ್ವಿಪ್‌ಮೆಂಟ್ಸ್ ಇಟ್ಟುಕೊಂಡು ಎಲ್ಲಿ ಏನು ನಡೆಯುತ್ತಿದೆ, ಯಾರಿದ್ದಾನೆ ಅಂಥ ಕಂಡು ಹಿಡಿಯುವಂಥ ಸಂದರ್ಭದಲ್ಲಿ ಸುಮಾರು ಎರಡು ದಶಕಗಳ ಕಾಲ ಇಡೀ ದೇಶದ ಎಲ್ಲಾ ಶಕ್ತಿಯನ್ನೂ ಕೂಡ ನಾವು ಬಳಸಿಕೊಂಡಾಗಲೂ ಒಬ್ಬ ವ್ಯಕ್ತಿ, ಅವನೇನೂ ಒಂದು ಶಕ್ತಿಯಲ್ಲ, ಒಂದು ದೇಶ ಅಲ್ಲ, ಒಂದು ಸಮಸ್ಯೆ ಅಲ್ಲ, ನನ್ನಂತೆ ಅವನೂ ಒಂದು ಐವತ್ತು ಅರವತ್ತು ಕೆ.ಜಿ. ತೂಕ ಇರುವ ಹಾಗೆ ಕಾಣುತ್ತಾನೆ, ಫೋಟೋದಲ್ಲಿ ನೋಡಿದರೆ, ಈ ಒಬ್ಬ ವ್ಯಕ್ತಿಯನ್ನೂ ಕೂಡ ಹಿಡಿಯಲು ಸಾಧ್ಯತೆಯಾಗಿಲ್ಲ ಎನ್ನುವುದನ್ನು ನಾವು ಜ್ಞಾಪಿಸಿಕೊಂಡಾಗ ಇದು ಏನೋ ನಿಗೂಢವಾಗಿದೆ. ಅವನು ಬದುಕಿದ್ದಾನೋ ಇಲ್ಲವೋ, ವೀರಪ್ಪನ್ ಇದ್ದಾನೋ ಇಲ್ಲವೋ, ಇದ್ದಿದ್ದರೆ ಈತನನ್ನು ಹಿಡಿಯಲು ನಮ್ಮಿಂದ ಏಕೆ ಸಾಧ್ಯವಾಗಲಿಲ್ಲ? ನಾನು ಆಗಲೇ ಹೇಳಿದ್ದೇನೆ, ಈ ಪಕ್ಷ, ಈ ಸರ್ಕಾರವನ್ನು ನಾನು ಮರೆಯುತ್ತೇನೆ, ಕೇವಲ ಒಂದೇ ಒಂದು ದೊಡ್ಡ ತಪ್ಪು ಈ ನನ್ನ ಸ್ನೇಹಿತರೆಲ್ಲಾ, ಈ ಸರ್ಕಾರದ ಮೇಲೆ ಹೊರಿಸುತ್ತಿರುವುದು ಈತನನ್ನು ಹಿಡಿಯುವುದರಲ್ಲಿ ವಿಫಲರಾಗಿದ್ದಾರೆ, ನಾಗಪ್ಪನವರ ಪ್ರಾಣವನ್ನು ಉಳಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಇಷ್ಟೊತ್ತಿನ ತನಕ ಬೆಳಿಗ್ಗೆಯಿಂದ ನಾನು ಒಂದೇ ಸಮ ನನ್ನ ಕಿವಿಯನ್ನು ತೆರೆದು ಕುಳಿತಿದ್ದೇನೆ, ನಾಗಪ್ಪನವರ ಈ ಖೂನಿ ಸರ್ಕಾರ ಮಾಡಿಸಿತು ಎಂದು ಯಾರೂ ಆಪಾದನೆ ಮಾಡಿಲ್ಲ. ಸರ್ಕಾರದವರು ಖೂನಿ ಮಾಡಿಸಲು ಪ್ರಚೋದನೆಯನ್ನು ಕೊಟ್ಟಿದ್ದೀರಿ ಎಂದೂ ಸಹ ಯಾರೂ ಆಪಾದನೆಯನ್ನು ಮಾಡಿಲ್ಲ. ಒಂದೇ ಒಂದು ಅಪವಾದನೆ The Government has failed to bring back Nagappa and catch hold the Veerappan ಹೌದು, ಇದು ನಿಜ, ಸರ್ಕಾರ ನಾಗಪ್ಪನವರನ್ನು ಬಿಡಿಸಿಕೊಂಡು ಬರಲು ವಿಫಲವಾಗಿದೆ, ವೀರಪ್ಪನನ್ನು ಹಿಡಿಯಲು ವಿಫಲವಾಗಿದೆ, ಸನ್ಮಾನ್ಯ ಉಪಾಧ್ಯಕ್ಷರೆ, ಈ ಒಂದು ಸತ್ಯವನ್ನು ಒಪ್ಪಿಕೊಳ್ಳುವಾಗ ನಾನು ಅದಕ್ಕೇ ಹೇಳಿದ್ದು ವೀರಪ್ಪನ್ ಅಕೃತ್ಯದ ಅಧ್ಯಾಯ ಸನ್ಮಾನ್ಯ ಕೃಷ್ಣಾರವರು ಮುಖ್ಯ ಮಂತ್ರಿಯಾದ ಮೇಲೆ ಬರೆಯಲಿಕ್ಕೆ ಪ್ರಾರಂಭವಾದ ಅಧ್ಯಾಯವಲ್ಲ. ವೀರಪ್ಪನ್ ಕೊಂದಿರುವಂಥ ಮನುಷ್ಯರ ಸಂಖ್ಯೆ 122. ಕರ್ನಾಟಕದ ಪೊಲೀಸಿನವರು 22, ಬಿ.ಎಸ್.ಎಫ್. ನವರು ಒಂದು, ತಮಿಳುನಾಡು ಪೊಲೀಸರು 9, ಅರಣ್ಯ ಇಲಾಖೆಯವರು 4, ತಮಿಳುನಾಡಿನ ಅರಣ್ಯ ಇಲಾಖೆಯವರು 5,

ವೀರಪ್ಪನ್‌ನಿಂದ ಹತರಾದ ಇನ್ನಿತರು 81, ಒಟ್ಟು 122. ಇಷ್ಟೂ ಜನರನ್ನು ವೀರಪ್ಪ ಕೊಂದಿರುವಾಗ ನಾಗಪ್ಪನವರ ಪರಿಮಳ ಒಬ್ಬರೇ ವಿಧವೆಯಾಗಲಿಲ್ಲ, ಇಷ್ಟೂ ಜನರ ಮಡದಿಯರೂ ವಿಧವೆಯರಾಗಿದ್ದಾರೆ. ಇಷ್ಟೂ ಜನರು ಅಣ್ಣತಮ್ಮಂದಿರನ್ನು ಕಳೆದುಕೊಂಡಿದ್ದಾರೆ. ಇಷ್ಟೂ ಜನರ ಅಕ್ಕತಂಗಿಯರು ಬೀದಿಪಾಲಾಗಿದ್ದಾರೆ. ನಾನು ನಾಗಪ್ಪನವರ ಧರ್ಮಪತ್ನಿಯವರಿಗೆ ಆಗಿರುವ ಅನ್ಯಾಯದ ಅಧ್ಯಾಯ ಪ್ರಾರಂಭವಾದದ್ದು ಇಷ್ಟು ಜನರ ಮಡದಿಯರು ತಮ್ಮ ಗಂಡಂದಿರನ್ನು ಕಳೆದುಕೊಂಡಂಥ ಅಧ್ಯಾಯ ಪ್ರಾರಂಭವಾದದ್ದು ಈವತ್ತಲ್ಲ ಎರಡು ದಶಕಗಳ ಹಿಂದೆ. ನಾನು ಈ ಮಾತನ್ನು ಹೇಳುವಾಗ ಯಾರಿಗಾದರೂ ಆಪಾದನೆ ಮಾಡಬೇಕೆಂದು ಹೇಳುತ್ತಿಲ್ಲ. ಈ ಎರಡು ದಶಕದಿಂದ ನಾಲ್ಕಾರು ಸರ್ಕಾರಗಳು ಬಂದಿದೆ, ನಾಲ್ಕಾರು ಸರ್ಕಾರಗಳು ಪ್ರಾಮಾಣಿಕವಾದ ಪ್ರಯತ್ನ ಮಾಡಿವೆ, ನಾನು ಪ್ರಯತ್ನ ಮಾಡಿಲ್ಲ ಎಂಬ ಬೂಟಾಟಿಕೆಯ ಮಾತುಗಳನ್ನು ಆಡಲು ಸಿದ್ಧವಿಲ್ಲ. They have made a honest attempt to catch hold of veerappan But, they have failed. Why? ಇದಕ್ಕೆ ಉತ್ತರವನ್ನು ಕಂಡುಹಿಡಿಯಲು ಅರ್ಥಪೂರ್ಣವಾದ ಚರ್ಚೆಯಾಗಬೇಕೇ ಹೊರತು ಸರ್ಕಾರವನ್ನು ದೂಷಿಸುವುದು, ಸರ್ಕಾರದ ಮೇಲೆ ಆಕ್ರೋಶವನ್ನು ವ್ಯಕ್ತಮಾಡುವುದರಿಂದ ಅರ್ಥ ಪೂರ್ಣವಾದಂಥ ಚರ್ಚೆಯಾಗುವುದಿಲ್ಲ. ನಾಗಪ್ಪನವರ ಧರ್ಮಪತ್ನಿ 123ನೇ ಯವರು, ಈ 123 ಜನ ವಿಧವೆಯರನ್ನು ಮಾಡಿದಂಥ ವೀರಪ್ಪನ್‌ನನ್ನು ಹೇಗೆ ಹಿಡಿಯಬೇಕು ಎನ್ನುವುದರ ಬಗ್ಗೆ ನಾವು ಚರ್ಚೆ ಮಾಡಬೇಕೇ ಹೊರತು ಸರ್ಕಾರದ ಬಗ್ಗೆ ಆಕ್ರೋಶವನ್ನು ವ್ಯಕ್ತ ಮಾಡುವುದು ಅರ್ಥಪೂರ್ಣವಲ್ಲ. ನನ್ನ ಸ್ನೇಹಿತರು ಒಂದು ಮಾತನ್ನು ಬಹಳ ಸಾರಿ ಉಪಯೋಗಿಸಿದರು. ನಿಮ್ಮ ಹೃದಯ ಕಠಿಣವಾದುದು, ಕ್ರೂರವಾದುದು, ನಿಮ್ಮ ಪ್ರವೃತ್ತಿ ಕ್ರೌರ್ಯಪ್ರವೃತ್ತಿ, ಇತ್ಯಾದಿ ನಾನು ಈ ಒಂದು ಮಾತನ್ನು ಅತ್ಯಂತ ವಿನಯದಿಂದ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ದಯಮಾಡಿ ನಿಮ್ಮ ತಲೆಯಿಂದ ಇದನ್ನು ತೆಗೆದುಹಾಕಿ. ನಾನು ಸರ್ಕಾರದಲ್ಲಿ ಇಲ್ಲದಿದ್ದರೂ ದೂರದಿಂದ ನೋಡಿದ್ದೇನೆ, ಸನ್ಮಾನ್ಯ ಮುಖ್ಯಮಂತ್ರಿಗಳೂ ಸೇರಿದಂತೆ ಎಲ್ಲಾ ಮಂತ್ರಿಗಳು, ನಿಮಗೂ ನಮಗೂ ಇರುವಂಥ ವೈಯಕ್ತಿಕವಾದಂಥ ಸಂಬಂಧದ ಹಿನ್ನೆಲೆಯಲ್ಲಿ ಯಾವತ್ತಾದರೂ ಒಂದು ದಿನ ಸತ್ಯವನ್ನು ನಿಮಗೆ ಹೇಳದೆ ಬಿಡುವುದಿಲ್ಲ, ಹೇಳುತ್ತೇನೆ, ನಮ್ಮನ್ನೂ ಸೇರಿದಂತೆ ಹೇಳುತ್ತೇನೆ. ಆ ಅಮ್ಮನ ಮಾಂಗಲ್ಯವನ್ನು ಉಳಿಸಬೇಕು ಎಂಬ ಪ್ರಾಮಾಣಿಕ ಪ್ರಯತ್ನವನ್ನೆಲ್ಲಾ ಮಾಡಿದ್ದೇವೆ. ಯಾರೂ ನಾಗಪ್ಪನವರು ಸಾಯಲಿ, ನಾಗಪ್ಪನವರ ಧರ್ಮಪತ್ನಿಯವರು ವಿಧವೆಯಾಗಲಿ, ಅವರ ಮಕ್ಕಳು ಬೀದಿಪಾಲಾಗಲಿ ಎನ್ನುವಂಥ ಕಾಠಿಣ್ಯವನ್ನು ತೋರಿದಂಥವರು ಯಾರೂ ಈ ಕಡೆಯೂ ಇಲ್ಲ ಆ ಕಡೆಯೂ ಇಲ್ಲ. ಇರಲು ಸಾಧ್ಯತೆಯೂ ಇಲ್ಲ ನಾನು ಅದಕ್ಕೇ ಹೇಳಿದ the human values, human virtues is not the embodiment of individual or any party. ಈ ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ರಾಜೂಗೌಡರು ನಾಗಪ್ಪನವರ ಅಪಹರಣದಲ್ಲಿ ನೇರವಾಗಿ ಹೇಳದಿದ್ದರೂ ಕೂಡ ಅದು ಅವರ ಸಾವಿನಲ್ಲಿ ಇವರ ಪಾತ್ರ ಇರಬಹುದಾ? ನಮ್ಮ ನಮ್ಮ ಕ್ಷೇತ್ರದಲ್ಲಿ ನಮ್ಮ ನಮ್ಮ ರಾಜಕೀಯ ವಿರೋಧಿಗಳಿಗೂ ನಮಗೂ ಇರುವಷ್ಟು ಏನಿರುತ್ತದೋ ಬಹುಶಃ ಅವರ ಕ್ಷೇತ್ರದಲ್ಲೂ ಅಷ್ಟೇ ಇರಬಹುದೇನೋ ಎಂಬುದು ನನ್ನ ಭಾವನೆ. ಆದರೆ ಯಾರೂ ಕರ್ನಾಟಕದಂಥ ಪ್ರದೇಶದಲ್ಲಿ,

ಕರ್ನಾಟಕದ ಜನಗಳ ಮಧ್ಯದಲ್ಲಿ ತನ್ನ ರಾಜಕೀಯ ವಿರೋಧಿಯನ್ನು ಕೊಲ್ಲಬೇಕು, ರಾಜಕೀಯ ವಿರೋಧಿಯ ಸಾವನ್ನು ಬಯಸುವಂಥ ರಾಜಕಾರಣಿಗಳು ಅತೀ ವಿರಳ. ನೀವೇ ಬಹುಶಃ ನನ್ನ ಮಾತನ್ನು ಒಪ್ಪುತ್ತೀರಿ. ನಮ್ಮ ಅಸಮಾಧಾನ, ನಮ್ಮ ರಾಜಕೀಯ ವಿರೋಧಿಯ ಬಗ್ಗೆ ಇರುವಂಥ ನಮ್ಮ ಆಕ್ರೋಶ ಎಲ್ಲಿಯವರೆಗೆ ಹೋಗಬಹುದೆಂದರೆ, ಅಟ್‌ಮೋಸ್ಟ್ ಆತನನ್ನು ಚುನಾವಣೆಯಲ್ಲಿ ಸೋಲಿಸುವಷ್ಟಕ್ಕೆ ಹೋಗಬಹುದು. ಇದನ್ನು ರಾಜೂಗೌಡರು ನಾನೂ ಆ ವಿಷಯವನ್ನು ಒಂದು ದಿನ ಮಾತನಾಡಿಲ್ಲ. ಆ ವಿಷಯವನ್ನು ಅವರ ಹತ್ತಿರ, ಯಾರ ಹತ್ತಿರವೂ ನಾನು ಮಾತನಾಡಿಲ್ಲ. ಆದರೆ ಒಬ್ಬ ಮನುಷ್ಯನಾಗಿ ಅದರಲ್ಲೇ ಬದುಕುತ್ತಿರುವ ನಮ್ಮೆಲ್ಲರಿಗೂ ಅರ್ಥ ಮಾಡಿಕೊಳ್ಳುವಂಥದ್ದು ಅದು ಪಾಟೀಲರ ಕ್ಷೇತ್ರದಲ್ಲಿ ಅವರ ರಾಜಕೀಯ ವಿರೋಧಿಗೆ ಏನು ಸಿಗುತ್ತದೋ, ಸಿಂಧ್ಯಾರವರ ಕ್ಷೇತ್ರದಲ್ಲಿ ಅವರ ರಾಜಕೀಯ ವಿರೋಧಿಗೆ ಏನು ಸಿಗುತ್ತದೋ, ನನ್ನ ಕ್ಷೇತ್ರದಲ್ಲಿ ರಾಜಕೀಯ ವಿರೋಧಿಗೆ ಏನು ಸಿಗುತ್ತದೋ. ನಮ್ಮೆಲ್ಲರ ವಿರೋಧ, ನಮ್ಮೆಲ್ಲರ ಆಕ್ರೋಶ ಎಲ್ಲಿಯವರೆಗೆ ಸೀಮಿತವಾಗುತ್ತದೆಂದರೆ to the extent of defeating in the election. That's all. Not more than that.

ಶ್ರೀ ಎಸ್.ಎಸ್. ಪಾಟೀಲ್ : ಒಂದನ್ನು ತಾವು ಪ್ರಾಮಾಣಿಕವಾಗಿ ಹೇಳಿ, ರಾಜ್‌ಕುಮಾರ್‌ರವರನ್ನು ಹಿಡಿದುಕೊಂಡು ಹೋದಾಗ ಸರ್ಕಾರಕ್ಕೆ ಎಷ್ಟು ಗಾಬರಿಯಾಗಿತ್ತೋ, ಅದೇ ನಾಗಪ್ಪನವರನ್ನು ಹಿಡಿದುಕೊಂಡು ಹೋದಾಗ ಅಷ್ಟು ಗಾಬರಿಯಾಗಿತ್ತಾ? ಇದನ್ನು ತಾವು ಪ್ರಾಮಾಣಿಕವಾಗಿ ಹೇಳಬೇಕು.

ಶ್ರೀ ವೈ.ಕೆ. ರಾಮಯ್ಯ : ಅಲ್ಲಿಗೆ ಬರುತ್ತೇನೆ. ಆದ್ದರಿಂದ, ನಾನು ಯಾವುದೇ ವ್ಯಕ್ತಿಯನ್ನು ಕುರಿತು ಹೇಳುತ್ತಿಲ್ಲ. ಬಹುಶಃ ಬಿಹಾರ್‌ನಲ್ಲಿ ಏನಿದೆಯೋ? ಬೇರೆ ಕಡೆ ಏನಿದೆಯೋ? ನನಗೆ ಗೊತ್ತಿಲ್ಲ. ಬಿನ್‌ಲಾಡೇನ್ ಅವರ ಉದಾಹರಣೆಯನ್ನು ಕೊಡಬೇಡಿ, ಹಾದು ಬಿನ್‌ಲಾಡೆನ್‌ಗೂ ಇದಕ್ಕೂ ಸಂಬಂಧ ಇಲ್ಲ. ಬಿನ್‌ಲಾಡೆನ್ ಒಬ್ಬ ಕ್ರೂರಿ. ಅವನಿಗೂ ಇದಕ್ಕೂ ಸಂಬಂಧವಿಲ್ಲ. ಆದರೆ, ನಾವು ಏಕೆ ಈ ಉದಾಹರಣೆಯನ್ನು ಕೊಡುತ್ತಿದ್ದೇವೆಂದರೆ, ಅಮೇರಿಕಾದಂಥ ಒಂದು ದೇಶ ಇಡೀ ಪ್ರಪಂಚದಲ್ಲಿ ವೈಜ್ಞಾನಿಕವಾಗಿ, ತಾಂತ್ರಿಕವಾಗಿ ಅಷ್ಟೊಂದು ಮುಂದುವರೆದಿರುವ ದೇಶ,ಸಂಪದ್ಭರಿತ ದೇಶ ಯಾವುದೇ ಕೊರತೆ ಇಲ್ಲದಿರುವಂಥ ದೇಶದಲ್ಲಿ ಒಬ್ಬಯಕ್ಕಚಿತ್ ವ್ಯಕ್ತಿಯನ್ನು ಹಿಡಿಯುವುದಕ್ಕೆ ಇವತ್ತಿನವರೆಗೆ ಸಾಧ್ಯತೆಯಾಗದಿರುವ ಪರಿಸ್ಥಿತಿ ಅಲ್ಲಿ ಸೃಷ್ಟಿಯಾಗಿದೆ. ವ್ಯತ್ಯಾಸ ಇಷ್ಟೇ, ಅಲ್ಲಿ ಸರ್ಕಾರ ವಿಫಲವಾಗಿದೆಯೆಂದು ಇನ್ನೂ ಯಾರೂ ಕುಳಿತುಕೊಂಡಿಲ್ಲ. ಬುಷ್‌ರವರ ರಾಜೀನಾಮೆ ಕೊಡಿ ಎಂದು ಯಾರೂ ಇನ್ನೂ ಕೇಳಿಕೊಂಡಿಲ್ಲ. ಆದರೆ, ಇಲ್ಲಿ ಮಾತ್ರ ನೀವು ಅದಕ್ಕೆ ವಿಫಲರಾಗಿದ್ದೀರಿ, ರಾಜೀನಾಮೆ ಕೊಡಿ ಎಂಬ ಪರಿಸ್ಥಿತಿ ಸೃಷ್ಟಿಯಾಗಿದೆ.

ವ್ಯತ್ಯಾಸ ನನಗೆ ಕಾಣುವುದು ಇಷ್ಟೆ. ನಾಗಪ್ಪನವರನ್ನು ಜ್ಞಾಪಿಸಿಕೊಂಡಾಗ ನನಗೆ ಒಂದು ಘಟನೆಯ ಸಂದರ್ಭ ನೆನಪಿಗೆ ಬರುತ್ತದೆ. ನಾಗಪ್ಪನವರಿಗೆ ಈಗಾಗಲೇ 66 ವರ್ಷವೆಂದು ಕಾಣುತ್ತದೆ. ಇನ್ನು 10 ವರ್ಷದ ಮೇಲೋ 20 ವರ್ಷದ ಮೇಲೋ ಅವರು ಖಾಯಿಲೆ ಬಂದು ಸಾಮಾನ್ಯ ಸಾವಿನಿಂದ ಸತ್ತಿದ್ದರೆ ಬಹುಶಃ ಇಷ್ಟೊಂದು ಹೆಚ್ಚಿನ ಅನುಕಂಪ ಅಥವಾ ಹೆಚ್ಚಿನ ಪ್ರಾಮುಖ್ಯತೆ ಬರುತ್ತಾ ಇರಲಿಲ್ಲ. ಆದರೆ, ಅವರು ಸತ್ತಿದ್ದಕ್ಕೆ ನಾನು ಸಂತೋಷಪಡುತ್ತೇನೆಂದು

ಭಾವಿಸಿಕೊಳ್ಳಬಾರದು. ಈ ಸಾವಿನಿಂದ ಅವರು ಹುತಾತ್ಮರಾಗಿದ್ದಾರೆ. "Freedom at Midnight" ಎನ್ನುವ ಪುಸ್ತಕದಲ್ಲಿ ಗಾಂಧೀಜಿ ಹೇಳುತ್ತಾರೆ. ನಾನು ಖಾಯಿಲೆಯಿಂದ ಸತ್ತರೆ, cry from the top of the House that I am a hypocrat. If I die out of a bullet, then you can call me as a 'Mahatma'. ಈ ಒಂದು ದೃಷ್ಟಿಯಿಂದ ಯಾವ ನಾಗಪ್ಪನವರ ಸಾವು, ಯಾವುದೋ ಒಂದು ಕಾಲಕ್ಕೆ ಸಾಮಾನ್ಯ ಸಾವು ಆಗುತ್ತಿತ್ತೋ, ಇವತ್ತು ಈ ಒಂದು ದುರ್ಮರಣದಿಂದ ಅವರು ಹುತಾತ್ಮರಾಗಿದ್ದಾರೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ, ನಾನು ವೈಯಕ್ತಿಕವಾಗಿ ಅದನ್ನು ಜ್ಞಾಪಿಸಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲೋ ಅಹಿಂಸೆಯಾಗಿದೆ, ಎಲ್ಲೋ ಅನಾಗರೀಕ ನಡವಳಿಕೆಗಳು ನಡೆಯುತ್ತಾ ಇವೆ, ಆದ್ದರಿಂದ ನಮ್ಮಲ್ಲಿ ನಡೆಯುವುದು ಏನೂ ಅಪರಾಧವಲ್ಲವೆಂಬ ವಾದವನ್ನು ಮಾಡುವಷ್ಟು ಅಸಂಸ್ಕೃತಿ ನನಗಿಲ್ಲ. ಆದರೆ, ಇತ್ತೀಚಿನ ದಿನಗಳಲ್ಲಿ ಈ ವಿಧವಾದಂಥ ಒಂದು ಅಹಿಂಸೆ, ಕ್ರೌರ್ಯ ನಡವಳಿಕೆ ಸಾಮಾನ್ಯ ಪರಿಸ್ಥಿತಿಯನ್ನು ತಲುಪಿದೆ. ಇವತ್ತು ನಮ್ಮ ಸ್ನೇಹಿತರು ಇಲ್ಲಿ ಕುಳಿತುಕೊಂಡಿಲ್ಲ. ನಾಗಪ್ಪನವರ ಪತ್ನಿ ವಿಧವೆಯಾದರು ಎಂದು ಮೆರವಣಿಗೆ ಮಾಡುವ ಜನಕ್ಕೆ ಈ ಒಂದು ಪ್ರಶ್ನೆ ಕೇಳುತ್ತೇನೆ. ಕಾಶ್ಮೀರದಲ್ಲಿ ಇವತ್ತು ಎಷ್ಟು ಜನ ಒಂದು ದಿನಕ್ಕೆ ವಿಧವೆರಾಗುತ್ತಿದ್ದಾರೆ, ಇದು ಯಾರಿಂದ? ಪಾಕಿಸ್ಥಾನದಿಂದ ಹೊರ ರಾಷ್ಟಗಳಿಂದ ನುಗ್ಗಿ ಬಂದಿರುವಂಥ ಬಂಡುಕೋರರದಿಂದ, ದಿನನಿತ್ಯ ಹತ್ತಾರು ಜನ ಅವರೇ ಹಿಂದುತ್ವವನ್ನು ಪ್ರತಿಪಾದನೆ ಮಾಡುವಂಥ ಹಿಂದೂಗಳೂ ಸೇರಿದ ಹಾಗೆ ಹತ್ತಾರು ಜನರನ್ನು ಕೊಂದು ಪ್ರತಿನಿತ್ಯ ನೂರಾರು ಜನ ಮಹಿಳೆಯರನ್ನು ವಿಧವೆಯರನ್ನಾಗಿ ಮಾಡುತ್ತಾ ಇರುವಂಥ ಪರಿಸ್ಥಿತಿಯಲ್ಲಿ ಇವರ ಸರ್ಕಾರ ಏನು ಮಾಡುತ್ತಿದೆ ಸ್ವಾಮಿ? ಅವರು ನಾಳೆ ಬೆಳಿಗ್ಗೆ ರಾಜೀನಾಮೆಯನ್ನು ಕೊಡುತ್ತಾರೆಯೇ? ನೈತಿಕ ಹೊಣೆಯನ್ನು ಹೊತ್ತು ರಾಜೀನಾಮೆಯನ್ನು ಕೊಡಿ. ರೈಲ್ವೆ ದುರಂತ ಆಯಿತು, Has anybody taken the moral responsibility of it. ಮೊನ್ನೆ ತಾನೇ 12 ಜನ ವಿಧವೆಯರಾದರು. ಪ್ರತಿನಿತ್ಯ ಕಾಶ್ಮೀರದಲ್ಲಿ ದೇವಸ್ಥಾನಗಳನ್ನು ನುಗ್ಗಿ ಹೊಡೆಯುತ್ತಾರೆ. ಪ್ರತಿನಿತ್ಯ ಕಾಶ್ಮೀರದಲ್ಲಿ ದೇವಸ್ಥಾನಗಳನ್ನು ನುಗ್ಗಿ ಹೊಡೆಯುತ್ತಾರೆ. ಪ್ರತಿನಿತ್ಯ ಕಾಶ್ಮೀರದಲ್ಲಿ ದೇವಸ್ಥಾನಗಳನ್ನು ನುಗ್ಗಿ ಹೊಡೆಯುತ್ತಾರೆ. ಪ್ರತಿನಿತ್ಯ ಮನೆಗೆ ನುಗ್ಗಿ ಹತ್ತಾರು ಜನರನ್ನು ಕೊಂದು ಬೀದಿಗೆ ಹಾಕುತ್ತಾ ಇದ್ದಾರೆ. ಇದನ್ನು ತಡೆಯಬೇಕಾದ ಜವಾಬ್ದಾರಿ ಯಾರದ್ದು? ಕರ್ನಾಟಕ ಸರ್ಕಾರದ್ದೇ ಅಥವಾ ಈ ರಾಜ್ಯದ ವಿರೋಧ ಪಕ್ಷದವರದ್ದೇ? Yes, I fully agree with my friend. In the failure, the Central Government is also responsible. ಅವರು ಸ್ಪಷ್ಟವಾಗಿ ಹೇಳಿದರು. ಆದರೆ, ನನ್ನ ಸ್ನೇಹಿತರು ಒಂದು ಹೇಳುವುದನ್ನು ಮರೆತರು. ಯಾವ ಸರ್ಕಾರ ಮೂರು ರಾಜ್ಯದ ಮುಖ್ಯಮಂತ್ರಿಗಳನ್ನು ಕರೆದು, ಚರ್ಚೆ ಮಾಡಿ, ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ವಿಫಲವಾಯಿತು ಎಂದು ನೀವು ಹೇಳಿದರೋ, ಯಾವ ಸರ್ಕಾರ ಹೊರಗಡೆಯಿಂದ ಬರುವ ಬಂಡುಕೋರರರನ್ನು ತಡೆದು ಕಾಶ್ಮೀರದಲ್ಲಿ ನಡೆಯುತ್ತಿರುವ ನರಮೇಧವನ್ನು ತಪ್ಪಿಸಲಿಕ್ಕೆ ಸಾಧ್ಯವಾಗಲಿಲ್ಲವೆಂದು ನೀವು ಹೇಳಿದರೋ ಆ ಸರ್ಕಾರದಲ್ಲಿ ನೀವೂ ಭಾಗಸ್ಥರಾಗಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರು ಹೇಳುತ್ತಾ ಇರುವುದು ಇಷ್ಟೆ. 120 ಜನ ಸತ್ತಿದ್ದಾರೆ, ಈಗ 121 ನೆಯವರು ನಾಗಪ್ಪನವರ ಹೆಂಡತಿ. ಇನ್ನೂ 120 ಜನ ಆದರೇನಂತೆ. ಇದಕ್ಕೆ ಆ ಕಡೆಯವರು ಚಪ್ಪಾಳೆ ತಟ್ಟುವುದು. ಈ ವರ್ತನೆಗೆ ನಾಚಿಕೆಯಾಗಬೇಕು.

ಒಬ್ಬ ಮಾನ್ಯ ಸದಸ್ಯರು : ಕೇಂದ್ರದಲ್ಲಿ ನೀವೂ ಭಾಗಿಯಾಗಿದ್ದೀರಿ.

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ, ನಾನು ಹೇಳಿದ ಮಾತನ್ನು ನನ್ನ ಸ್ನೇಹಿತರು ಗಮನಕ್ಕೆ ತಲು ಮತ್ತೊಂದು ಸಾರಿ ಹೇಳುತ್ತೇನೆ. ಅವರೇ ಹೇಳಿದ್ದಾರೆ, ಕೇಂದ್ರ ಸರ್ಕಾರ ಮೂರು ಜನ ಮುಖ್ಯಮಂತ್ರಿಗಳನ್ನು ಕರೆದು, ಚರ್ಚೆ ಮಾಡಿ, ಈ ಸಮಸ್ಯೆಯನ್ನು ಬಗೆಹರಿಸಬಹುದಿತ್ತು. ಆ ಕೆಲಸವನ್ನು ಮಾಡಲಿಲ್ಲ. ಕೇಂದ್ರ ಸರ್ಕಾರದವರ ಆರೆ ಸೈನ್ಯ ಬಂದು ಇಲ್ಲಿ ಕಾರ್ಯಚಾರಣೆ ಮಾಡಿತು. ಆದರಿಂದಲೂ ಸಾಧ್ಯವಾಗಲಿಲ್ಲ. ಅಲ್ಲಿಂದ ಬಂದು ಹೆಲಿಕ್ಯಾಪ್ಟರುಗಳು ಆಕಾಶದಲ್ಲಿ ಹಾರಾಡಿ ವೀರಪ್ಪನ್‌ನ್ನು ಹಿಡಿಯುವಂಥ ಪ್ರಯತ್ನಪಟ್ಟರು. ಅದೂ ವಿಫಲವಾಯಿತು. ಅದರ ಜೊತೆಗೆ ನನ್ನದೊಂದು ಸೇರಿಸಿ ಹೇಳಿದೆ, ಕಾಶ್ಮೀರದಲ್ಲಿ ಅಥವಾ ದೇಶದ ಅನೇಕ ಭಾಗಗಳಲ್ಲಿ ಪಾಕಿಸ್ಥಾನದಿಂದ ನುಗ್ಗಿ ಬಂದು ಬಂಡುಕೋರರು ಪ್ರತಿದಿವಸ ಹತ್ತಾರು ಜನರನ್ನು ಕೊಂದು, ಅವರ ಪತ್ನಿಯರನ್ನು ವಿಧವೆಯರನ್ನಾಗಿ ಮಾಡುತ್ತಿದ್ದಾರೆ, ಈ ಎಲ್ಲಾ ವಿಫಲತೆಗಳಿಗೆ ಕಾರಣವಾದಂಥ ಕೇಂದ್ರ ಸರ್ಕಾರದಲ್ಲಿ ನಿಮ್ಮ ಪಕ್ಷದವರೂ ಕೂಡ ಭಾಗಸ್ಥರಾಗಿದ್ದಾರೆ. ಅಷ್ಟೇ ನಾನು ಹೇಳಿದ್ದು. ಇದಕ್ಕಿಂತ ಹೆಚ್ಚಿಗೆ ನಾನೇನೂ ಹೇಳಿಲ್ಲ. ಅದು ನಿಜ ಆಗಿದ್ದರೆ ನಿಜ ಎನ್ನಿ, ಸುಳ್ಳು ಆಗಿದ್ದರೆ ಸುಳ್ಳು ಎನ್ನಿ.

ಶ್ರೀ ಎಸ್.ಎಸ್. ಪಾಟೀಲ್ : ಆ ಕಾಶ್ಮೀರ ಸಮಸ್ಯೆ ಇಲ್ಲಿಯವರೆಗೆ ಬೆಳೆಯುವುದಕ್ಕೆ ಮೂಲ ಕಾರಣಸ್ಥರು ಯಾರು? ಅದನ್ನೂ ಹೇಳಿ.

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರ ಭಾಷಣವನ್ನು ನಾನು ಮೊದಲಿನಿಂದ ಕೊನೆಯವರೆಗೂ ಕೇಳಿದ್ದೇನೆ. ನಾನು ಈ ವಿಷಯದಲ್ಲಿ ನೆಲೆಯನ್ನೇ ಕಾಣಲಿಕ್ಕೆ ಸಾಧ್ಯವಾಗುತ್ತಾ ಇಲ್ಲ. ನಾಗಪ್ಪನವರನ್ನು ವೀರಪ್ಪನ್ ಏಕೆ ಅಪಹರಣ ಮಾಡಿದ? ಇವತ್ತು ಬೆಳಿಗ್ಗೆಯಿಂದ ನಡೆದಂಥ ಚರ್ಚೆಯಲ್ಲಿ ನಿಜವಾದಂಥ, ಸ್ಪಷ್ಟವಾದಂಥ ಕಾರಣ ನನಗಂತೂ ಗೊತ್ತಿಲ್ಲ. ಅದು ಚರ್ಚೆಯಲ್ಲೂ ಬರಲಿಲ್ಲ, ಪತ್ರಿಕೆಯೊಳಗೂ ಬಂದಿಲ್ಲ, ಏಕೆ ನಾಗಪ್ಪನವರನ್ನು ಅಪಹರಣ ಮಾಡಿದ? ದುಡ್ಡಿಗಾಗಿ ಅಪಹರಣ ಮಾಡಿಕೊಂಡು ಹೋದನೋ ಸರ್ಕಾರದವರು ಅಪಹರಣ ಮಾಡಿದರೋ ಅಥವಾ ವೀರಪ್ಪನ್‌ಗೆ ಹೇಳಿ ರಾಜುಗೌಡರು ಏನಾದರೂ ಅಪಹರಣ ಮಾಡಿಸಿದರೋ? ಏಕೆ ವೀರಪ್ಪನ್ ನಾಗಪ್ಪನವರನ್ನು ಅಪಹರಣ ಮಾಡಿದ? ಈ ಪ್ರಶ್ನೆಗೆ ನಮಗೆ ಉತ್ತರ ಸಿಗಬೇಕಾದದ್ದು ತನಿಖೆಯ ನಂತರ. ಇದು ಒಂದು. ನಾಗಪ್ಪನವರನ್ನು ಅಪಹರಿಸಿದ ಘಳಿಗೆಯಿಂದ, ನಾಗಪ್ಪನವರ ಸತ್ತ ಹೆಣವನ್ನು ತರುವವರೆಗೆ ಸಂಶಯದ ಸುಳಿಯಲ್ಲೇ ನಾವು ಸುತ್ತಿಕೊಂಡು ಹೋಗುತ್ತೇವೆ. ನಾಗಪ್ಪನವರ ಹತ್ತಿರ ಪಿಸ್ತೂಲು ಇತ್ತು. ನಾಗಪ್ಪನವರ ಮಗ ಮನೆಯಲ್ಲಿ ಇದ್ದರು. ನಾಗಪ್ಪನವರನ್ನು ಕಾಯಲಿಕ್ಕೆ ಒಬ್ಬರೋ ಇಬ್ಬರೋ ಪೋಲೀಸರು ಇದ್ದರು. ಅವರನ್ನು ಎಳೆದುಕೊಂಡು ಹೋಗುವಾಗ, ಏಕೆ ಯಾರೂ ಬಂದೂಕಿನಾದ ಗುಂಡನ್ನು ಹಾರಿಸಲಿಲ್ಲ? ನಮ್ಮ ಮಹದೇವರವರು ಹೇಳಿದರು, ಏನೋ ಒಂದು ಹಾರಿಸಿದ ಎಂದು ಹೇಳುತ್ತಾರೆ; ಹಾರಿಸಿಲ್ಲ ಎಂದು ಹೇಳುತ್ತಾರೆ. ಎರಡನೆಯದು ಅವರೇ ಹೇಳುವ ತರಹ ಬೇರೆಯವರ ಜೊತೆಗೆ ನಾಗಪ್ಪನವರ ಜೀವಕ್ಕೆ ಅಪಾಯ ಇದೆ ಎನ್ನುವುದು ಸರ್ಕಾರಕ್ಕೆ ಗೊತ್ತಿದ್ದಷ್ಟೇ ನಾಗಪ್ಪನವರಿಗೂ ಗೊತ್ತಿತ್ತು. ಅವರ ಕುಟುಂಬಕ್ಕೂ ಗೊತ್ತಿತ್ತು. ಪೊಲೀಸಿನವರಿಗೂ ಗೊತ್ತಿತ್ತು. ಪೊಲೀಸಿನವರು ವಿಫಲರಾದರು.

ಸರ್ಕಾರ ವಿಫಲವಾಯಿತು. ಅವರ ಕುಟುಂಬದ ಸದಸ್ಯರಾದರೂ ಕೂಡ ಹೋಡೆಯಲಿಲ್ಲ. ಮತ್ತೆ ಆ ಪೊಲೀಸಿನವರು, ನನಗೆ ತಿಳಿದಿರುವ ಪ್ರಕಾರ, ಅದು ಸರ್ಕಾರದವರು ಉತ್ತರ ಹೇಳುತ್ತಾರೆ. ತೋಟದ ಮನೆಗೆ ನೀವು ಹೋಗಬೇಡಿ ಎಂಬ ಆದೇಶವನ್ನು, ಸೂಚನೆಯನ್ನು ಹೇಳಿದ್ದರು. ಇದು ಒಂದು. ಸನ್ಮಾನ್ಯ ಅಧ್ಯಕ್ಷರೇ, ಅವನು ಎಳೆದುಕೊಂಡು ಹೋಗಿ, ಬಸ್ಸನ್ನು ತಡೆದು ನಿಲ್ಲಿಸಿ, ಹತ್ತಿಸುವಾಗ ಆರು ಜನ ಪೊಲೀಸಿನವರು ಬಂದೂಕನ್ನು ಹಿಡಿದುಕೊಂಡು ನೋಡುತ್ತಾ ನಿಂತಿದ್ದರು ಎನ್ನುವಂಥ ಮಾತನ್ನು ಒಬ್ಬ ಕ್ರಿಮಿನಲ್ ಲಾಯರ್ ಆಗಿ ನಾನು ನಂಬಲಿಕ್ಕೆ ಸಿದ್ಧನಿಲ್ಲ. ಅಕಸ್ಮಾತ್ ಅಂತಾದ್ದು ಏನಾದರೂ ಘಟನೆ ನಡೆದಿದ್ದರೆ, ಅವರ ಜೊತೆಗೆ ಸೇರಿಕೊಂಡು ನಾನು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಅಂತಹವರಿಗೆ ಗರಿಷ್ಟವಾದಂಥ ಶಿಕ್ಷೆಯನ್ನು ಕೊಡಬೇಕು. ಇವತ್ತು ಯಾರಿಗಾದರೂ ನೇಣಿಗೆ ಹಾಕುವುದಿದ್ದರೆ ವೀರಪ್ಪನ್‌ಗೆ ಅಲ್ಲ, ಅವರನ್ನು ನೇಣಿಗೆ ಹಾಕಬೇಕಾಗುತ್ತದೆ.. ಆದರೆ, ಅಂತಹ ಸನ್ನಿವೇಶ ಬರಲಿಕ್ಕೆ ಸಾಧ್ಯತೆ ಇಲ್ಲ. ನಾಗಪ್ಪನವರನ್ನು ಅಪಹರಣ ಮಾಡಿಕೊಂಡು ಹೋಗಿ ಬಸ್ಸಿಗೆ ಕೂಡಿಸುವಂಥ ಸಂದರ್ಭದಲ್ಲಿ, ಜೀಪು ನಿಲ್ಲಿಸಿಕೊಂಡು ಆರು ಜನ ಪೊಲೀಸಿನವರು ನೋಡುತ್ತಾ ನಿಂತಿದ್ದರು ಎನ್ನುವಂಥ ಒಂದು ಮಾತು, ಅಂತಹ ಒಂದು ಸಂದರ್ಭ ನಾನಂತೂ ಊಹಿಸಿಕೊಳ್ಳುವುದಕ್ಕೆ ಸಾಧ್ಯತೆ ಇಲ್ಲ. ಅದು ಏನಾದರೂ ನಿಜ ಇದ್ದಿದ್ದರೆ, ಅವರಿಗೆ ಗರಿಷ್ಟವಾದಂತಹ ಶಿಕ್ಷೆಯನ್ನು ಕೊಡಬೇಕು. ಇದೂ ಕೂಡ ಎರಡನೆಯ ಅನುಮಾನ. ಸನ್ಮಾನ್ಯ ಅಧ್ಯಕ್ಷರೇ, ನಾಗಪ್ಪನವರು, ವೀರಪ್ಪನ್ ಹಿಡಿತದಲ್ಲಿದ್ದಾಗ ಡೈರಿ ಬರೆದಿದ್ದಾರೆಂದು ಬೆಳಿಗ್ಗೆಯಿಂದ ಇಲ್ಲಿ ಉವಾಚ ನಡೆಯುತ್ತಾ ಇದೆ. ಬಹುಶಃ ರಾಜಕುಮಾರ್‌ರವರು ಇದಕ್ಕೆ ಉತ್ತರ ಕೊಡಬೇಕು. ವೀರಪ್ಪನ್‌ರವರ ಹಿಡಿತದಲ್ಲಿ ಒಬ್ಬ ವ್ಯಕ್ತಿ ಇದ್ದಾಗ ಎಂತಹ ಒಂದು ಸಂದರ್ಭ ಇರುತ್ತದೆ, ಎಂತಹ ಒಂದು ಭಯಾನಕವಾದ ವಾತಾವರಣ ಇರುತ್ತದೆ ಎನ್ನುವುದನ್ನು ನಾವು ಅನುಭವಿಸದೇ ಇದ್ದರೂ ಕೂಡ ಊಹಿಸಿಕೊಳ್ಳುವುದಕ್ಕಾಗದೇ ಇರುವಷ್ಟು ದಡ್ಡರಲ್ಲ. ನಾಗಪ್ಪನವರಿಗೆ, ವೀರಪ್ಪನ್ ನೋಟ್ ಬುಕ್ ತರಿಸಿಕೊಟ್ಟು, ನೀನು ಡೈರಿ ಬರೆಯಪ್ಪ ಎಂದು ಹೇಳಿ ಬರೆಸಿದ್ದಿದ್ದರೆ, it is only under two circumstances, ಇಲ್ಲ, ವೀರಪ್ಪನ್ ತನ್ನ ಅನುಕೂಲಕ್ಕಾಗಿ ಅವನಿಗೆ ಬೇಕಾದ ತರಹ, ನನ್ನ ಸ್ನೇಹಿತರು ಹೇಳಿದ ಹಾಗೆ ಬಂದೂಕು ಹಿಡಿದುಕೊಂಡು ಬರೆಸಿರಬಹುದು. otherwise I would like to tell that it is a cooked up diary. ಅದು ಸೃಷ್ಟಿ ಮಾಡಿರುವಂತಾದ್ದು....

ಶ್ರೀ ಪಿ.ಜಿ.ಆರ್. ಸಿಂಧ್ಯ : ಶೇಮ್ .... ಶೇಮ್ ....

ಶ್ರೀ ವೈ.ಕೆ. ರಾಮಯ್ಯ : ನನಗೂ ಕೂಗಲು ಬರುತ್ತದೆ. ಆದರೆ ನಾನು ಹೇಳುವುದನ್ನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ ಅವರಿಗೆ ರಾಜಕೀಯ ಅಟ್ರಿಬ್ಯೂಟ್ ಮಾಡುವುದಕ್ಕೆ ಎಷ್ಟು ಅಧಿಕಾರವಿದೆಯೋ ಅಷ್ಟೇ ಅಧಿಕಾರ ನನಗೂ ಇದೆ. ಈ ರಾಜಕೀಯ ಷಡ್ಯಂತ್ರದ ಹಿಂದೆ ಯಾರ್‍ಯಾರು ಇದ್ದಾರೆ ಎನ್ನುವುದು ನಮಗೂ ಗೊತ್ತು. ಹೌದು ನೀವು ಮಾತನಾಡುವುದೆಲ್ಲಾ ನಿಜ... ನಾನು ಮಾತನಾಡುವುದು ಏನೇನೋ ಆಗಿ ನಿಮಗೆ ಕೇಳುತ್ತದೆ. ಈ ರಾಜಕೀಯ ಷಡ್ಯಂತ್ರದ ಹಿಂದೆ ಏನೇನು ಇದೆ ಎಂಬುದು ನಿಮಗೆ ಗೊತ್ತಿದೆ. ಅನೇಕ ವರ್ಷಗಳ ಕಾಲ ಇಂತಹ ಕುತಂತ್ರದ ನಡವಳಿಕೆಯಲ್ಲಿ ನಡೆದಂಥ ಜನರು ಇವೊತ್ತು ಕುಳಿತುಕೊಂಡು ಆ ಪುಸ್ತಕವನ್ನು

ಬರೆದಿದ್ದಾರೆ. ಅವರ ಹೆಣದ ಜೊತೆಯಲ್ಲಿ ಆ ಪುಸ್ತಕ ಸಿಕ್ಕಲಿಲ್ಲ. ಅವರ ಹೆಣ ಮಣ್ಣು ಮಾಡುವ ತನಕ ಆ ಪುಸ್ತಕ ಸಿಗಲಿಲ್ಲ. This was cooked up up little later, with a lot of deliberations and discussions to bring the the Government to a bad shape. ಹೋಗಲಿ ಸ್ವಾಮಿ ಇದನ್ನು ಯಾರೂ ಕೂಡ ಈ ಪ್ರಪಂಚದಲ್ಲಿ ಹಸುಗೂಸು ಕೂಡ ಇದನ್ನು ನಂಬುವುದಿಲ್ಲ. ನಾಗಪ್ಪನವರಿಗೆ ಈ ಡೈರಿ ಬರೆಯುವುದಕ್ಕೆ ವೀರಪ್ಪನ್ ಪುಸ್ತಕ ಕೊಟ್ಟು, ಪೆನ್ ಕೊಟ್ಟು ನೋಡುತ್ತಾ ಕುಳಿತುಕೊಳ್ಳುತ್ತಾನೆ ಎಂದು ಹೇಳಿದರೆ ಯಾರು ನಂಬಲು ಸಾಧ್ಯ ಇದೆ? ಸ್ವಲ್ಪ ರಾಜಕುಮಾರ್‌ರವರನ್ನು ಯಾರಾದರೂ ಹೋಗಿ ಕೇಳಿಕೊಂಡು ಬರಬೇಕು. ಎಂಥ ಭಯಾನಕವಾದಂಥ ಪರಿಸ್ಥಿತಿಯು ಅಲ್ಲಿ ಇರುತ್ತದೆ ಅಂದರೆ, ಎಂಥ ಒಂದು ಕೆಟ್ಟ ಪರಿಸ್ಥಿತಿಯು ಅಲ್ಲಿ ಇರುತ್ತದೆ ಅಂದರೆ, ...

ಶ್ರೀ ಸಿ. ಬೈರೇಗೌಡ : ಮಾನ್ಯ ರಾಮಯ್ಯನವರು ಈ ಒಂದು ಮಟ್ಟಕ್ಕೆ ಇಳಿಯುತ್ತಾರೆಂದು ನಾನಂತೂ ಅಂದುಕೊಂಡಿರಲಿಲ್ಲ. ಇವೊತ್ತು ಅದು cooked up ಡೈರಿಯಾದರೆ ನಡೆಯಲಿ ಹ್ಯಾಂಡ್‌ರೈಟಿಂಗ್ ಎಕ್ಸ್‌ಪರ್ಟ್‌ಗಳಿಗೆ ಕಳುಹಿಸಿ ಅದರ ಸತ್ಯಾಸತ್ಯತೆಯನ್ನು ನೋಡಿಕೊಳ್ಳಲಿ. ಅದನ್ನು ಬಿಟ್ಟು ಈ ರೀತಿಯಾಗಿ ಅವರು ಘಟನೆಯನ್ನು ತಿರುಚುವಂಥ ಪ್ರಯತ್ನವನ್ನು ಮಾನ್ಯ ರಾಮಯ್ಯನವರು ಮಾಡುತ್ತಾರೆಂದು ನಾನು ಅಂದುಕೊಂಡಿರಲಿಲ್ಲ.

ಗೊಂದಲ

ಅವರು ಬೇಕಾದರೆ ಸರಕಾರದ ಪರವಾಗಿ ಮಾತಾಡಲಿ. ನಮ್ಮ ಅಭ್ಯಂತರವಿಲ್ಲ. ಆದರೆ ನಿಜವನ್ನು ತಿರುಚತಕ್ಕಂಥ ಕೆಲಸ ಏನು ನಡೆಯುತ್ತಾ ಇದೆ ಅದು ಬೇಡ ಎನ್ನುವುದು ಅಷ್ಟೆ ಅವರು ಮಾತನಾಡುವುದಕ್ಕೆ ನಮ್ಮ ಅಡ್ಡಿ ಯಾರಿಂದಲೂ ಇಲ್ಲ. ಅವರು ಮಾತನಾಡಲಿ. ಆದರೆ ಸತ್ಯವನ್ನು ಮಾತನಾಡಲಿ. ಅದನ್ನು ಬಿಟ್ಟು ಹೀಗೆ ಮಾತನಾಡತಕ್ಕಂಥಾದ್ದು ಸರಿಯಲ್ಲ. ಅದು ಅವರ ಘನತೆಗೆ ತಕ್ಕದ್ದಲ್ಲ.

ಗೊಂದಲ

ಶ್ರೀ ಕೆ. ಗೋಪಾಲ ಪೂಜಾರಿ : ಮಾನ್ಯ ಅಧ್ಯಕ್ಷರೇ, ಅವರುಗಳು ಮಾತನಾಡುವಾಗ ನಾವು ಯಾರೂ ತಕರಾರು ಎತ್ತಿಲ್ಲ. ನಮ್ಮ ಪಕ್ಷದವರು ಮಾತನಾಡುವಾಗ ಹೀಗೆ ಅಡ್ಡಿಪಡಿಸುವುದು ಸರಿಯಲ್ಲ. ಆ ಪಕ್ಷದವರು ಮೂರು ಗಂಟೆಗಳ ಕಾಲ ಮಾತನಾಡಿದರೂ ನಾವು ಯಾರೂ ಅಡ್ಡಿ ಮಾಡಲಿಲ್ಲ. ಈಗ ಏಕೆ ರಾಮಯ್ಯನವರು ಮಾತನಾಡುವಾಗ ಅಡ್ಡಿಪಡಿಸುತ್ತೀರಿ?

ಗೊಂದಲ

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೊಡುವುದು ಅಷ್ಟೇ ಅಲ್ಲ, ತೆಗೆದುಕೊಳ್ಳುವುದೂ ಬೇಕಾಗುತ್ತದೆ. ನೀವು ಕೊಟ್ಟಿದ್ದೆಲ್ಲಾ ಬೆಳಿಗ್ಗೆ ಕುಳಿತುಕೊಂಡು ತೆಗೆದುಕೊಂಡಿದ್ದೇವೆ.

ಗೊಂದಲ

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ನನಗೆ ಈಗ ಅರ್ಥವಾಗುತ್ತಾ ಇದೆ. Mr. Ramaiah is belitting himself. I have got a lot of respect for

Mr. Ramaiah. He is belitting himself, for his seniority. You are bringing your own stature down. You should not stoop to this level. This is unbecoming of Mr. Ramaiah.

ಶ್ರೀ ಕಾಗೋಡು ತಿಮ್ಮಪ್ಪ : ರಾಮಯ್ಯನವರು ಏನು ಹೇಳಬೇಕೆಂದಿದ್ದಾರೋ ಅದನ್ನು ಅವರು ಹೇಳುತ್ತಾರೆ...

ಗೊಂದಲ

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ, I repeat that the diary was either written under coercion or it is cooked up....
ನನಗೆ ತಿಳಿದಿದ್ದನ್ನು ನಾನು ಹೇಳುತ್ತೇನೆ. ನಿಮಗೆ ತಿಳಿದಿದ್ದನ್ನು ನೀವು ಹೇಳುತ್ತೀರಿ.

ಶ್ರೀ ಕರಿಯಣ್ಣ : ನಿಮಗೆ ತಿಳಿದಿದ್ದನ್ನು ನೀವು ಹೇಳುತ್ತೀರಿ, ಅವರಿಗೆ ತಿಳಿದಿದ್ದನ್ನು ಅವರು ಹೇಳುತ್ತಾರೆ.

ಶ್ರೀ ಸಿ. ಬೈರೇಗೌಡ : ಇವರು ಹೇಳುವುದನ್ನು ನೋಡುತ್ತಾ ಇದ್ದರೆ, ಇದು ಯಾವ ಮಟ್ಟಕ್ಕೆ ಹೋಗುತ್ತದೆ ಅಂದರೆ ನಾಗಪ್ಪನವರನ್ನು ಇವರೇ ಕಿಡ್ನಾಪ್ ಮಾಡಿಸಿದ್ದಾರೆ ಎಂದು ಹೇಳುವಂತಾದೀತು, ನಾಚಿಕೆ ಆಗಬೇಕು.

ಗೊಂದಲ

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಅವರಿಗೆ ತಿಳಿದಿದ್ದನ್ನು ಹೇಳುತ್ತಿದ್ದಾರೆ. ಇತರ ಮಾನ್ಯ ಸಧಸ್ಯರು ತಾವು ಅವಕಾಶ ಕೊಟ್ಟಾಗ ಅವರ ಅಭಿಪ್ರಾಯಗಳನ್ನು ಹೇಳಲಿ.

ಉಪಾಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸದಸ್ಯರಾದ ರಾಮಯ್ಯನವರು ಮಾತನಾಡುತ್ತಿದ್ದಾರೆ. ಅವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಹೇಳಿದ ಮಾತುಗಳ ಮೇಲೆ ತಮಗೆ ಮಾತನಾಡಬೇಕಾದಲ್ಲಿ ನಿಮ್ಮ ಅವಕಾಶ ಬಂದಾಗ ಮಾತನಾಡಿ ಡಿನೈ ಮಾಡಿ....

ಗೊಂದಲ

ಶ್ರೀ ಹೆಚ್.ಎಂ. ರೇವಣ : ಅವರು ಅವರ ಅಭಿಪ್ರಾಯವನ್ನು ಹೇಳುತ್ತಿದ್ದಾರೆ. ಅವರು ಯಾವುದೇ ಸಮರ್ಥನೆಯನ್ನು ಮಾಡಿಲ್ಲ.

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ, ನನ್ನ ಅಭಿಪ್ರಾಯವನ್ನು ನಾನು ಹೇಳುತ್ತಿದ್ದೇನೆ. ಅದು ಸುಳ್ಳೋ ತಪ್ಪೋ ಎಂಬುದು ನನ್ನ ಆತ್ಮಕ್ಕೆ ಗೊತ್ತು. ನನ್ನ ಅಭಿಪ್ರಾಯವನ್ನು ನಾನು ಹೇಳುತ್ತೇನೆ. ಅವರುಗಳು ಹೇಳಿದ್ದನ್ನು ನಾನು ಕೇಳಿದ್ದೇನೆ. ನಾನು ಹೇಳುವುದನ್ನು ಕೇಳಬೇಕೆಂದು ಅವರಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇನೆ. ನನ್ನ ಅಭಿಪ್ರಾಯ ನಾನು ಹೇಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಅವರು ವೀರಪ್ಪನ್ ಪರವಾಗಿ ವಕೀಲಿ ಮಾಡುತ್ತಾ ಇದ್ದಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಅವರು ಕ್ರಿಮಿನಲ್ ಲಾಯರ್ ಆಗಿ ವೀರಪ್ಪನ್ ಪರವಾಗಿ ಕೋರ್ಟ್‌ನಲ್ಲಿ ವಕಾಲತ್ತು ಹಾಕಲಿ. ಇಲ್ಲಿ ಡಿಫೆಂಡ್ ಮಾಡುತ್ತಿದ್ದಾರೆ. ಕೋರ್ಟ್ ಅಂತ ತಿಳಿದುಕೊಂಡಿದ್ದಾರೆ.

ಗೊಂದಲ

ಶ್ರೀ ಎಂ.ಬಿ. ಪಾಟೀಲ್ : ಮಾನ್ಯ ಸದಸ್ಯರು ವೀರಪ್ಪನ್ ಪರವಾಗಿ ವಕೀಲಿ ಮಾಡುವುದಕ್ಕೆ ಬಂದಿದ್ದಾರೋ, ಹೇಗೆ?

ಶ್ರೀ ವೈ.ಕೆ. ರಾಮಯ್ಯ : ಇದನ್ನು ಸರಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಲು ಸೃಷ್ಟಿ ಮಾಡಿರುವುದು ಎನ್ನುವುದು ನನ್ನ ಅಭಿಪ್ರಾಯ. ಇದು ನನ್ನ ಅನುಮಾನ.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಇಲ್ಲಿ ನಾಗಪ್ಪನವರ ಸಂಸಾರದವರು ಕುಳಿತು ಕೇಳುತ್ತಿದ್ದಾರೆ ಇಷ್ಟು ಲಘುವಾಗಿ ಮಾತನಾಡಬಾರದು. ಅದು ಏನೇ ಇರಲಿ ಹೇಳುವಂಥ ರೀತಿಯಲ್ಲಿ ಹೇಳಬೇಕು. ಅದನ್ನು ಬಿಟ್ಟು 120 ಜನ ವಿಧವೆಯರು ಆಗಿದ್ದಾರೆ ಎಂದು ಹೇಳಿದರೆ

ಗೊಂದಲ

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) : ಮಾನ್ಯ ಉಪಾಧ್ಯಕ್ಷರೇ, ಅತ್ಯಂತ ಗಂಭೀರವಾದಂಥ ಸಮಸ್ಯೆ ಒಂದು ಅದರ ಚರ್ಚೆಯು ನಡೆಯುತ್ತಾ ಇದೆ. ಚರ್ಚೆಯಲ್ಲಿ ಪ್ರತಿಯೊಬ್ಬ ಸದಸ್ಯರೂ ತಮ್ಮದ್ದೇ ಆದಂಥ ರೀತಿಯಲ್ಲಿ ನಡವಳಿಕೆಯನ್ನು ಒಂದು ದುರಂತವನ್ನು ಒಂದು ವಿಶ್ಲೇಷಣೆ ಮಾಡುತ್ತಾರೆ, ಮಾನ್ಯ ಸದಸ್ಯರಾದಂಥ ರಾಮಯ್ಯನವರು ಅವರ ಅನಿಸಿಕೆಗಳನ್ನು ಹೇಳುತ್ತಾ ಇದ್ದಾರೆ. ಈಗಾಗಲೇ ಕದಡಿ ಹೋಗಿರತಕ್ಕಂಥ ಮನಸ್ಸುಗಳನ್ನು ಹೃದಯಗಳನ್ನು ಒಂದು ಮಾಡಲಿಕ್ಕೆ ನಾವು ಪ್ರಯತ್ನ ಮಾಡಬೇಕಾಗುತ್ತದೆ. ಆ ದಿಕ್ಕಿನಲ್ಲಿ ನಾವು, ನೀವು ಮುಂದುವರಿಯಬೇಕಾಗುತ್ತದೆ. ಅದನ್ನು ಗಮನದಲ್ಲಿಟ್ಟುಕೊಂಡು ನಾವು ನಮ್ಮ ಭಾಷಣಗಳಲ್ಲಿ ನಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಬೇಕಾಗುತ್ತದೆ. ಮಾನ್ಯ ಸಿಂಧ್ಯಾರವರು ಎಷ್ಟೇ ನನ್ನ ಕ್ರೌರ್ಯ ಇವುಗಳೆಲ್ಲದರ ಬಗ್ಗೆ ವಿವರಣೆಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ನಾವು ಅದನ್ನು ಕೇಳಿದ್ದೇವೆ. ಆದರೆ ಈ ಸಂದರ್ಭಗಳು ಹಾಗೆ ಇವೆ. ಒಬ್ಬರನ್ನೊಬ್ಬರು ಅನುಮಾನದಿಂದ ನೋಡತಕ್ಕಂಥ ಒಂದು ಅಬ್‌ನಾರ್ಮಲ್ ಸಿಚ್ಯುವೇಶನ್ ಇವೊತ್ತು ನಮ್ಮ ರಾಜ್ಯದ ಕೆಲವು ಭಾಗಗಳಲ್ಲಿ ಉಂಟಾಗಿದೆ. ಅದನ್ನು ನಾವು ಗಮನಿಸಿ ನಾವು ನಮ್ಮ ಭಾಷಣಗಳಲ್ಲಿ ನಾವೇ ಸ್ವಯಂ ನಿಯಂತ್ರಣವನ್ನು ಹಾಕಿಕೊಂಡರೆ ಈ ಒಂದು ಚರ್ಚೆಗೆ ನಿರ್ದಿಷ್ಟತೆ ಬರುತ್ತದೆ ಮತ್ತು ಚರ್ಚೆಯನ್ನು ನಾವು ಮಾಡಿದ್ದಕ್ಕೂ ಕೂಡ ಸಾರ್ಥಕವಾಗುತ್ತದೆ ಎಂಬ ಒಂದು ಜನರಲ್ ಮನವಿಯನ್ನು ನಾನು ಮಾಡಿಕೊಳ್ಳುತ್ತೇನೆ.

5.20 ಪಿಎಂ

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ನಾನು ಮಾತನಾಡುವಾಗ ಯಾವುದೇ ಒಂದು ದುರುದ್ದೇಶದಿಂದ ಮಾತನಾಡುತ್ತಿಲ್ಲ. ಇಂತಹ ಒಂದು ಸಂದರ್ಭ ಇರಬಹುದೇನೋ, ಈ ತರಹ ಆಗಿರಬಹುದೇನೋ... ಅವರು ಹೇಗೆ ಊಹೆಗಳನ್ನು ಮಾಡಲಿಕ್ಕೆ ವಿಷಯ ಪ್ರಸ್ತಾಪ ಮಾಡುವುದಕ್ಕೆ ಅಭಿಪ್ರಾಯ ವ್ಯಕ್ತ ಮಾಡಲಿಕ್ಕೆ ಅಧಿಕಾರ ಇದೆಯೋ ಅದು ಸುಳ್ಳೇ ಇರಬಹುದು. ಆ ಸುಳ್ಳು ಹೇಳಿದ್ದರೆ ಅಥವಾ ನಾನು ಉದ್ದೇಶಪೂರ್ವಕವಾಗಿ ಯಾರನ್ನಾದರೂ ನೋಯಿಸಲಿಕ್ಕೆ ಹೇಳಿದ್ದರೆ ಅದು ನನ್ನ ಅಭಿಪ್ರಾಯ ಅಷ್ಟೇ. ಅದು ಸುಳ್ಳಿರಬಹುದು ಅಥವಾ ತಪ್ಪಿರಬಹುದು. ಇದು ನೆಕ್ಸ್ ಅನುಮಾನ. ಸನ್ಮಾನ್ಯ ಅಧ್ಯಕ್ಷರೇ, ನಾಗಪ್ಪನವರನ್ನು ಕೊಂದವರು ಯಾರು? ಇದು ಐದನೇ ಅನುಮಾನ. ಅವರ ಹೆಣ ಸಿಕ್ಕುವವರೆಗೂ ಸಂಶಯಗಳೇ ಸುತ್ತಿಕೊಂಡು ಬರುತ್ತವೆ.

ಅದರಲ್ಲಿ ಇದೂ ಒಂದು ಸಂಶಯ ಎಂದು ಹೇಳಿದೆನೇ ಹೊರತು ಈ ತರಹ ಆಗಿರಬಹುದು ಎಂದು ನಾನು ಹೇಳಿಲ್ಲ. ಕೊಂದವರು ಯಾರು? ಈ ವಿಷಯದಲ್ಲೂ ಸಂಶಯ. ಈಗ ನಿಮಗೇ ಗೊತ್ತಿದ್ದಂತೆ ನಮಗೆಲ್ಲರಿಗೂ ಗೊತ್ತಿದ್ದಂತೆ ಒಂದು ಕಡೆ ವೀರಪ್ಪನ್ ಕೊಂದು ಅಲ್ಲಿ ಬಿಸಾಕಿ ಹೋಗಿದ್ದಾನಾ? ತಮಿಳುನಾಡಿನ STF ನವರು ಕೊಂದುಹಾಕಿದ್ದಾರಾ ಅಥವಾ ತಮಿಳುನಾಡಿನ STF ನವರಿಗೂ ಕರ್ನಾಟಕದ STF ನವರಿಗೂ ನಡೆದಂತಹ ಗುಂಡಿನ ಕಾಳಗದಲ್ಲಿ ಆಕಸ್ಮಿಕವಾಗಿ ನಾಗಪ್ಪನವರಿಗೆ ಗುಂಡು ತಗುಲಿ ಸತ್ತಿದ್ದಾರಾ? ಇದೂ ಕೂಡ ನಮ್ಮ ಮುಂದಿನ ಒಂದು ಅನುಮಾನ. ಆದಕ್ಕೇ ಮೊದಲಿಂದಲೂ ನಾನು ಇದನ್ನು I am not advocating this as a conclusive proof. ಇಂತಹ ಅನುಮಾನಗಳು ಬರುತ್ತವೆ. ನಾಗಪ್ಪನವರನ್ನು ಕೊಂದವರು ಯಾರು ಅನ್ನುವ ಬಗ್ಗೆಯೂ ಅನುಮಾನವಿದೆ. ಅದೂ ಕೂಡ ನಮಗೆ ಸ್ಪಷ್ಟವಾಗಿ ಗೊತ್ತಾಗಿಲ್ಲ. ಇದರ ಜೊತೆಗೆ ದ್ವಂದ್ವಗಳು. ಸತ್ಯವನ್ನು ಹೇಳಿದರೆ ಕೋಪ ಮಾಡಿಕೊಂಡರೆ ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ. ಬಸವರಾಜು ಎನ್ನುವಂತಹ ಒಬ್ಬ ವ್ಯಕ್ತಿ. ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ ಅಧ್ಯಕ್ಷರೇ, ನಾನು ಯಾರಿಂದಲೂ ಬ್ರೀಫ್ ಮಾಡಿಸಿಕೊಂಡಿಲ್ಲ. ನನಗೆ ಎಷ್ಟು ಗೊತ್ತಿದೆಯೋ ಪತ್ರಿಕೆಗಳ ಮೂಲಕ ನನಗೇನು ತೋಚಿದೆಯೋ ಅಂತಹ ವಿಷಯಗಳನ್ನು ಮಾತ್ರ ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. I am not holding vakalat for anybody. ಬಸವರಾಜು ಎನ್ನುವಂತಹ ಒಬ್ಬ ವ್ಯಕ್ತಿ ಹೋಗಿ ವೀರಪ್ಪನ್‌ನನ್ನು ನೋಡಿದರೆ ಅದು ದೊಡ್ಡ ಅಪರಾಧ. ಅದು ರಾಜುಗೌಡರಿಗೂ ಅವರಿಗೂ ಸಂಬಂಧ, ಜನತಾದಳದ ಅಧ್ಯಕ್ಷರಾದ ಮಹಾದೇವಸ್ವಾಮಿಯವರು ಹೋಗಿ ವೀರಪ್ಪನ್‌ರವರನ್ನು ನೋಡಿದರೆ ಅದಕ್ಕೆ ಯಾವ ಅಪಾರ್ಥವನ್ನೂ ನಾವು ಕಲ್ಪಿಸಿಕೊಳ್ಳುವುದು ಬೇಡವೇ ಸ್ವಾಮಿ?

ಶ್ರೀ ಎಚ್.ಎಸ್. ಮಹಾದೇವ ಪ್ರಸಾದ್ : ಮಹಾದೇವಸ್ವಾಮಿಯವರು ಹೋಗಬಹುದು, ಬಸವರಾಜು ಹೋಗಿದ್ದು ಅಪರಾಧವೇ ಎಂಬ ಮಾತನ್ನು ಮಾನ್ಯ ಹಿರಿಯ ಸದಸ್ಯರು ಹೇಳುತ್ತಿದ್ದಾರೆ. ನಮ್ಮ ವಿಚಾರ ಏನೆಂದರೆ ಮಹಾದೇವಸ್ವಾಮಿ ಹೋಗತಕ್ಕಂತಹ ವಿಚಾರ ಸರ್ಕಾರಕ್ಕೂ ಗೊತ್ತಿತ್ತು, ಹೋಗಿ ಬಂದ ಮೇಲೂ ಏನು ಮಾತನಾಡಿಕೊಂಡು ಬಂದರು ಎಂಬ ವಿಚಾರಾನೂ ಗೊತ್ತಿತ್ತು. ಈ ಬಸವರಾಜು ಹೋಗಿದ್ದ ಎನ್ನುವುದು ಆ ಡೈರಿಯಲ್ಲಿ ಪ್ರಸ್ತಾಪವಾಗಿರುವುದರಿಂದ ಬಸವರಾಜು ಹೋಗಿದ್ದ ವಿಚಾರ ಏನಾದರೂ ಸರ್ಕಾರಕ್ಕೆ ಮುಂಚೆ ಗೊತ್ತಿತ್ತಾ ಅಥವಾ ಬಂದ ಮೇಲೆ ಏನು ಮಾತನಾಡಿಕೊಂಡು ಬಂದಿದ್ದಾರೆ ಎಂಬ ವಿಷಯ ಸರ್ಕಾರ ತಿಳಿದುಕೊಂಡಿದೆಯಾ ಎಂಬ ವಿಚಾರ ಅಷ್ಟೇ ನಾನು ಪ್ರಸ್ತಾಪ ಮಾಡಿದ್ದೇ ಹೊರತು ಬಸವರಾಜು ಹೋಗಿದ್ದರೆ ಅದು ಅಪರಾಧ ಅಂತ ಅಲ್ಲ. ಅವನಿಗೆ ಹೋಗುವುದಕ್ಕೆ ಸರ್ಕಾರ ಅನುಮತಿ ಕೊಟ್ಟಿತ್ತಾ ಅಥವಾ ಇನ್ಯಾರಾದರೂ ಅವರನ್ನು ಕಳಿಸಿದ್ದರಾ? ಅವನು ಬಂದ ಮೇಲೆ ಏನು ಹೇಳಿದ ಎಂಬುದಷ್ಟೇ ನಮಗೆ ಬೇಕಾಗಿರುವುದು. ಡೈರಿಯ ಜೆರಾಕ್ಸ್ ಕಾಪಿ ಸರ್ಕಾರದ ಕೈಗೆ ಹೋಯಿತಲ್ಲಾ, ಆಗ ಆ ಬಸವರಾಜುವನ್ನೇನಾದರೂ ಎನ್‌ಕ್ವಯರಿ ಮಾಡಿದ್ದೀರಾ ಅನ್ನುವುದಷ್ಟೇ.

ಉಪಾಧ್ಯಕ್ಷರು : ನಿಮಗೆ ಅವಕಾಶ ಸಿಕ್ಕಿದಾಗ ನೀವು ಮಾತನಾಡಬಹುದಿತ್ತಲ್ಲಾ

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಒಂದು ಸಾರಿಗಿಂತ ಹೆಚ್ಚು ಸಾರಿ ಹೇಳಿದ್ದೇನೆ. ನನ್ನ ಅಭಿಪ್ರಾಯ ಅಷ್ಟೇ. ನಾನು ಕೂತುಕೊಂಡು ಪೇಪರ್ ಓದುತ್ತೇನೆ.

ಕೂತುಕೊಂಡು ಬೆಳಿಗ್ಗೆಯಿಂದ ಅವರ ಭಾಷಣ ಕೇಳಿದ್ದೇನೆ. ಬಸವರಾಜು ಎನ್ನುವಂತಹ ವ್ಯಕ್ತಿ ಯಾರು ಅಂತ ನನಗೆ ಪ್ರಾಮಾಣಿಕವಾಗಿ ಗೊತ್ತಿಲ್ಲ. I swear in the name of anything on the earth. ಆದರೆ ಬಸವರಾಜು ಅನ್ನುವಂತಹ ವ್ಯಕ್ತಿ ನಾಗಪ್ಪನವರನ್ನು ಹೋಗಿ ನೋಡಿಕೊಂಡು ಬರುತ್ತಾನೆ ಅದಕ್ಕೆ ಐವತ್ತೆಂಟು ಅಟ್ರಿಬ್ಯೂಷನ್ಸ್. ಆದರೆ ಮಹಾದೇವಸ್ವಾಮಿ ಅಂತ ಒಬ್ಬ ವ್ಯಕ್ತಿ ಹೋಗಿ ನಾಗಪ್ಪನವರನ್ನು ನೋಡಿಕೊಂಡು ಬಂದರೆ ನಾನು ಈ ಸರ್ಕಾರಕ್ಕೆ ಹೇಳುತ್ತಿದ್ದೇನೆ. ಆ ಬಸವರಾಜು ಹಾಗೂ ಮಹಾದೇವಸ್ವಾಮಿ ಇಬ್ಬರನ್ನೂ ಒಳಕ್ಕೆ ಹಾಕಿ. ಅವರಿಬ್ಬರನ್ನೂ ಅರೆಸ್ಟ್ ಮಾಡಿ ಒಳಗಡೆ ಹಾಕಿದರೆ, ನೋಡಿ ಸತ್ಯ ಹೊರಕ್ಕೆ ಬರುತ್ತದೆ. ನನಗೆ ಗೊತ್ತಿಲ್ಲ. I swear that I do not know who is this fellow I do not have anything in my mind. ಬಸವರಾಜು ಹೋಗಿ ನೋಡಬಹುದಂತೆ, ಮಹಾದೇವಸ್ವಾಮಿ ಹೋಗಿ ನೋಡಬಹುದಂತೆ, ಇನ್ನೊಬ್ಬರು ಹೋಗಿ ಇನ್ನೊಂದು ನೋಡಬಹುದಂತೆ, ಆದರೆ ಆತನನ್ನು ಕಂಡುಹಿಡಿಯುವುದಕ್ಕಾಗುವುದಿಲ್ಲ ಅಂದರೆ ಹೇಗೆ? ಈ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಈ ಒಂದು ವಿಷಯದಲ್ಲಿ ದ್ವಂದ್ವಗಳು ಕೂಡ ಇದ್ದಾವೆ. ನಾನು ಅವರು ಹೋಗಿದ್ದು ತಪ್ಪೇ ಎಂದೆಲ್ಲಾ ನಾನು ಕೇಳುವುದಿಲ್ಲ. ದ್ವಂದ್ವಗಳು ಹೇಗಿವೆ, ಅನುಮಾನಗಳು ಇಲ್ಲಿ ಹೇಗಿವೆ ಅನ್ನುವುದಕ್ಕೆ ಮಾತ್ರ ಉದಾಹರಣೆಯಾಗಿ ಹೇಳುತ್ತಾ ಇದ್ದೇನೆ. ಅವರೂ ಹೋಗುತ್ತಾರೆ, ಇವರೂ ಹೋಗುತ್ತಾರೆ, ಆದರೆ ಪೊಲೀಸರು ಮಾತ್ರ ಹೋಗುವುದಕ್ಕೆ ಆಗುವುದಿಲ್ಲ. ಅದೇ ರೀತಿ ಇನ್ನೂ ಕೆಲವು ಅನುಮಾನಗಳಿಗೆ ಆಸ್ಪದ ಕೊಡುವಂಥಾದ್ದು ನಾಗಪ್ಪನವರ ದೇಹದ ಸುತ್ತ ಮಾನ್ಯ ಸ್ನೇಹಿತರು ಹೇಳಿದಂತೆ ಅನೇಕ ವಸ್ತುಗಳು ಸಿಕ್ಕಿದ್ದಾವೆ. ನಾನು ಯಾಕೆ ಈ ಮಾತನ್ನು ಹೇಳುತ್ತಿದ್ದೇನೆ ಅಂದರೆ the situation is fluid ಯಾರ ಕೈಗೂ ಇದು ಸಿಗುತ್ತಾ ಇಲ್ಲ. ನಮಗೆ ನೆಲೇನೆ ಸಿಕ್ತಾ ಇಲ್ಲ ನಿಂತುಕೊಳ್ಳೋಕೆ. ಸುಮ್ಮನೆ ಆಕಾಶದಲ್ಲಿ ನಾವೆಲ್ಲಾ ಊಹಾಪೋಹಗಳ ಮಧ್ಯದಲ್ಲಿ ಅನುಮಾನಗಳ ಸುಳಿಯಲ್ಲೇ ಒದ್ದಾಡುತ್ತಿದ್ದೇವೆ. ಆ ಒಂದು ದೃಷ್ಟಿಯಿಂದ ನಾನು ಯಾರನ್ನೂ ದೂರಲಿಕ್ಕೆ ಈ ಮಾತು ಹೇಳುತ್ತಾ ಇಲ್ಲ. ನನಗೆ ಗೊತ್ತಿರುವಂತಹ ಇರುವಂತಹ ವಿಷಯವನ್ನು ನಾನು ಹೇಳುತ್ತಿದ್ದೇನೆ ಹೊರತು ಯಾರನ್ನೂ ದೂಷಿಸಲಿಕ್ಕಾಗಿ ನಾನು ಈ ಮಾತನ್ನು ಹೇಳುತ್ತಾ ಇಲ್ಲ. ನನ್ನ ಸ್ನೇಹಿತರು ಹೇಳಿದ ಅನೇಕ ವಾದಗಳಿಗೆ ನಾನು ಪುಷ್ಟಿ ಕೊಟ್ಟುಕೊಂಡು ಬಂದಿದ್ದೇನೆ. ದಿನಕರ್ ಎನ್ನುವಂತಹ ಒಬ್ಬ ವ್ಯಕ್ತಿ ಪುಸ್ತಕವನ್ನು ಬರೆದು ಈ ವೀರಪ್ಪನ್ ವಿಷಯದಲ್ಲಿ ಒಂದು ಗೊಂದಲವನ್ನು ಸೃಷ್ಟಿ ಮಾಡಿದ್ದಾರೆ. I join my hands with my friends that Dinakar was the DGP of Karnataka, he was Head of police, his was the part and parcel of the all good and bad. ಅವತ್ತು ಏನಾದರೂ ಅವರ ಕಣ್ಣೆದುರಿಗೇನೆ ಅಕೃತ್ಯಗಳು ನಡೆದಿದ್ದರೆ ಅಪರಾಧಗಳು ನಡೆದಿದ್ದರೆ ಅಂತಹ ಅಕೃತ್ಯ ಅಪರಾಧಗಳನ್ನು ಸಾರ್ವಜನಿಕ ಗಮನಕ್ಕೆ ತರದೇ ಹೋದಂಥ ದೊಡ್ಡ ಅಪರಾಧಿ ಈತ. I request the government to take action. ಇದು ಇಲ್ಲದೆ ಇದ್ದರೆ ಇನ್ನು ಮುಂದೆ this will create very bad precedent. ಇವತ್ತು ನಮ್ಮ ಸರ್ಕಾರವಿದೆ, ನಾಳೆ ಅವರ ಸರ್ಕಾರ ಇರುತ್ತದೆ, ಸರ್ಕಾರದಲ್ಲಿ ಕೆಲಸ ಮಾಡಿದ ಅಧಿಕಾರಿಗಳು ರಿಟೈರಾದ ಮೇಲೆ ಅದು ಮಾಡಿತು, ಇದು ಮಾಡಿತು ಅಂತ ಸರ್ಕಾರದ ಮೇಲೆ ಗೂಬೆ

ಕೂರಿಸುವಂತಹ ಒಂದು ಪ್ರವೃತ್ತಿ ಒಂದು ಕೆಟ್ಟ ನಡವಳಿಕೆ ಮುಂದೆ ಯಾವ ಸರ್ಕಾರಕ್ಕೂ ಬರುವುದು ಬೇಡ. DGP Dinakar was the party to all this things. ಅವರು ಹೇಳುವಂತಹ ಏನಾದರೂ ಅಕೃತ್ಯ ಅಪರಾಧಗಳು ನಡೆದಿದ್ದರೆ ಕಾನೂನಿಗೆ ವಿರುದ್ಧವಾದ ನಡವಳಿಕೆಗಳು ನಡೆದಿದ್ದರೆ ಅದಕ್ಕೆ ದಿನಕರ್ ಅವರೂ ಕೂಡ ಭಾಗಸ್ತರಾಗಿದ್ದಾರೆ. ಬೇರೆಯವರು ಎಷ್ಟು ಅಪರಾಧಿತ್ವ ಹೊರಬೇಕಾಗುತ್ತದೋ ದಿನಕರ್‌ರವರೂ ಕೂಡ ಅಷ್ಟೇ ಅಪರಾಧವನ್ನು ಹೊರಬೇಕಾಗುತ್ತದೆ. ಅದಕ್ಕಾಗಿ ದಿನಕರ್ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರದವರಲ್ಲಿ ನಾನು ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಸರ್ಕಾರದ ವಕ್ತಾರವಾಗಿ ಮಾತನಾಡುತ್ತಿದ್ದೀರಿ. ಆ ಪುಸ್ತಕದ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಿ.

ಶ್ರೀ ವೈ.ಕೆ. ರಾಮಯ್ಯ : ಅದು ಸರ್ಕಾರ ಹೇಳುತ್ತದೆ. ಇರಿ ಕೃಷ್ಣಮೂರ್ತಿಗಳೇ.

ಶ್ರೀ ಶ್ರೀನಿವಾಸಗೌಡ ಕುಡುವನಹಳ್ಳಿ : ದಿನಕರ್‌ರವರನ್ನು ನೇಮಿಸುವಾಗ, ಅವತ್ತು ಮಾನ್ಯ ಮುಖ್ಯಮಂತ್ರಿಗಳು ನಮ್ಮ ಸರ್ಕಾರವನ್ನು ಟೀಕೆ ಮಾಡಿದರು. ನೀವು ಮಾಡದಂತಹ ಕೆಲಸವನ್ನು ನಾನು ಮಾಡಿದ್ದೇನೆ, ನನ್ನ ಸರ್ಕಾರ ಮಾಡಿದೆ ಎಂದು ದಿನಕರ್‌ರನ್ನು ಡಿಜಿಪಿ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳೇ ಬೆನ್ನು ತಟ್ಟಿಕೊಂಡು ಹೇಳಿದರು. ಆದರೆ ಇವತ್ತು ಅವರೇ ಬರೆದಿದ್ದಾರೆ. ರಾಮಯ್ಯನವರು ಹೇಳುತ್ತಾರೆ ಇವತ್ತು ಅವರ ಮೇಲೆ ಕ್ರಮ ಕೈಗೊಳ್ಳಿ ಅಂತ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಒಂದು ನಿಮಿಷ ಯಿಲ್ಡ್ ಆಗುತ್ತೀರಾ?

Sri Y.K. Ramaiah : Oh, sure.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೇ, ಶ್ರೀಮಾನ್ ವೈ.ಕೆ. ರಾಮಯ್ಯ ನವರು ಮಾತನಾಡುವಾಗ ನಾನು ಹೇಳಿದಂತಹ ಮಾತುಗಳಿಗೆ ಬೇರೆ ಅರ್ಥವನ್ನು ಕೊಡುತ್ತಾ ಇದ್ದಾರೆ. ಆದ್ದರಿಂದ ರೆಕಾರ್ಡ್ಸ್ ಸ್ಟ್ರೆಟ್ ಆಗಬೇಕೆಂಬ ದೃಷ್ಟಿಯಿಂದಾಗಿ, ಜನಗಳಿಗೆ ತಪ್ಪು ಸಂದೇಶ ಹೋಗಬಾರದೆಂಬ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ದಿನಕರ್‌ರವರು ಆ ಪುಸ್ತಕದಲ್ಲಿ ಏನು ಬರೆದಿದ್ದಾರೆ ಅದು ಒಂದು ಭಾಗ. ಅವರ ಬಗ್ಗೆ ನಾನು ಬಹಳ ಗೌರವ ಇಟ್ಟುಕೊಂಡಿರತಕ್ಕವನು. ನನ್ನ ಬಗ್ಗೆಯೂ ಅವರು ಕೆಲವು ವಿಚಾರಗಳನ್ನು ಬರೆದಿದ್ದಾರೆ. ಅದರ ಸತ್ಯಾಸತ್ಯತೆಗಳನ್ನು ತಿಳಿಯತಕ್ಕಂಥಾದ್ದು ಅವಶ್ಯಕ. ಈಗ ಬಹಳ ಮುಖ್ಯವಾಗಿ ಅವರ ಅಭಿಪ್ರಾಯ ಏನೇ ಇರಬಹುದು. ನಾಗಪ್ಪನವರು ಅವರ ಸ್ವಂತ ಅಕ್ಷರದಲ್ಲಿ ಬರೆದಿರುವಂತಹ ಡೈರಿಯಲ್ಲಿ ಮುಖ್ಯಮಂತ್ರಿಗಳಿಂದ ವೈರ್‌ಲೆಸ್ ಬಂದಿದೆ. ಮುಖ್ಯಮಂತ್ರಿಗಳಿಂದ ಟೆಂಟ್ ಬಂದಿದೆ, ಮುಖ್ಯಮಂತ್ರಿಗಳಿಂದ ಭಾನು ಮೂಲಕ 5 ಕೋಟಿ ಬಂದಿದೆ, ಮುಖ್ಯಮಂತ್ರಿಗಳಿಂದ 40 ಕೋಟಿ ಬಂದಿದೆ ಎಂದು ಬರೆದಿದ್ದಾರೆ. ಇದು ಒಂದಾಯಿತು. ಮಾರಡಗಿ ನಾಗಪ್ಪ ಬರೆದಿರತಕ್ಕಂಥ ವಿಚಾರಗಳು ದಿನಕರ್‌ರವರ ಪುಸ್ತಕದಲ್ಲಿ ಬಂದಿರತಕ್ಕಂಥವು ಇವೆಲ್ಲಾ ಮೂರು ಒಂದೇ ತರಹ ಸೇರಿಕೊಳ್ಳುತ್ತವೆ. ಇದನ್ಯಾರೂ ಸೃಷ್ಟಿ ಮಾಡಿ ಪೋಣಿಸಿರತಕ್ಕಂಥ ವಿಚಾರವಲ್ಲ. ಅದಕ್ಕೆ ನಾನೇನು ಹೇಳಿದೆ, ಈ ವಿಧಾನಸಭೆಯ ನಡವಳಿಕೆಗಳ ಪುಸ್ತಕಗಳ ಅಡಿಯಲ್ಲಿ ನಮಗೆ ಅವಕಾಶ ಇದೆ. ಅವರನ್ನು ಕರೆಸಿ ಕೇಳೋಣ.

ಮುಖ್ಯಮಂತ್ರಿಗಳು ಕೊಡಲಿಲ್ಲವೆಂದು ಹೇಳಲಿ. ದಿನಕರ್‌ರವರು ನೀವು ಕೊಟ್ಟಿದ್ದೀರಿ ಎಂದು ಹೇಳಲಿ. ಅವರ ಮೇಲೆ ಅಫೆನ್ಸ್. ಅವರು ಡಿ.ಜಿ ಆಫ್ ಪೊಲೀಸ್ ಆಗಿದ್ದರು. ಅವರ ಮುಂದೆ ಕಳ್ಳ ದುಡ್ಡು ಹೋಯಿತು. ಅವರ್‍ಯಾಕೆ ಆ್ಯಕ್ಷನನ್ನು ತೆಗೆದುಕೊಳ್ಳಲಿಲ್ಲ, ಅದು ಒಂದು ಭಾಗ. At least he has got the courage of writing it. ಸತ್ಯ ಹೊರಗಡೆ ಬರುವ ದೃಷ್ಟಿಯಿಂದ ಅದಕ್ಕೋಸ್ಕರವಾಗಿ ನಾನು ಹೇಳುತ್ತಿರುವುದು ನಿಮಗೆ ಮೆಜಾರಿಟಿ ಇದೆ. ನೀವು ನಾಗಪ್ಪನವರ ಹೆಂಡತಿ ವಿಧವೆಯಾದಳು ಎಂದರೂ ಸಹಿತ ಮೇಜು ತಟ್ಟುತ್ತೀರಿ.

(ಗೊಂದಲ)

ಆದರಿಂದ ನಾವು ಜನತಾ ದಳದವರು ಏಕೆ ಸದನದಿಂದ ಹೊರಗಡೆ ಹೋಗಲಿಲ್ಲವೆಂದರೆ ಬಿಜೆಪಿ ಯವರ ಹಾಗೆ ನಾವು ರಾಜಕೀಯವನ್ನು ಮಾಡುವುದಕ್ಕೆ ಬಯಸುವುದಿಲ್ಲ ಈ ಸದನದಿಂದ ಇಡೀ ರಾಜ್ಯದ ಜನತೆಗೆ ಒಂದು ಸಂದೇಶ ಹೋಗುತ್ತದೆ ನಾನು ಬಹಳ ಕಠಿಣವಾಗಿ ಈ ಮಾತನ್ನು ಹೇಳಿದ್ದೇನೆ. ಮುಖ್ಯಮಂತ್ರಿಗಳು ಇದನ್ನು ಸ್ವೀಕಾರ ಮಾಡಿದ್ದಾರೆ. ಅವರ ರಾಜೀನಾಮೆ, ಇವರ ಮೇಲೆ ಪೊಲೀಸ್ ಕ್ರಮ, ಮತ್ತು ಸಿಬಿಐಗೆ ಕೊಡತಕ್ಕಂಥದ್ದು ಇವುಗಳನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇದನ್ನು ಹೇಳತಕ್ಕಂಥ ಸಂದರ್ಭದಲ್ಲಿ ಮತ್ತೊಂದು ಬೇಡಿಕೆಯನ್ನೂ ಸಹಿತ ನಾನು ಇಟ್ಟಿದ್ದೇನೆ. ನಮ್ಮ ಪಕ್ಷದ ವತಿಯಿಂದಾಗಿ ದಿನಕರ್‌ರವರನ್ನು ಈ ಸಭೆಗೆ ಕರೆಸಿ. ಸತ್ಯಾಸತ್ಯತೆ ಪರೀಕ್ಷೆಗಳನ್ನು ನಾವು ಮಾಡೋಣ. ಅವರು ಕೊಟ್ಟಿದ್ದಾರೋ ಇಲ್ಲವೋ ಎನ್ನುವುದು ಗೊತ್ತಾಗುತ್ತದೆ. ನಿಮ್ಮ ಬಂಡವಾಳವೆಲ್ಲಾ ಹೊರಗಡೆ ಬರುತ್ತದೆ. ನೀವು ಕೊಡಲಿಲ್ಲವೆಂದರೆ ಸ್ಪೀಕರ್ ಚೇಂಬರ್‌ನಲ್ಲಿ ಕರೆಸಿ. ನಾವು ನೋಡಿದ್ದೇವಲ್ಲಾ ಹಿಂದೆ ಮಾನ್ಯ ಅಧ್ಯಕ್ಷರೇ, ಇದೇ ವಿರೇಂದ್ರ ಪಾಟೀಲರು ಪಾರ್ಟಿ ಅಧ್ಯಕ್ಷರಾಗಿದ್ದಂಥ ಸಂದರ್ಭದಲ್ಲಿ ರಾಮಕೃಷ್ಣ ಹೆಗಡೆಯವರು ಟೆಲಿಫೋನನ್ನು ಕದ್ದಾಲಿಸಿದರು ಎಂದು ಹೇಳಿಬಿಟ್ಟು ಆ ಸಂದರ್ಭದಲ್ಲಿ ರಘುರಾಮನ್ ಕಡೆಯಿಂದ ಪತ್ರ ಬರೆಸಿ ತಂದಿರತಕ್ಕ ಉದಾಹರಣೆಗಳು ಇವೆ. ಇದರಿಂದ ಕೇವಲ ಸಂಖ್ಯಾಬಲದಿಂದ ನಮಗೆ ಆಧಿಕ ಸಂಖ್ಯಾಬಲ ಇದೆ ಎಂದು ಹೇಳಿ ನಮ್ಮ ಬಾಯಿ ಮುಚ್ಚಿಸುವುದಕ್ಕೆ ಹೋಗಬೇಡಿ. ನಾನೇನು ಕಳಕಳಿಯಿಂದ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ, ಇನ್ನು ನಿಮ್ಮ ಪಕ್ಷದ ಆಡಳಿತ ಇದೆ. ಇನ್ನು ಎರಡು ವರ್ಷ ಆಡಳಿತ ನಡೆಸಬೇಕು. ಇವೆಲ್ಲಾ ನಮಗೆ ಗೊತ್ತಿದೆ. ನಾನು ಹೇಳತಕ್ಕಂಥದ್ದು, ಆಗಿರತಕ್ಕಂಥ ತಪ್ಪಿಗೆ ನಾಳೆ ಕೃಷ್ಣಾರವರು ರಾಜೀನಾಮೆ ಕೊಟ್ಟ ತಕ್ಷಣವೇ ಕಾಂಗ್ರೆಸ್ ಸರ್ಕಾರವೇನೂ ಹೋಗುವುದಿಲ್ಲ ನಿಮ್ಮಲ್ಲೇ ಬಹಳ ಜನ ಸೂಟು ಬೂಟು ಹೊಲಿಸಿಕೊಂಡು ಹೋಮ ಮಾಡಿಕೊಂಡು ಕಾದಿರತಕ್ಕಂಥ ಜನ ಇದ್ದೀರಿ. ಅವರು ಮುಖ್ಯಮಂತ್ರಿಗಳಾಗಬಹುದು. ಇವೆಲ್ಲಾ ನಮಗೆ ಗೊತ್ತಿಲ್ಲವೇನು?

ಗೊಂದಲ

ಆದ್ದರಿಂದ ಅವರುಗಳು ಹೊಸದಾಗಿ ಗೆದ್ದು ಬಂದಿದ್ದಾರೆ. ಗೊತ್ತಿಲ್ಲ, ಎಳಸು, ಮಾತನಾಡಲಿ ಅವರು. ಮಾನ್ಯ ಉಪಾಧ್ಯಕ್ಷರೇ, ಕೃಷ್ಣಾರವರು ನಾಳೆ ರಾಜೀನಾಮೆಯನ್ನು ಕೊಟ್ಟರೆ ಕರ್ನಾಟಕ ನಾಡೇನೂ ಮುಳುಗಿ ಹೋಗುವುದಿಲ್ಲ. ಆಕಾಶ, ಭೂಮಿಯೇನೂ ಒಂದಾಗುವುದಿಲ್ಲ. ಬಹಳಷ್ಟು ಜನ ಈಗಗಾಲೇ ಇದ್ದಾರೆ. ಅವರು ಯಾರೋ ಒಬ್ಬರು ಮುಖ್ಯಮಂತ್ರಿಯಾಗುತ್ತಾರೆ.

ದಕ್ಷರಾಗಿರತಕ್ಕಂಥವರು ಮುಖ್ಯಮಂತ್ರಿಗಳಾಗುತ್ತಾರೆ. ನನ್ನ ಸ್ನೇಹಿತರು ಪರಮಾಪ್ತ ಮಿತ್ರರಾಗಿರತಕ್ಕ ಶ್ರೀಮಾನ್ ವೈ.ಕೆ. ರಾಮಯ್ಯನವರು ಏನು ಹೇಳಿದ್ದಾರೆ. ಇನ್ನೊಬ್ಬರು ಪರಿಮಳ ನಾಗಪ್ಪ ತರಹ ಆಗಬಾರದು ಎನ್ನತಕ್ಕಂಥದ್ದು ಏನು ಹೇಳಿದ್ದಾರೆ. ಅವರು ಬಾಯಿ ತಪ್ಪಿ ಹಾಗೆ ಎಂದು ನಾನು ಈಗಲೂ ಹಾಗೆ ತಿಳಿದುಕೊಂಡಿದ್ದೇನೆ. ಅವರು ನಮ್ಮ ಜೊತೆಯಲ್ಲಿದ್ದವರು. ಅವರು ನಾಗಪ್ಪನವರ ಒಳ್ಳೆಯ ಸ್ನೇಹಿತರು ಪರಿಮಳ ನಾಗಪ್ಪ ಅವರು ಸಹೋದರಿ ಇದ್ದಹಾಗೆ. ಅವರು ಖಂಡಿತವಾಗಿಯೂ ಕೆಟ್ಟದ್ದನ್ನೂ ಬಯಸುವುದಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಅವರ ಹೃದಯ ಈ ಸರ್ಕಾರದಷ್ಟು ಕಠಿಣವಾದ ಹೃದಯವಲ್ಲ ಎಂದು ಸಹಿತ ನಾನು ತಿಳಿದುಕೊಂಡಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಿಂಧ್ಯಾರವರು ವಿಷಯಾಂತರಿಸಿಬಿಟ್ಟಿದ್ದಾರೆ. ಸಂಪೂರ್ಣವಾಗಿ ಈ ಚರ್ಚೆಯನ್ನು ರಾಜಕೀಯಕರಣಗೊಳಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಬಿಜೆಪಿಯವರಾದರೂ ಸದನದಿಂದ ಹೊರಗಡೆ ಹೋದರು. ನೀವು ಅಪರಾಧ ಮಾಡಿದ್ದೀರಿ. ರಾಜೀನಾಮೆ ಕೊಡಿ ಎಂದರೆ ಯಾರು ನಿರ್ಣಯವನ್ನು ಕೊಡುವವರು? ನಿರ್ಣಯ ಮಾಡುವವರು ಯಾರು? ಅಪರಾಧಿಗಳು ಹೌದು ಅಲ್ಲ ಎಂದು ನಿರ್ಣಯ ಮಾಡುವವರು ಯಾರು? ಇದಕ್ಕಾಗಿಯೇ ನಾವು ನ್ಯಾಯಾಂಗ ತನಿಖೆಗೆ ಆದೇಶ ಮಾಡಿರತಕ್ಕಂಥದ್ದು ನಿರ್ಣಯ ಬರುವ ತನಕ ಕಾಯದೆ..

ಗೊಂದಲ

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಕೇಳಿದ್ದೇನು?

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಹೋಂ ಮಿನಿಸ್ಟರ್ ಆಗಿದ್ದವರು. ಸಾಕಷ್ಟು ಇನ್‌ಫರ್ಮೇಷನನ್ನು ಇಟ್ಟುಕೊಂಡು ....

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಸಾಕಷ್ಟು information ನ್ನು ಇಟ್ಟುಕೊಂಡೇ ಜವಾಬ್ದಾರಿಯಿಂದ ಮಾತನಾಡಿದ್ದೇನೆ. ಬೇಕಾದಷ್ಟು ವಿಷಯಗಳನ್ನು ರಾಜ್ಯದ ಹಿತದೃಷ್ಟಿಯಿಂದಾಗಿ ನುಂಗಿದ್ದೇನೆ.

ಶ್ರೀ ಡಿ.ವಿ. ಚಂದ್ರೇಗೌಡ : ನೀವು ವಿಷಕಂಠನಾಗುವುದಕ್ಕೆ ಪ್ರಯತ್ನ ಮಾಡಬೇಡಿ. ನೀಲಕಂಠನಾಗುವುದಕ್ಕೆ ಪ್ರಯತ್ನ ಮಾಡಿ. ಅದು ಬೇರೆ ಪ್ರಶ್ನೆ. ಪರೀಕ್ಷೆ ಮಾಡುವುದಕ್ಕೆ ಹೋಮ ಮಾಡುತ್ತಾರೋ, ಹವನ ಮಾಡುತ್ತಾರೋ ಯಾರ್‍ಯಾರು ಏನೇನು ಮಾಡುತ್ತಾರೋ ಅದು ಬೇರೆ. ಆದರೆ ಸರ್ಕಾರ ಅಪರಾಧ ಮಾಡಿದೆ, ಅದಕ್ಕಾಗಿ ರಾಜೀನಾಮೆ ಕೊಡಿ ಎಂದರೆ ಯಾವುದು ಅಪರಾಧ? ಏನು ಅಪರಾಧ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಕಾವೇರಿ ವಿಚಾರ ಚರ್ಚೆಯಾಗುವಾಗ ಯಾರ್‍ಯಾರು ಹೋಮ ಮಾಡಿಸಿದ್ದರು, ಯಾರ್‍ಯಾರು ಸೂಟು ಹಾಕಿಕೊಂಡಿದ್ದರು, ಯಾರ್‍ಯಾರ ವರ್ತನೆಗಳು ಹೇಗಿತ್ತು ಎಂಬುದೆಲ್ಲಾ ನಮಗೆಲ್ಲಾ ಗೊತ್ತಿದೆ, ಹೇಳೋಣ. ಈಗ ನಾಗಪ್ಪನವರ ಮನೆಯವರಿಗೆ ಬದುಕಿರುವವರಿಗೆ ದಯವಿಟ್ಟು ಅವಮಾನ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಸಂಖ್ಯಾಬಲ ಇದೆ ಎಂದು ಹೇಳಿ ನಮಗೆ ಪದೇ ಪದೇ ನೀವು ಹೇಳುತ್ತೀರಿ. ನಿಮಗೆ ಗಂಟಲಿನ ಬಲ ಇದೆ ಎಂದು ಹೇಳಿ ನಮಗೆ ಗದಾಪ್ರಹಾರ ಮಾಡುವುದಕ್ಕಾಗುವುದಿಲ್ಲ. ನ್ಯಾಯ ನಿರ್ಣಯ ಒಂದು ಕಾಲಕ್ಕೆ ಆಗುತ್ತದೆ. ಆ ನಿರ್ಣಯಕ್ಕಾಗಿ

ಕಾಯೋಣ. ಆದರೆ ಈಗ ನಾನು ಹೇಳಿದೆ ಎಂದು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದಕ್ಕೆ ಹೋಗಬೇಡಿ. ಯಾರೂ ಇದರಲ್ಲಿ ರಾಜಕಾರಣ ಮಾಡುವುದಕ್ಕೆ ಇದರಲ್ಲಿ ಪ್ರಯತ್ನ ಮಾಡಿಲ್ಲ. ನಿಮಗಿಂತಲೂ ಹೆಚ್ಚು ಕಳಕಳಿ, ದುಃಖ ನಾವು ಅನುಭವಿಸಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಕನಿಷ್ಟ ಪಕ್ಷ ಅವರ ಮನೆಗೆ ಹೋಗಿದ್ದೀರಾ? ಒಂದು ದೂರವಾಣಿ ಮೂಲಕ ಮಾತನಾಡಿದ್ದೀರಾ ನೀವು ನಿಮ್ಮ ಮುಖ್ಯಮಂತ್ರಿಗಳು. ಒಂದು ಪತ್ರವನ್ನು ಬರೆದಿಲ್ಲವಲೀ ನೀವು.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಹೇಳಿದ್ದೇ ಸತ್ಯವೋ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಹೌದು, ನಾನು ಹೇಳಿದ್ದೇ ಸತ್ಯ.

ಶ್ರೀ ಡಿ.ಬಿ. ಚಂದ್ರೇಗೌಡ : ಆಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಸುಳ್ಳು ಹೇಳಿದರೆ ನನ್ನನ್ನು ನೀವು ಜೈಲಿಗೆ ಹಾಕಿ. ಪ್ರಿವಿಲೇಜ್ ಮೂವ್ ಮಾಡ್ರೀ.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಸುಳ್ಳು ಹೇಳಿದರೆ ಜನರೂ ನಮಗೂ ಶಿಕ್ಷೆಯನ್ನು ಕೊಡುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಜನ ಅಲ್ಲ, ನಾನು ಹೇಳುತ್ತಿದ್ದೇನೆ, ಇದುವರೆಗೂ ಪರಿಮಳ ನಾಗಪ್ಪನವರೊಂದಿಗಾಗಲೀ, ಅವರ ಕುಟುಂಬ ವರ್ಗದರೊಂದಿಗಾಗಲೀ, ಮಾತನಾಡತಕ್ಕ ಸೌಜನ್ಯತೆಯನ್ನು, ಕರುಣೆಯನ್ನು ತೋರಿಸಿಲ್ಲ. ನಿಮಗೆ ಮುಖ ಇಲ್ಲ, ಭಯ ಇದೆ ಎಂದು ನೂರು ಸಾರಿ ನಾನು ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಉತ್ತರ ಹೇಳುವಾಗ ಇವೆಲ್ಲವನ್ನೂ ಹೇಳುತ್ತೇವೆ. ಸ್ವಲ್ಪ ಕಾಯಬೇಕು. ನೀವೊಬ್ಬರೇ ಮಾತನಾಡುತ್ತಿರುವುದು, ನಾವೆಲ್ಲರೂ ಕುಳಿತುಕೊಂಡು ಕೇಳುತ್ತಿರುವುದು ಎಂದರೆ ಹೇಗೆ? ಏಕೋ ಇವತ್ತು ಸ್ವಲ್ಪ ಗಾಡಿ ಹಳಿ ತಪ್ಪುತ್ತಿದೆ.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಉಪಾಧ್ಯಕ್ಷರೇ, ಸರ್ಕಾರದ ವೈಫಲ್ಯತೆಗಳು, ರಾಜಕಾರಣದ ಬಗ್ಗೆ ಯಾರು ಎಷ್ಟು ಬೇಕಾದರೂ ಮಾತನಾಡಲಿ. ಸರ್ಕಾರದ ಅಭಿವೃದ್ಧಿಯ ವಿಫಲತೆ ಬಗ್ಗೆ ಅವರು ಎಷ್ಟಾದರೂ ಮಾತನಾಡಲಿ. ನಾನು ಆ ವಿಷಯವನ್ನು ಪ್ರಸ್ತಾಪ ಮಾಡುವುದಿಲ್ಲ. ಆದರೆ ನನ್ನ ಸ್ನೇಹಿತರು ರೆಕಾರ್ಡ್‌ನ್ನು straight ಮಾಡಿದ ರೀತಿಯಲ್ಲಿ ನಾನು ಒಂದು ವಿಷಯವನ್ನು ರೆಕಾರ್ಡ್‌ನ್ನು straight ಮಾಡಬೇಕಾಗುತ್ತದೆ. ಅದು ನಾಗಪ್ಪನವರ ಧರ್ಮಪತ್ನಿ ವಿಷಯದಲ್ಲಿ ಅವರ ವಿಷಯವನ್ನು ಪ್ರಸ್ತಾಪ ಮಾಡಿ ಚಪ್ಪಾಳೆ ತಟ್ಟಿಸಿಕೊಳ್ಳುತ್ತಾರೆ ಎನ್ನುವಂಥ ವಿಷಯವನ್ನು ದಯಮಾಡಿ ಸ್ನೇಹಿತರು ಆಡುವುದು ಬೇಡ. ನಾನು ಅಷ್ಟು ಕಟುಕನೂ ಅಲ್ಲ. ಅಷ್ಟು ಅಮಾನವೀಯನೂ ಅಲ್ಲ. ಅವರಿಗೆ ಎಷ್ಟು ಅನುಕಂಪ ಇದೆಯೋ ಅಷ್ಟೇ ನಮಗೂ ಇದೆ. ನಾನು ಒಂದು ಮಾತನ್ನು ಹೇಳಿದರೆ ಅವರು ಸಿಟ್ಟಾಗುವುದು ಬೇಡ. ಅವರು ರಾಜಕೀಯ ಉದ್ದೇಶಕ್ಕಾಗಿ ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ, ನಾನು ಪ್ರಾಮಾಣಿಕವಾಗಿದ್ದೇನೆ. ಇದರಲ್ಲಿ ಅಷ್ಟೇ ವ್ಯತ್ಯಾಸ. ಮಾತನಾಡಬೇಕೆಂದರೆ ನನಗೂ ಮಾತನಾಡುವುದಕ್ಕೆ ಬರುತ್ತದೆ. ನಾನು ಪರಿಮಳ ನಾಗಪ್ಪನವರ ಹೆಸರನ್ನು ಉಪಯೋಗಿಸಿಕೊಂಡು ಚಪ್ಪಾಳೆ ತಟ್ಟಿಸಿಕೊಳ್ಳುವುದಕ್ಕೆ

ಒಬ್ಬ ಅಯೋಗ್ಯನೇ ಸ್ವಾಮಿ ನಾನು? ನನಗೆ ಗೊತ್ತಿದೆ, ಯಾರ್‍ಯಾರು ಅವರ ಹೆಸರನ್ನು ಉಪಯೋಗಿಸಿಕೊಂಡು ರಾಜಕೀಯ ಮಾಡುತ್ತಿದ್ದಾರೆಂದು ಯಾರ್‍ಯಾರು ಅವರನ್ನು ಮುಂದಿನ ಚುನಾವಣೆಗೆ ಅಭ್ಯರ್ಥಿಯನ್ನಾಗಿ ಮಾಡುವುದಕ್ಕೆ ಹೋಗುತ್ತಿದ್ದಾರೆಂಬುದು ನನಗೆ ಗೊತ್ತಿದೆ. ಇವರು ನನಗೆ ಹೇಳುವುದೇ? ಹೇಳಿ ಸ್ವಾಮಿ, ಪ್ರಾಮಾಣಿಕವಾಗಿ ಹೇಳಿ. ಬೆಂಕಿ ಕಾಯಿಸಿಕೊಳ್ಳುವ ಒಬ್ಬ ಅಯೋಗ್ಯನೇ ನಾನು ಆ ಕೆಲಸವನ್ನು ಯಾರು ಮಾಡುತ್ತಿದ್ದಾರೆಂಬುದು ನನಗೆ ಗೊತ್ತಿದೆ. ಆ ದೇವರು ಇದ್ದರೆ ದೇವರಿಗೂ ಗೊತ್ತಿದೆ. ಕರ್ನಾಟಕದ ಎಲ್ಲಾ ಜನರಿಗೂ ಗೊತ್ತಾಗುತ್ತಿದೆ, ಯಾರು ಬೆಂಕಿ ಕಾಯಿಸಿಕೊಳ್ಳುತ್ತಿದ್ದಾರೆಂದು. ನಾಗಪ್ಪನವರ ದುರ್ಮರಮಣ ಬೆಂಕಿಯಲ್ಲಿ ಯಾರು ಮೈ ಕಾಯಿಸಿಕೊಳ್ಳುತ್ತಿದ್ದಾರೆಂಬುದು ಎಲ್ಲರಿಗೂ ಗೊತ್ತಿದೆ. ನಾನಂತೂ ಅಲ್ಲ. ಸರ್ಕಾರಗಳು ಹೋಗುತ್ತವೆ, ಸರ್ಕಾರಗಳು ಬರುತ್ತವೆ, ಪಕ್ಷಗಳು ಹುಟ್ಟುತ್ತವೆ. ಹುಟ್ಟುತ್ತಿದ್ದಾವೆ. ಪಕ್ಷಗಳು ಹೋಗುತ್ತವೆ. ವ್ಯಕ್ತಿ ಬರುತ್ತಾರೆ. ವ್ಯಕ್ತಿಗಳು ಹೋಗುತ್ತಿರುತ್ತಾರೆ. ಅದರ ಬಗ್ಗೆ ನಾನು ಮಾತನಾಡುವುದು ಬೇಡ. ಆದರೆ ಆ ಒಂದು ಕುಟುಂಬದ ದುಃಖದ ಸನ್ನಿವೇಶವನ್ನು ಅರ್ಥಮಾಡಿಕೊಳ್ಳದೇ ಇರುವ ಅಯೋಗ್ಯ ನಾನಲ್ಲ. ಅದಕ್ಕೆ ಚಪ್ಪಾಳೆ ತಟ್ಟಿಸಿಕೊಳ್ಳುವ ಅಯೋಗ್ಯನೂ ನಾನಲ್ಲ ಎಂದು ನನ್ನ ಸ್ನೇಹಿತರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೊಂದು ಅನುಮಾನದ ಸುಳಿ.

ಶ್ರೀ ಸಿ. ಚನ್ನಿಗಪ್ಪ : ನಮ್ಮ ಹಿರಿಯ ನಾಯಕರು ಹೇಳುತ್ತಾರೆ, ಪಕ್ಷಗಳು ಬರುತ್ತವೆ, ಹೋಗುತ್ತವೆ ಎಂದು ....

ಗೊಂದಲ

ಒಬ್ಬ ಮಾನ್ಯ ಸದಸ್ಯರು : ಆ ರೀತಿ ಕೀಳು ಮಟ್ಟದ ರಾಜಕೀಯವನ್ನು ನಾವು ಮಾಡುವುದಿಲ್ಲ.

ಗೊಂದಲ

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಮಾನ್ಯ ಉಪಾಧ್ಯಕ್ಷರೇ, ಹೊಸ ಪಕ್ಷಗಳು ಆಗುತ್ತವೆ ಇಲ್ಲವೆಂದು ಹೇಳುವುದಿಲ್ಲ. ಪಕ್ಷಗಳ ಬಗ್ಗೆ ರಾಮಯ್ಯನವರು ಹೇಳಿದರು. ಆಯಾ ರಾಮಯ್ಯ ಗಯಾ ರಾಮಯ್ಯ ಎಂದು, ಹೋಗುತ್ತಲೇ ಇರುತ್ತಾರೆ, ಬರುತ್ತಲೇ ಇರುತ್ತಾರೆ. ಪಕ್ಷಗಳು ಆಗುತ್ತಲೇ ಇರುತ್ತವೆ. ಅಂಥವರು ಇರುತ್ತಾರೆ, ಅದಕ್ಕೇನು ಮಾಡುವುದಕ್ಕಾಗುತ್ತದೆ?

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಸನ್ಮಾನ್ಯ ಗೌರವಾನ್ವಿತ ಸದಸ್ಯರಾದಂಥ ಶ್ರೀನಿವಾಸ ಗೌಡರಿಂದ ಪಾಠ ಕಲಿಯುವುದೂ ಇಲ್ಲ, ನೀತಿ ಕಲಿಯುವುದೂ ಇಲ್ಲ, ರಾಜಕೀಯ ಕಲಿಯುವುದೂ ಇಲ್ಲ, ಅವರ ಬಗ್ಗೆ ಗೌರವ ಇದೆ. ಅವರು ದಯಮಾಡಿ ಮಾತನಾಡುವುದು ಬೇಡ ಎಂದು ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಚಪ್ಪಾಳೆಯನ್ನು ಏತಕ್ಕೆ ತಟ್ಟಿದರು ಸ್ವಾಮಿ? ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ತಾವು ಒಪ್ಪಿಕೊಳ್ಳುತ್ತೀರಾ? ಆ ವಿಫಲತೆಗೆ ನೀವು ನಿಮ್ಮ ಪಕ್ಷವೂ ಕಾರಣವಾಗಿದೆ. ಎಂದಾಗ ಚಪ್ಪಾಳೆ ತಟ್ಟಿದೆವು. ಪರಿಮಳ ನಾಗಪ್ಪನವರ ವಿಷಯ ತಂದಾಗ ಅಲ್ಲ. ಕೇಂದ್ರ ಸರ್ಕಾರ ಯಾವ

ವಿಚಾರದಲ್ಲಿ ವಿಫಲ ಆಗಿದೆಯೋ. ಆ ವಿಫಲವಾದ ಸರ್ಕಾರದಲ್ಲಿ ನೀವೂ ಭಾಗಸ್ಥರು ಎಂದು ಹೇಳಿದಾಗ ಚಪ್ಪಾಳೆ ತಟ್ಟಿದೆವು.

ಸನ್ಮಾನ್ಯ ಅಧ್ಯಕ್ಷರೆ. ಆ ವಿಷಯವನ್ನು ಅಲ್ಲಿಗೇ ಬಿಡುತ್ತೇನೆ. ನನಗೆ ಬೇಕಾಗಿರುವುದು ಸತ್ಯ. ವಿರೋಧ ಪಕ್ಷದ ನಾಯಕರೂ ಸೇರಿದ ಹಾಗೆ ವಿರೋಧಪಕ್ಷದವರು ಸರ್ವ ಪಕ್ಷಗಳು ಸಭೆಯಲ್ಲಿ ಕೆಲವು ಸಲಹೆಗಳನ್ನು ಕೊಟ್ಟರು, ನಾವು ಕೊಟ್ಟಂತಹ ಸಲಹೆಗಳನ್ನು ನೀವು ತಿರಸ್ಕಾರ ಮಾಡಿದಿರಿ ಎಂದು ಹೇಳುತ್ತಾರೆ. ಇವರು ಕೊಟ್ಟಂತಹ ಸಲಹೆಗಳು ಏನು ಎಂದು ಇವರು ಹೇಳಬೇಕು. ಅದನ್ನು ಏಕೆ ತಿರಸ್ಕಾರ ಮಾಡಿದ್ದಾರೆ ಎಂಬುದನ್ನು ಸರ್ಕಾರದವರು ಹೇಳಬೇಕು. ಈ ಸದನ ಅದನ್ನು ನೋಡಬೇಕು. I demand both sides.ಮಾನ್ಯ ವಿರೋಧ ಪಕ್ಷದ ನನ್ನ ಸ್ನೇಹಿತರುಗಳು ಕೊಟ್ಟಂತಹ ಸಲಹೆ ಏನು? ಇದು ಸಮರ್ಪಕವಾಗಿ ಇತ್ತಾ? ನಾಗಪ್ಪನವರು ಜೀವನನ್ನು ಉಳಿಸಲಿಕ್ಕೆ ಅದು ಸಮರ್ಪವಾಗಿತ್ತಾ? ವೀರಪ್ಪನ್ ಅನ್ನು ಹಿಡಿದು ತರುವುದಕ್ಕೆ ಅದು ಸಹಕಾರಿ ಆಗಿತ್ತಾ? ಅವರ ಸಲಹೆ ಸರಿಯಿದ್ದರೆ ಇದ್ದಿದ್ದರೆ ನಾವು ಬೇಕಾದರೆ ಅವರಿಗೆ ಶರಣಾಗಬಹುದು. ಅವರ ಸಲಹೆಯನ್ನು ಸರ್ಕಾರ ಏಕೆ ತಿರಸ್ಕಾರ ಮಾಡಿತು ಯಾವ ಕಾರಣಕ್ಕಾಗಿ ತಿರಸ್ಕಾರ ಮಾಡಿದರು ಎಂದು, ಇವೆರಡಕ್ಕೂ ಸರ್ಕಾರದವರೂ ಉತ್ತರ ಕೊಡಬೇಕು-ಎಂದು ನಾನು ಪ್ರಾರ್ಥನೆ ಮಾಡುತ್ತೇನೆ. ಏಕೆಂದರೆ ಸರ್ಕಾರದವರು ಅನೇಕ ಸಂದರ್ಭಗಳಲ್ಲಿ ನನಗೆ ತಿಳಿದ ಮಟ್ಟಿಗೆ ವಿರೋಧ ಪಕ್ಷದವರು ಎಸ್‌ಟಿಎಫ್‌ನ ಆಪರೇಷನ್ ಅನ್ನು ನಿಲ್ಲಿಸಿ ಎಂದು ಹೇಳಿದ ಕಾರಣಕ್ಕಾಗಿ ನಾಗಪ್ಪನವರನ್ನು ಬಿಡಿಸಿಕೊಂಡು ಬರಲಿಕ್ಕೆ ಆಗಲಿಲ್ಲ ಎಂದು ಅವರವಾದ ಇದೆ, ಅದು ಸರಿಯೇ ಎಂದು ಬೇರೆ ವಿರೋಧ ಪಕ್ಷದವರು ಹೇಳಲಿ.ನಾವು ಸದಸ್ಯರು ಸ್ವಾಮಿ.I am not the part of the government.

ಅವರು ಏನು ಹೇಳಿದ್ದಾರೆಂದು ಗೊತ್ತಾಗಬೇಕು. ಇವರು ಏನು ಹೇಳಿದ್ದಾರೆ ಎಂಬುದೂ ಗೊತ್ತಾಗಬೇಕು. ಅದಕ್ಕೆ ಎಸ್‌ಟಿಎಫ್‌ನವರ ಆಪರೇಷನ್ ಅನ್ನು ನಿಲ್ಲಿಸಿ ಎಂದು ನಾಗಪ್ಪನವರ ಧರ್ಮಪತ್ನಿಯವರು ಉಪವಾಸ ಸತ್ಯಾಗ್ರಹ ಮಾಡಿದ್ದನ್ನು ನಾನು ಪೇಪರ್‌ನಲ್ಲಿ ಓದಿದ್ದೇನೆ. ಇದು ಸೂರ್ಯ ಚಂದ್ರರಷ್ಟೇ ಸತ್ಯವಾದದ್ದು. ಆಪರೇಷನ್ ಅನ್ನು ನಿಲ್ಲಿಸಬೇಕು ಎಂದು ವಿರೋಧ ಪಕ್ಷದವರು ಸರ್ಕಾರದ ಮೇಲೆ ಒತ್ತಾಯ ತಂದಿರುವುದನ್ನು ನಾನು ಓದಿದ್ದೇನೆ. ಇವತ್ತು ಸರ್ಕಾರದವರು ಒಂದು ಕಡೆ ಹೇಳುತ್ತಾರೆ. ಅವರು ಒತ್ತಾಯವನ್ನು ತಂದ ಕಾರಣಕ್ಕಾಗಿ ನಾವು ಆಪರೇಷನ್ ಅನ್ನು ನಿಲ್ಲಿಸಿದೆವು ಎಂದು.ನಾವು ಆ ಕಾರಣದಿಂದ ನಾಗಪ್ಪನವರನ್ನು ಬಿಡಿಸಿಕೊಂಡು ಬರಲಿಕ್ಕೆ ಆಗಲಿಲ್ಲ ಎಂದು ಅವರು ವಾದ ಮಾಡುತ್ತಾರೆ. ಇದರಲ್ಲಿ ಯೊವುದು ಸತ್ಯ ಎಂಬುದು ಗೊತ್ತಾಗಬೇಕಾಗಿದೆ. ಆದಕ್ಕಾಗಿ ನೀವು ಕೊಟ್ಟಂತಹ ಸಲಹೆ ಏನು? ಸರ್ಕಾರದವರು ಏಕೆ ತಿರಸ್ಕಾರ ಮಾಡಿದರು ಎಂಬ ಬಗ್ಗೆ ಸದನಕ್ಕೆ ಮಾಹಿತಿ ಬೇಕಾಗಿದೆ, ಸ್ವಾಮಿ. ಮತ್ತೆ ಬೆಳಿಗ್ಗೆಯಿಂದ ಒಂದೇ ಸಮನೆ. ಸರ್ಕಾರ ಕ್ಷಮೆ ಕೇಳುವಷ್ಟು ಕನಿಷ್ಟ ಮಾನವೀಯತೆಯನ್ನು ತೋರಲಿಲ್ಲ ಎಂಬ ವಾದ ಬಂತು. ಏತಕ್ಕಾಗಿ ಕ್ಷಮೆ ಕೇಳಬೇಕು? ಅಲಕ್ಷಕ್ಕೂ ಅಪರಾಧಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ಸರ್ಕಾರ ಅಲಕ್ಷ್ಯ ಮಾಡಿದೆ ಎಂಬುದು ಅವರ ವಾದ. ನಾಗಪ್ಪನವರನ್ನು ಬಿಡಿಸುವುದರಲ್ಲಿ,

ವೀರಪ್ಪನ್‌ನನ್ನು ಹಿಡಿಯುವುದರಲ್ಲಿ ಅಲಕ್ಷ್ಯ ಮಾಡಿದ್ದೀರಿ ಎಂಬುದು ಅವರ ವಾದ ಅಪರಾಧ ಮಾಡಿದ್ದರೆ ಕ್ಷಮೆ ಕೇಳಬಹುದಿತ್ತು. ಎಲ್ಲಾದರೂ ಅಪರಾಧ ಮಾಡಿ ಕ್ಷಮೆ ಕೇಳುವಂತಹದನ್ನು ಸರ್ಕಾರವಾಗಲೀ ಅಥವಾ ಆಡಳಿತ ಪಕ್ಷವಾಗಲೀ ಏನು ಮಾಡಿದೆ? ಅಲಕ್ಷ್ಯ ಮಾಡಿದ್ದರೆ. ಅದನ್ನು ಸಾಬೀತು ಮಾಡಲಿ. ಅಲಕ್ಷ್ಯ ಮಾಡಿದ್ದರೆ ಸರ್ಕಾರದವರು ತಿದ್ದಿ ಕೊಳ್ಳುತ್ತಾರೆ. ಆದರೆ ಅಪರಾಧ ಮಾಡಿಲ್ಲವಲ್ಲ ಕ್ಷಮೆ ಕೇಳಲು. ಯಾರ ಕ್ಷಮೆಯನ್ನೂ ಕೇಳಕ್ಕೆ ಈ ಸರ್ಕಾರ ತಪ್ಪೂ ಮಾಡಿಲ್ಲ. ಅವರ ಕ್ಷಮೆ ಕೇಳಲಿಕ್ಕೂ ಅವಕಾಶ ಇಲ್ಲ. ಅಲಕ್ಷ್ಯಮಾಡಿದ್ದರೆ ಅಲಕ್ಷ್ಯಕ್ಕೆ ಬೆಲೆಯನ್ನು ತೆರಬೇಕಾಗುತ್ತದೆ.ಇಡೀ ವಿಷಯವನ್ನು ಸಮಗ್ರವಾಗಿ ನಾವು ಆಲೋಚನೆ ಮಾಡಿದಾಗ ಮಾನ್ಯ ವಿರೋಧ ಪಕ್ಷದ ಸ್ನೇಹಿತರು ವಾದ ಮಾಡಿರುವ ತರಹ ನಾಗಪ್ಪನವರ ಕೊಲೆ ಆಗಿರುವುದು ನಿಜ. ವೀರಪ್ಪನ್ ಅನ್ನು ಹಿಡಿಯುವುದಕ್ಕೆ ಆಗದಿರುವುದೂ ನಿಜ. ಏಕೆ ನಾಗಪ್ಪನವರನ್ನು ಬಿಡಿಸಿಕೊಂಡು ಬರಲಿಕ್ಕೆ ಆಗಲಿಲ್ಲ? ಮುಂದಾದರೂ ಕೂಡ ಇಂತಹ ಅಕೃತ್ಯಗಳು ನಡೆಯದ ಹಾಗೆ ವೀರಪ್ಪನ್ ಅನ್ನು ಹಿಡಿಯಲಿಕ್ಕೆ ಏನು ಮಾಡಬೇಕು ಎನ್ನುವುದರ ಬಗ್ಗೆ ಅರ್ಥ ಪೂರ್ಣವಾದಂತಹ ಚರ್ಚೆ ಆಗಬೇಕಾಗುತ್ತದೆ. ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ನಾವು ಸಿದ್ಧರಿದ್ದೇವೆ. ನಾನು ಸಿದ್ಧತೆ ಇದೇನೆ. ಇಷ್ಟಲ್ಲಾ ಆದರೂ ಕೊಡ, ಇಷ್ಟು ಹೊತ್ತು ಚರ್ಚೆ ಮಾಡಿದರೂ ಕೂಡ ಒಬ್ಬ ವ್ಯಕ್ತಿಯನ್ನು ಹಿಡಿಯಲಿಕ್ಕೆ ಈ ಸರ್ಕಾರದಿಂದ ಏಕೆ ಸಾಧ್ಯವಾಗಲಿಲ್ಲ? ಶಕೀಲ್ ಅಹಮದ್ ಅವರ ಮಗನನ್ನು ಕೊಂದ ದಿವಸ ಇಂತಹ ಒಂದು ವಾತಾವರಣ ಏನೂ ಸೃಷ್ಟಿ ಆಗಿರಲಿಲ್ಲ. ಸೀನಿಯರ್ ಫಾರೆಸ್ಟ್ ಆಫೀಸರ್ ಶ್ರೀನಿವಾಸ್ ಅವರನ್ನು ವೀರಪ್ಪನ್ ಕೊಂದು ತಲೆ ಕಳುಹಿಸಿ ಕೊಟ್ಟು. ಅವರಿಗೂ ಸಂಬಂಧಿಕರು ಇದ್ದರು. ಅವರಿಗೂ ಬಂಧು ಬಳಗ ಇದ್ದರು. ಅವರಿಗೂ ಅಣ್ಣ ತಮ್ಮಂದಿರು ಇದ್ದರು. ಒಬ್ಬ ಪೊಲೀಸ್ ಸೂಪರಿಂಟೆಡೆಂಟ್ ಅವರನ್ನು ಕೊಂದರು. ಅದಕ್ಕೆ ನಾನು ಹೇಳಿದ್ದು. ವೀರಪ್ಪನ್‌ನನ್ನು ಅವನ ಅಕೃತ್ಯಗಳ ಅಧ್ಯಾಯ ಪ್ರಾರಂಭವಾದದ್ದು ಇವತ್ತಲ್ಲ. ಅವನ ಅಧ್ಯಾಯ ಪ್ರಾರಂಭ ವಾದ ಮೇಲೆ ಇವತ್ತು ಮಾತನಾಡುತ್ತಿರುವಂತಹ ನನ್ನ ಸ್ನೇಹಿತರೂ ಅಧಿಕಾರದಲ್ಲಿದ್ದರು. ಇವತ್ತು ನೀವೇಕೆ ವಿಫಲರಾದಿರಿ ಎಂದು ಕೇಳಿದರೆ. ಅವರಿಗೆ ಸತ್ಯ ಕಹಿ ಇರುತ್ತದೆ. ಅದನ್ನು ಸಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಎಗರಾಡುತ್ತಾರೆ. ಈ ವೀರಪ್ಪನ್ ಅಕೃತ್ಯಗಳ ಅಧ್ಯಾಯ ಪ್ರಾರಂಭ ಆದ ಮೇಲೆ ನನ್ನ ಸ್ನೇಹಿತರೇ ಅಧಿಕಾರದಲ್ಲಿದ್ದರು. ಸಂಬಂಧಪಟ್ಟ ಮಂತ್ರಿಗಳೇ ಅವರಾಗಿದ್ದರು. ಇವತ್ತು ಸರ್ಕಾರವನ್ನು ನೀವೇಕೆ ವಿಫಲರಾಗಿದ್ದೀರಿ ಎಂದು ಕೇಳುವಂತಹ ಸ್ನೇಹಿತರನ್ನು ನಾನು ಕೇಳುತ್ತಿದ್ದೇನೆ. ನೀವೇಕೆ ಅವತ್ತು ಫೇಲ್ ಆದಿರಿ? ವಾದದಿಂದ ಸತ್ಯ ಹೊರಗಡೆ ಬರಬೇಕೇ ಹೊರತು ಆಕ್ರೋಶ ಹೊರಗಡೆ ಬರಬಾರದು ಸ್ವಾಮಿ. ಇದರಲ್ಲಿ ವೈಕ್ತಿಕವಾದದ್ದು ನನ್ನದೇನೂ ಇಲ್ಲ. ವಾದಕ್ಕೆ ವಾದ ಅಷ್ಟೇ.ಅವತ್ತು ನೀವು ಶಕೀಲ್ ಅಹಮದ್ ಅವರ ಮಗನ ಸಾವಿಗೆ ಕ್ಷಮೆ ಕೇಳಿದಿರಾ? ಸಾಂತ್ವನ ಮಾಡಲಿಕ್ಕೆ ಯಾರೂ ಹೋಗಲಿಲ್ಲ. ಇಲ್ಲಿ ಯಾರು ಇದ್ದಾರೋ ಗೊತ್ತಿಲ್ಲ. ಮಾನ್ಯ ಕೆ. ಲಕ್ಕಪ್ಪನವರು ತೀರಿಕೊಂಡಿದ್ದರು. ಕಾಂಗ್ರೆಸ್ ಪಕ್ಷದವರೇ ಮಂತ್ರಿಯಾಗಿದ್ದಂತಹ ಮಂಜೂನಾಥ್ ಅವರು ಅವರ ಹೆಣ ನೋಡುವುದಕ್ಕೆ ಬಂದರು. ವಿರೋಧ ಪಕ್ಷದ ಶಾಸಕ. ತಮ್ಮ ಗಮನಕ್ಕೆ. ನನ್ನ ಸ್ನೇಹಿತರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಲಕ್ಕಪ್ಪನವರ ಮಕ್ಕಳು. ಲಕ್ಕಪ್ಪನವರ ಹೆಣ ನೋಡಲಿಕ್ಕೂ ಕೂಡ ಮಂಜುನಾಥ್ ಅವರನ್ನು

ಬಿಟ್ಟು ಕೊಡಲಿಲ್ಲ ಇದು ನಿಜಸ್ಥಿತಿ. ನಿಜಸ್ಥಿತಿಯನ್ನು ಅರ್ಥ ಮಾಡಿಕೊಂಡು ಪರಿಸ್ಥಿತಿಯನ್ನು ಅರಿವು ಮಾಡಿಕೊಳ್ಳ ಬೇಕು. ಲಕ್ಕಪ್ಪನವರು ಹೃದಯಾಘಾತದಿಂದ ಸತ್ತಿದ್ದು. ಮಂಜುನಾಥ್ ಅವರೇನೂ ಕೊಲ್ಲಿಸಿರಲಿಲ್ಲ ಅಥವಾ ಮಂಜುನಾಥ್ ಅವರು ಯಾವ ರೀತಿಯಲ್ಲೂ ಕಾರಣವಲ್ಲ.ನಮ್ಮ ಜಿಲ್ಲಾ ಮಂತ್ರಿಗಳು ಇದ್ದರೋ ಇಲ್ಲವೋ ಗೊತ್ತಿಲ್ಲ. ಇದೇ ಮುಖ್ಯಮಂತ್ರಿಗಳು ಕೂಡ ಬಂದಿದ್ದರು. ಲಕ್ಕಪ್ಪನವರು ಮುಖವನ್ನು ನೋಡಲಿಕ್ಕೆ ಲಕ್ಕಪ್ಪನವರು ಮಕ್ಕಳುಗಳು ಅವತ್ತು ಬಿಟ್ಟು ಕೊಡಲಿಲ್ಲ ಮಂಜುನಾಥ್ ಅವರಿಗೆ. ಇವರು ಹೋಗಿದ್ದಾರೆ.The entire public atmosphers was emotionally charged, according to me.ನಾನೇನೂ ನೋಡಲಿಕ್ಕೆ ಹೋಗಲಿಲ್ಲ ಸ್ವಾಮಿ. ನಾನು ಸಾಂತ್ವನ ಹೇಳಲು ಹೋಗಲಿಲ್ಲ. ನನಗೆ ಅಷ್ಟೊಂದು ವೈಶಾಲ್ಯತೆ ಇಲ್ಲ. ಇಡೀ ಜನ ಅಲ್ಲಿರುವಂತಹವರು ಪೊಲೀಸ್ ಸ್ಟೇಷನ್‌ನಿಂದ ಹೆಣ ತೆಗೆದುಕೊಂಡು ಬರಲು ಬಿಟ್ಟಿಲ್ಲ.I can understand their emotion.

ಅನೇಕ ವರ್ಷಗಳು ಅವರ ಕಷ್ಟಕ್ಕೆ. ಸುಖಕ್ಕೆ ಅದು ನಿಮಗೂ ಬರಬಹುದು. ನನಗಾದರೂ ಅದೇ ಪರಿಸ್ಥಿತಿ ಬರಬಹುದು. ಕಷ್ಟದಲ್ಲಿ ಸುಖದಲ್ಲಿ ಬೆಂದಂತಹ ಜನ ಅವರ ಸಾವನ್ನು ನೋಡಿ ಅವರು ನಾಗೇಗೌಡರನ್ನೂ ನೋಡುವುದಿಲ್ಲ. ಮುಖ್ಯಮಂತ್ರಿಗಳನ್ನೂ ನೋಡುವುದಿಲ್ಲ. ಬೈರೇಗೌಡ ರನ್ನೂ ನೋಡಲಿಲ್ಲ. ಸಿಂಧ್ಯಾ ಅವರನ್ನು ನೋಡಲಿಲ್ಲ. ಬಾರಿಸಿದರು ಬಹುಶಃ ಆಡಳಿತ ಪಕ್ಷದವರು ಹೋಗಿದ್ದರೆ ಇನ್ನೂ ಚೆನ್ನಾಗಿ ಬಾರಿಸುತ್ತಿದ್ದರು. ಇದು ಇದ್ದಂತಹ ಪರಿಸ್ಥಿತಿ.ಈ ಸತ್ಯವನ್ನು ಮುಚ್ಚಿಕೊಂಡು ಮುಸುಕಿನ ಗುದ್ದಾಟ ಆಡುವುದರಲ್ಲಿ ಏನೂ ಪ್ರಯೋಜನ ಇಲ್ಲ.It does not mean that we don`t have any sympathy for his family. ಇದು ಹೋಗಿದ್ದರೆ ಏನಾಗುತ್ತಿತ್ತು? ಅವರೇ ಹೇಳುತ್ತಿದ್ದರು ಯಾರ ಹತ್ತಿರವೋ ಇನ್ನು ಸ್ವಲ್ಪ ಹೆಚ್ಚು ಕಡಿಮೆ ಆಗಿದ್ದರೆ ಮಾನ್ಯ ಸ್ನೇಹಿತರಾದಂತಹ ಕೃಷ್ಣಮೂರ್ತಿ ಅವರ ಹೆಣ ಬೀಳುತ್ತಿತ್ತು. ಎಂದು ಹೇಳುತ್ತಿದ್ದರು. ಇಲ್ಲಿಂದ ಅಷ್ಟು ಜನ ಹೋಗಿ ಅವರಿಗೂ ಇವರಿಗೂ ಫಿಸ್ಟಿಕಫ್ ಆಗಿ ಇನ್ನೊಂದಷ್ಟು ಜನ ಬೀಳಬೇಕಾಗಿತ್ತಾ?ಆದ್ದರಿಂದ ನಾನು ಇಡೀ ಪ್ರಕರಣದಲ್ಲಿ ನಾಗಪ್ಪನವರನ್ನು ಕಿಡ್ನಾ ್ಯಪ್ ಮಾಡಿಕೊಂಡು ಹೋದ ಘಳಿಗೆಯಿಂದ ಅವರನ್ನು ಬಸ್‌ನಲ್ಲಿ ಹತ್ತಿಸಿ ಕೊಂಡು ಹೋದರು ಎನ್ನುವ ಘಟನೆಯಿಂದ ಅಲ್ಲಿ ಡೈರಿ ಬರೆದಿದ್ದಾರೆ. ಎನ್ನುವ ಘಟನೆಯೂ ಸೇರಿದ ಹಾಗೆ, ನಾನು ಅದನ್ನು ಒತ್ತಿ ಹೇಳುತ್ತೇನೆ. ಅದೂ ಸೇರಿದ ಹಾಗೆ ಅವರ ಸಾವಿನವರೆಗೆ ಒಂದೇ ಸಮಸಂಶಯಾಸ್ಪದ ಸುಳಿಯಲ್ಲೇ ತೇಲಿಕೊಂಡು ಬರುತ್ತೇವೆ ನಾವು. ಯಾವುದರ ಬಗ್ಗೆಯೂ ನಮಗೆ ಹಿಡಿತ ಸಿಗುತ್ತಿಲ್ಲ. ಎಲ್ಲಿಯೂ ನಾವು ತಲೆ ಊರಿ ನಿಲ್ಲುವುದಕ್ಕೆ ಆಗುತ್ತಿಲ್ಲ. ಯಾವುದು ಸತ್ಯ? ಯಾವುದು ಅಸತ್ಯ? ಯಾವುದು ನಿಜ. ಯಾವುದ ನಿಜವಲ್ಲ ಎನ್ನುವುದನ್ನು ಧೃಢೀಕರಿಸಲಿಕ್ಕೆ ಸಾಧ್ಯವಾಗುತ್ತಿಲ್ಲ. ಈ ಹಿನ್ನಲೆಯಲ್ಲಿ ಈ ರಾಜ್ಯ ಸರ್ಕಾರ ಒಂದು ಏನು ತೀರ್ಮಾನವನ್ನು ತೆಗೆದು ಕೊಂಡಿದೆ ಯಸ್. ಸಿಬಿಐನವರೂ ಪೊಲೀಸರೆ. ಕರ್ನಾಟಕ ರಾಜ್ಯದವರೂ ಪೊಲೀಸ್ನವರೇ. ನನ್ನ ಪ್ರಕಾರ. ಆದರಿಂದ ಸರ್ಕಾರ ಜುಡಿಷಿಯಲ್ ಎನ್‌ಕ್ವೈರಿಗೆ ಅಜ್ಞೆ ಮಾಡಿದೆ.The decision to enquire into the matter bya Judicial Officer is a correct decison and the government should stick to it.

ನಾನು ಕೊನೆಯದಾಗಿ ಕೇಳಿಕೊಳ್ಳುತ್ತೇನೆ. ಅದು ವೀರಪ್ಪನ್ ಸಹಚರರ ಒಂದು ಅಕೃತ್ಯ ಏನು ಇದೆ, ಅದಕ್ಕೆ ದೈಹಿಕವಾಗಿ ಅಲ್ಲ. ಮಾನಸಿಕವಾಗಿ ಅದು ರಾಜೇ ಗೌಡರು ಇರಬಹುದು. ನಾನು ಇರಬಹುದು ಯಾರಾದರೂ ಇರಬಹುದು. ವೀರಪ್ಪನ್ ಈ ಅಕೃತ್ಯಗಳಿಗೆ ದೈಹಿಕವಾಗಿ ಅಲ್ಲ. ನೇರವಾಗಿ ಅಲ್ಲ. ಪರೋಕ್ಷವಾಗಿ ಅಲ್ಲ. ಮಾನಸಿಕವಾಗಿಯೂ ಸಹ ಅಂತಹ ಒಬ್ಬ ನರಹಂತನಿಗೆ ಬೆಂಬಲ ಕೊಡುವಂತಹ ಮನಸ್ಸು ಯಾರಿಗಾದರೂ ಇದ್ದರೆ ಅವರು ನಾಶವಾಗಲಿ ಎಂದು ನಾನು ಪ್ರೇಯರ್ ಮಾಡುತ್ತೇನೆ. ಇದು ಅಷ್ಟು ಸುಲಭದ ಕೆಲಸ ಅಲ್ಲ. ಒಬ್ಬ ವ್ಯಕ್ತಿಯ ಪ್ರಶ್ನೆ ಅಲ್ಲ. ಒಂದು ಕುಟುಂಬದ ಪ್ರಶ್ನೆ ಅಲ್ಲ. 182 ಜನರನ್ನು ಅತ ಕೊಂದಿದ್ದಾನೆ ಕೃಪಾಕರ ಸೇನಾನಿಯನ್ನು ಹಿಡಿದುಕೊಂಡು ಹೋದ. ಮಾನ್ಯ ಸಿಂಧ್ಯಾ ಅವರು ಹೇಳಿದ ಹಾಗೆ ಅನೇಕ ವಿಷಯಗಳನ್ನು ನಾವು ಮುಚ್ಚಿಕೊಳ್ಳಬೇಕಾಗುತ್ತದೆ. ಅವರೂ ಮುಚ್ಚಿಕೊಳ್ಳಬೇಕಾಗುತ್ತದೆ. ಏನು ಅವತ್ತು ರಾಜ್ಯದ ಜನರೆಲ್ಲಾ ಹೋಗಿ ಬಿಟ್ಟು ಸರ್ಕಾರವನ್ನು ಕ್ಷಮೆ ಕೇಳಲಿಲ್ಲ. ಫಾರೆಸ್ಟ್ ಆಫೀಸರ್ ಶ್ರೀನಿವಾಸ್ ಅವರ ತಲೆಯನ್ನು ಕಡಿದು ಕಳುಹಿಸಿ ಕೊಟ್ಟು. ಅವತ್ತು ರಾಜ್ಯದಲ್ಲಿ ಇಂತಹದೇ ಕ್ಷುಬ್ದಪರಿಸ್ಥಿತಿ ಏನೂ ಪ್ರಾರಂಭವಾಗಿರಲಿಲ್ಲ. ಆದರೂ ಕೂಡ ಅವತ್ತು ಆಗಲಿಲ್ಲ. ಇವತ್ತು ಏಕೆ ಆಗಿದೆ ಎಂದು ನಾನು ಕೇಳುವುದಕ್ಕೆ ಇಚ್ಛಿಪಡುವುದಿಲ್ಲ. ರಾಜ್‌ಕುಮಾರ್ ಅವರನ್ನು ಹಿಡಿದುಕೊಂಡು ಹೋದ ಸಂದರ್ಭದಲ್ಲಿ ನಡೆದು ಕೊಂಡಂತೆ ಸರ್ಕಾರ ನಾಗಪ್ಪನವರು ವಿಷಯದಲ್ಲಿ ನಡೆದುಕೊಳ್ಳಲಿಲ್ಲ ಎಂದು ಮತ್ತೊಂದು ಬಹಳ ಗಂಭೀರವಾದಂತಹ ಅಪವಾದ ಸರ್ಕಾರದ ಮೇಲೆ ಬಂದಿದೆ. Rajkumar is Rajkumar. Nagappa is Nagappa.

ಅವತ್ತು ಇದ್ದಂತಹ ಪರಿಸ್ಥಿತಿಯೇ ಬೇರೆ. ಅವತ್ತು ಇದ್ದಂತಹ ಸನ್ನಿವೇಶವೇ ಬೇರೆ. ಅವತ್ತು ರಾಜ್‌ಕುಮಾರ್ ಅವರಿಗೆ ಬಹಳ ಸಹಾಯವಾದದ್ದು ಯಾವುದು ಗೊತ್ತಾ? ತಮಿಳುನಾಡಿನಲ್ಲಿ ಅವರಿಗೆ ಇದ್ದಂತಹ ಸಿನಿಮಾದ ಕಾಂಟ್ಯಾಕ್ಟ್. ಅಲ್ಲಿ ಬಹಳ ಜನ ಇದ್ದರು. ಇವಾರ್‍ಯಾರೋ ಬಣ್ಣ ಬಳಿಯುವವರು, ಡ್ರೆಸ್ ಮಾಡುವವರು. ವಾದ್ಯ ಊದುವವರು. ತುಂಬಾ ಜನ ಅವರಿಗೆ ಇದ್ದರು. ಅದೂ ಒಂದು ಅನುಕೂಲ ಆಯಿತು.

5.30 ಪಿಎಂ

ಆಮೇಲೆ ಅವರೊಬ್ಬರು ಇಡೀ ರಾಜ್ಯದ ವರನಟರಾಗಿದ್ದು ಅವರಿಗೆ ರಾಜಕೀಯ ಗೊತ್ತಾಗೇ ಇರಲಿಲ್ಲ ಇವೊತ್ತು ನಮಗೆ ಬೇಕೋ ಬೇಜವ್ಹೋ ನಾಗಪ್ಪನವರು ಒಂದು ಪಾರ್ಟಿಯವರೆಂದು ಐಡಿಂಟಿಫೈ ಮಾಡಿಬಿಟ್ಟಿದ್ದೇವೆ. ನಾವೇನೇ ಮಾಡಿದರೂ ಆ ಪಾರ್ಟಿಯವರಲ್ಲವೆಂದು ಜನರು ನಮ್ಮ ಬಗ್ಗೆ ಹೇಳುತ್ತಾರೆ. ಈ ಒಂದು ದೃಷ್ಟಿಯಿಂದ ರಾಜ್‌ಕುಮಾರ್‌ರವರ ಅಪಹರಣದ ಸಂದರ್ಭದಲ್ಲಿ ಇದ್ದಂಥ ಸನ್ನಿವೇಶಕ್ಕೂ ಈಗಿನ ಸನ್ನಿವೇಶಕ್ಕೂ ಬಹಳ ವ್ಯಾತ್ಯಾಸವಿದೆ. ಆದರೆ, ಒಂದು ವಿಷಯವನ್ನು ಮಾತ್ರ ನನ್ನ ಸ್ನೇಹಿತರ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಸರ್ಕಾರ ರಾಜ್‌ಕುಮಾರ್ ಅವರನ್ನು ಬಿಡಿಸುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಎಷ್ಟು ಪ್ರಾಮಾಣಿಕ ಪ್ರಯತ್ನ ಪಟ್ಟರೋ ಅಷ್ಟೇ ಪ್ರಾಮಾಣಿಕ ಪ್ರಯತ್ನವನ್ನು ನಾಗಪ್ಪನವರ ಅಪಹರಣ ಸಂದರ್ಭದಲ್ಲಿ ಮಾಡಿದ್ದಾರೆಂದು ನಾನು ಎದೆ ಮುಟ್ಟಿ ಹೇಳಿಕೊಳ್ಳಬಲ್ಲೆ ನಾನು ವೀರಪ್ಪನ್‌ಗೆ ಸಹಾಯ

ಮಾಡಿದವರಿಗೆ, ಮಾನಸಿಕವಾಗಿ ಬೆಂಬಲ ಕೊಟ್ಟರೆ ಹಾಳಾಗುತ್ತಾರೆ ಎಂದು ಹೇಗೆ ಹೇಳಿದೆನೋ ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಾಮಾಣಿಕ ಪ್ರಯತ್ನ ಮಾಡಿಲ್ಲವೆಂದು ನೀವು ಯಾರಾದರೂ ತಿಳಿದುಕೊಂಡರೆ ಅಷ್ಟೇ ಪಾಪದ ಕೆಲಸವಾಗುತ್ತದೆಂದು ನಾನಂತೂ ಹೇಳುವುದಕ್ಕೆ ಇಷ್ಟಪಡುತ್ತೇನೆ ನನ್ನದೂ ಸ್ವಲ್ಪ ಬಂದಷ್ಟು ದೇಣಿಗೆ ಇದೆ. ಕಾಲ ಬಂದಾಗ ಹೇಳೋಣ. ಏಕೆಂದರೆ, ನಾವೆಲ್ಲರೂ ಮನುಷ್ಯರಾಗಿದ್ದೇವೆ. ಮೃಗಗಳಲ್ಲ ನಾನು ಹೇಳಿದೆ ನಮ್ಮ ಕ್ರುಯಾಲಿಟಿ ಎಲ್ಲಿವರೆಗೆ ಹೋಗಬಹುದು? ಚುನಾವಣೆಯಲ್ಲಿ ನಮ್ಮ ಎದುರಾಳಿಯನ್ನು ಸೋಲಿಸುವಷ್ಟರ ಮಟ್ಟಿಗೆ ಅದು ಹೋಗಬಹುದು ಬದಲಾಗಿ ನಾವು ಅವರ ಕುಟುಂಬಕ್ಕೆ ದುಃಖ ತರುವಂಥ, ಸಾವನ್ನು ಬಯಸುವಷ್ಟು ಕ್ರೂರ ರಾಜಕಾರಣಿಗಳು ನಾವ್ಯಾರೂ ಆಗಿಲ್ಲ. ಈ ಹಿನ್ನಲೆಯಲ್ಲಿ ನಾನು ಇಡೀ ಸದನಕ್ಕೆ ಕೈಮುಗಿದು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಈಗ ನಾಗಪ್ಪನವರ ಹತ್ಯೆ ಏನಾಗಿದೆ. ಮುಂದೆ ವೀರಪ್ಪನ್‌ನಿಂದ ಕಳ್ಳ ಸಾಗಾಣಿಕೆ ನಡೆಯದಂತೆ. ಅವನ ಅಕೃತ್ಯಗಳು, ಅಹಿಂಸೆಗಳು ಮರುಕಳಿಸಿದಂತೆ ನೋಡಿಕೊಳ್ಳಬೇಕಾದರೆ ನಾವೆಲ್ಲರೂ ಅರ್ಥಪೂರ್ಣವಾದ ಚರ್ಚೆ ಮಾಡಿ. ಏನಾದರೂ ಮಾಡಿ ಆತನನ್ನು ಹಿಡಿದು ಶಿಕ್ಷೆ ಕೊಡೋದೋ ಅಥವಾ ಆತನ ಪ್ರಾಣವನ್ನು ತೆಗೆಯೋದೋ. ಏನು ಮಾಡ್ಬೇಕ್ಕಾಗುತ್ತೋ ಅದಕ್ಕೆ ಸಂಪೂರ್ಣವಾದ ಬೆಂಬಲವನ್ನು ನಾವು ಸರ್ಕಾರಕ್ಕೆ ಕೊಡುತ್ತೇವೆ. ಸರ್ಕಾರ ಈಗಿನಿಂದಲೇ ಕಾರ್ಯಪ್ರವೃತ್ತವಾಗಬೇಕು. ಕಾರ್ಯಪ್ರವೃತ್ತವಾದ ಸಂದರ್ಭದಲ್ಲಿ ಇವೊತ್ತು ಸದನದಲ್ಲಿ ಅವರು ಇಲ್ಲ. ನಾನು ಹೇಳಬೇಕೆಂದು ಬಂದಿದ್ದೆ ನಿಮಗೆ ಹೇಳುವುದೇನೂ ಇಲ್ಲ ಮತೀಯ ಭಾವನೆಗಳ ಪಿತ್ತ ನೆತ್ತಿಗೇರಿದ ಈ ಜನರಿದ್ದಾರಲ್ಲ ಇವರು ರಾಷ್ಟ್ರ ಆಳುತ್ತಿದ್ದಾರೆ.They should come forward.ನನ್ನ ಸ್ನೇಹಿತರು ಹೇಳಿದಂತೆ ಮೂರೂ ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆಯಬೇಕು. ಚರ್ಚೆ ಮಾಡಬೇಕು. ನಂತರ ನೀವು ಕೇಳಿದ್ದನ್ನೆಲ್ಲಾ ಕೊಡುತ್ತೇವೆಂದರು. ಎಷ್ಟು ಸಾರಿ ಕೇಳಿಲ್ಲ? ರಾಜ್ಯ ಸರ್ಕಾರ ಬಹಳಷ್ಟು ಸಾರಿ ಕೇಳಿದೆ, ಏನು ಕೊಟ್ಟಿದ್ದಾರೆ? ಆದ್ದರಿಂದ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಆಡಳಿತ ಪಕ್ಷ... ಇದು ಅಲ್ಲಿ ದೆಹಲಿಯೊಳಗೆ ವಿರೋಧ ಪಕ್ಷವಾಗಿದ್ದರೆ ಅವರದು ಆಡಳಿತ ಪಕ್ಷವಾಗಿದೆ ಕೆಲವು ಸತ್ಯಗಳನ್ನು ನಮಗೆ ನಾವೇ ಮರೆಮಾಚಿಕೊಳ್ಳುತ್ತೇನೆ. ನುಂಗಿಕೊಳ್ಳುತ್ತೇನೆ. ಇಲ್ಲಿ ಯಾರ್‍ಯಾರು ವಿರೋಧ ಪಕ್ಷದಲ್ಲಿ ನಮ್ಮ ಸ್ನೇಹಿತರುಗಳು ಜನತಾ ದಳದವರು ಮತ್ತು ಭಾರತೀಯ ಜನತಾ ಪಕ್ಷದವರು ಕುಳಿತಿದ್ದಾರೋ. ಇವರು ದೆಹಲಿಯಲ್ಲಿ ಆಡಳಿತ ಪಕ್ಷದಲ್ಲಿದ್ದಾರೆ. ಕಾಂಗ್ರೆಸ್ ಪಕ್ಷ ವಿರೋಧ ಪಕ್ಷವಾಗಿದೆ. ಅವರು ಮಾಡಿದ್ದನ್ನೆಲ್ಲಾ ಇವರು ವಿರೋಧಿಸುತ್ತಾರೆ, ಇಲ್ಲಿ ನಾವು ಹೇಳಿದ್ದನ್ನೆಲ್ಲಾ ಇವರು ವಿರೋಧಿಸುತ್ತಾರೆ. ಇದು ಇರುವಂಥ ಕಟುಸತ್ಯ ನಾಗಪ್ಪನವರ ವಿಷಯದಲ್ಲಿ ಚಪ್ಪಾಳೆ ಗಿಟ್ಟಿಸಿಕೊಳ್ಳುತ್ತೀರೆಂಬ ಮಾತನ್ನು ನನಗೆ ಹೇಳಿದರೆ ನಮಗೆ ನೋವಾಗುವುದಿಲ್ಲವೇ? ಬೆಳಿಗ್ಗೆಯಿಂದಲೂ ಆ ಪಕ್ಷದ ಇಬ್ಬರು ಸದಸ್ಯರು ಮಾತನಾಡಿದರು. ನಾವು ಅದನ್ನು ಸತತವಾಗಿ ಕೇಳುತ್ತಾ ಬಂದಿದ್ದೇವೆ. ಕುರ್ಚಿಯಿಂದ ಮೇಲಕ್ಕೂ ಏಳಲಿಲ್ಲ. ಎಂತೆಂತಹ ಕಟುವಾದ ಪದಗಳನ್ನು ಆಡಿದರು. ಮುಖ್ಯಮಂತ್ರಿಗಳ ಬಗ್ಗೆ ನೇರವಾಗಿ ಆಪಾದನೆ ಮಾಡಿದಿರಿ. ಈ ಸರ್ಕಾರ ಸತ್ತು ಹೋಗಿತ್ತು ಎಂದಿರಿ. ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕಾಗಿತ್ತು ಎಂದಿರಿ, ಕ್ಷಮೆ ಕೇಳಬೇಕಾಗಿತ್ತು, ಎಂದಿರಿ. ಅರೆ. ನಾವು ಕ್ಷಮೆ ಕೇಳಿದೆವಲ್ಲ ಸ್ವಾಮಿ. ನಾವ್ಯಾರಾದರೊ ಎದ್ದೆವಾ?

ನಾನು ಎದ್ದೇನೇ? ನೀವು ದಯಮಾಡಿ ಹೇಳಿ. ಅದಕ್ಕೆ ಹೇಳಿದ್ದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೊಡುವುದಿದ್ದರೆ ಅಷ್ಟೇ ಸಾಕಾಗುವುದಿಲ್ಲ, ತೆಗೆದುಕೊಳ್ಳುವುದನ್ನೂ ಕಲಿತುಕೊಳ್ಳಬೇಕು. ಬೆಳಿಗ್ಗೆಯಿಂದ ನಾನು ತೆಗೆದುಕೊಳ್ಳಲಿಲ್ಲವೇ? ನಾವ್ಯಾರಾದರೂ ಉಸಿರೆತ್ತಿದೆವಾ? ಅದಕ್ಕೋಸ್ಕರ ನಾನು ಪ್ರಾರ್ಥಿಸಿಕೊಳ್ಳುತ್ತಿದ್ದೇನೆಃ ನಮ್ಮ ನಮ್ಮ ಅನಿಸಿಕೆಗಳನ್ನು ಈ ಸದನದಲ್ಲಿ ಹೇಳುವುದಕ್ಕೆ ನನ್ನ ಮಟ್ಟಿಗಂತೂ ನಾನು ಯಾವ ಪಕ್ಷದವನೆಂಬುದು ನನಗೆ ಮುಖ್ಯವಲ್ಲ ನಿಮ್ಮ ತರಹಾನೇ ನಾನೂ ಕೂಡ ಒಬ್ಬ ಸಾಮಾನ್ಯ ಸದಸ್ಯ. ನಿಮ್ಮ ಅಭಿಪ್ರಾಯಗಳನ್ನು ನಿಮಗೆ ತೋಚಿದ ರೀತಿಯಲ್ಲಿ ವ್ಯಕ್ತ ಮಾಡುವುದಕ್ಕೆ. ಇರುವಂಥ ಅಧಿಕಾರ ನನಗೂ ಇದೆ, ನಿಮಗೆ ಈ ಸದನದ ಸದಸ್ಯರಾಗಿ ಕರ್ತವ್ಯವನ್ನು ಪರಿಪಾಲಿಸುವಷ್ಟು ಇರುವ ಪರಿಜ್ಞಾನ, ನನ್ನ ಕರ್ತವ್ಯವನ್ನು ಪರಿಪಾಲಿಸುವುದಕ್ಕೂ ನನಗೂ ಅಷ್ಟು ಅರಿವು ಇದೆ. ಅದಕ್ಕಾಗಿ ನಿಮ್ಮಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಈ ವಿಷಯದಲ್ಲಿ ನಾನು ರಾಜಕೀಯ ಬಳಸಲು ಇಷ್ಟವಿಲ್ಲ ಸರ್ಕಾರ ವಿಫಲವಾಗಿದೆ ಎಂಬುದು ನಿಮ್ಮ ವಾದ. ಆ ವಿಫಲತೆ ಏನಾದರೂ ಇದ್ದರೆ ಸರ್ಕಾರ ಸರಿಪಡಿಸಿಕೊಂಡು ತಿದ್ದಿಕೊಳ್ಳಬೇಕೆಂಬುದು ನಮ್ಮ ಒತ್ತಾಯ. ಇದಕ್ಕೆ ಕೇಂದ್ರ ಸರ್ಕಾರ. ವಿರೋಧ ಪಕ್ಷ ಎಲ್ಲವೂ ಸಹಕಾರ ಕೊಡಬೇಕೆಂದು ಪ್ರಾರ್ಥಿಸುತ್ತಾ ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರುಃ ಈಗ ಸದನವನ್ನು ನಾಳೆ ಬೆಳಿಗ್ಗೆ 10.30 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವನ್ನು ಸಂಜೆ 5 ಗಂಟೆ 54 ನಿಮಿಷಕ್ಕೆ ಮಂದೂಡಲ್ಪಟ್ಟು ಪುನಃ ನಾಳೆ 27ನೇ ಡಿಸೆಂಬರ್ 2002ರಂದು ಶುಕ್ರವಾರ ಬೆಳಿಗ್ಗೆ 10.30 ಗಂಟೆಗೆ ಸೇರಲು ನಿಶ್ಚಯಿಸಿತು).

†(ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಮುದ್ರಕರು:- ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಸಶಾಮು. ತುಮಕೂರು. ಕಾಸೂ. 06 - 350 ಪುಸ್ತಕಗಳು ದಿ: 22-05-2003.